" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

# ಕರ್ನಾಟಕ ವಿಧಾನ ಪರಿಷತ್ತು
## ನೂರ ನಲವತ್ತೈದನೆಯ ಅಧಿವೇಶನ

## ವಿಷಯಾನುಕ್ರಮಣಿಕೆ (Index)

ದಿನಾಂಕ: 21ನೇ ಡಿಸೆಂಬರ್ 2021
ಮಂಗಳವಾರ


1. **ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**875-ಬೇಟಿ ಬಚಾವ್ಹೋ ಬೇಟಿ ಪಡಾವ್ಹೋ ಯೋಜನೆಯ ಕುರಿತು**
-ಶ್ರೀ ಎನ್.ರವಿಕುಮಾರ್
-ಶ್ರೀ ಆಚಾರ್ ಹಾಲಪ್ಪ ಬಸಪ್ಪ(ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**890-ಕೇಂದ್ರ ಸರ್ಕಾರದ ಮೇಕ್ ಇನ್ ಇಂಡಿಯಾ ಕಾರ್ಯಕ್ರಮದ ಕುರಿತು**
-ಶ್ರೀ ಯು.ಬಿ.ವೆಂಕಟೇಶ್
-ಶ್ರೀ ಮುರುಗೇಶ್ ಆರ್. ನಿರಾಣಿ(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

**991-ರಾಜ್ಯದ ಪಟ್ಟಣ ಪಂಚಾಯಿತಿಗಳಲ್ಲಿ ಭೂ ಪರಿವರ್ತಿತ ಜಮೀನಿನಲ್ಲಿರುವ ಕಟ್ಟಡಗಳ ಪರವಾನಗಿ ಬಗ್ಗೆ**
-ಶ್ರೀ ಕೆ.ಹರೀಶ್ ಕುಮಾರ್
-ಶ್ರೀ ಬಿ.ಎ.ಬಸವರಾಜ (ನಗರಾಭಿವೃದ್ಧಿ ಸಚಿವರು)(ಬೆಂಗಳೂರು ಹೊರತುಪಡಿಸಿ)
-ಶ್ರೀ ಎನ್.ನಾಗರಾಜ(ಎಂ.ಟಿ.ಬಿ) (ಪೌರಾಡಳಿತ, ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)

**977- ಸ್ಥಳೀಯ ಸಂಸ್ಥೆಗಳನ್ನು ಮೇಲ್ದರ್ಜೆಗೇರಿಸುವ ಬಗ್ಗೆ**
-ಶ್ರೀ ಆರ್.ಧರ್ಮಸೇನ
-ಶ್ರೀ ಎನ್.ನಾಗರಾಜ(ಎಂ.ಟಿ.ಬಿ) (ಪೌರಾಡಳಿತ, ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)

**947-ವಿಕಲಚೇತನರ ಇಲಾಖೆಯ ಶಿಕ್ಷಕರುಗಳ ವೇತನ ಶ್ರೇಣಿ ಕುರಿತು**
-ಶ್ರೀ ಶಶಿಲ್ ಜಿ.ನಮೋಶಿ
-ಶ್ರೀ ಆಚಾರ್ ಹಾಲಪ್ಪ ಬಸಪ್ಪ(ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**973+918-ರಾಜ್ಯದಲ್ಲಿ ಹೆಚ್ಚುತ್ತಿರುವ ಹಿರಿಯ ನಾಗರಿಕರ ಮೇಲಿನ ದೌರ್ಜನ್ಯಗಳ ಬಗ್ಗೆ**
-ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
-ಡಾ: ತೇಜಸ್ವಿನಿಗೌಡ
-ಶ್ರೀ ಆಚಾರ್ ಹಾಲಪ್ಪ ಬಸಪ್ಪ(ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು)


" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**938-ಕಲ್ಲು ಗಣಿ ಗುತ್ತಿಗೆ ಮಂಜೂರಾತಿ ಕುರಿತು**

-ಶ್ರೀ ಮುನಿರಾಜು ಗೌಡ ಪಿ.ಎಂ.

-ಶ್ರೀ ಆಚಾರ್ ಹಾಲಪ್ಪ ಬಸಪ್ಪ(ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**901-ಬಸವಕಲ್ಯಾಣ ಹಾಗೂ ಹುಲಸೂರು ತಾಲ್ಲೂಕಿನ ಅಂಗನವಾಡಿ ಕೇಂದ್ರಗಳ ಬಗ್ಗೆ**

-ಶ್ರೀ ವಿಜಯ ಸಿಂಗ್

-ಶ್ರೀ ಆಚಾರ್ ಹಾಲಪ್ಪ ಬಸಪ್ಪ(ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**920-ಹಿರಿಯ ನಾಗರಿಕರ ವ್ಯಾಜ್ಯಗಳ ಬಗ್ಗೆ**

-ಶ್ರೀ ಗೋವಿಂದರಾಜು

-ಶ್ರೀ ಆಚಾರ್ ಹಾಲಪ್ಪ ಬಸಪ್ಪ(ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**919-ಭೂಗರ್ಭದಲ್ಲಿ ಭೂ ಕಂಪನ ಮಾಪನ-ಗಣಿಗಾರಿಕೆ ಕುರಿತು**

-ಡಾ: ತೇಜಸ್ವಿನಿಗೌಡ

-ಶ್ರೀ ಆಚಾರ್ ಹಾಲಪ್ಪ ಬಸಪ್ಪ(ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**455-ಬೀದಿಬದಿ ವ್ಯಾಪಾರಿಗಳ ಹಿತರಕ್ಷಣೆಯ ಬಗ್ಗೆ**

-ಶ್ರೀ ಗೋವಿಂದರಾಜು

-ಡಾ:ಸಿ.ಎನ್.ಅಶ್ವಥ್ ನಾರಾಯಣ(ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಜೀವನೋಪಾಯ ಹಾಗೂ ಉದ್ಯಮಶೀಲತೆ ಸಚಿವರ ಪರವಾಗಿ)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**2. ಪ್ರಕಟಣೆ**

**3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ಹೋಗುವ ನಂದಿ ಮಾರ್ಗದಲ್ಲಿ ಭಾರಿ ಮಳೆಯಿಂದ ಎರಡು ಕಡೆ ಭೂಮಿ ಕುಸಿದಿರುವ ಬಗ್ಗೆ.**

-ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್)

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಜರಾಯಿ ಹಜ್ ಮತ್ತು ವಕ್ಫ್ ಸಚಿವರ ಪರವಾಗಿ)

**ಆ) ಬಾಗಲಕೋಟೆ ಜಿಲ್ಲೆ ಸಾವಳಗಿ ಪಟ್ಟಣವನ್ನು ತಾಲ್ಲೂಕನ್ನಾಗಿ ಘೋಷಿಸಲು ಕೋರಿ ಮನವಿ**

-ಶ್ರೀ ಹಣಮಂತ ರುದ್ರಪ್ಪ ನಿರಾಣಿ

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಕಂದಾಯ ಸಚಿವರ ಪರವಾಗಿ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಇ)ಪ್ರೌಢಶಾಲಾ ಮುಖ್ಯೋಪಾಧ್ಯಾಯರ ವರ್ಗಾವಣೆ ಬಗ್ಗೆ.**

- ಶ್ರೀ ಅರುಣ ಶಹಾಪೂರ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ)

**ಈ) ಹೆಲ್ಮೆಟ್ ಧರಿಸದ ಬೈಕ್ ಸವಾರರನ್ನು ಪೊಲೀಸರು ಹಿಡಿಯಲೆತ್ನಿಸುವಾಗ ಅಪಘಾತಕ್ಕೀಡಾಗಿ ಮೃತನಾಗಿರುವ ಬಗ್ಗೆ.**

-ಶ್ರೀ ಯು.ಬಿ.ವೆಂಕಟೇಶ್
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮಾನ್ಯ ಗೃಹ ಸಚಿವರ ಪರವಾಗಿ)

**ಉ) ಬೀದರ್ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ತಹಶೀಲ್ದಾರ್‌ರವರು ಸಾರ್ವಜನಿಕ ಹಿತಾಸಕ್ತಿಗೆ ಅನುಸಾರವಾಗಿ ಕಾರ್ಯನಿರ್ವಹಿಸುತ್ತಿರುವುದರ ಬಗ್ಗೆ.**

- ಶ್ರೀ ವಿಜಯಸಿಂಗ್
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮಾನ್ಯ ಕಂದಾಯ ಸಚಿವರ ಪರವಾಗಿ)

**ಊ) ರಾಜ್ಯ ಸರ್ಕಾರಿ ನೌಕರರಿಗೆ ಕೇಂದ್ರ ಸರ್ಕಾರಿ ನೌಕರರಿಗೆ ನೀಡುವ ವೇತನ ಶ್ರೇಣಿಯನ್ನು ನೀಡುವ ಬಗ್ಗೆ.**

-ಶ್ರೀ ಎಸ್.ವ್ಹಿ.ಸಂಕನೂರ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ)

**ಋ) ಕೇಂದ್ರ ಸರ್ಕಾರ ಸೇಫ್ ಸಿಟಿ ಯೋಜನೆ ಅಡಿಯಲ್ಲಿ ಬೆಂಗಳೂರು ನಗರಕ್ಕೆ ರೂ. 667 ಕೋಟಿ ನಿಧಿ ಲಭ್ಯವಿದ್ದರೂ ರಾಜ್ಯ ಸರ್ಕಾರ ಬಳಕೆ ಮಾಡಿಕೊಳ್ಳದೇ ಇರುವ ಬಗ್ಗೆ.**

-ಶ್ರೀ ಬಿ.ಕೆ.ಹರಿಪ್ರಸಾದ್
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು) (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ)

**ಎ) ಉಕ್ಕು ಮತ್ತು ಇತರೆ ಕಚ್ಚಾವಸ್ತುಗಳ ಬೆಲೆ ಏರಿಕೆ ಖಂಡಿಸಿ ಸಣ್ಣ ಕೈಗಾರಿಕೆಗಳು ಪ್ರತಿಭಟನೆ ಮಾಡುತ್ತಿರುವ ಬಗ್ಗೆ.**

-ಶ್ರೀ ಎಸ್.ರುದ್ರೇಗೌಡ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು) (ಪೌರಾಡಳಿತ, ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರ ಪರವಾಗಿ)

**ಏ) ಮುಖ್ಯೋಪಾಧ್ಯಾಯರಿಗೆ ಬಡ್ತಿ ನೀಡುವಲ್ಲಿ ಆಗುತ್ತಿರುವ ವಿಳಂಬ ಕುರಿತು.**

-ಡಾ: ವೈ.ಎ.ನಾರಾಯಣಸ್ವಾಮಿ
-ಶ್ರೀ ಎನ್.ನಾಗರಾಜ(ಎಂ.ಟಿ.ಬಿ) (ಪೌರಾಡಳಿತ, ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)

**ಐ) ಅನುದಾನಿತ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು.**

-ಶ್ರೀ ಚಿದಾನಂದ್ ಎಂ.ಗೌಡ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮಾನ್ಯ ಪ್ರಾಥಮಿಕ ಮತ್ತು ಪೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ)

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಒ) ಕಿತ್ತೂರು ತಾಲ್ಲೂಕಿನ ಕುಲವಳ್ಳಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯ 9 ಹಳ್ಳಿಗಳಿಗೆ ರೈತರ ಸಾಗುವಳಿ ಚೀಟಿ ನೀಡುವ ಬಗ್ಗೆ.**

-ಶ್ರೀ ಆರ್.ಬಿ.ತಿಮ್ಮಾಪೂರ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮಾನ್ಯ ಕಂದಾಯ ಸಚಿವರ ಪರವಾಗಿ)

**ಓ) ರಾಜ್ಯದ ನಾನಾ ಭಾಗಗಳಲ್ಲಿ ಅಕಾಲಿಕ ಮಳೆಯಿಂದಾಗಿ ಉಂಟಾಗಿರುವ ಬೆಳೆ ಹಾನಿಗೆ ತತ್ತರಿಸಿರುವ ಕಬ್ಬು ಬೆಳೆಗಾರರಿಗೆ ಕಟಾವು ಖರ್ಚನ್ನು ಸರ್ಕಾರ, ಮಾಲೀಕರು ಭರಿಸುವ ಬಗ್ಗೆ.**

-ಶ್ರೀ ಕೆ.ಟಿ.ಶ್ರೀಕಂಠೇಗೌಡ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮಾನ್ಯ ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಸಚಿವರ ಪರವಾಗಿ)

**4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾಗಿದ್ದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು**

**ಅ) ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಸೊಳ್ಳೆಗಳ ನಿಯಂತ್ರಣಕ್ಕೆ ಫಾಗಿಂಗ್ ಕೆಲಸಕ್ಕೆ ಟೆಂಡರ್ ಕರೆಯದೇ ಅವ್ಯವಹಾರ ನಡೆದಿರುವ ಬಗ್ಗೆ.**

-ಶ್ರೀ ಯು.ಬಿ.ವೆಂಕಟೇಶ್
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
(ಮಾನ್ಯ ಮುಖ್ಯಮಂತ್ರಿಗಳ ಪರವಾಗಿ)

**ಆ) ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಒಳಪಡುವ ರಸ್ತೆಗಳಿಗೆ ಪದೇ ಪದೇ ಡಾಂಬರೀಕರಣ ಹಾಗೂ ಗುಂಡಿ ಮುಚ್ಚುವುದರಿಂದ ಸರ್ಕಾರದ ಹಣ ಪೋಲಾಗುತ್ತಿರುವ ಬಗ್ಗೆ.**

-ಶ್ರೀ ಪಿ.ಆರ್. ರಮೇಶ್
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
(ಮಾನ್ಯ ಮುಖ್ಯಮಂತ್ರಿಗಳ ಪರವಾಗಿ)

**ಇ) ಚಿಕ್ಕಪೇಟೆಯ ಪಾರ್ವತಿಪುರದಲ್ಲಿ ಒಳಚರಂಡಿ ಕೊಳವೆ ಬದಲಿಸುವ ಕಾಮಗಾರಿಯನ್ನು BWSSB ಬದಲಿಗೆ BBMP ಕೈಗೊಂಡಿರುವ ಬಗ್ಗೆ.**

-ಶ್ರೀ ಪಿ.ಆರ್.ರಮೇಶ್
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
(ಮಾನ್ಯ ಮುಖ್ಯಮಂತ್ರಿಗಳ ಪರವಾಗಿ)

**ಈ) ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯದ ಅಭಿವೃದ್ಧಿಗಾಗಿ ಹೆಚ್ಚುವರಿಯಾಗಿ ರೂ. 150 ಕೋಟಿಗಳ ವಿಶೇಷ ಅನುದಾನ ಬಿಡುಗಡೆ ಕುರಿತು.**

-ಡಾ: ತಳವಾರ್ ಸಾಬಣ್ಣ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಜೀವನೋಪಾಯ ಹಾಗೂ ಉದ್ಯಮಶೀಲತೆ ಸಚಿವರ ಪರವಾಗಿ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**5.ಚುನಾವಣಾ ಪ್ರಸ್ತಾವ**
**6. ಪ್ರಕಟಣೆ**
**7. ನಿಯಮ 68ರ ಮೇರೆಗೆ ಮುಂದುವರೆದ ಚರ್ಚೆ**

**"ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ."**

-ಶ್ರೀ ಕೆ.ಟಿ.ಶ್ರೀಕಂಠೇಗೌಡ
-ಶ್ರೀ ಮುರುಗೇಶ್ ಆರ್.ನಿರಾಣಿ(ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವರು)
-ಶ್ರೀ ಸಿ.ಎಂ.ಇಬ್ರಾಹಿಂ
-ಶ್ರೀ ಕೆ.ಎ.ತಿಪ್ಪೇಸ್ವಾಮಿ
-ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
-ಶ್ರೀ ಲಕ್ಷ್ಮಣ ಸಂಗಪ್ಪ ಸವದಿ
-ಶ್ರೀ ಗೋವಿಂದ ಎಂ.ಕಾರಜೋಳ(ಜಲಸಂಪನ್ಮೂಲ ಸಚಿವರು)
-ಶ್ರೀ ನಿರಾಣಿ ಹಣಮಂತ ರುದ್ರಪ್ಪ
-ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
-ಶ್ರೀ ಬಿ.ಕೆ.ಹರಿಪ್ರಸಾದ್
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
-ಶ್ರೀ ಎನ್.ರವಿಕುಮಾರ್
-ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

**8. ಪ್ರಕಟಣೆ**
**9. ನಿಯಮ 68ರ ಮೇರೆಗೆ ಮುಂದುವರೆದ ಚರ್ಚೆ**

**"ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ"**

-ಶ್ರೀ ಮರಿತಿಬ್ಬೇಗೌಡ
-ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)
-ಶ್ರೀ ಎನ್.ರವಿಕುಮಾರ್
-ಶ್ರೀ ಮುರುಗೇಶ್ ಆರ್.ನಿರಾಣಿ
-ಶ್ರೀ ಅಲ್ಲಂ ವೀರಭದ್ರಪ್ಪ
-ಶ್ರೀ ಪ್ರಕಾಶ್ ಕೆ.ರಾಥೋಡ್
-ಶ್ರೀ ಆರ್.ಬಿ.ತಿಮ್ಮಾಪೂರ

~~~~~~~~~~~~

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "
~~~~~~~~~~~~

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(1192) 21.12.2021 10.40 ಪಿಕೆ:ವಿಕೆ

# ಕರ್ನಾಟಕ ವಿಧಾನ ಪರಿಷತ್ತು

**ಮಂಗಳವಾರ, 21 ನೇ ಡಿಸೆಂಬರ್ 2021**

**ಸದನವು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆ 48 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)ಯವರು ಪೀಠದಲ್ಲಿ ಉಪಸ್ಥಿತರಿದ್ದರು**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

1. **ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಸಭಾಪತಿಯವರು:-** ಪ್ರಶ್ನೆ ಸಂಖ್ಯೆ: 91(870), ಹೆಚ್.ಎಂ.ರಮೇಶ್‌ಗೌಡ. ಉಪಸ್ಥಿತರಿಲ್ಲ.

**ಪ್ರಶ್ನೆ ಸಂಖ್ಯೆ: 875**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಗಳೆ, ಇದು ಕೇಂದ್ರ ಸರ್ಕಾರದ ಅತ್ಯಂತ ಒಳ್ಳೆಯ ಯೋಜನೆ ಮತ್ತು ಪ್ರಧಾನ ಮಂತ್ರಿಗಳ ಕನಸಿನ ಯೋಜನೆ. ಇದು ಪ್ರಾರಂಭವಾಗಿ 6 ವರ್ಷವಾಯಿತು. ಲಿಂಗಾನುಪಾತವನ್ನು ಸರಿಪಡಿಸಬೇಕು, ಮಹಿಳೆಯರ ಸಬಲೀಕರಣ ಮಾಡಬೇಕು ಎನ್ನುವುದು ಇದರ ಮುಖ್ಯ ಉದ್ದೇಶವಾಗಿದೆ. 2015ರ ಜನವರಿ 22ರಂದು ಇದು ಪಾಣಿಪತ್‌ನಲ್ಲಿ ಪ್ರಾರಂಭವಾಯಿತು. ಈ ನಿಟ್ಟಿನಲ್ಲಿ ಇವತ್ತಿನವರೆಗೆ ಸಾಕಷ್ಟು ಬದಲಾವಣೆಯಾಗಿದೆ.

(ಮುಂದು)

(1193) 21-12-2021 10.50 DS-BNS

**ಶ್ರೀ ಎನ್.ರವಿಕುಮಾರ್(ಮುಂದು):-**

2014-15 ರಲ್ಲಿ 1000 ಗಂಡು ಮಕ್ಕಳಿಗೆ 918 ಹೆಣ್ಣು ಮಕ್ಕಳಿದ್ದರು. ಗಂಡು ಮಕ್ಕಳು, ಹೆಣ್ಣು ಮಕ್ಕಳ ಅನುಪಾತದಲ್ಲಿ ಬಹಳ ವ್ಯತ್ಯಾಸ ಇದೆ. 80 ಹೆಣ್ಣು ಮಕ್ಕಳು ಕಡಿಮೆ ಇದ್ದರು. 2019-20 ರಲ್ಲಿ ಹೆಣ್ಣು ಮಕ್ಕಳ ಸಂಖ್ಯೆ 934 ಕ್ಕೆ ಏರಿಕೆಯಾಯಿತು. 2019-20 ರಲ್ಲಿ ಶೇಕಡ 71 ರಷ್ಟು ಏರಿಕೆ ಕಂಡು ಬಂದಿದೆ. ಆದರೆ ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾದಂತಹ ಸಂದರ್ಭದಲ್ಲಿ ಈ ಹಣವನ್ನು ಒಂದು ವರ್ಷಕ್ಕೆ ಅಂದರೆ, 2020-21 ರಲ್ಲಿ ಹಣವನ್ನು ಖರ್ಚು ಮಾಡುವುದಕ್ಕೆ ಮೀಸಲಿಟ್ಟಿಲ್ಲ. ಹಣ ಏಕೆ ಮೀಸಲಿಟ್ಟಿಲ್ಲ ಎಂದು ನಾನು ಮಾನ್ಯ ಸಚಿವರಿಗೆ ಕೇಳುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ಆಚಾರ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಯವರೇ, ಅವರು ಕೇಳಿದ ಪ್ರಶ್ನೆಗಳಿಗೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. 2018-19 ರಲ್ಲಿ ಮತ್ತು 2020-21ನೇ ಸಾಲಿನಲ್ಲಿ ಖರ್ಚು ಮಾಡಿರುವುದು ಕಡಿಮೆಯಾಗಿದೆ ಎಂದು ಉತ್ತರದಲ್ಲಿ ಕೊಟ್ಟಿದೇವೆ. ಮಾನ್ಯ ಸದಸ್ಯರ ಕಾಳಜಿ ಏನೆಂದರೆ, ಹಣ ಹೆಚ್ಚಿಗೆ ಮೀಸಲಿಡಬೇಕೆಂದು ಕೇಳುತ್ತಿದ್ದಾರೆ. ಇವೆಲ್ಲಾ ಕಾರ್ಯಕ್ರಮಗಳು ಯಶಸ್ವಿಯಾಗಬೇಕೆಂದು ಹೇಳುತ್ತಿದ್ದಾರೆ. ಲಿಂಗ ಪಕ್ಷಪಾತ ಈಗಾಗಲೇ ಅಭಿವೃದ್ಧಿಯಾಗಿದೆ ಎನ್ನುವುದನ್ನು ಕೂಡ ನಾನು ಅನುಬಂಧದಲ್ಲಿ ಕೊಟ್ಟಿದ್ದೇನೆ. ಹೆಣ್ಣುಮಕ್ಕಳ ಉಳಿವು ಮತ್ತು ರಕ್ಷಣೆ ಬಗ್ಗೆ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ ಆ ಕಾರ್ಯಕ್ರಮಗಳು ಇನ್ನು ಹೆಚ್ಚು ಯಶಸ್ವಿಯಾಗುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಅದಕ್ಕೆ ಇನ್ನು

ಹೆಚ್ಚಿನ ಹಣವನ್ನು ಮೀಸಲಿಡಬೇಕೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ನಾವು ಹೆಚ್ಚಿನ ಹಣವನ್ನು ಮೀಸಲಿಡುತ್ತೇವೆಂದು ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಜಿಲ್ಲಾಧಿಕಾರಿಗಳಿಗೆ ನೇರವಾಗಿ ಹಣ ಬರುತ್ತದೆ. ಇದು ಶೇಕಡ 100 ರಷ್ಟು ಕೇಂದ್ರ ಸರ್ಕಾರದ ಯೋಜನೆಯಾಗಿದೆ. ಕೇಂದ್ರ ಸರ್ಕಾರದಿಂದ ಹಣ ಬರುತ್ತದೆ, ಆದರೆ ರಾಜ್ಯ ಸರ್ಕಾರ ಏಕೆ ಆ ವರ್ಷದಲ್ಲಿಯೇ ಹಣ ಮೀಸಲಿಡಲಿಲ್ಲ? ಕೇಂದ್ರ ಸರ್ಕಾರ ಇಷ್ಟು ದೊಡ್ಡ ಮೊತ್ತದ ಹಣವನ್ನು ಸುಮಾರು 30,000 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿನ ಹಣ ಇದಕ್ಕೆ ಮೀಸಲಿಟ್ಟಿದೆ. ಇತಿಹಾಸದಲ್ಲಿ ಮೊದಲನೆ ಸಲ ಕೇಂದ್ರ ಸರ್ಕಾರ ಇಷ್ಟು ದೊಡ್ಡ ಮೊತ್ತದ ಹಣವನ್ನು ಮೀಸಲಿಟ್ಟಿದೆ. ರಾಜ್ಯ ಸರ್ಕಾರ ಇದರಲ್ಲಿ ಒಂದು ಪೈಸೆಯೂ ಖರ್ಚು ಮಾಡುವುದಿಲ್ಲ. ಆದರೆ ರಾಜ್ಯ ಸರ್ಕಾರ ಏಕೆ ಹಣ ಮೀಸಲಿಡಲಿಲ್ಲ?

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ ಕೊಟ್ಟಿರುವಂತಹ ಹಣವನ್ನು ಇವತ್ತೇನು ನಾವು ಖರ್ಚು ಮಾಡುತ್ತಿದ್ದೇವೆ, ಅವುಗಳನ್ನು ಪೂರ್ಣ ಪ್ರಮಾಣದಲ್ಲಿ ಎಲ್ಲಿಯೂ ಲ್ಯಾಪ್ಸ್ ಆಗದಂತಹ ರೀತಿಯಲ್ಲಿ ನೋಡುವುದರ ಜೊತೆಗೆ ಇವತ್ತು ರಾಜ್ಯ ಸರ್ಕಾರದ ಬಜೆಟ್‌ನಲ್ಲಿಯೂ ಕೂಡ ಅದಕ್ಕೇನು ಹೆಚ್ಚಿನ ಸಹಾಯ ಮಾಡುವುದಕ್ಕಾಗುತ್ತದೆ ಅದನ್ನು ಮಾಡುತ್ತೇವೆನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ:890**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, "ಮೇಕ್ ಇನ್ ಇಂಡಿಯಾ" ಕಾರ್ಯಕ್ರಮದ ಬಗ್ಗೆ ನಾನು ಪ್ರಶ್ನೆ ಕೇಳಿದ್ದೆ. ಮಾನ್ಯ ಸಚಿವರು ಚುನಾವಣಾ ಪ್ರಣಾಳಿಕೆ ಕೊಟ್ಟ ಹಾಗೆ ಕೇಂದ್ರ ಸರ್ಕಾರ ಏನು ಪ್ರಿಂಟ್ ಮಾಡಿ ಕೊಟ್ಟಿದೆ ಅದನ್ನು ನಮಗೆ ಜೆರಾಕ್ಸ್ ಮಾಡಿ ಕೊಟ್ಟಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಈ ಯೋಜನೆಯಿಂದ ನಮ್ಮ ರಾಜ್ಯಕ್ಕೆ ಆಗುವ ಅನುಕೂಲವೇನು, ಎಷ್ಟು ಜನ ಬಂಡವಾಳ ಹೂಡಿದ್ದಾರೆ, ಇದರಿಂದ ಜನರಿಗೆ ಏನು ಉಪಯೋಗ ಸಿಗುತ್ತಿದೆ ಎಂದು ನಾನು ಪ್ರಶ್ನೆ ಕೇಳಿದ್ದೇನೆ. ಕೌಶಲ್ಯಾಭಿವೃದ್ಧಿಯಲ್ಲಿ ವಿದ್ಯೆ ಕಲಿಯುವುದು ಬೇರೆ, ವಿದ್ಯೆ ಬಳಸಿಕೊಂಡು ಈ ಕೌಶಲ್ಯದ ಮಾರ್ಗದಲ್ಲಿ ಬದುಕುವುದೇ ಬೇರೆ. ಇವತ್ತಿನ ಟೆಕ್ನಾಲಜಿಯಲ್ಲಿ ಬೇರೆ ಬೇರೆ ಕೆಲಸಕ್ಕೆ ಬೇರೆ ಬೇರೆ ರೀತಿಯ ತರಬೇತಿ ಬೇಕಾಗುತ್ತದೆ. ಆದರೆ ಬಂಡವಾಳ ಹೂಡುತ್ತಾರೆ, ಐದು ಲಕ್ಷ ಜನರಿಗೆ ಉದ್ಯೋಗ ನೀಡಿದ್ದೇವೆಂದು ಹೇಳಿದ್ದಾರೆ. ಇದರಲ್ಲಿ ಶೇಕಡ 10 ರಷ್ಟು ಯಾವುದೇ ಕೈಗಾರಿಕೆಗಳು ಪ್ರಾರಂಭವಾಗಿಲ್ಲ. ಇವೆಲ್ಲಾ ಅನುಮೋದನೆ ಮಾಡಿಕೊಟ್ಟಿರುವುದು ಬಿಟ್ಟರೆ, ಜಮೀನು ತೆಗೆದುಕೊಳ್ಳುವುದಕೋಸ್ಕರ ಭೂಸ್ವಾಧೀನ ಮಾಡಿಕೊಳ್ಳುವುದಕ್ಕೆ ಸ್ಟೇಟ್‌ಮೆಂಟ್ ಕೊಟ್ಟಿರುತ್ತಾರೆ. ಅದನ್ನೇ ಇವರು ಪ್ರಿಂಟ್ ಮಾಡಿಕೊಟ್ಟಿದ್ದಾರೆ. ಇವತ್ತಿನವರೆಗೂ ಎಷ್ಟು ಜನರು ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, "ಮೇಕ್ ಇನ್ ಇಂಡಿಯಾ" ಕಾರ್ಯಕ್ರಮ ತಂದಿರುವಂಥದ್ದು ನಮ್ಮ ದೇಶ ಆತ್ಮನಿರ್ಭರವಾಗಬೇಕು, ಎಲ್ಲರೂ ಸ್ವಾವಲಂಬಿಯಾಗಿರಬೇಕು, ಬೇರೆ ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳುವಂತಹದ್ದು ಕಡಿಮೆಯಾಗಬೇಕು, ಗ್ರಾಮೀಣ ಪ್ರದೇಶದಿಂದ ಬಂದಿರುವಂತಹ ಎಲ್ಲರಿಗೂ ಇದರಲ್ಲಿ ಹೆಚ್ಚಿನ ಮಾಹಿತಿ, ತಿಳುವಳಿಕೆ ಇದೆ. ಹಳ್ಳಿಯಲ್ಲಿ ನಾವು ಯಾರ ಮೇಲೂ ಅವಲಂಬನೆಯಾಗದಂತೆ ನಮಗೆ ಬೇಕಾಗಿರುವಂತಹ ಎಲ್ಲಾ ಉತ್ಪನ್ನಗಳನ್ನು ನಾವೇ ತಯಾರು ಮಾಡುತ್ತಿದ್ದೇವೆ. ಮನೆಗೆ ಬೇಕಾಗಿರುವಂತಹ ಊಟ ಉಪ್ಪಿನಕಾಯಿಯಿಂದ ಹಿಡಿದು ಎಲ್ಲಾ ರೇಷನ್‌ಗಳನ್ನು, ಕಾಯಿ ಪಲ್ಯೆಗಳು, ಹಾಲು, ಬೆಣ್ಣೆ, ತುಪ್ಪ, ಎಲ್ಲವನ್ನು ನಾವೇ ತಯಾರು ಮಾಡುತ್ತಿದ್ದೇವೆ. ಬಿತ್ತುವ ಬೀಜವನ್ನು ನಾವೇ ಮಾಡಿಕೊಳ್ಳುತ್ತಿದ್ದೇವೆ. ಅಲ್ಲಿರುವಂತಹ ಹಳ್ಳಿಯಲ್ಲಿ ಬಡಿಗೆಯರು, ಕಂಬಾರರು, ಪತ್ತಾರರು, ಐಗಾರರು ಎಂದು ನಾವೇನು ಕರೆಯುತ್ತೇವೆ ಅವೆರೆಲ್ಲರು ಮಾಡಿಕೊಂಡು ನಮ್ಮ ಕಡೆ ಬೆಳೆದಿರುವಂತಹದ್ದನ್ನು ನಮ್ಮ ಸ್ನೇಹಿತರಿಗೆ ಬಂಧು-ಬಳಗದವರಿಗೆ ಕೊಡುತ್ತಿದ್ದೇವೆ. ನಮ್ಮ ಕಡೆ ಇರಲಾರದ್ದನ್ನು ಅವರ ಕಡೆಯಿಂದ barter system ನಲ್ಲಿ ತೆಗೆದುಕೊಳ್ಳುತ್ತಿದ್ದೇವೆ. ಅದೇ concept ಅನ್ನು ಮೈಸೂರು ಮಹಾರಾಜರು ಮಾಡಿದ್ದರು. ಮೈಸೂರು ಮಹಾರಾಜರು ತಮಗೆ ಬೇಕಾಗಿರುವಂಥದ್ದನ್ನು ಗುಂಡಿ ಸೂಜಿಯಿಂದ ಹಿಡಿದು ಪೇಪರ್, ಪೆನ್ನು, ಮಸಿ, ಲೈಟ್, ವಿದ್ಯುತ್, group of industries, ರೈತರಿಗೆ ಬೇಕಾಗಿರುವಂತಹ ಡ್ಯಾಮ್, ನೀರಾವರಿ,

ಎಲ್ಲವನ್ನು ಮಾಡಿಕೊಂಡು ಅವರು ಆತ್ಮನಿರ್ಭರ ಕಾನ್ಸೆಪ್ಟ್‌ನ್ನು ಮರು ಸ್ಥಾಪನೆ ಮಾಡಿದರು. ಅದೇ ರೀತಿ ನಮ್ಮ ನೆಚ್ಚಿನ ಪ್ರಧಾನ ಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರು ನಮ್ಮ ದೇಶ ಆತ್ಮನಿರ್ಭರ ಆಗಬೇಕೆನ್ನುವ ನಿಟ್ಟಿನಲ್ಲಿ ಎಲ್ಲಾ ಕೈಗಾರಿಕೆಗಳನ್ನು ಸರಳೀಕರಣ ಮಾಡುವುದರ ಬಗ್ಗೆ ಹೆಚ್ಚಿನ ಗಮನಹರಿಸಿದರು. ಕೈಗಾರಿಕೆಗಾಗಿ ಭೂಮಿಯನ್ನು ಖರೀದಿ ಮಾಡಬೇಕೆಂದರೆ, ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961ರ ಸೆಕ್ಷನ್ 109ಕ್ಕೆ ತಿದ್ದುಪಡಿ ತರಲಾಗಿದೆ. ವಿಲೇಜ್ ಅಕೌಂಟೆಂಟ್‌ನಿಂದ ಹಿಡಿದು ಸಚಿವ ಸಂಪುಟದವರೆಗೆ ಬರಬೇಕಾಗಿತ್ತು. ತಹಸೀಲ್ದಾರ್, ಎ.ಸಿ., ಡಿ.ಸಿ., ಕಂದಾಯ ಸಚಿವರು, ನಂತರ ಸಚಿವ ಸಂಪುಟ, ಈ ರೀತಿ ಹಂತ ಹಂತವಾಗಿ ಹೋದಾಗ 6-6 ತಿಂಗಳು ಸಮಯ ತೆಗೆದುಕೊಳ್ಳುತ್ತಿತ್ತು. ಅದನ್ನು “ಮೇಕ್ ಇನ್ ಇಂಡಿಯಾ” ದಲ್ಲಿ ಸರಳೀಕರಣ ಮಾಡಿದ್ದೇವೆ. ನೇರವಾಗಿ ಕೃಷಿ ಜಮೀನನ್ನು ಕೈಗಾರಿಕೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿದ್ದೇವೆ. ಮತ್ತೊಂದು ನಾವು ಸರಳೀಕರಣ ಮಾಡಿರುವಂಥದು ‘ABC’ concept ಅನ್ನು ತಂದಿದ್ದೇವೆ. ‘ABC’ means affidavit based clearance. ಒಂದು ಸಲ ನಾವು ಕ್ಲಿಯರೆನ್ಸ್ ಮಾಡಿಕೊಟ್ಟರೆ ಸರ್ಕಾರದ ಕ್ಲಿಯರೆನ್ಸ್‌ಗಾಗಿ ಕಾಯುವ ಅವಶ್ಯಕತೆ ಇಲ್ಲ. ತೆಗೆದುಕೊಳ್ಳುವುದಕ್ಕೆ ಮೂರು ವರ್ಷ ಅಥವಾ before commercial production ಆಗುವುದರೊಳಗಾಗಿ ಲೈಸೆನ್ಸ್ ತೆಗೆದುಕೊಂಡರೆ ನಡೆಯುತ್ತದೆ. ಅದರ ಸಲುವಾಗಿ ಸಮಯ ವ್ಯರ್ಥವಾಗಬಾರದೆನ್ನುವ ಕಾರಣಕ್ಕಾಗಿ ನಾವು ಈ ಕಾನ್ಸೆಪ್ಟ್‌ನ್ನು ಜಾರಿಗೆ ತಂದಿದ್ದೇವೆ. ಕೈಗಾರಿಕೆಯಲ್ಲಿ ಮೊದಲು ಮಹಿಳೆಯರು ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವುದಕ್ಕೆ ಅವಕಾಶ ಇರಲಿಲ್ಲ. ರಾತ್ರಿ ಪಾಳಿಯಲ್ಲಿ ಅಂದರೆ ರಾತ್ರಿ 7 ರಿಂದ ಬೆಳಗ್ಗೆ 6 ಗಂಟೆಯವರೆಗೆ ಕೆಲಸ ಮಾಡುವುದಕ್ಕೆ ಅವಕಾಶ ಇದೆ. ಮೊದಲು overtime ಮಾಡುವುದಕ್ಕೆ ಅವಕಾಶ ಇರಲಿಲ್ಲ. ಈಗ ನಾವು overtime ಅನ್ನು ಒಂದು ತ್ರೈಮಾಸಿಕದಲ್ಲಿ ಒಟ್ಟು 125 ಗಂಟೆಗಳವರೆಗೆ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸಲು ಅವಕಾಶ ಮಾಡಿಕೊಟ್ಟಿದ್ದೇವೆ. ಮೊದಲು ಇರುವಂತಹ ಅವಕಾಶದಲ್ಲಿ ನಾವು ಒಂದು ಸಲ ಉದ್ಯೋಗಿಯನ್ನು ನೇಮಕಾತಿ ಮಾಡಿಕೊಂಡರೆ ಅವರಿಗೆ ಪ್ರತಿ ವರ್ಷದ ಸಂಬಳ ಕೊಡಬೇಕಾಗಿತ್ತು. ಮಧ್ಯೆ ಬ್ರೇಕ್ ಮಾಡುವುದಕ್ಕೆ ಆಗುತ್ತಿರಲಿಲ್ಲ. ಕೆಲವು seasonal industries ಇರುತ್ತದೆ. ಆ season ಗೆ ಮಾತ್ರ ಅವರು ಕಾರ್ಮಿಕರನ್ನು ತೆಗೆದುಕೊಂಡು ಉಳಿದಂತಹ ದಿವಸಗಳಲ್ಲಿ ಅವರನ್ನು ರಿಲೀಫ್ ಮಾಡಬಹುದು. ಅವರು ಮತ್ತೆ ಬೇರೆ ಕಡೆ ಕೆಲಸ ಮಾಡಿ ಕೈಗಾರಿಕೆಗೆ ಬರ್ಡನ್ ಆಗದಂತೆ ಅವರು ಬದುಕಿಕೊಳ್ಳುತ್ತಾರೆ, factory ಸಹ survive ಆಗುತ್ತದೆ. ಇದು ಮೊದಲು ಇರಲಿಲ್ಲ, ಇದನ್ನು ತಂದಿದ್ದೇವೆ. Ease of doing business ಬಗ್ಗೆ ನಾವು ಹೆಚ್ಚು ಗಮನಹರಿಸುತ್ತಿದ್ದೇವೆ. “ಮೇಕ್ ಇನ್ ಇಂಡಿಯಾ” ಕಾರ್ಯಕ್ರಮದಲ್ಲಿ ನಮ್ಮ ಕರ್ನಾಟಕದಿಂದ in different sectors Rs.1,000 Crores plus or minus ಬೇರೆ ಬೇರೆ ಕಡೆಯಿಂದ ನಾವು ಸಬ್ಸಿಡಿ ಕೊಡುತ್ತಿದ್ದೇವೆ. ಈ ರೀತಿ ಮಾಡುವುದರ ಜೊತೆಗೆ ಕೇವಲ ನಾವು ಕ್ಲಿಯರನ್ಸ್ ಕೊಟ್ಟು ಸುಮ್ಮನೆ ಕುಳಿತುಕೊಂಡಿಲ್ಲ. “ಉದ್ಯಮಿ ಆಗು, ಉದ್ಯೋಗ ನೀಡು” ಎನ್ನುವ ವಿನೂತನ ಕಾರ್ಯಕ್ರಮವನ್ನು ಕರ್ನಾಟಕದಲ್ಲಿ ತಂದಿದ್ದೇವೆ. ಈ ದೇಶದಲ್ಲಿ ಯಾರು ಮಾಡುತ್ತಿಲ್ಲ. ಆ ಸಂದರ್ಭದಲ್ಲಿ ಐ.ಟಿ.ಐ. ಕ್ಕಿಂತ ಮೇಲ್ಪಟ್ಟವರು ಇರಬಹುದು ಅಥವಾ ಎಸ್.ಎಸ್.ಎಲ್.ಸಿ. ಇದ್ದಂಥವರು

ಇರಬಹುದು, ಅವರಿಗೆ ನಮ್ಮ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಲ್ಲಿ ಏನೇನು ಸವಲತ್ತುಗಳಿವೆ, ಯಾವ್ಯಾವ ರೀತಿ ಸಬ್ಸಿಡಿ ಇದೆ, ಯಾವ ರೀತಿ ಅಪ್ಲೈ ಮಾಡಬೇಕು, ಏನೇನು ನಿಯಮಗಳಿವೆ ಎನ್ನುವಂಥದ್ದನ್ನು ಅವರಿಗೆ ತಿಳುವಳಿಕೆ ಕೊಟ್ಟು ಯಾರಾದರೂ specific sector ನಲ್ಲಿ ನಾವು ಈ ಕೈಗಾರಿಕೆಗಳನ್ನು ಮಾಡುತ್ತೇವೆಂದು ಮುಂದೆ ಬಂದರೆ ಅವರಿಗೆ 7 ದಿವಸಗಳಿಂದ 30 ದಿನಗಳವರೆಗೆ ಉಚಿತವಾಗಿ ತರಬೇತಿಯನ್ನು ಕೊಡುತ್ತೇವೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಹೇಳುವುದನ್ನೆಲ್ಲಾ ಪ್ರಿಂಟ್ ಮಾಡಿ ಅವರಿಗೆ ಕಳುಹಿಸಿಕೊಡಿ. ತಾವು ಕಳುಹಿಸಿ ಕೊಟ್ಟರೆ ಎಲ್ಲರಿಗೂ ಮಾಹಿತಿ ಸಿಗುತ್ತದೆ.

**ಶ್ರೀ ಮುರುಗೇಶ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, ಈ ಕೋವಿಡ್-19 ಎರಡು ವರ್ಷಗಳಿಂದ ಜಾಸ್ತಿ ಬಂದಿರುವುದರಿಂದ ನಾವು ನಿರೀಕ್ಷೆ ಮಾಡಿರುವಷ್ಟು ಟಾರ್ಗೆಟ್ ಮಾಡಿರುವಷ್ಟು employment generation ಮಾಡುವುದಕ್ಕಾಗಿಲ್ಲ, ಕೈಗಾರಿಕೆಗಳನ್ನು implement ಮಾಡಲಾಗುತ್ತಿಲ್ಲ. ಆದರೂ ಕೂಡ ನಾವು ಜಿಡಿಪಿ ಎರಡು ವರ್ಷಗಳ ಹಿಂದೆ ಏನಿತ್ತು, ಅದಕ್ಕಿಂತ ನಮ್ಮ ಕರ್ನಾಟಕ ಆಗಲಿ, ನಮ್ಮ ದೇಶ ಆಗಲಿ ಹಿಂದೆ ಬಂದಿಲ್ಲ. ಶೇಕಡ 14 ರಷ್ಟು ಜಿಡಿಪಿ ಇರುವಂಥದ್ದನ್ನು ಶೇಕಡ 25 ರಷ್ಟು ನಾವು ತಲುಪಬೇಕೆನ್ನುವಂಥದ್ದು ನಮ್ಮ ನೆಚ್ಚಿನ ಪ್ರಧಾನ ಮಂತ್ರಿಗಳ ಗುರಿಯಾಗಿತ್ತು. ಆದರೆ, ನಾವು in-between ಬಂದಿದ್ದೇವೆ. ಈಗ pickup ಆಗುತ್ತಿತ್ತು. ಆದರೆ ಈಗ ಮತ್ತೆ ಕೋವಿಡ್-19 ಬಂದಿರುವುದರಿಂದ ಸ್ವಲ್ಪ slow down ಆಗಿದೆ. ಒಟ್ಟಾರೆಯಾಗಿ ಹಿಂದೆ ಇರುವಂತಹ ನಮ್ಮ ನಿಯಮಗಳು ಮತ್ತು ಕಾನೂನುಗಳನ್ನು ಸರಳೀಕರಣಗೊಳಿಸಿ ಅವರಿಗೆ ಅನುಕೂಲತೆ ಮಾಡಿಕೊಡುವುದರ ಬಗ್ಗೆ ನಾವು ಗಮನಹರಿಸುತ್ತಿದ್ದೇವೆ.

(ಮುಂದು)

**1194/21-12-2021/ 11-00/bkp-bns**

**ಶ್ರೀ ಯು.ಬಿ.ವೆಂಕಟೇಶ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಕೈಗಾರಿಕೋದ್ಯಮಿ ಇರುವುದರಿಂದ ಕೈಗಾರಿಕಾ ಸಮಸ್ಯೆಗಳು ಅವರಿಗೆ ಗೊತ್ತಿದೆ ಎಂದು ನಾನು ತಿಳಿದುಕೊಳ್ಳುತ್ತೇನೆ. ಬೇರೆಯವರಿಗೆ ಈ ಖಾತೆಯನ್ನು ಕೊಟ್ಟಿದ್ದರೆ, ಇಷ್ಟೊಂದು ಕಷ್ಟ ಸುಖಗಳು ಗೊತ್ತಾಗುತ್ತಿರಲಿಲ್ಲ. ಇವರಿಗೆ ಕೊಟ್ಟಿರುವುದರಿಂದ ಸ್ವಲ್ಪ ಸುಧಾರಣೆಯಾಗುತ್ತದೆ ಎಂದು ಒಂದು ಅನಿಸಿಕೆಯಾಗಿದೆ. ಆದರೆ, ಇದು ಪೇಪರ್‌ನಲ್ಲಿ ಆಗಿದೆ. ಆದರೆ ಅಲ್ಲಿ ಜಾಗದಲ್ಲಿ ಆಗಿರುವುದಿಲ್ಲ. ಪ್ರಾಕ್ಟಿಕಲಿ ೫ ಲಕ್ಷ ಜನರಿಗೆ ನೀವು ಕೆಲಸವನ್ನು ಕೊಟ್ಟಿಲ್ಲ. ನಿಮಗೆ ಈ ಬಗ್ಗೆ ಅರ್ಜಿಯನ್ನು ಕೊಟ್ಟಾಗ ಇಂತಹ 100 ಎಕರೆ ಜಮೀನಿಗೆ ನಾವು 50 ಸಾವಿರ ಕೆಲಸ ಕೊಡುತ್ತೇವೆಂದು ಹೇಳುತ್ತಾರೆ. ಅದನ್ನು ಇಲ್ಲಿ ನನಗೆ ಪ್ರಿಂಟ್ ಮಾಡಿಕೊಟ್ಟಿದ್ದೀರಿ ಬಿಟ್ಟರೆ ಅಲ್ಲಿ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಫೀಲ್ಡ್‌ನಲ್ಲಿ ಇವತ್ತಿನವರೆಗೂ ಯಾರಿಗೂ ಕೆಲಸ ಕಾರ್ಯ ಸಿಕ್ಕಿಲ್ಲ. ಇದು ಒಂದು ವಿಚಾರ. ಎರಡನೆಯದಾಗಿ, ನಿಮಗೆ ಮತ್ತು ಲೇಬರ್ ಮಿನಿಸ್ಟರ್‌ಗೆ ಸ್ವಲ್ಪ ಹೊಂದಾಣಿಕೆ ಇರಬೇಕಾಗುತ್ತದೆ. ನಿಮ್ಮದೇ ದಾರಿ ಬೇರೆ, ಅವರ ದಾರಿಯೇ ಬೇರೆ. ಇದಕ್ಕೆಲ್ಲಾ ಒಂದು ಸಿಂಗಲ್ ವಿಂಡೋ ಮಾಡಿ. ಏಕೆಂದರೆ ಒಂದು ಇಂಡಸ್ಟ್ರಿಯನ್ನು ನಡೆಸಬೇಕೆಂದರೆ pollution control board ಗೆ ಹೋಗಬೇಕು, ನೀರಿನ ಕಡೆಗೆ ಹೋಗಬೇಕು, ಪವರ್‌ಗೆ ಹೋಗಬೇಕು. ನೀವು ಎಲ್ಲವನ್ನು ಡೆವಲಪ್ ಮಾಡಿ ಕೊಡುತ್ತೀರಿ. ಅಲ್ಲಿ ಅನುಕೂಲತೆಗಳು ಇರುವುದಿಲ್ಲ. ರೋಡ್ ಇರುವುದಿಲ್ಲ, ಫೈರ್ ಸ್ಟೇಷನ್ ಇರುವುದಿಲ್ಲ. ಈ ಸಂಬಂಧ ನಾನು ಹಾರೋಹಳ್ಳಿಯಲ್ಲಿನ ಒಂದು ಘಟನೆಯನ್ನು ಹೇಳಿದ್ದೆ. ಎಷ್ಟು ಜನರು ಸತ್ತರು, ಅದು ಹೇಗೆ ಆಯಿತು ಎಂದು ಹೇಳಿದ್ದೆ. ಅದ್ದರಿಂದ ಇವುಗಳನ್ನು ತರುವ ಮೊದಲು ನೀವು ಕಾರಿಡಾರ್ಸ್ ಮಾಡುವಾಗ ಅದೆಲ್ಲಾ ಮೂಲಭೂತ ಸೌಲಭ್ಯಗಳನ್ನು ಸಿದ್ಧತೆ ಮಾಡಿಕೊಡಿ ಎನ್ನುವುದು ನನ್ನ ಬೇಡಿಕೆ.

**ಶ್ರೀ ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನೆಲ್ಲಾ ಜಾರಿಗೆ ತರುತ್ತಿದ್ದೇವೆ. ಈ ವಿಚಾರವಾಗಿ ಸ್ಪಷ್ಟಪಡಿಸಿದ್ದೇನೆ. Because of covid ನಾವು ನಮ್ಮ ಟಾರ್ಗೆಟ್ ತಲುಪಲಿಕ್ಕೆ ಆಗಿಲ್ಲ. ನಾವು ಬರುವಂತಹ ದಿನಗಳಲ್ಲಿ ಸುಧಾರಣೆ ಮಾಡಿಕೊಳ್ಳುತ್ತಿದ್ದೇವೆ. ಅದನ್ನೇ 'abc' ಎಂದು ಏನು ಹೇಳಿದೆ ನಮ್ಮ ಲೇಬರ್ ಆಗಲಿ, ಬೇರೆ ಬೇರೆ ಇಲಾಖೆಗಳಿಗಾಗಲಿ ಸಮಯ ತೆಗೆದುಕೊಂಡು ಫ್ಯಾಕ್ಟರಿಗೆ ವಿಳಂಬವಾಗಬಾರದು ಎನ್ನುವ ಸಲುವಾಗಿ affidavit based clearance ಅನ್ನು ಕೊಡುತ್ತಿದ್ದೇವೆ. ಅದನ್ನು ಮೂರು ವರ್ಷದೊಳಗಾಗಿ ಅವನು ತೆಗೆದುಕೊಳ್ಳಬಹುದು. ಮತ್ತೆ ಸರಳೀಕರಣ ಮಾಡಿಕೊಂಡು co-ordination ಮಾಡಿಕೊಂಡು ಮಾಡುತ್ತೇವೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ 991**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಹರೀಶ್ ಕುಮಾರ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಪಟ್ಟಣ ಪಂಚಾಯಿತಿಗಳಲ್ಲಿ ಒಂದು ಸಮಸ್ಯೆ ಇದೆ. ಭೂ ಪರಿವರ್ತನೆಯಾದ ಜಮೀನಿನಲ್ಲಿ ಕಟ್ಟಡ ಪರವಾನಿಗೆ ಅಥವಾ ಭೂಮಿ ಪರಭಾರೆ ಮಾಡಲಿಕ್ಕೆ ಅವಕಾಶ ಸಿಗುವುದಿಲ್ಲ. ಪಟ್ಟಣ ಪಂಚಾಯಿತಿಗಳಲ್ಲಿ ಇನ್ನು ಕೂಡ development authority ಬಂದಿಲ್ಲ. ಅದಕ್ಕೋಸ್ಕರ ಪಟ್ಟಣ ಪಂಚಾಯಿತಿಗಳನ್ನು ಹತ್ತಿರದಲ್ಲಿರುವಂತಹ urban development authority ಗಳ ಜೊತೆ ಸೇರಿಸಿದ್ದಾರೆ. ಈಗಾಗಲೇ ಭೂ ಪರಿವರ್ತನೆಯಾದಂತಹ ಜಮೀನುಗಳು ಮಾರಾಟ ಮಾಡಲಿಕ್ಕೆ ಪಟ್ಟಣ ಪಂಚಾಯಿತಿಗಳಲ್ಲಿ ಆಗುತ್ತಿಲ್ಲ. ಅಂದರೆ ನಿವೇಶನಗಳಲ್ಲಿ ಪರಿವರ್ತನೆಯಾದಂತಹ ಕಟ್ಟಡಗಳು. ಅಲ್ಲಿ ಫಾರಂ ನಂ.3 ಬೇಕು. ಫಾರಂ ನಂ.3 ಅಲ್ಲಿ ಈಗ ಕೊಡುವುದನ್ನು ಸರ್ಕಾರದವರು ನಿಲ್ಲಿಸಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಫಾರಂ ನಂ. 9 ಮತ್ತು 11 ಇದ್ದರೆ ಅದಕ್ಕೆ ಸರಿಯಾದ ದಾಖಲಾತಿ ಸಿಕ್ಕುತ್ತದೆ. ಇದರಿಂದ ಏನಾಗಿದೆ ಎಂದರೆ ವಾಣಿಜ್ಯ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಬೇಕಾದರೆ ಒಮ್ಮೆ ಅದು ನಿವೇಶನಕ್ಕೋಸ್ಕರ ಪರಿವರ್ತನೆಯಾಗಿರುತ್ತದೆ. ಅದನ್ನು ವಾಣಿಜ್ಯ ಉದ್ದೇಶಕ್ಕಾಗಿ ಪರಿವರ್ತನೆ ಮಾಡಬೇಕಾದರೆ ಅಥವಾ ಆ ಭೂಮಿಯನ್ನು ಪರಭಾರೆ ಮಾಡಬೇಕಾದರೆ ಅಥವಾ ಕಟ್ಟಡ ಕಟ್ಟಲಿಕ್ಕೆ ಪರವಾನಿಗಿ ಬೇಕಾದರೆ ಅಲ್ಲಿ ಈಗ ನಿರಾಕರಣೆ ಮಾಡಲಾಗುತ್ತಿದೆ. ಏಕೆಂದರೆ, 1976ನೇ ಇಸವಿಗೆ ಮೊದಲು ಯಾವ ಜಮೀನು ಪರಿವರ್ತನೆಯಾಗಿದೆ ಅದನ್ನು ಮಾತ್ರ ಭೂ ಪರಿವರ್ತನೆ ಮಾಡಬಹುದು ಅಥವಾ ಪರಭಾರೆ ಮಾಡಬಹುದು ಎನ್ನುವಂತಹ ಒಂದು ಸುತ್ತೋಲೆ ಸರ್ಕಾರ ಕಳುಹಿಸಿ ಕೊಟ್ಟಿದೆ. ಬಹುಶಃ ಇದರಿಂದ ಇವತ್ತು ಎಲ್ಲಾ ನೋಂದಣಿ ಕಚೇರಿಗಳಲ್ಲಿ ಯಾವುದೇ ಒಂದು ವ್ಯವಹಾರ ನಡೆಯುತ್ತಿಲ್ಲ. ಅವರಿಗೆ ಮನೆ ಕಟ್ಟಲಿಕ್ಕೆ ಅಥವಾ ವಾಣಿಜ್ಯ ಕಟ್ಟಡ ಕಟ್ಟಲಿಕ್ಕೆ ಅವಕಾಶ ಇರುವುದಿಲ್ಲ. ಜನರು ಇದರಿಂದಾಗಿ ಬಹಳ ಆತಂಕದಲ್ಲಿದ್ದಾರೆ. ಬಹುಶಃ 1976 ನೇ ಇಸವಿ ಎಂದರೆ ಇಲ್ಲಿಗೆ ಸುಮಾರು 45 ವರ್ಷಗಳ ಹಿಂದಿನ ಒಂದು ಆದೇಶ. ಇದಾದನಂತರ ಅನೇಕ ಭೂ ಪರಿವರ್ತನೆಯಾಗಿದೆ. ಅನೇಕ ಜನ ನಿವೇಶನಗಳಿಗೆ ಅವಕಾಶವನ್ನು ಕೇಳುತ್ತಿದ್ದಾರೆ. ' Split conversion ' ಎಂದು ಕರೆಯುತ್ತಿದ್ದಾರೆ. Split conversion ಎಂದು ಹೇಳಿ ಇದು ಒಂದು ಜನ ವಿರೋಧಿ ಕಾನೂನು ಆಗಿದೆ. ಲಕ್ಷಾಂತರ ಜನರ ಬೇಡಿಕೆಗೆ ಬಹಳ ತೊಂದರೆಯಾಗಿದೆ. ಇವತ್ತು ಪಟ್ಟಣ ಪಂಚಾಯಿತಿಗಳಲ್ಲಿ ಎಲ್ಲಾ ಗ್ರಾಮೀಣ ಭಾಗಗಳಲ್ಲಿ ಫಾರಂ 9, 11 ಕೊಡಲಿಕ್ಕೆ ಅವಕಾಶ ಇದೆ. ಆದರೆ, ಇಲ್ಲಿ ನಮಗೆ ಅವಕಾಶ ಸಿಕ್ಕುತ್ತಿಲ್ಲ. ಇವತ್ತು 1976ನೇ ಇಸವಿಯ ಮೊದಲು ಎನ್ನುವಂಥಹ ಸುತ್ತೋಲೆ ಏನಿದೆ ಅದನ್ನು ಸ್ವಲ್ಪ ರಿಲ್ಯಾಕ್ಸ್ ಮಾಡಿದರೆ ಬಹುಶಃ ಬಹಳಷ್ಟು ಜನರಿಗೆ ಪ್ರಯೋಜನ ಆಗಬಹುದು ಎನ್ನುವುದು ನಮ್ಮ ಅನಿಸಿಕೆ ಆಗಿದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಿ.ಎ.ಬಸವರಾಜು:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳತಕ್ಕಂತಹ ಪ್ರಶ್ನೆಗೆ ಕೂಲಂಕಷವಾಗಿ ಉತ್ತರವನ್ನು ಒದಗಿಸಿದ್ದೇನೆ. ಏನು ಅಕ್ರಮ ಸಕ್ರಮ ಎನ್ನುವುದು ಎಲ್ಲಾ ಕಡೆ ಇದೆ. ಇದು ಏನಾಗಿದೆ ಎಂದರೆ ಸರ್ವೋಚ್ಚ ನ್ಯಾಯಾಲಯದಲ್ಲಿ ಈ ಪ್ರಕರಣಕ್ಕೆ ತಡೆಯಾಜ್ಞೆಯನ್ನು ಕೊಟ್ಟಿದ್ದಾರೆ. ಹೀಗಾಗಿ ಇದನ್ನು ಸರ್ಕಾರ ಏನೂ ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಹೀಗಾಗಿ ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಒಂದು ಉಪಸಮಿತಿಯನ್ನು ಮಾಡಿದ್ದಾರೆ. ಈ ಬಗ್ಗೆ ಏನಾದರೂ ತೀರ್ಮಾನ ಮಾಡಬೇಕೆಂದು ಹೇಳಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ಎರಡು ಸಭೆಗಳನ್ನು ಮಾಡಿದ್ದೇವೆ. ಅದರಲ್ಲಿ ಕಾನೂನು ಸಚಿವರು ಇದ್ದಾರೆ, ನಾನು ಇದ್ದೇನೆ. ಪೌರಾಡಳಿತ ಸಚಿವರು ಇದ್ದಾರೆ. ಎಲ್ಲರೂ ಸಹ ಇದರ ಬಗ್ಗೆ ಸಮಾಲೋಚನೆ ಮಾಡಿ ಇದಕ್ಕೆ ಅಂತಿಮ ತೀರ್ಮಾನ ಮಾಡಬೇಕೆಂದು ಹೇಳಿ ಒಂದು ಉಪಸಮಿತಿಯನ್ನು ಮಾಡಿ ಅದರ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಈ ಸಮಿತಿ ಏನು ತೀರ್ಮಾನ ಮಾಡುತ್ತದೆ ,ಅದನ್ನು ಸಚಿವ ಸಂಪುಟದಲ್ಲಿ ಚರ್ಚೆ ಮಾಡಿ ಅಂತಿಮ ತೀರ್ಮಾನವನ್ನು ಕೈ ಗೊಳ್ಳುವಂತಹ ಕೆಲಸ ಆಗುತ್ತದೆ. ಈ ಬಗ್ಗೆ ಸರ್ವೋಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುವುದರಿಂದ ಸರ್ಕಾರ ಇದರ ಬಗ್ಗೆ ಏನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಮಾತನ್ನು ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಕೆ.ಹರೀಶ್ ಕುಮಾರ್:-** ಮಾನ್ಯಸಭಾಪತಿಯವರೆ,

**ಸಭಾಪತಿಯವರು:-** ಈ ವಿಚಾರ ಕೋರ್ಟ್‌ನಲ್ಲಿದೆ ಎಂದು ಹೇಳುತ್ತಿದ್ದಾರೆ.

**ಶ್ರೀ ಕೆ.ಹರೀಶ್ ಕುಮಾರ್:-** ಮಾನ್ಯಸಭಾಪತಿಯವರೆ, ಇದನ್ನು ಅನಧಿಕೃತವೆಂದು ಹೇಳುತ್ತಿದ್ದಾರೆ. ಬಹುಶಃ 1976ನೇ ಇಸವಿ ಯಲ್ಲಿ ಇದ್ದ ಕಾನೂನಿನ ಪ್ರಕಾರ ಆಗಿದೆ. ಇದು ಅನಧಿಕೃತ ಅಥವಾ ಅಕ್ರಮ ಸಕ್ರಮ ಎನ್ನುವಂತಹ ಶಬ್ದವನ್ನು ಏತಕ್ಕೆ ಈ ಸರ್ಕಾರ ಬಳಸುತ್ತಿದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಮತ್ತೆ, ನ್ಯಾಯಾಲಯದಲ್ಲಿರುವ ಬಗ್ಗೆ ಸಚಿವರು ಉಲ್ಲೇಖ ಮಾಡಿದರು. ಇಲ್ಲಿ ಕೋರ್ಟ್ ಡಿಕ್ರಿಯಾಗಿ ರಾಜಿ ಡಿಕ್ರಿಯಾದುದನ್ನು ಸರ್ಕಾರ ಕೋರ್ಟ್ ಆದೇಶ ಇದ್ದರೂ ಸರ್ಕಾರ ಸುತ್ತೋಲೆ ಕೊಟ್ಟು ಅದಕ್ಕೆ ತಡೆಹಿಡಿದಿದ್ದಾರೆ. ನ್ಯಾಯಾಲಯದಲ್ಲಿ ಇದ್ದುದನ್ನು ....... ಇಲ್ಲಿ ಉಲ್ಲೇಖ ಮಾಡುತ್ತಾರೆ. ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದೆ ಎಂದು ಉಲ್ಲೇಖ ಮಾಡುತ್ತಾರೆ. ಅಂದರೆ ಸರ್ಕಾರಕ್ಕೆ ಯಾವ ರೀತಿಯಲ್ಲಿ ಬೇಕೋ ಆ ರೀತಿಯಲ್ಲಿ ಬಳಸಿಕೊಳ್ಳುವಂತಹ ವ್ಯವಸ್ಥೆ ಇದೆ. ಕೇವಲ ಒಂದು ಸುತ್ತೋಲೆಯಲ್ಲಿ ನ್ಯಾಯಾಲಯದ ಆದೇಶವನ್ನು ನಿಲ್ಲಿಸಲಿಕ್ಕೆ ಆಗುತ್ತದೆ. ಆದರೆ, ಇಲ್ಲಿ ನ್ಯಾಯಾಲಯದ ಕಾನೂನನ್ನು ತೋರಿಸಿಕೊಡುತ್ತೀರಿ. ಬಹುಶಃ ನಗರಾಭಿವೃದ್ಧಿ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಚಿವರಿಗೆ ಇದರ ಬಗ್ಗೆ ಬಹಳ ಅಳವಾದ ಜ್ಞಾನ ಇದೆ. ಆದ್ದರಿಂದ ಇದು ಬಹಳಷ್ಟು ಜನರಿಗೆ ತೊಂದರೆಯಾಗುವಂತಹ ವಿಚಾರವಾಗಿದೆ. ದಯವಿಟ್ಟು ಇದಕ್ಕೆ ಏನಾದರೂ ಸಹಾಯ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಬಿ.ಎ. ಬಸವರಾಜು:-** ಮಾನ್ಯ ಸಭಾಪತಿಯವರೆ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ಈಗಾಗಲೇ ಸಭೆಗಳನ್ನು ಮಾಡುತ್ತಿದ್ದೇವೆ. ಇದಕ್ಕೆ ಅಂತಿಮವಾದ ತೀರ್ಮಾನ ಮಾಡುವುದಕ್ಕೆ ಈ ಸರ್ಕಾರ ಬದ್ಧವಾಗಿದೆ. ಹೀಗಾಗಿ ಮಾನ್ಯ ಶ್ರೀ ಕೆ.ಎಸ್. ಈಶ್ವರಪ್ಪನವರ ನೇತೃತ್ವದಲ್ಲಿ ಏನು ತೀರ್ಮಾನವಾಗುತ್ತದೆ. ಆ ತೀರ್ಮಾನಗಳು ಆದಮೇಲೆ ಇದಕ್ಕೆ ಅಂತಿಮ ರೂಪವನ್ನು ಕೊಡುವಂತಹ ಕೆಲಸವನ್ನು ಸರ್ಕಾರ ಮಾಡುತ್ತದೆ.

**ಶ್ರೀ ಎನ್. ನಾಗರಾಜ (ಎಂಟಿಬಿ)(ಸಣ್ಣ ಕೈಗಾರಿಕೆ, ಸಾರ್ವಜನಿಕ ವಲಯ ಕೈಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೆ, ಈ ಪ್ರಶ್ನೆ ಜೊತೆಯಲ್ಲಿ ಎರಡು ಉಪ ಪ್ರಶ್ನೆಗಳನ್ನು ಕೇಳಿದ್ದಾರೆ. ಅದು ಏನೆಂದರೆ, ಭೂ ಪರಿವರ್ತನೆ ಆಗಿರುವಂತಹ ಭೂಮಿಗಳಿಗೆ ಕಟ್ಟಡಗಳನ್ನು ಕಟ್ಟಲಿಕ್ಕೆ ಲೈಸೆನ್ಸ್, ಪ್ಲ್ಯಾನ್ ಅನುಮೋದನೆಯನ್ನು ನಗರ ಸಭೆಗಳಲ್ಲಿ, ಪುರಸಭೆಗಳಲ್ಲಿ ಕೊಡುತ್ತಿಲ್ಲ ಎನ್ನುವ ಪ್ರಶ್ನೆ ಇದರಲ್ಲಿ ಇದೆ. ಅದು ಏನಾಗಿದೆ ಎಂದರೆ ಹಿಂದೆ ಡಿ.ಸಿ. ಕನ್ವರ್ಷನ್ ಆಗಿರುವವರಿಗೆ ಫಾರಂ 3 ಕೊಡುತ್ತಿಲ್ಲ ಎನ್ನುವ ಉಪ ಪ್ರಶ್ನೆಯನ್ನು ಕೇಳಿದ್ದಾರೆ. ಆ ಫಾರಂ 3 ಕೊಡಲಿಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ಗ್ರಾಮಠಾಣಾ ವ್ಯಾಪ್ತಿಯಲ್ಲಿ ಬರತಕ್ಕಂತಹವುಗಳಿಗೆ ನಾವು ಈಗಾಗಲೇ ಫಾರಂ ನಂ: 3 ಅನ್ನು ಕೊಡುತ್ತಿದ್ದೇವೆ ಮತ್ತು planning authority ಯಿಂದ ಅನುಮೋದನೆಯಾಗಿರತಕ್ಕಂತಹ lay-out development ಆಗಿರತಕ್ಕಂತಹ ನಿವೇಶನಗಳನ್ನು ಹಂಚಲಿಕ್ಕೆ ಮತ್ತು ಅದರಲ್ಲಿ ಮನೆಗಳನ್ನು ಕಟ್ಟಲಿಕ್ಕೆ ಲೈಸೆನ್ಸ್, ಪ್ಲ್ಯಾನ್ ಅನುಮೋದನೆಯನ್ನು ನಾವು ಕೊಡುತ್ತಿದ್ದೇವೆ. ನಮ್ಮ ಮಾನ್ಯ ಸಚಿವರಾದ ಶ್ರೀ ಬಸವರಾಜು ರವರು ಹೇಳಿದಂತೆ ಇದರ ಬಗ್ಗೆ ಸಮಿತಿಯಾಗಿದ್ದು ಎರಡು ಸಭೆಗಳಾಗಿದೆ. ಅಕ್ರಮ-ಸಕ್ರಮ ತಡೆಯಾಜ್ಞೆ ಇದೆ. ಜೊತೆಗೆ ಈ ಫಾರಂ 3 ನೀಡಲಿಕ್ಕೆ ಎರಡೂ ಸೇರಿ ಸುಪ್ರೀಂ ಕೋರ್ಟ್ ನ್ಯಾಯಾಲಯದಲ್ಲಿ ಇದಕ್ಕೆ ತಡೆಯಾಜ್ಞೆ ಇದೆ. ಇದನ್ನು ಆದಷ್ಟು ಬೇಗನೆ ತೆರವುಗೊಳಿಸಬೇಕೆಂದು ಎರಡು ಸಭೆಗಳನ್ನು ಮಾಡಿದ್ದೇವೆ. ಮುಖ್ಯಮಂತ್ರಿಗಳು ಮತ್ತು ಕಾನೂನು ಸಚಿವರು ಹೇಳಿದ್ದಾರೆ. ಇದು ಆದಷ್ಟು ಬೇಗನೆ ಆಗಬೇಕು. ನಗರಸಭೆಗಳಿಗೆ ನಮಗೆ 30% ತೆರಿಗೆ ಕಡಿಮೆಯಾಗುತ್ತಿದೆ. ಆದ್ದರಿಂದ, ಆದಷ್ಟು ಬೇಗ ಇದನ್ನು ಮಾಡಲಿಕ್ಕೆ ಶೀಘ್ರದಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ, ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ 977**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆರ್.ಧರ್ಮಸೇನ:-** ಮಾನ್ಯ ಸಭಾಪತಿಯವರೆ, ನನ್ನ ಮೂರನೆಯ ಪ್ರಶ್ನೆಗೆ ಬಹಳ ಒಳ್ಳೆಯ ಉತ್ತರ ಮತ್ತು ಉಪಯುಕ್ತವಾದ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಅವರಿಗೆ ಧನ್ಯವಾದಗಳು. ಆದರೂ ಸಹ ನನ್ನ ಮೊದಲನೆಯ ಮತ್ತು ಎರಡನೆಯ ಪ್ರಶ್ನೆಗೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಯಾವ ಯಾವ ಗ್ರಾಮ ಪಂಚಾಯಿತಿಗಳನ್ನು , ಪಟ್ಟಣ ಪಂಚಾಯಿತಿಗಳಾಗಿ ಹಾಗೂ ಪುರಸಭೆಗಳನ್ನು ನಗರ ಸಭೆಗಳಾಗಿ ಮೇಲ್ದರ್ಜೆಗೇರಿಸುವ ಉದ್ದೇಶ ಸರ್ಕಾರಕ್ಕಿದೆಯೇ ಎನ್ನುವ ಪ್ರಶ್ನೆಗೆ ಇಲ್ಲ ಎನ್ನುವಂತಹ ಉತ್ತರವನ್ನು ಕೊಟ್ಟಿದ್ದಾರೆ.

ಮೈಸೂರಿನ ಬೂತಗಳ್ಳಿಯನ್ನು ನಗರ ಸಭೆಯನ್ನಾಗಿ ಮತ್ತು ರಮ್ಮನಹಳ್ಳಿ ಬೋಗಾದಿ ಶ್ರೀರಾಂಪುರವನ್ನು ಪಟ್ಟಣ ಪಂಚಾಯಿತಿಯಾಗಿ ಪರಿವರ್ತನೆ ಮಾಡಿ, ಈಗ ಅಲ್ಲಿ ಗ್ರಾಮ ಪಂಚಾಯಿತಿ ಚುನಾವಣೆಗಳನ್ನು ನಡೆಸಿಲ್ಲ. ಮತ್ತೆ, ಕೆಲವು ಅಧಿಕಾರಿಗಳನ್ನು ನೇಮಿಸಿದ್ದೀರಾ, ಅವರುಗಳಿಗೆ ಯಾವರೀತಿಯ ಸವಲತ್ತುಗಳಿಲ್ಲ. ಅಲ್ಲಿ ಸಿಬ್ಬಂದಿ ಯಾರು ಕೂಡ ಇರುವುದಿಲ್ಲ. ಇದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿದೆ. ಈ ಬಗ್ಗೆ ತಮಗೆ ಜಿಲ್ಲಾಧಿಕಾರಿಗಳಿಂದ ಸರ್ಕಾರಕ್ಕೆ ಪ್ರಸ್ತಾವನೆ ಇಲ್ಲ ಎನ್ನುವುದಾದರೆ ಅದಕ್ಕೆ ಚುನಾವಣೆ ನಡೆಯದೇ ಇರುವುದರಿಂದ ತಾವು ಕೂಡಲೇ ಏನಾದರೂ ಕ್ರಮವನ್ನು ತೆಗೆದುಕೊಳ್ಳುತ್ತೀರಾ , ಸಾಮಾನ್ಯ ಜನರಿಗೆ ತೊಂದರೆಯಾಗದ ರೀತಿಯಲ್ಲಿ ಯಾವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ಸಚಿವರು ಹೇಳಬೇಕು.

(ಮುಂದು)

**(1195) 21.12.2021 11.10 ಎಸ್‌ವಿ-ಜಿಆರ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎನ್.ನಾಗರಾಜು(ಎಂ.ಟಿ.ಬಿ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮೈಸೂರು ತಾಲ್ಲೂಕಿನ ಐದು ಪಟ್ಟಣ ಪಂಚಾಯಿತಿಗಳನ್ನು ನಗರಸಭೆಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. ಅವು ಯಾವುವೆಂದರೆ ಹೂಟಗಳ್ಳಿ, ಶ್ರೀರಾಮಪುರ, ಕಡಕೋಳ, ಭೋಗಾದಿ ಮತ್ತು ರಮ್ಮನಹಳ್ಳಿ. ಮಾನ್ಯ ಸದಸ್ಯರು ಹೊಸದಾಗಿ ಪಟ್ಟಣ ಪಂಚಾಯಿತಿಗಳಿಂದ ಮೇಲ್ದರ್ಜೆಗೆ ಏರಿಸಲಾಗಿರುವಂತಹ ನಗರಸಭೆಗಳ ಅಭಿವೃದ್ಧಿಗೆ ಹಣವನ್ನು ಕೊಡಬೇಕು. ಸಿಬ್ಬಂದಿ ಮುಂತಾದ ಅಗತ್ಯ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಸರ್ಕಾರ ಹಣವನ್ನು ಕೊಡಬೇಕು ಎನ್ನುವ ಉಪ ಪ್ರಶ್ನೆಗಳನ್ನು ಕೇಳಿದ್ದಾರೆ. ಈಗಾಗಲೇ ಸರ್ಕಾರ ತೀರ್ಮಾನವನ್ನು ತೆಗೆದುಕೊಂಡಿದೆ. ಇನ್ನು ಮುಂದೆ ಯಾವುದೇ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮಾಡುವ ಸಂದರ್ಭದಲ್ಲಿ ಅಲ್ಲಿಗೆ ಬೇಕಾಗಿರುವಂತಹ ಮೂಲ

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಸೌಕರ್ಯಗಳು ಮತ್ತು ಹಣದ ವ್ಯವಸ್ಥೆಯನ್ನು ಕೊಟ್ಟು, ಅವುಗಳನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಕಾನೂನಿನಲ್ಲಿ ಬದಲಾವಣೆಗಳನ್ನು ತರಬೇಕೆಂದು ಈಗಾಗಲೇ ನಾವು ಒಂದು ಸಭೆಯನ್ನು ಮಾಡಿದ್ದೇವೆ. ಅದರ ಜೊತೆಯಲ್ಲಿ ಕೆಲವು ಪಟ್ಟಣ ಪಂಚಾಯಿತಿಗಳು, ಪುರಸಭೆಗಳು, ನಗರ ಸಭೆಗಳನ್ನು ಮಾಡಲಿಕ್ಕೆ ಕೂಡ ಮಾನ್ಯ ಸದಸ್ಯರು ತಮ್ಮ ಉಪ ಪ್ರಶ್ನೆಯಲ್ಲಿ ಕೇಳಿದ್ದಾರೆ. ಅದಕ್ಕೆ ಅದರದ್ದೇ ಆದ ಮಾನದಂಡಗಳಿವೆ. 10.000 ದಿಂದ 20,000 ಜನಸಂಖ್ಯೆಯುಳ್ಳ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮಾಡಬಹುದು. 20,000 ದಿಂದ 50,000 ಜನಸಂಖ್ಯೆ ಇರುವ್ವ ಪಟ್ಟಣ ಪಂಚಾಯಿತಿಯನ್ನು ಪುರಸಭೆ ಮಾಡಬಹುದು. 50,000 ದಿಂದ 1,00,000 ಜನಸಂಖ್ಯೆ ಇರುವ ಪುರಸಭೆಗಳನ್ನು ನಗರ ಸಭೆಗಳನ್ನಾಗಿ ಮಾಡಬಹುದು. ಒಂದು ಲಕ್ಷ ಮೇಲ್ಪಟ್ಟು ಎರಡು ಲಕ್ಷ ಜನಸಂಖ್ಯೆ ಇರುವಂತಹ ನಗರ ಸಭೆಯನ್ನು ಗ್ರೇಡ್ -1 ನಗರ ಸಭೆಯನ್ನಾಗಿ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿದ್ದು, ಇದರ ಬಗ್ಗೆ ಸರ್ಕಾರದ ಒಂದು ಸುತ್ತೋಲೆಯಿದೆ. ಜನಸಂಖ್ಯೆಗನುಗುಣವಾಗಿ, ಅಲ್ಲಿನ ವ್ಯವಸಾಯ, ಅಲ್ಲಿನ ಕಾರ್ಖಾನೆ ಅಭಿವೃದ್ಧಿಗನುಗುಣವಾಗಿ ಅವುಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರದ ಸುತ್ತೋಲೆಯಿದೆ. ಈ ಎಲ್ಲಾ ಮಾನದಂಡಗಳಿಗನುಗುಣವಾಗಿ ಇದ್ದರೆ ಸರ್ಕಾರ ಮೇಲ್ದರ್ಜೆಗೇರಿಸಲು ಸಿದ್ಧವಾಗಿದೆ.

**ಶ್ರೀ ಆರ್.ಧರ್ಮಸೇನ:-** ಮಾನ್ಯ ಸಚಿವರೇ, ತಮ್ಮಲ್ಲಿ ಒಂದು ವಿನಂತಿ. ಈಗ ಹೂಟಗಳ್ಳಿ ನಗರ ಸಭೆಯನ್ನು ಮಾಡಲಾಗಿದ್ದು, ಅಲ್ಲಿ 58 ಜನ ಗ್ರಾಮ ಪಂಚಾಯಿತಿ ಸದಸ್ಯರಿದ್ದರು. ಹಲವಾರು ಕಡೆ 60 ಜನ, ಕೆಲವು ಕಡೆ 30-40 ಜನ ಗ್ರಾಮಪಂಚಾಯಿತಿ ಸದಸ್ಯರಿದ್ದರು. ನೀವೇನಾದರೂ ಅವರಿಗೆ ಸರಿಯಾದ ರೀತಿಯಲ್ಲಿ ಅನುದಾನಗಳನ್ನು ಕೊಡಲಿಲ್ಲ ಎಂದರೆ ಅಭಿವೃದ್ಧಿಯಾಗವುದು ಕಷ್ಟ. ಕಳೆದ ಬಾರಿ ನಮ್ಮ ಸರ್ಕಾರ ಇದ್ದಾಗಲೂ ಹಲವು ಪೌರ ಕಾರ್ಮಿಕರಿಗೆ ಸರಿಯಾದ ರೀತಿಯಲ್ಲಿ ಸೌಲಭ್ಯಗಳನ್ನು ನೀಡುತ್ತಿರಲಿಲ್ಲ. ಆ ಸಂದರ್ಭದಲ್ಲಿ ನಾವು ಸರ್ಕಾರಕ್ಕೆ ಒತ್ತಾಯ ಮಾಡಿದ್ದೆವು. ಗ್ರಾಮ ಪಂಚಾಯಿತಿಗಳಲ್ಲಿ ಐದಾರು ಜನ ಪೌರ ಕಾರ್ಮಿಕರನ್ನು ನೇಮಿಸಿಕೊಂಡಿರುತ್ತಾರೆ. ಅದೇ ಪಟ್ಟಣ ಪಂಚಾಯಿತಿಗಳಲ್ಲಿ ಒಬ್ಬಿಬ್ಬರನ್ನು ಮಾತ್ರ ಕೊಡುತ್ತಾರೆ. ಅದರ ಬಗ್ಗೆ ಗಮನ ಹರಿಸಬೇಕು. ಎಷ್ಟು ಗ್ರಾಮ ಪಂಚಾಯಿತಿ ಸದಸ್ಯರಿದ್ದಾರೆಯೋ ಅದಕ್ಕೆ ತಕ್ಕಂತೆ ಅನುದಾನವನ್ನು ಕೂಡಲೇ ಮುಖ್ಯಮಂತ್ರಿಗಳಿಗೆ ಹೇಳಿ ಹಣ ಬಿಡುಗಡೆ ಮಾಡಿಸಬೇಕೆಂದು ನಾನು ಮನವಿ ಮಾಡುತ್ತೇನೆ.

**ಶ್ರೀ ಎನ್.ನಾಗರಾಜು(ಎಂ.ಟಿ.ಬಿ):-** ಮಾನ್ಯ ಸಭಾಪತಿಯವರೇ, ಯಾವ್ಯಾವ ಗ್ರಾಮ ಪಂಚಾಯಿತಿಗಳು ಪಟ್ಟಣ ಪಂಚಾಯಿತಿಗಳಾಗಿವೆಯೋ ಅಲ್ಲಿ ಕೆಲಸ ಮಾಡತಕ್ಕಂತಹ ಕಾರ್ಯದರ್ಶಿಯಾಗಬಹುದು ಅಥವಾ watermen ಗಳಾಗಬಹುದು. ಪಿ.ಡಿ.ಓ., ಒಬ್ಬರನ್ನು ಬಿಟ್ಟು ಅಲ್ಲಿರತಕ್ಕಂತಹ ಎಲ್ಲಾ ಸಿಬ್ಬಂದಿಗಳನ್ನು ಗ್ರಾಮ ಪಂಚಾಯಿತಿಯಿಂದ ಪಟ್ಟಣ ಪಂಚಾಯಿತಿಗಳಿಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ತೆಗೆದುಕೊಳ್ಳಲು ಕಾನೂನಿನಲ್ಲಿ ಅವಕಾಶವಿದೆ. ಮಾನ್ಯ ಸದಸ್ಯರು ಅಲ್ಲಿ ಅಭಿವೃದ್ಧಿಗಾಗಿ ಹಣವನ್ನು ಕೇಳಿದ್ದಾರೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರೊಂದಿಗೆ ಎರಡು ಸಭೆಯನ್ನು ನಡೆಸಿ ಚರ್ಚಿಸಲಾಗಿದೆ. ಮುಂದಿನ ತಿಂಗಳಿನಲ್ಲಿ ಹೊಸದಾಗಿ ಮೇಲ್ದರ್ಜೆಗೇರಿಸಲ್ಪಟ್ಟ ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ, ಗ್ರೇಡ್-1 ನಗರಸಭೆಗಳಿಗೆ ಸರ್ಕಾರದಿಂದ ಆರ್ಥಿಕ ನೆರವು ಕೊಡಬೇಕೆನ್ನುವ ಚಿಂತನೆಯಲ್ಲಿದ್ದೇವೆ. ಮುಂದಿನ ದಿನಗಳಲ್ಲಿ ಅದನ್ನು ಮಾಡಲಾಗುವುದು.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಪ್ರಶ್ನೆ ಸಂಖ್ಯೆ 947**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ನಾನು ಇಲ್ಲಿ ಕೇಳಿರುವ ಪ್ರಶ್ನೆ ಅಂಧ ಮತ್ತು ಕಿವುಡ ಮಕ್ಕಳ ಪ್ರಾಥಮಿಕ ಶಾಲೆಯಲ್ಲಿ ಸೇವೆಯನ್ನು ಸಲ್ಲಿಸುತ್ತಿರುವಂತಹ ಶಿಕ್ಷಕರ ಬಗ್ಗೆ ನಾನು ಈ ಪ್ರಶ್ನೆಯನ್ನು ಕೇಳಿದ್ದೇನೆ. ಇಲ್ಲಿ ಸೇವೆಯನ್ನು ಸಲ್ಲಿಸುತ್ತಿರುವಂತಹ ಶಿಕ್ಷಕರಾಗಲೀ ಅಥವಾ ಮೊರಾರ್ಜಿ ವಸತಿ ಶಾಲೆಯ ಅಥವಾ ಶಿಕ್ಷಣ ಇಲಾಖೆಯ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಒಂದೇ ಸಂಬಳ ಇರಬೇಕು.

ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ಎಲ್ಲಿ ತಪ್ಪಾಗಿದೆ ಎಂಬುದು ತಮಗೆ ಚೆನ್ನಾಗಿ ತಿಳಿದಿದೆ. 2015ರಲ್ಲಿ ರೂ.6250 ಗಳ ಮೂಲವೇತನ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಇತ್ತು. ಅವರ ವೇತನದಲ್ಲಿ ತಾರತಮ್ಯ ಇದೆ ಎಂದು ಅದನ್ನು ರೂ.6800ಕ್ಕೆ ಏರಿಸಿದರು. ರೂ.6800ಕ್ಕೆ ಏರಿಸಿರುವುದನ್ನು ಈ ಇಲಾಖೆಯಲ್ಲಿ ಗಮನಕ್ಕೆ ತೆಗೆದು ಕೊಂಡು ಮಾಡಿರುವುದಿಲ್ಲ. ಆ ಕಾರಣಕ್ಕಾಗಿ ಈ ವ್ಯತ್ಯಾಸ ಅಂದಿನಿಂದ ಇಂದಿವರೆಗೆ ಹಾಗೆಯೇ ಬರುತ್ತಿದೆ. ಇಂತಹ ಶಾಲೆಗಳ ಶಿಕ್ಷಕರು ಅಂಧರಾಗಿದ್ದಾರೆ. ನಾನು ಏಕೆ ಸ್ವಲ್ಪ ಹೆಚ್ಚಿನ ಒತ್ತನ್ನು ಕೊಟ್ಟು ಹೇಳುತ್ತಿದ್ದೇನೆಂದರೆ ಬೇರೆ ಶಿಕ್ಷಕರು ಕಿವುಡರಾಗಲಿ ಅಥವಾ ಅಂಧರಾಗಲಿ ಇರುವುದಿಲ್ಲ. ಆದರೆ ಈ ಶಿಕ್ಷಕರು ವಿಕಲಚೇತನರಾಗಿದ್ದು, ಇವರಿಗೆ ವ್ಯತ್ಯಾಸ ಆಗಿದೆ. ಉತ್ತರದಲ್ಲಿ ವೇತನ ಪರಿಷ್ಕರಣೆಯ ಪ್ರಸ್ತಾವವು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಸುಮಾರು ವರ್ಷಗಳಿಂದ ಶಿಕ್ಷಕರು ಮನವಿಯನ್ನು ಕೂಡ ಕೊಟ್ಟಿದ್ದಾರೆ. ಅಧಿಕಾರಿಗಳು ಸರಿಪಡಿಸಲಾಗುವುದು ಎಂದು ಹೇಳುತ್ತಾರೆ. ಆದರೆ ನಾಲ್ಕು ವರ್ಷದಿಂದ ನಾನು ನೋಡಿದ ಹಾಗೆ ಇನ್ನೂ ಸರಿಪಡಿಸಿರುವುದಿಲ್ಲ. ದಯಮಾಡಿ ಮಾನ್ಯ ಸಚಿವರು ಕೇವಲ ಆಶ್ವಾಸನೆಯನ್ನು ಕೊಡುವುದಷ್ಟೇ ಅಲ್ಲದೆ ಆದಷ್ಟು ಬೇಗ ಅದನ್ನು ಸರಿಪಡಿಸಬೇಕೆಂದು ವಿನಂತಿಸುತ್ತೇನೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ವ್ಯತ್ಯಾಸವಾಗಿರುವುದನ್ನು ಹಾಗೂ ಅದನ್ನು ಸರಿಪಡಿಸಬೇಕೆಂಬುದನ್ನು ಹೇಳಿದ್ದಾರೆ. ಇಲ್ಲಿಯವರೆವಿಗೂ ಕೊಡದೆ ಏಕೆ ಹಿಂದುಳಿದಿದೆ ಎಂಬುದು ನನಗೂ ತಿಳಿಯುತ್ತಿಲ್ಲ.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಚಿವರೇ, ವೇತನ ಆಯೋಗದಲ್ಲಿ ಆದಂತಹ ವ್ಯತ್ಯಾಸವನ್ನು ಸರಿಪಡಿಸಿ ಎಂದು ಹೇಳಿ ವೇತನ ಆಯೋಗ ಶಿಫಾರಸ್ಸು ಮಾಡಿದ ಮೇಲೆ ರೂ.6250 ಇದ್ದುದನ್ನು ರೂ.6800ಕ್ಕೆ ಏರಿಸಲಾಯಿತು. ಅದು ಶಿಕ್ಷಣ ಇಲಾಖೆಯ ಶಿಕ್ಷಕರು, ಮೊರಾರ್ಜಿ ವಸತಿ ಶಾಲೆಯ ಶಿಕ್ಷಕರು ಎಲ್ಲರಿಗೂ ಅನ್ವಯವಾಗಿದೆ. ಆದರೆ ಅಂಧ ಮತ್ತು ಕಿವುಡ ಮಕ್ಕಳಿಗೆ ಪಾಠ ಮಾಡುವ ಶಿಕ್ಷಕರಿಗೆ ಈ ವ್ಯತ್ಯಾಸವನ್ನು ಸರಿಪಡಿಸಿರುವುದಿಲ್ಲ. ಬೇರೆಯ ಶಿಕ್ಷಕರಿಗೆ ಈಗಾಗಲೇ ನೀಡಿದ್ದು, ಇವರಿಗೂ ಆಗಲೇ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನೀಡುವ ಬಗ್ಗೆ ತಿದ್ದುಪಡಿ ಆಗಬೇಕಿತ್ತು. ಇದು ಶೇ.100ರಷ್ಟು genuine ಇರುವ ಪ್ರಕರಣವಾದ ಕಾರಣ ಇದರಲ್ಲಿ ಯಾವುದೇ ಚೌಕಾಶಿಯನ್ನು ಮಾಡದೆ ಆದಷ್ಟು ಬೇಗ ಅದನ್ನು ಸರಿಪಡಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಯವರೇ, ಈ ವ್ಯತ್ಯಾಸವನ್ನು ಸರಿ ಪಡಿಸಬೇಕೆನ್ನುವ ಮಾನ್ಯ ಸದಸ್ಯರ ಕಾಳಜಿಯ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ 985+891**

**ಸಭಾಪತಿಯವರು:-** ಮುಂದಿನ ಪ್ರಶ್ನೆ ಮಾನ್ಯ ಯು.ಬಿ.ವೆಂಕಟೇಶ್ ಹಾಗೂ ಮಾನ್ಯ ಭಾರತಿ ಶೆಟ್ಟಿ ಅವರದ್ದಾಗಿದ್ದು, ಅದಕ್ಕೆ ಸಚಿವರು 15 ದಿನಗಳ ಕಾಲಾವಕಾಶವನ್ನು ಕೇಳಿದ್ದಾರೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಅಷ್ಟರಲ್ಲಿ ಅಧಿವೇಶನವೇ ಮುಗಿದುಹೋಗುತ್ತದೆ.

**ಸಭಾಪತಿಯವರು:-** ಮಾನ್ಯ ಸಹಕಾರ ಸಚಿವರೇ, 15 ದಿನಗಳ ಕಾಲಾವಕಾಶವನ್ನು ಕೇಳಿದ್ದೀರಿ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಅವರು ಕೇಳಿರುವುದು ಒಂದು ಸಾವಿರ ಪುಟಗಳಷ್ಟು ಮಾಹಿತಿಯನ್ನು. ತಾವು ಅನುಮತಿಯನ್ನು ನೀಡಿದರೆ ಸಿ.ಡಿ., ರೂಪದಲ್ಲಿ ಎರಡು ದಿನಗಳಲ್ಲಿ ನೀಡುತ್ತೇವೆ. ತಮ್ಮ ಶಾಖೆಯಲ್ಲಿ ಸಿ.ಡಿಯನ್ನು ಒಪ್ಪುತ್ತಿಲ್ಲ. ವಿವರವಾಗಿ ನೀಡಿ ಎಂದು ಕೇಳುತ್ತಿದ್ದಾರೆ. ಅದರಿಂದ ವಿಳಂಬವಾಗುತ್ತಿದೆ. ಈ ಪ್ರಶ್ನೆ ಹಾಗೂ ಮಾನ್ಯ ರಮೇಶ್ ಗೌಡರದ್ದು ಒಂದು ಪ್ರಶ್ನೆ ಎರಡು ಇದೆ. ಅದರದ್ದೂ ಒಂದು ಸಾವಿರ ಪುಟಗಳಾಗುತ್ತವೆ. ತಾವು ಎರಡಕ್ಕೂ ಅನುಮತಿ ನೀಡಿದರೆ ಸಿ.ಡಿ., ರೂಪದಲ್ಲಿ ಎರಡು ದಿನಗಳಲ್ಲಿ ನೀಡುತ್ತೇವೆ.

**ಸಭಾಪತಿಯವರು:-** ಆಯಿತು. ಸಿ.ಡಿ., ಕೊಡಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಏನೂ ವಿವರಗಳೇ ಕೊಡುವುದು ಬೇಡ. ಹಾಗೆಯೇ ಪ್ರಶ್ನೆಯನ್ನು ಕೇಳೋಣವೇ?

**ಸಭಾಪತಿಯವರು:-** ಬೇಡ, ಬೇಡ. ಹಾಗಾಗುವುದಿಲ್ಲ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಭಾರತಿ ಶೆಟ್ಟಿಯವರೇ, ನೀವು ನಮ್ಮ ಜೊತೆ ದನಿಗೂಡಿಸದಿದ್ದರೆ ಹೇಗೆ?

**ಸಭಾಪತಿಯವರು:-** ಮಾನ್ಯ ವೆಂಕಟೇಶ್ ಅವರೇ, ನೀವು ಅವರನ್ನೇಕೆ ಎಬ್ಬಿಸುತ್ತೀರಿ?

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾವಿಬ್ಬರೂ ಕೂಡಿ ಪ್ರಶ್ನೆಯನ್ನು ಕೇಳಿದ್ದೇವೆ. ಅವರು ನನಗಿಂತ ಸೀನಿಯರ್ ಇದ್ದು, ಅವರು ಮಾತನಾಡುತ್ತಾರೆಂದು ನಾನು ತಿಳಿದಿದ್ದೆನು.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಅದು ಸಾವಿರ ಪುಟಗಳಾಗುವುದಿಲ್ಲ.

**ಸಭಾಪತಿಯವರು:-** ಈಗ ಅದಕ್ಕೆ ಉತ್ತರ ಸದನದಲ್ಲಿ ಇಲ್ಲ. ಅದರ ಬಗ್ಗೆ ಏಕೆ ಮಾತನಾಡುತ್ತೀರಿ? ಅವರು ಎರಡು ದಿನಗಳಲ್ಲಿ ಉತ್ತರ ಕೊಡುತ್ತಾರೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಮ್ಮ ಸಹಕಾರ ಸಚಿವರದ್ದು ಒಂದು ಉದಾಹರಣೆಯನ್ನು ಹೇಳುತ್ತೇನೆ. ಕಳೆದ ಅಧಿವೇಶನದಲ್ಲಿ ಗುರು ರಾಘವೇಂದ್ರ ಬ್ಯಾಂಕ್‌ನ ವಿಚಾರವಾಗಿ ಪ್ರಶ್ನೆ ಕೇಳಿದಾಗ ಇನ್ನೊಂದು ವಾರದಲ್ಲಿ ಸಭೆಯನ್ನು ಕರೆಯುತ್ತೇನೆಂದು ಹೇಳಿದರು. ಇದುವರೆವಿಗೂ ಸಭೆ ನಡೆದಿಲ್ಲ. ಹೀಗಾದರೆ ಹೇಗೆ? ನಾವು ಮಾತನಾಡುವುದೂ ಇಲ್ಲ, ನಮ್ಮ ಪ್ರಶ್ನೆಗೆ ಉತ್ತರವೂ ಇಲ್ಲ ಎಂದರೆ ಹೇಗೆ? ತಾವು ನಮ್ಮ ನೆರವಿಗೆ ಬರಬೇಕು. ಅವರು ಇಲ್ಲಿಯೇ ಇದ್ದಾರೆ. ಹೇಳಿದ್ದಾರೆಯೋ ಇಲ್ಲವೋ ಎಂದು ತಾವೇ ಅವರನ್ನು ಕೇಳಿ. ನಾನು ಕಡತದಿಂದ ತೆಗೆದುಕೊಂಡಿದ್ದೇನೆ. ತಪ್ಪಿದ್ದರೆ ಹೇಳಲಿ.

**ಸಭಾಪತಿಯವರು:-** ಮಾನ್ಯ ಸಚಿವರೇ, ಸಭೆಯನ್ನು ಕರೆಯುವುದಾಗಿ ಹೇಳಿ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಅವರು ಹೇಳಿರುವುದನ್ನು ನಾವು ಮಾಡಿದ್ದೇವೆ. ಅವರು ಕೇಳಿರುವ ಪ್ರಶ್ನೆಗೆ ಉತ್ತರ ನೀಡಲು ಸಮಯಾವಕಾಶ ಬೇಕು. ಅವರು ಕೇವಲ ಒಂದೇ ಒಂದು ಮಾಹಿತಿ ಕೇಳಿಲ್ಲ. ಬೇಕಾದಷ್ಟು ವಿವರಗಳನ್ನು ಕೇಳಿದ್ದಾರೆ. ನೀತಿ ಸಂಹಿತೆ ಇದ್ದ ಕಾರಣ ಸಭೆಯನ್ನು ಮಾಡಲಿಕ್ಕೆ ಆಗಲಿಲ್ಲ. ಈಗ ಅಧಿವೇಶನ ನಡೆಯುತ್ತಿದೆ. ಮುಗಿದ ನಂತರ ಸಭೆಯನ್ನು ಕರೆಯುತ್ತೇವೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಚಿವರೇ, ಕಳೆದ ಬಾರಿಯ ಅಧಿವೇಶನದಲ್ಲಿಯೂ ಹೀಗೆಯೇ ಹೇಳಿದ್ದಿರಿ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ವೆಂಕಟೇಶ್ ಅವರೇ, ನಿಮ್ಮನ್ನು ಆಹ್ವಾನಿಸಿಯೇ ಸಭೆಯನ್ನು ಮಾಡುತ್ತೇವೆ. ನಿಮ್ಮನ್ನು ಬಿಟ್ಟು ಏನಾದರೂ ಮಾಡಲಿಕ್ಕಾಗುತ್ತದೆಯೇ?

(ಮುಂದು)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(1196) 21-12-2021, 11.20 ಕೆಜಿ – ಜಿಆರ್ (ಸಭಾಪತಿಯವರ ಉಪಸ್ಥಿತಿ)**

**ಪ್ರಶ್ನೆ ಸಂಖ್ಯೆ 973 + 918**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ಬಹು ಮುಖ್ಯವಾದಂತಹ ಪ್ರಶ್ನೆಯನ್ನು ಕೇಳಿದ್ದೇವೆ. ಇದರಲ್ಲಿ ಪ್ರಶ್ನೆಗಳು ಬಹಳಷ್ಟು ಇರುವುದರಿಂದ ಅದಕ್ಕೆ ಸ್ವಲ್ಪ ಸಮಯ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ. ಮೊದಲನೆಯದಾಗಿ, ರಾಜ್ಯದಲ್ಲಿರುವ ಆರ್ಥಿಕವಾಗಿ ಸುಸ್ಥಿತಿಯಲ್ಲಿರುವ ದುಃಸ್ಥಿತಿಯಲ್ಲಿರುವ ಹಿರಿಯ ನಾಗರೀಕರ ಸಂಖ್ಯೆ ಎಷ್ಟು ಎಂಬುದಾಗಿ ಕೇಳಿದ್ದೆ. ಅದಕ್ಕೆ 2011ರ ಜನಗಣತಿಯ ಪ್ರಕಾರ, ಕರ್ನಾಟಕ ರಾಜ್ಯದಲ್ಲಿ ಒಟ್ಟು 57,91,032 ಹಿರಿಯ ನಾಗರಿಕರು ಇದ್ದಾರೆಂದು ಉತ್ತರವನ್ನು ಕೊಟ್ಟಿದ್ದಾರೆ. ನಮಗೆ ಇದು ಎಲ್ಲೋ ಒಂದು ಕಡೆ ಅನುಮಾನ ಕಾಡುತ್ತಿದೆ. ನಮ್ಮ ರಾಜ್ಯದ ಆರೂವರೆ ಕೋಟಿ ಜನಸಂಖ್ಯೆಯಲ್ಲಿ ಒಟ್ಟು 57,91,032 ಹಿರಿಯ ನಾಗರಿಕರಲ್ಲಿ ಬಡತನ ರೇಖೆಗಿಂತ ಕೆಳಗಿರುವ 42,35,609 ಹಿರಿಯ ನಾಗರಿಕರು ಮಾಶಾಸನ ಸೌಲಭ್ಯವನ್ನು ಪಡೆಯುತ್ತಿರುವ ಈ ಹಿನ್ನೆಲೆಯಲ್ಲಿ ಇವರು ಆರ್ಥಿಕವಾಗಿ ದುಃಸ್ಥಿತಿಯಲ್ಲಿ ಇರುವುದಾಗಿ ಪರಿಗಣಿಸಲಾಗಿದೆ. ಉಳಿದ ಹಿರಿಯ ನಾಗರಿಕರು ಆರ್ಥಿಕವಾಗಿ ಸುಸ್ಥಿತಿಯಲ್ಲಿ ಇರುವುದಾಗಿ ಪರಿಗಣಿಸಬಹುದಾಗಿದೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ.

ಮಾನ್ಯ ಸಭಾಪತಿಯವರೇ, ಈ ಹಿಂದೆ ಹಿರಿಯ ನಾಗರಿಕರಿಗೆ ತಿಂಗಳಿಗೆ ರೂ.500/- ಗಳ ಮಾಶಾಸನವನ್ನು ಕೊಡುತ್ತಿದ್ದರು. ಇದಾದ ಮೇಲೆ ನಮ್ಮ ಸರ್ಕಾರದಲ್ಲಿ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಸಿದ್ದರಾಮಯ್ಯನವರು ರೂ.500/- ಗಳಿಂದ ಅದನ್ನು ರೂ.1000/- ಗಳಿಗೆ ಏರಿಕೆ ಮಾಡಿದರು. ಈಗ ಮಾನ್ಯ ಮುಖ್ಯ ಮಂತ್ರಿಯವರಾದ ಶ್ರೀ ಬಸವರಾಜ ಬೊಮ್ಮಾಯಿರವರು ಪ್ರಮಾಣ ವಚನ ಸ್ವೀಕರಿಸಿದ ಕೂಡಲೇ, ಒಂದು ಗಂಟೆಯಲ್ಲಿ ರೂ.1000/- ಗಳಿಂದ ಅದನ್ನು ರೂ.1200/-ಗಳಿಗೆ ಏರಿಕೆ ಮಾಡಿದ್ದಾರೆ. ಆದರೆ, ಆ ಮಾಶಾಸನ ಯಾವ ರೀತಿಯಾಗುತ್ತಿದೆ ಎಂದರೆ, ಅದರ ಬಗ್ಗೆ ಸರ್ಕಾರಕ್ಕೆ ತಾವು ಸಹ ಹೇಳಬೇಕಾಗುತ್ತದೆ. ನಮ್ಮ ಹಿರಿಯ ನಾಗರಿಕರು ಮಾಶಾಸನದ ಮೇಲೆ ಅವಲಂಬಿತರಾಗಿದ್ದಾರೆ. ಅವರಿಗೆ ಪ್ರತಿ ತಿಂಗಳು ಅದು ಬಂದರೆ ಮಾತ್ರ ಅವರು ಜೀವನ ಸಾಗಿಸುವುದಕ್ಕೆ ಅಗುತ್ತದೆ. ಆದರೆ, ಮೂರು-ಆರು ತಿಂಗಳುಗಳಿಂದ ಮಾಶಾಸನ ಬಂದಿಲ್ಲ. ಗ್ರಾಮೀಣ ಪ್ರದೇಶದಲ್ಲಿರುವಂತಹ ಹಿರಿಯ ನಾಗರಿಕರಿಗೆ ಬ್ಯಾಂಕಿನಲ್ಲಿ ಖಾತೆ ತೆರೆಯುವುದು ಗೊತ್ತಿಲ್ಲ. ಅವರಿಗೆ ಅನುಭವ ಇಲ್ಲ. ಹಾಗಾಗಿ, ಅವರು ಬ್ಯಾಂಕ್‌ಗಳಲ್ಲಿ ಖಾತೆಗಳನ್ನು ಸಹ ಮಾಡಿಲ್ಲ. ಆದರೆ, ಸರ್ಕಾರ ಹಿರಿಯರ ಮಾಶಾಸನವನ್ನು ಅವರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಕಳುಹಿಸುತ್ತಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ನಗರ ಪ್ರದೇಶಗಳಲ್ಲಿ ಇರುವಂತಹವರು ಸ್ವಲ್ಪ ವಿದ್ಯಾವಂತರಾಗಿರುತ್ತಾರೆ. ಹಾಗಾಗಿ, ಅವರು ಬ್ಯಾಂಕ್ ಖಾತೆಗಳನ್ನು ತೆರೆದಿರುತ್ತಾರೆ. ಗ್ರಾಮೀಣ ಪ್ರದೇಶದಲ್ಲಿರುವಂತಹ ನಾಗರಿಕರು ಬ್ಯಾಂಕ್ ಖಾತೆಗಳನ್ನು ತೆರೆದಿಲ್ಲ. ಇವತ್ತಿಗೂ ಸಹ ಪೋಸ್ಟ್‌ಮ್ಯಾನ್

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮೂಲಕ ಮಾಶಾಸನವನ್ನು ತಲುಪಿಸುವಂತಹ ಪದ್ಧತಿ ನಮ್ಮಲ್ಲಿದೆ. ಪೋಸ್ಟ್ ಮ್ಯಾನ್ 3 ತಿಂಗಳಿಗೊಮ್ಮೆ ಅಥವಾ 6 ತಿಂಗಳಿಗೊಮ್ಮೆ ಒಂದು ಬಾರಿ ಮಾಶಾಸನವನ್ನು ತೆಗೆದುಕೊಂಡು ಹೋಗಿ ಕೊಟ್ಟರೆ, ಪೋಸ್ಟ್ ಮ್ಯಾನ್‌ಗೆ ಡಿಲವರಿ ಕೊಡುವುದಕ್ಕಿಂತ ಮುಂಚಿತವಾಗಿ ಅವರಿಗೆ commission ಕೊಡಬೇಕು. ಪೋಸ್ಟ್ ಮ್ಯಾನ್‌ಗೆ commission ಕೊಟ್ಟರೆ ಮಾತ್ರ, ಆ ಹಿರಿಯರ ಕೈಗೆ ಮಾಶಾಸನವನ್ನು ಕೊಡುತ್ತಾರೆ. ಇಲ್ಲವೆಂದರೆ, ಕೊಡುವುದಿಲ್ಲ. ಇವತ್ತಿನ ದಿವಸ ನಮ್ಮಲ್ಲಿ ಈ ಪರಿಸ್ಥಿತಿ ಇದೆ. ಮಾಶಾಸನದ ಮೇಲೆ ನಮ್ಮ ಹಿರಿಯ ನಾಗರಿಕರು ಅವಲಂಬಿತರಾಗಿದ್ದಾರೆ. ಮಾಶಾಸನ 3 ರಿಂದ 6 ತಿಂಗಳಿಗೆ ಹೋಗಿಲ್ಲವೆಂದರೆ, ಹಿರಿಯ ನಾಗರಿಕರು ಬೀದಿಗೆ ಬಿದ್ದು ಭಿಕ್ಷೆ ಬೇಡಬೇಕಾಗುತ್ತದೆ. ಇದನ್ನು ಬಿಟ್ಟು ಬೇರೆ ಏನಿಲ್ಲ. ಯಾವ ಕುಟುಂಬದವರು ಅವರನ್ನು ಸಾಕುತ್ತಿಲ್ಲ. ಎಷ್ಟೋ ಜನ ಹಿರಿಯ ನಾಗರಿಕರು ಬೀದಿ ಪಾಲಾಗಿದ್ದಾರೆ. ಇವತ್ತಿನ ದಿವಸ ಇದನ್ನೇ ನಂಬಿಕೊಂಡು ಬದುಕುತ್ತಿದ್ದಾರೆ. ಆದರೆ, ಇಲ್ಲಿ ಆಗುತ್ತಿರುವಂತಹ ಅನ್ಯಾಯವನ್ನು ತಡೆಯುವುದಕ್ಕೆ ಸರ್ಕಾರ ಈ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೇ, ಎರಡನೆಯದಾಗಿ, ರಾಜ್ಯದಲ್ಲಿ ಹೆಚ್ಚುತ್ತಿರುವ ಹಿರಿಯ ನಾಗರೀಕರ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು ಎಂಬುದಾಗಿ ಪ್ರಶ್ನೆ ಕೇಳಿದ್ದೆ. ಇದಕ್ಕೆ ರಾಜ್ಯದಲ್ಲಿನ ದೌರ್ಜನ್ಯ ಶೋಷಣೆ, ವಂಚನೆಗೊಳಗಾದ, ಹಿರಿಯ ನಾಗರಿಕರಿಗೆ ನ್ಯಾಯ ಒದಗಿಸಲು ಮತ್ತು ಅವರ ಪಾಲನೆ ಪೋಷಣೆ ಹಾಗೂ ಕಲ್ಯಾಣಕ್ಕಾಗಿ ಕೇಂದ್ರ ಸರ್ಕಾರ ತಂದೆ ತಾಯಿಯರ ಮತ್ತು ಹಿರಿಯರ ನಾಗರಿಕರ ಪಾಲನೆ ಪೋಷಣೆ ಮತ್ತು ಕಲ್ಯಾಣಕ್ಕಾಗಿ ಅಧಿನಿಯಮ 2007ನ್ನು ರಾಜ್ಯದಲ್ಲಿ ಜಾರಿಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ. ಇದರಲ್ಲಿ ಎಷ್ಟು ಜನರು ಸಹಾಯವಾಣಿಗೆ ದೂರು ಕೊಡುವುದಕ್ಕೆ ಆಗುತ್ತದೆ? ಉತ್ತರದಲ್ಲಿ ಎಷ್ಟು ದೂರುಗಳು ಆಗಿವೆ ಎನ್ನುವುದರ ಬಗ್ಗೆ ಮಾತ್ರ ಹೇಳಿದ್ದಾರೆ. ಆದರೆ, ಅಷ್ಟೇ ಅಲ್ಲ, ಇಲ್ಲಿ ದೂರುಗಳು ಆಗಿರುವಂಥದ್ದು, ರಾಜ್ಯ ಸರ್ಕಾರ ಸ್ಥಾಪನೆ ಮಾಡಿರುವಂತಹ ಸಹಾಯವಾಣಿಗೆ ಬರುವಂತಹ ದೂರುಗಳ ಸಂಖ್ಯೆಯನ್ನು ಮಾತ್ರ ಇಲ್ಲಿ ಕೊಟ್ಟಿದ್ದಾರೆ. ಇವತ್ತಿನ ದಿವಸ ಸರ್ಕಾರದ ಸವಲತ್ತನ್ನು ಪಡೆದುಕೊಳ್ಳದೇ ಎಷ್ಟೋ ವೃದ್ಧಾಶ್ರಮಗಳು ನಡೆಯುತ್ತಿವೆ. ಆ ವೃದ್ಧಾಶ್ರಮಗಳಲ್ಲಿ ನಡೆಯುವಂತಹ ಘಟನೆಗಳ ಬಗ್ಗೆ ಉತ್ತರದಲ್ಲಿ ಎಲ್ಲಿಯೂ ಸಹ ಹೇಳಿಲ್ಲ.

ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಒಂಟಿಯಾಗಿರುವಂತಹ ವಯೋವೃದ್ಧರು ಇಬ್ಬರು ಒಂದು ಮನೆಯಲ್ಲಿದ್ದರು. ಅವರು safety ಗಾಗಿ ಮನೆಯನ್ನು ಬಂದ್ ಮಾಡಿಕೊಂಡಿದ್ದರು. ಅವರು ಏನಕ್ಕೂ ಸಹ ಹೊರಗಡೆ ಬರುತ್ತಿರಲಿಲ್ಲ. ಅಂತಹವರನ್ನು ಜನರು observe ಮಾಡುತ್ತಿರುತ್ತಾರೆ. ಅವರ ಮನೆಗೆ ಕಳ್ಳರು ಕಳ್ಳತನ ಮಾಡುವುದಕ್ಕೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನುಗ್ಗಿದಾಗ ಅವರನ್ನು ತಡೆಯುವುದಕ್ಕೆ ಅವರು ಪ್ರಯತ್ನ ಪಟ್ಟರೆ, ಅವರ ಪ್ರಾಣಗಳನ್ನು ತೆಗೆದಿರುವಂತಹ ನಿರ್ದಶನಗಳನ್ನು ನಾವು ಇವತ್ತಿನ ದಿವಸ ನೋಡುತ್ತಿದ್ದೇವೆ. ಇನ್ನೊಂದು ಉದಾಹರಣೆಯನ್ನು ಹೇಳುತ್ತೇನೆ. ನಮ್ಮ ಬೆಂಗಳೂರಿನ ನಾಗರಬಾವಿಯಲ್ಲಿ Usuru Foundation ಎಂದು ಇದೆ. ಅದಕ್ಕೆ 87 ವರ್ಷದ ಕಮಲಮ್ಮ ಎನ್ನುವ ವೃದೆಯನ್ನು ಸೇರಿಸುತ್ತಾರೆ. ಆಕೆಯ ಪೋಷಣೆಗೆ ಅವರ ಮಗ ಪ್ರತಿ ತಿಂಗಳಿಗೆ 10 ಸಾವಿರ ರೂಪಾಯಿಗಳನ್ನು ಕೊಡುತ್ತಿರುತ್ತಾರೆ. ಆಕೆಗೆ ಸ್ವಲ್ಪ ಜ್ಞಾಪಕ ಶಕ್ತಿ ಹೋಗಿರುತ್ತದೆ. ಆ ಕಾರಣಕ್ಕಾಗಿ ಆಕೆಯನ್ನು ಅಲ್ಲಿಗೆ ಸೇರಿಸುತ್ತಾರೆ. ಆದರೆ, ಒಂದು ದಿವಸ ಆಕೆಯ ಮಗನಿಗೆ ಆಕೆ ಸತ್ತು ಹೋದಳೆಂದು ವಿಷಯ ಹೋಗುತ್ತದೆ. ಅವರ ಮಗ ಏಕೆ ಸತ್ತು ಹೋದಳು ಎಂದು ಕೇಳಿದಾಗ, ಅದಕ್ಕೆ ಅವರು ಆಕೆ ಹೆಚ್ಚು ಗಲಾಟೆ ಮಾಡುತ್ತಿದ್ದಳು, ಅದಕ್ಕೆ ಒಂದೇ ಕೊಠಡಿಯಲ್ಲಿ ಇಬ್ಬರು ಹೆಂಗಸರನ್ನು ಹಾಕಿದ್ದೆವು. ಅವರು ಹೊಡೆದಾಡಿಕೊಂಡು ಇವರನ್ನು ಸಾಯಿಸಿದ್ದಾರೆಂದು ಹೇಳುತ್ತಾರೆ. ಮತ್ತೆ ಇದರ ಬಗ್ಗೆ ಸೆಕ್ಯುರಿಟಿಯವರನ್ನು ಕೇಳಿದಾಗ, ಆಕೆಗೆ ಜ್ಞಾಪಕ ಶಕ್ತಿ ಹೋಗಿತ್ತು, ಆಕೆಯನ್ನು ಕತ್ತಲು ಕೋಣೆಯಲ್ಲಿ ಕುಡಿಹಾಕಿ ನೀರು, ಊಟ ಕೊಡಲಿಲ್ಲ, ಅಲ್ಲದೇ ಆಕೆಯನ್ನು ಇವರೇ ಹೊಡೆಯುತ್ತಿದ್ದರು, ಹಾಗಾಗಿ, ಆಕೆ ಸತ್ತರು ಎಂದು ನಿಜಾಂಶವನ್ನು ಹೇಳಿದ್ದಾರೆ.

ಮಾನ್ಯ ಸಭಾಪತಿಯವರೇ, ಎರಡನೆಯದಾಗಿ, ಮೈಸೂರಿನಲ್ಲಿ ನಡೆದಂತಹ ಇನ್ನೊಂದು ಉದಾಹರಣೆಯನ್ನು ಕೊಡುತ್ತೇನೆ. ಆಸ್ತಿಗಾಗಿ ಹೆಣದಿಂದಲೇ ಹೆಬ್ಬೆಟ್ಟು ಒತ್ತಿಸಿದರು ಎಂದು ಬಂದಿದೆ. ಆ ಮನೆಯಲ್ಲಿ ಆಕೆ ಒಬ್ಬಳೇ ವಾಸ ಇರುತ್ತಾಳೆ. ಗಂಡ, ಮಕ್ಕಳು ಯಾರು ಇರುವುದಿಲ್ಲ. ಒಂದು ದಿವಸ ಆಕೆ ಸತ್ತು ಹೋಗುತ್ತಾಳೆ. ಆಕೆಯ ಆಸ್ತಿಯನ್ನು ಆಕೆಯ ಹೆಸರಿನಲ್ಲಿಟ್ಟುಕೊಂಡಿರುತ್ತಾಳೆ, ಆಕೆ ಸತ್ತ ಕೊಡಲೇ, ಆಕೆಯ ಅಕ್ಕ-ತಂಗಿಯರು ಎಲ್ಲರೂ ಆ ಮನೆಗೆ ಬಂದು, ಆಕೆಯ ಆಸ್ತಿಗಾಗಿ ಆಕೆಯ ತಂಗಿಯ ಮಗ ಸತ್ತಿರುವಂತಹ ಒಬ್ಬ ಮಹಿಳೆಯ ಹೆಬ್ಬೆಟ್ಟನ್ನು ಒಂದು ಪೇಪರ್‌ನ ಮೇಲೆ ಹಾಕಿಸಿಕೊಳ್ಳುತ್ತಾರೆ. ಆತನ ತಂಗಿ ಅದನ್ನು ವೀಡಿಯೋ ಮಾಡಿರುತ್ತಾಳೆ. ನಂತರ ಆ ವಿಡಿಯೋ ಹೊರಗಡೆ ಬರುತ್ತದೆ. ಆಕೆಯ ಆಸ್ತಿಯನ್ನು ಕಬಳಿಸುವುದಕ್ಕೆ ಸತ್ತಿರುವ ಹೆಣದಿಂದ ಹೆಬ್ಬೆಟ್ಟನ್ನು ಹಾಕಿಸಿಕೊಳ್ಳುತ್ತಾರೆ. ನಾವು ಇವತ್ತಿನ ದಿವಸ ಇಂತಹ ನಿರ್ದಶನಗಳನ್ನು ಕಾಣುತ್ತಿದ್ದೇವೆ. ಇವತ್ತಿನ ದಿವಸ ನಾವು ಹಿರಿಯ ನಾಗಕರಿಗೆ ಯಾವ ರೀತಿ ಸಹಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ಸರ್ಕಾರ ಯಾವ ರೀತಿಯ ಕ್ರಮ ತೆಗೆದುಕೊಳ್ಳುತ್ತೀರೆಂದು ಉತ್ತರ ಹೇಳಬೇಕು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ||ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ನಾನು ರಾಜ್ಯದಲ್ಲಿ ಹೆಚ್ಚುತ್ತಿರುವ ಹಿರಿಯ ನಾಗರೀಕರ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟಲು ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ಎಂಬ ಪ್ರಶ್ನೆಯನ್ನು ಕೇಳಿದ್ದೆ. ಏಕೆಂದರೆ, ಕೇವಲ ಅನಕ್ಷರಸ್ಥರು ಮಾತ್ರವಲ್ಲ, ಸುಶಿಕ್ಷಿತರು ಸಹ ಹಿರಿಯರನ್ನು ಬಹಳ ಕೆಟ್ಟದಾಗಿ ನಡೆಸಿಕೊಳ್ಳುವಂತಹ ಒಂದು ಕೆಟ್ಟ

ಸಂಪ್ರದಾಯವನ್ನು ನಾವು ನೋಡಬೇಕಾಗಿದೆ. ಆ ನಿಟ್ಟಿನಲ್ಲಿ pension ತೆಗೆದುಕೊಳ್ಳತಕ್ಕ, ನಿನ್ನೆಯ ತನಕ ಅವರು ಅಧಿಕಾರಿಯಾಗಿರುತ್ತಾರೆ. ಮರು ದಿವಸವೇ ಅವರು ಬಾರ ಅನಿಸುತ್ತದೆ. ಕಛೇರಿಗಳಿಗೆ ಹೋಗಿ ಚಿಕ್ಕ ಮಕ್ಕಳಿಂದ ಸಾಕಿದ ತಂದೆ ತಾಯಿಗಳು ಕೂಡ ಬಾರ ಅನಿಸುತ್ತದೆ.

ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ಇನ್ನೊಂದು ಪ್ರಕರಣವನ್ನು ಸುವರ್ಣ ನ್ಯೂಸ್ ಚಾನೆಲ್‌ನಲ್ಲಿ ನೋಡಿದ್ದೇವೆ. ಶ್ರೀ ಅಶ್ವಥನಾರಾಯಣ ಎಂಬ ಹಿರಿಯ ಕಲಾವಿದರನ್ನು ಅವರ ಮಕ್ಕಳು ಯ್ಯಾವ ರೀತಿ ಒಂದು ಮಾತ್ರೆ, injection ಕೊಟ್ಟು ಕೊಲೆ ಮಾಡುವ ಮಟ್ಟಕ್ಕೆ ವಿಕೃತತೆಯನ್ನು ತೋರುತ್ತಾರೆಂದರೆ ನಮಗೆ ಭಯವಾಗುತ್ತದೆ. ಭಾರತದ ಶಕ್ತಿ ಇರುವುದೇ ಕುಟುಂಬ ವ್ಯವಸ್ಥೆಯಲ್ಲಿ. ತಮ್ಮ ಇಡೀ ಜೀವನವನ್ನು ತ್ಯಾಗ ಮಾಡಿದಂತಹ ಹಿರಿಯ ಜೀವಗಳನ್ನು ಈ ರೀತಿ ಯಾರು neglect ಮಾಡುತ್ತಾರೆ, ಆಸ್ತಿ ಅಂತಸ್ತು ಇರುವವರದ್ದು ಒಂದು ಕಡೆಯಾದರೆ, ಆರ್ಥಿಕವಾಗಿ ದುಸ್ಥಿತಿಯಲ್ಲಿ ಇರುವವರದ್ದು ಇನ್ನೊಂದು ಕಡೆಯಾಗಿದೆ. ಹಾಗಾಗಿ, ಹಿರಿಯರನ್ನು ಗೌರವಿಸುವ, ಕಾಪಾಡುವ ಮತ್ತು ಸಂಧ್ಯಾ ಕಾಲದಲ್ಲಿ ಮಕ್ಕಳಂತೆ ಅವರನ್ನು ನೋಡಿಕೊಳ್ಳುವ ಮೌಲ್ಯಗಳನ್ನು ಉಳಿಸುವಂತಹ ದೃಷ್ಟಿಯಿಂದ ನಾನು ಈ ಪ್ರಶ್ನೆಯನ್ನು ಕೇಳಿದ್ದೆ. ಮತ್ತೊಂದು ನಮ್ಮ ರಾಜ್ಯದಲ್ಲಿರುವ ವೃದ್ಧಾಶ್ರಮಗಳು ಎಷ್ಟು ಇವೆ ಎಂಬ ಪ್ರಶ್ನೆಯನ್ನು ಕೇಳಿದ್ದೆ. ನನಗೆ ಆಶ್ಚರ್ಯ ಎಂದರೆ, ಸರ್ಕಾರ ಆ ಜವಾಬ್ದಾರಿಯನ್ನು ಪೂರ್ತಿಯಾಗಿ ಖಾಸಗಿಯವರಿಗೆ ಬಿಟ್ಟಿದೆ. ಸರ್ಕಾರದ ಒಂದು ವೃದ್ಧಾಶ್ರಮ ಇಲ್ಲವೆಂದರೆ, ಅರ್ಥ ಏನು? ಇವತ್ತು ಸಂತೋಷ. ಸ್ವಯಂ ಸೇವಾ ಸಂಸ್ಥೆಗಳು ಮುಂದೆ ಬರುತ್ತವೆ. ಖಾಸಗಿ ಸಂಘ ಸಂಸ್ಥೆಗಳು ಮುಂದೆ ಬರುತ್ತವೆ. ಇವರು ಸೇವಾ ಮನೋಭಾವದಿಂದ ಮಾಡಬಹುದು, ಕೆಲವರು ವ್ಯಾಪಾರಿ ಮನೋಬಾವದಿಂದ ಮಾಡಬಹುದು. ಆದರೆ, ಸರ್ಕಾರ ಉತ್ತಮ ರೀತಿಯ ವೃದ್ಧಾಶ್ರಮಗಳನ್ನು, ಅದನ್ನು ವೃದ್ಧಾಶ್ರಮವೆಂದು ಕರೆಯಬಾರದು. ಒಂದು ಸುರಕ್ಷಿತ ತಾಣಗಳನ್ನು ಏಕೆ ಮಾಡಬಾರದು?

ಮಾನ್ಯ ಸಭಾಪತಿಯವರೇ, ನನ್ನ ಎರಡನೇ ಸಲಹೆ ಏನೆಂದರೆ, ನಮ್ಮ ಸಹೋದರರು ಹೇಳಿದಂತೆ, ಒಂಟಿಯಾಗಿರುವ ಹಿರಿಯ ಜೀವಗಳ ಮೇಲೆ ಅಪರಾಧ ಕೃತ್ಯಗಳು ಹೆಚ್ಚು ಆಗುತ್ತವೆ. ಅವರನ್ನು ಗಮನಿಸುತ್ತಿರುತ್ತಾರೆ. ನಾನು ಹೇಳುವುದು ಏನೆಂದರೆ, ಈ ಹೋಟೆಲ್‌ಗಳ ಮಾದರಿಯಲ್ಲಿ, ಕೆಲವರಿಗೆ pay ಮಾಡುವುದಕ್ಕೆ ಶಕ್ತಿ ಇರುತ್ತದೆ. ಇನ್ನು ಕೆಲವರಿಗೆ ಆಗುವುದಿಲ್ಲ. ಕೆಲವರಿಗೆ ಆರೋಗ್ಯ ಸಮಸ್ಯೆ ಇರುತ್ತದೆ. ಅಂತಹ ಸಂದರ್ಭದಲ್ಲಿ ಕೊಠಡಿಗಳಿಗೆ ವೈದ್ಯಕೀಯ ಸೇವೆಯನ್ನು ಕೊಡಬಹುದು. ಆಗ ವೆಚ್ಚವು ಸಹ ಕಡಿಮೆಯಾಗುತ್ತದೆ. ಇವತ್ತಿನ ಆಧುನಿಕ ತಂತ್ರಜ್ಞಾನದಲ್ಲಿ ಒಬ್ಬ ಭಾರತದ ಹಿರಿಯ ನಾಗರಿಕ ಸಂಧ್ಯಾ ಕಾಲದಲ್ಲಿ ಆತ್ಮ ಗೌರವದಿಂದ, ಸುರಕ್ಷಿತವಾಗಿ ಬದುಕುವಂತಹ ವ್ಯವಸ್ಥೆಯನ್ನು ಕೊಡುವಂಥದ್ದು ಚಾರಿಟಿ ಅಲ್ಲ, ಅದು ಈ ದೇಶದ ಕರ್ತವ್ಯವಾಗಿದೆ ಎನ್ನುವ ನಿಟ್ಟಿನಲ್ಲಿ ಮಾಡಬೇಕು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಯವರೇ, ನನ್ನ ಇನ್ನೊಂದು ಅಂಕಿ-ಅಂಶ ಸ್ವಲ್ಪ ತಪ್ಪಾಗಿದೆ. ಇಲಾಖೆ ಬಹಳ ಒಳ್ಳೆಯ ಕೆಲಸವನ್ನು ಮಾಡುತ್ತಿದೆ. ಇದಕ್ಕೆ ಮಾನ್ಯ ಸಚಿವರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ. ಬಹಳ ಒಳ್ಳೆಯ ಉತ್ತರಗಳನ್ನು ಕೊಟ್ಟಿದ್ದಾರೆ. ಅದಕ್ಕೆ ನಾನು ಹೆಚ್ಚಿಗೆ ಕೇಳಿಲ್ಲ. ಕಳೆದ ಎರಡು ವರ್ಷಗಳಲ್ಲಿ ಹಿರಿಯ ನಾಗರಿಕರ ಮೇಲೆ ನಡೆದ ಕೌಟಂಬಿಕ ದೌರ್ಜನ್ಯಗಳ ಬಗ್ಗೆ ದಾಖಲಾದ ಪ್ರಕರಣಗಳು ಎಷ್ಟು ಇದನ್ನು ತಡೆಗಟ್ಟಲು ಯಾವ ರೀತಿಯ ತ್ವರಿತ ಜಾಗೃತ ಕ್ರಮ ವಹಿಸಲಾಗಿದೆ ಎಂಬ ಪ್ರಶ್ನೆಯನ್ನು ಕೇಳಿದ್ದೆ. ಇದಕ್ಕೆ ಕಳೆದ 2 ವರ್ಷಗಳಲ್ಲಿ ಹಿರಿಯ ನಾಗರಿಕರಿಗೆ ಸಂಬಂಧಿಸಿದಂತೆ ಕೌಟಂಬಿಕ ದೌರ್ಜನ್ಯಗಳ ಬಗ್ಗೆ ಸಹಾಯವಾಣಿಗಳಲ್ಲಿ ದಾಖಲಾದ ಪ್ರಕರಗಳ ಸಂಖ್ಯೆ 2193 ಎಂದು ಉತ್ತರ ನೀಡಿದ್ದಾರೆ. ಮತ್ತೊಂದು ಕಡೆ 2020-2021ನೇ ಸಾಲಿನಲ್ಲಿ 5774 ಪ್ರಕರಣಗಳು ದಾಖಲಾಗಿವೆ ಎಂದು ಹೇಳಿದ್ದಾರೆ., ಇವರೆಡು ಬಹಳ ವ್ಯತ್ತಿರಿಕ್ತವಾಗಿವೆ. ಇದು Contradiction ನಿಂದ ಕೂಡಿವೆ. ಆದ್ದರಿಂದ, ಮಾನ್ಯ ಸಚಿವರು ಇದರ ಬಗ್ಗೆ ಉತ್ತರವನ್ನು ನೀಡಬೇಕು.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ನಾರಾಯಣಸ್ವಾಮಿಯವರು ಕೇಳಿದಂತಹ ಪ್ರಶ್ನೆಗಳಿಗೆ ನಾನು ಮೊದಲು ಉತ್ತರವನ್ನು ನೀಡುತ್ತೇನೆ. ಹಿರಿಯರಿಗೆ ಮಾಶಾಸನ ಸರಿಯಾಗಿ ಬರುವುದಿಲ್ಲ, ಅದು ಸಾಮಾಜಿಕ ಭದ್ರತೆಯಲ್ಲಿ ಒಂದಾಗಿರುವುದರಿಂದ ಅದನ್ನು Social Welfare Department ಮೂಲಕ Revenue Department ನವರು ಕೊಡುತ್ತಾರೆಂದು ತಮಗೂ ಗೊತ್ತಿದೆ. ಮಾಶಾಸನ ನಮ್ಮ ಇಲಾಖೆಯಿಂದ ವಿತರಣೆಯಾಗುವುದಿಲ್ಲ. ಆದರೂ ಸಹ, ಅದರಲ್ಲಿರುವಂತಹ ನ್ಯೂನ್ಯತೆಯ ಬಗ್ಗೆ ಸಂಬಂಧಪಟ್ಟ ಇಲಾಖೆಯ ಜೊತೆಗೆ ಮಾತನಾಡಿ ಸರಿಪಡಿಸುವುದಕ್ಕೆ ಪ್ರಯತ್ನ ಪಡುತ್ತೇನೆ. ಮಾಶಾಸನ ಸರಿಯಾಗಿ ಬರುವುದಿಲ್ಲ, ಪೋಸ್ಟ್ ಮಾಸ್ಟರ್‌ಗಳು ಸಮಯಕ್ಕೆ ಸರಿಯಾಗಿ ಮುಟ್ಟಿಸುವುದಿಲ್ಲ ಎನ್ನುವ ಕಾರಣಕ್ಕಾಗಿಯೇ ಇವತ್ತು ಅದನ್ನು DBT (Direct Benefit Transfers) ಮೂಲಕ ಕೊಡುವುದಕ್ಕಾಗಿಯೇ ಪ್ರಾರಂಭ ಮಾಡಿರುವುದು.

(ಮುಂದು)

**(1197) 21-12-2021 (11.30) ಎಂವಿ-ಎಂಡಿ (ವಿಕೆ) (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಆಚಾರ್ ಹಾಲಪ್ಪ ಬಸಪ್ಪ(ಮುಂದು):-**

ಅಂದರೆ, ನೇರವಾಗಿ ಫಲಾನುಭವಿಗೆ ಕೊಡಬೇಕೆಂದು DBT ಮೂಲಕ ಕೊಡುವುದಕ್ಕೆ ಪ್ರಯತ್ನ ಮಾಡಿರುವುದು. ಮಾನ್ಯ ಸದಸ್ಯರು ಹೇಳಿದ ಹಾಗೆ, ಗ್ರಾಮೀಣ ಪ್ರದೇಶಗಳಲ್ಲಿ ಅವರು ಬ್ಯಾಂಕ್‌ಗೆ ಹೋಗಿ ಅದನ್ನು ತರುವುದಕ್ಕೆ ಆಗುವುದಿಲ್ಲ. ಅದಕ್ಕೆ ಅಲ್ಲಿ ಪೋಸ್ಟ್‌ಮ್ಯಾನ್‌ಗಳ ಮುಖಾಂತರ ಹಂಚುವಂತಹ

ಅನಿವಾರ್ಯ ಇರುವುದರಿಂದ ಆ ನ್ಯೂನತೆಯನ್ನು ತಿದ್ದಿಕೊಳ್ಳುವಂತೆ ಇಲಾಖೆಯವರ ಗಮನಕ್ಕೆ ತರುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರು ಆ ಸಮಸ್ಯೆಗೆ ಏನು ಪರಿಹಾರ ಮಾಡುತ್ತೀರಿ ಎಂದು ಕೇಳುತ್ತಿದ್ದಾರೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಯವರೇ, ಆ ಸಮಸ್ಯೆಗೆ ಪರಿಹಾರ ಏನೆಂದು, ಇದನ್ನು ಹಂಚಿಕೆ ಮಾಡುವಂತಹ ಇಲಾಖೆಯವರಿಗೆ ತಿಳಿಸುತ್ತೇನೆ. ಈಗ ವೃದ್ಧಾಪ್ಯ ವೇತನವನ್ನು ನಮ್ಮ ಇಲಾಖೆಯ ವತಿಯಿಂದ ನೀಡುವುದಿಲ್ಲ. ಅದನ್ನು ಬೇರೆ ಇಲಾಖೆಯಿಂದ ಕೊಡುವಂತಹ ಕಾರಣಕ್ಕಾಗಿ, ಇದನ್ನು ಆ ಇಲಾಖೆಯ ಗಮನಕ್ಕೆ ತರುತ್ತೇನೆಂದು ತಿಳಿಸಿದ್ದೇನೆ. ಮಾನ್ಯ ಸದಸ್ಯರು ಮತ್ತೊಂದು ಪ್ರಶ್ನೆಯನ್ನು ಕೇಳಿದರು. ಅಂದರೆ, ಹಿರಿಯ ನಾಗರಿಕರ ಮೇಲೆ ನಡೆಯುವ ದೌರ್ಜನ್ಯಗಳನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳು ಏನೆಂದು? ಇದು ಅವರಿಗೂ ಸಹ ಗೊತ್ತಿದೆ. ಈಗಾಗಲೇ ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ನಿರ್ವಹಣಾ ಸಮಿತಿಯನ್ನು ಮಾಡಿ, ಅಲ್ಲಿ ಶೋಷಣೆ, ದೌರ್ಜನ್ಯ ಮತ್ತು ವಂಚನೆಗೆ ಒಳಪಟ್ಟಂತಹ ಹಿರಿಯ ನಾಗರಿಕರು ಅಲ್ಲಿಗೆ ಹೋಗಿ ಮನವಿ ಮಾಡಿಕೊಂಡಾಗ ಆ ಪ್ರಕರಣವನ್ನು ಕೇವಲ 90 ದಿನಗಳಲ್ಲಿ ಇತ್ಯರ್ಥ ಮಾಡಬೇಕು. ಅಲ್ಲಿಯವರೆಗೆ ಅವರಿಗೆ ಪ್ರತಿ ತಿಂಗಳು ಹತ್ತು ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಇಲಾಖೆಯಲ್ಲಿ ನಿಯಮವನ್ನು ರೂಪಿಸಲಾಗಿದೆ. ಈಗ ಅವರಿಗೆ ಉಪ ವಿಭಾಗಾಧಿಕಾರಿಗಳ ಸಮ್ಮುಖದಲ್ಲಿ ಸಮಾಧಾನವಾಗಲಿಲ್ಲವೆಂದರೆ, ಜಿಲ್ಲಾ ದಂಡಾಧಿಕಾರಿಗಳ ಮಟ್ಟದಲ್ಲಿ ಒಂದು ಸಮಿತಿ ಇದೆ. ಅಲ್ಲಿ ಮೇಲ್ಮನವಿಯ ನ್ಯಾಯ ಮಂಡಳಿ ಸಮಿತಿ ಎಂದು ಮಾಡಲಾಗಿದೆ. ಅಲ್ಲಿಗೆ ಅವರು ಹೋಗಿ ಪರಿಹಾರವನ್ನು ಪಡೆದುಕೊಳ್ಳಬಹುದು. ಅಲ್ಲೂ ಕೂಡ ಒಂದು ತಿಂಗಳ ಒಳಗಾಗಿ ಅವರಿಗೆ ನ್ಯಾಯವನ್ನು ಕೊಡಬೇಕೆಂದು ನಮ್ಮ ಇಲಾಖೆಯ ನಿಯಮದಲ್ಲಿ ಅಳವಡಿಸಿಕೊಂಡಿದ್ದೇವೆ. ಈಗ ಅದು ಸರಿಯಾಗಿ ಕಾರ್ಯನಿರ್ವಹಣೆ ಆಗಿಲ್ಲವೆಂದು, ಈಗಾಗಲೇ ಸರ್ಕಾರದ ಮುಖ್ಯಕಾರ್ಯದರ್ಶಿಗಳು ಕೂಡ ಅದನ್ನು remind ಮಾಡಿದ್ದಾರೆ. ಇವತ್ತಿನ ದಿವಸ ಹಿರಿಯ ನಾಗರಿಕರಿಗೆ ನ್ಯಾಯ ಕೊಡಿಸುವಂತಹ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಹಿಂದೆ ಬಿದ್ದು, ತಕ್ಷಣ ಅವರಿಗೆ ಕೊಟ್ಟಿರುವಂತಹ ಸಮಯದಲ್ಲಿ ಅಂತಹ ಪ್ರಕರಣಗಳನ್ನು ಇತ್ಯರ್ಥಪಡಿಸಬೇಕೆಂದು ತಿಳಿಸಿದ್ದಾರೆ. ಈಗ ಒಂದು ಸೇವಾ ಕೇಂದ್ರವನ್ನು ಮಾಡಿಕೊಂಡಿದ್ದೇವೆ. ಅಂದರೆ, ಇವತ್ತು ನಾವು Toll Free No-1090 ಅನ್ನು ಮಾಡಿಕೊಂಡಿದ್ದೇವೆ. ಇವತ್ತು ಸುಮಾರು 28 ಜಿಲ್ಲೆಗಳಲ್ಲಿ ಪೊಲೀಸ್ ಇಲಾಖೆಯ ಆವರಣದಲ್ಲಿಯೇ ಸಹಾಯವಾಣಿ ಕೇಂದ್ರಗಳಿಗೆ ಸ್ಥಳಾವಕಾಶ ಮಾಡಿಕೊಟ್ಟು ಅವರ ಮುಖಾಂತರ ಹಿರಿಯ ನಾಗರಿಕರು ಮತ್ತು ವಿಕಲಚೇತನರು ಯಾರೇ ಬಂದರೂ ಕೂಡ ತಕ್ಷಣ ಅದನ್ನು ನಿರ್ವಹಣೆ ಮಾಡುವುದಕ್ಕೆ, ಈಗ ಆರೋಗ್ಯ ಸಮಸ್ಯೆ ಇರಬಹುದು, ಕಾನೂನು ಸಮಸ್ಯೆ ಇರಬಹುದು ಮತ್ತು ವಸತಿ ಸಮಸ್ಯೆ ಇರಬಹುದು. ಈ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ರೀತಿ ಏನೇ ಇದ್ದರೂ ಕೂಡ, ತಕ್ಷಣ ಅವುಗಳನ್ನು attend ಮಾಡುವುದಕ್ಕೆ ತಿಳಿಸಿದ್ದೇವೆ. ನಾವು ಹೋದ ವರ್ಷ 2021-22ರಲ್ಲಿ ಒಂದು ಸಹಾಯವಾಣಿ ಕೇಂದ್ರವನ್ನು ಸಹ launch ಮಾಡಿದ್ದೇವೆ. ಇವತ್ತು ಉನ್ನತ ತಂತ್ರಜ್ಞಾನ ಉಳ್ಳ ರಾಷ್ಟ್ರೀಯ ಹಿರಿಯ ನಾಗರಿಕರ ಸಹಾಯವಾಣಿ ಎಂದು ಇದೆ. ಆ ಸಹಾಯವಾಣಿಯನ್ನು ಕೇಂದ್ರ ಸರ್ಕಾರದವರು ನಿಯಂತ್ರಣ ಮತ್ತು ನಿರ್ವಹಣೆ ಮಾಡುತ್ತಾರೆ. ಅದರ ಮುಖಾಂತರವೂ ಕೂಡ ಹಿರಿಯ ನಾಗರಿಕರಿಗೆ ಅನುಕೂಲತೆಯನ್ನು ಮಾಡಿಕೊಡುತ್ತಾರೆ. ಇನ್ನು ಮಾನ್ಯ ಸದಸ್ಯರಾದ ಡಾ||ತೇಜಸ್ವಿನಿ ಗೌಡರವರು ಹೇಳಿದರು, ನೀಡಿರುವಂತಹ ಉತ್ತರದಲ್ಲಿ ಅಂಕಿ-ಸಂಖ್ಯೆಗಳಲ್ಲಿ ವ್ಯತ್ಯಾಸವಾಗಿದೆ ಎಂದು. ಆದರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಅಂಕಿ-ಸಂಖ್ಯೆಗಳಲ್ಲಿ ವ್ಯತ್ಯಾಸವಾಗಿಲ್ಲ. ಕಳೆದ ಎರಡು ವರ್ಷಗಳಲ್ಲಿ ಹಿರಿಯ ನಾಗರಿಕರ ಮೇಲೆ ನಡೆದ ಕೌಟುಂಬಿಕ ದೌರ್ಜನ್ಯಗಳು ದಾಖಲಾದ ಸಂಖ್ಯೆಗಳು ಎಂದು ಇದೆ. ಈಗ ಸುಮಾರು 2193 ಕೌಟುಂಬಿಕ ದೌರ್ಜನ್ಯಗಳು ದಾಖಲಾಗಿವೆ. ಮಾನ್ಯ ಸದಸ್ಯರು ಏನು ಹಿರಿಯ ನಾಗರಿಕರ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಒಟ್ಟಾರೆ 2020-21ನೇ ಸಾಲಿನಲ್ಲಿ ಹಿರಿಯ ನಾಗರಿಕರ ದೂರುಗಳ ಸಂಖ್ಯೆ ಸುಮಾರು 5774 ಇದೆ. ಹಾಗಾಗಿ, ಮಾನ್ಯ ಸದಸ್ಯರಿಗೆ ಸ್ವಲ್ಪ ಗೊಂದಲವಾಗಿದೆ. ಅದು ಗೊಂದಲವಾಗಿದ್ದರೆ ಅದನ್ನು ಸರಿಪಡಿಸುತ್ತೇವೆ.

**ಡಾ||ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಈಗ ದೌರ್ಜನ್ಯ ಎಂದರೆ, ಅಪರಾಧ ಕೃತ್ಯಗಳ ಬಗ್ಗೆ ಹೇಳುತ್ತಿದ್ದಾರೆಯೇ? ಕುಟುಂಬಸ್ಥರು ಆಸ್ತಿ ಮತ್ತು ಇತರೆ ಲೋಭಗಳಿಗಾಗಿ ನಡೆಸುವಂತಹ ಅಪರಾಧ. ಈಗ ಕುಟುಂಬದವರು ನಡೆಸಿದರೂ ಅಪರಾಧ ಮತ್ತೆ ಬೇರೆಯವರು ಮಾಡಿದರೂ ಸಹ ಅದು ಅಪರಾಧ. ಈಗ ಅದು ದೈಹಿಕ ಹಲ್ಲೆಯೇ? ಅಥವಾ ಮಾನಸಿಕ ಹಲ್ಲೆಯೇ?

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಯವರೇ, ಇಲ್ಲ. ಈಗ ಕೌಟುಂಬಿಕ ದೌರ್ಜನ್ಯವಾದ ಸಂದರ್ಭದಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ ಅದು. ಈಗ ಹಿರಿಯ ನಾಗರಿಕರು ಎಂದರೆ, ಎಲ್ಲಾ ರೀತಿ ಅಪರಾಧಗಳು. ಅಂದರೆ ಸಾಮಾನ್ಯವಾಗಿ ವಂಚನೆಯಾಗಿ ಏನಾದರೂ ಅವರಿಗೆ ತೊಂದರೆಯಾದಾಗ ಕೊಟ್ಟಿರುವುದು. ಏನು ಇಲಾಖೆಯಿಂದ ಇವುಗಳನ್ನು ಕೊಡಬೇಕೋ ಅವುಗಳನ್ನು ಕೊಡುತ್ತಿದ್ದೇವೆ. ಅವರಿಗೆ ಸಹಾಯವಾಣಿ ಕೇಂದ್ರದ ಮುಖಾಂತರವೂ ಸಹ ಕೊಡುತ್ತಿದ್ದೇವೆ. ಅದರ ಅಂಕಿ-ಸಂಖ್ಯೆಯನ್ನು ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ವೃದ್ಧಾಶ್ರಮಗಳ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಈಗ ಸರ್ಕಾರದ ವೃದ್ಧಾಶ್ರಮಗಳು ಇಲ್ಲ. ಇವುಗಳನ್ನು ಕೇವಲ ರಾಜ್ಯ ಸರ್ಕಾರದ ಅನುದಾನದಲ್ಲಿ ಸಂಘ-ಸಂಸ್ಥೆಗಳು ನಡೆಸುತ್ತಿರುವಂತಹ ವೃದ್ಧಾಶ್ರಮಗಳು ಹಾಗೂ ಕೇಂದ್ರ ಸರ್ಕಾರದ ಅನುದಾನಿತ ವೃದ್ಧಾಶ್ರಮಗಳು ಎಂದು ಇದೆ. ಈಗ ರಾಜ್ಯ ಸರ್ಕಾರದ ಅನುದಾನಿತ ವೃದ್ಧಾಶ್ರಮಗಳು ಮತ್ತು ಕೇಂದ್ರ ಸರ್ಕಾರದ ವೃದ್ಧಾಶ್ರಮಗಳಿಗೆ ಒಂದು ವ್ಯತ್ಯಾಸವಿದೆ. ಅಂದರೆ, ರಾಜ್ಯ ಸರ್ಕಾರದ ಅನುದಾನಿತ ವೃದ್ಧಾಶ್ರಮಗಳಿಗೆ ವಾರ್ಷಿಕವಾಗಿ ಕೇವಲ ಎಂಟು ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೆವು. ಕೇಂದ್ರ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸರ್ಕಾರ ನಡೆಸುವ ವೃದ್ಧಾಶ್ರಮಗಳಿಗೆ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ. ಅದನ್ನು ಹೆಚ್ಚಿಗೆ ಮಾಡಬೇಕೆಂದು ಮೊನ್ನೆಯ ದಿವಸ ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಾಗ, ಮಾನ್ಯ ಮುಖ್ಯಮಂತ್ರಿಗಳು ಅದನ್ನು ಸುಮಾರು ಹದಿನೈದು ಲಕ್ಷ ರೂಪಾಯಿಗಳಿಗೆ ಹೆಚ್ಚಿಗೆ ಮಾಡಿದ್ದಾರೆ. ಹೀಗಾಗಿ ಅವುಗಳಿಗೆ ಹೆಚ್ಚಿಗೆ ಕೊಡುತ್ತೇವೆ. ಮಾನ್ಯ ಸದಸ್ಯರಾದ ಡಾ||ತೇಜಸ್ವಿನಿ ಗೌಡರವರು ಹೇಳಿದಂತೆ, ಸರ್ಕಾರದಿಂದ ವೃದ್ಧಾಶ್ರಮಗಳನ್ನು ಪ್ರಾರಂಭ ಮಾಡಬೇಕೆಂದು ತಿಳಿಸಿದ್ದಾರೆ. ಅದನ್ನು ಕೂಡ ಪರಿಶೀಲನೆ ಮಾಡುತ್ತೇವೆ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಒಂದು ಕೂಡ ಸರ್ಕಾರದ ವೃದ್ಧಾಶ್ರಮಗಳು ಇಲ್ಲವೆಂದು ನನ್ನ ಸಹೋದರಿ ಡಾ||ತೇಜಸ್ವಿನಿಗೌಡರವರು ಕೇಳಿದರು. ಈಗ ಅನುದಾನಿತ ವೃದ್ಧಾಶ್ರಮಗಳಿಗೆ ರಾಜ್ಯ ಸರ್ಕಾರದಿಂದ ಎಂಟು ಲಕ್ಷ ರೂಪಾಯಿ ಮತ್ತು ಕೇಂದ್ರ ಸರ್ಕಾರದವರು ಇಪ್ಪತ್ತೈದು ಲಕ್ಷ ರೂಪಾಯಿಗಳ ಅನುದಾನ ಕೊಡುತ್ತಾರೆಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಹಾಗಾದರೆ, ವೃದ್ಧಾಶ್ರಮಗಳನ್ನು ಸರ್ಕಾರದಿಂದಲೇ ಏಕೆ ಮಾಡಬಾರದು? ಈಗಾಗಲೇ ಹೇಗಿದ್ದರೂ ಅನುದಾನಿತ ವೃದ್ಧಾಶ್ರಮಗಳಿಗೆ ಎಂಟು ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಈಗ ಅಲ್ಲಿ ಏನೇನು ದೌರ್ಜನ್ಯವಾಗುತ್ತಿದೆ ಮತ್ತು ಕೊಡುವಂತಹ ಎಂಟು ಲಕ್ಷ ರೂಪಾಯಿ ಹಣ ಸರಿಯಾಗಿ ಉಪಯೋಗವಾಗುತ್ತಿದೆಯೇ? ಈಗ ಅವರಿಗೆ ಸರ್ಕಾರದ ಕಡೆಯಿಂದ ಕೊಡುವಂತಹ ಅನುದಾನ ಒಂದು ಕಡೆಯಾದರೆ, ಯಾರು ವೃದ್ಧಾಶ್ರಮಗಳಿಗೆ ಸೇರಿಸುತ್ತಾರೆ ಅವರ ಕಡೆಯಿಂದ ಸಹ ಹಣವನ್ನು ತೆಗೆದುಕೊಳ್ಳುತ್ತಿದ್ದಾರೆ. ಅದಕ್ಕೆ ಸರ್ಕಾರವೇ ಏಕೆ ವೃದ್ಧಾಶ್ರಮಗಳನ್ನು ತೆರೆಯಬಾರದು? ಎಲ್ಲವೂ ಸಹ ಖಾಸಗೀಕರಣದ ರೀತಿ. ಒಂದು ನಿಮಿಷ ನಾನು ಇನ್ನು ಮಾತನಾಡುವುದು ಇದೆ. ಅದಕ್ಕೋಸ್ಕರವಾಗಿ ಇದನ್ನು ಸರ್ಕಾರವೇ ಕೈಗೆತ್ತಿಗೊಳ್ಳುವುದು ಬಹಳ ಉತ್ತಮ ಎನ್ನುವುದು ನನ್ನ ಅನಿಸಿಕೆ. ಮಾನ್ಯ ಸಚಿವರು ಹೇಳಿದ ಹಾಗೆ, ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿತವಾದ ನಿರ್ವಹಣಾ ನ್ಯಾಯ ಮಂಡಳಿಯಲ್ಲಿ ಪ್ರಕರಣವನ್ನು ದಾಖಲಿಸಿ, ಗರಿಷ್ಠ 90 ದಿನಗಳ ಒಳಗೆ ನ್ಯಾಯ ಪಡೆಯಬಹುದಾಗಿರುತ್ತದೆ. ತಿಂಗಳಿಗೆ ಗರಿಷ್ಠ ಹತ್ತು ಸಾವಿರ ರೂಪಾಯಿಗಳ ಮಾಸಿಕ ಭತ್ಯೆಯನ್ನು ಪಡೆಯಬಹುದಾಗಿರುತ್ತದೆ. ಈಗ ಇಲಾಖೆಗೆ ಎಷ್ಟು ಜನರು ದೂರುಗಳನ್ನು ನೀಡಿದ್ದಾರೆ ಮತ್ತು ಅವುಗಳ ನ್ಯಾಯ ತೀರ್ಮಾನವಾಗಿದೆ. ಈಗ ಉಪ ವಿಭಾಗಾಧಿಕಾರಿಗಳಿಗೆ ಬೇಕಾದಷ್ಟು ಕೆಲಸವಿದೆ. ಮತ್ತೆ ಈ ಕೆಲಸವನ್ನು ಮಾಡುವುದಕ್ಕೆ ಅವರಿಗೆ ಸಮಯ ಎಲ್ಲಿದೆ? ನಮಗೆ ಏನಾದರೂ ಕೆಲಸವಾಗಬೇಕೆಂದು ಕಚೇರಿಗಳಿಗೆ ಹೋದರೆ, ಅವರು ಕಚೇರಿಯಲ್ಲಿ ಸಿಗುವುದೇ ಇಲ್ಲ. ಅಂತಹವುದರಲ್ಲಿ ಈ ಕೆಲಸವನ್ನು ಅವರಿಗೆ ನೀಡಿದರೆ, ಇದು ನ್ಯಾಯವೇ?

**ಸಭಾಪತಿಯವರು:-** ಸಾಕು ಬಿಡಿ. ಈಗಾಗಲೇ ಹದಿನೈದು ನಿಮಿಷವಾಗಿದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಒಂದೇ ಒಂದು ನಿಮಿಷ. ಸರ್ಕಾರಕ್ಕೆ ನನ್ನ ಸಲಹೆ ಏನೆಂದರೆ, ಈಗ ವಯಸ್ಸಾದಂತಹ ಪೋಷಕರು ಪ್ರತ್ಯೇಕವಾಗಿ ಮನೆಯಲ್ಲಿಯೇ ಇರುತ್ತಾರೆ. ಅವರು ಮನೆಯನ್ನು ಜೈಲು ರೀತಿ ವಾಸ ಮಾಡಿಕೊಂಡಿರುತ್ತಾರೆ. ಏಕೆಂದರೆ, ಪಾಪ ಅವರು ಹೊರಗಡೆ ಬರುವುದಕ್ಕೆ ಭಯ. ಇವತ್ತಿನ ದಿವಸ ಅಂತಹವರ ಮೇಲೆ ಹಲ್ಲೆಗಳು ನಡೆಯುತ್ತಿವೆ. ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಈಗ ನನಗೆ census ಪ್ರಕಾರ ಇಷ್ಟು ಜನ ವಯೋವೃದ್ಧರು ಇದ್ದಾರೆಂದು ಅಂಕಿ-ಅಂಶಗಳನ್ನು ನೀಡಿದ್ದಾರೆ. ದಯಮಾಡಿ ವಯೋವೃದ್ಧರು ಯಾವ್ಯಾವ jurisdictional ನಲ್ಲಿ ಇದ್ದಾರೆಂದು ಸಂಬಂಧಪಟ್ಟಂತಹ ಪೊಲೀಸ್ ಠಾಣೆಗಳಿಗೆ ಅವರುಗಳ ಮಾಹಿತಿ ನೀಡಿ. ಇಂತಹ ವಯೋವೃದ್ಧರು ಇಂತಹ ಮನೆಗಳಲ್ಲಿ ವಾಸ ಮಾಡುತ್ತಿದ್ದಾರೆ. ಅವರುಗಳಿಗೆ ಏನಾದರೂ ಅನಾಹುತಗಳಾದರೆ, ಪೊಲೀಸ್ ಠಾಣೆಯವರು ಅವರಿಗೆ ರಕ್ಷಣೆ ಕೊಡುವಂತಹ ರೀತಿಯಲ್ಲಿ ಆ ಮಾಹಿತಿಗಳನ್ನು ಸಂಬಂಧಪಟ್ಟಂತಹ ಪೊಲೀಸ್ ಠಾಣೆಗಳಿಗೆ ನೀಡಿ. ಆಗ ಅವರಿಗೆ ಒಂದು ಸುರಕ್ಷತೆ ಸಿಗುತ್ತದೆ ಎಂಬುದು ನನ್ನ ಅನಿಸಿಕೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಯವರೇ, ಇವತ್ತು ಮಾನ್ಯ ಸದಸ್ಯರು ತಿಳಿಸಿದಂತಹ ವಿಚಾರಗಳನ್ನು ಪರಿಗಣಿಸುತ್ತೇವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ: 938**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಮುನಿರಾಜು ಗೌಡ ಪಿ.ಎಂ.:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ಇವತ್ತು ಕರ್ನಾಟಕದಲ್ಲಿ ಗಣಿ ಕೆಲಸ ಮಾಡುವಂತಹ ಸಾಮಾನ್ಯ ಜನರಿಗೆ ಆಗುತ್ತಿರುವಂತಹ ಅನ್ಯಾಯಗಳ ಬಗ್ಗೆಯೂ ಸಹ ಕಣ್ಣಾಡಿಸಬೇಕಾಗಿದೆ. 2014ಕಿಂತ ಮುಂಚೆ KMMCR-94ರ, ನಿಯಮ 9 ಮತ್ತು 21ರ ಪ್ರಕಾರ saved application and un-saved application ಎಂದು, ಸರ್ಕಾರ ನಿಯಮವನ್ನು ಮಾಡಿದೆ. ಈಗ ಇವರು ಮಾಡುತ್ತಿರುವುದು, 2014ಕಿಂತ ಮುಂಚೆ ಬಂದಂತಹ ಎನ್.ಓ.ಸಿ ಗಳನ್ನು ಪರಿಗಣನೆಗೆ ತೆಗೆದುಕೊಳ್ಳುತ್ತೇನೆಂದರೆ, 2016ರ ನಂತರ ಬಂದಂತಹ ಎನ್.ಓ.ಸಿ ಗಳನ್ನುಏಕೆ ಪರಿಗಣನೆಗೆ ತೆಗೆದುಕೊಳ್ಳುತ್ತಿಲ್ಲ. ಈಗ ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆ ಇರಬಹುದು. ಈ ಇಲಾಖೆಗಳಿಂದ 90 ದಿನಗಳ ಒಳಗಡೆ ಎನ್.ಓ.ಸಿ ಯನ್ನು ತೆಗೆದುಕೊಂಡು ಬರುವಂತಹ ಕೆಲಸವನ್ನು, ಈಗ ಯಾರು application ಹಾಕಿರುತ್ತಾರೆ ಅವರಿಗೇ ಕೊಡುವುದಾದರೆ, ಸರ್ಕಾರ ತಮ್ಮದೇ ಆದಂತಹ ಇಲಾಖೆಗಳಲ್ಲಿ ಈ ಒಂದು ಎನ್.ಓ.ಸಿ. ಯನ್ನು ತೆಗೆದುಕೊಳ್ಳುವುದಕ್ಕೆ ಏನು ಕಷ್ಟವಿದೆ ಎಂಬುದನ್ನು ಹೇಳಬೇಕು. ಏಕೆಂದರೆ, ಎನ್.ಓ.ಸಿ ಯನ್ನು ಕಳುಹಿಸುವುದಕ್ಕೆ 90 ದಿವಸವಿದೆ ಎಂದರೆ ಅಧಿಕಾರಿಗಳು ಆ ಎನ್.ಓ.ಸಿ ಗೆ ಸಹಿ ಹಾಕಿ ದಿನಾಂಕವನ್ನು ನಮೂದಿಸಿ ಇಟ್ಟುಕೊಂಡಿರುತ್ತಾರೆ. ಆದರೆ, ಅಧಿಕಾರಿಗಳು ಐವತ್ತು ದಿನಗಳು ಆದ ನಂತರ ಕಳುಹಿಸುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಆದುದರಿಂದ ನನಗೆ ಇದರ ಹಿಂದೆ ಇರುವಂತಹ ಷಡ್ಯಂತ್ರ ಏನೆಂದು ಗೊತ್ತಾಗಬೇಕು. ಎರಡನೆಯದು, 2016ಕ್ಕಿಂತ ಮೊದಲು ಮಂಜೂರು ಆದಂತಹ ಗಣಿಗಳು ಏನಿವೆ, ಅವುಗಳಿಗೆ ಶೇಕಡಾ 50ಕ್ಕಿಂತ ಹೆಚ್ಚಿಗೆ royalty ಪಡೆಯುವಂತಹ ಕೆಲಸವನ್ನು ಇಲಾಖೆ ಮಾಡುತ್ತಿದೆ. ಇದು ಏಕೆ? ಇವತ್ತು ಒಂದು ಕಲ್ಲಿಗೆ 2014ಕ್ಕಿಂತ ಮುಂಚೆ ಒಂದು ಟನ್‌ಗೆ 70 ರೂಪಾಯಿ ಇದ್ದರೆ, 2016ರ ನಂತರ ಸುಮಾರು 90 ರೂಪಾಯಿಗಳಿಂದ 95 ರೂಪಾಯಿಗಳವರೆಗೆ ಸಂಗ್ರಹ ಮಾಡುತ್ತಿದ್ದಾರೆ. ಈಗ ಒಂದೇ material ಗೆ 2016ರ ನಂತರ Industry ಯನ್ನು ಸ್ಥಾಪನೆ ಮಾಡಿದಂತಹವರು ಯಾವುದೇ ಕಾರಣಕ್ಕೂ ಅದನ್ನು ಹೆಚ್ಚಿಗೆ ಮಾರಾಟ ಮಾಡುವುದಕ್ಕೆ ಸಾಧ್ಯವೇ ಇಲ್ಲ. 2016ರ ನಂತರ ಸುಮಾರು ಜನರು ಹೆಚ್ಚಿಗೆ ಹಣ ಹೂಡಿಕೆ ಮಾಡಿರುತ್ತಾರೆ.

ಇವತ್ತಿನ ದಿವಸ ಎಂ ಸ್ಯಾಂಡ್ ಬೇಕೆಂದು ಹೇಳುತ್ತೇವೆ. ಆದರೆ, ಇವತ್ತು ಎಂ ಸ್ಯಾಂಡ್‌ಗೋಸ್ಕರ ಸರ್ಕಾರ ತೆಗೆದುಕೊಂಡಿರುವಂತಹ ನಿರ್ಧಾರ ಏನು? ಮತ್ತೆ ಡ್ರೋನ್ ಕ್ಯಾಮೆರಾ ಮುಖಾಂತರ ಸರ್ವೆ ಮಾಡಿದ್ದಾರೆ. ಇವತ್ತು ಹತ್ತಾರು ವರ್ಷಗಳ ಹಿಂದೆ, ಶಕ್ತಿಯುವಾಗಿದ್ದಂತಹವರು ಯಾರೂ ಸಹ ಗಣಿಗಾರಿಕೆಯನ್ನು ನಡೆಸುತ್ತಿರಲಿಲ್ಲ. ಈಗ ಹತ್ತು ವರ್ಷಗಳ ನಂತರ ಬೇರೆ ಬೇರೆ ರಾಜ್ಯಗಳಿಂದ ಸಹ ಗಣಿಗಾರಿಕೆಯನ್ನು ನಡೆಸುವುದಕ್ಕೆ ನಮ್ಮ ರಾಜ್ಯಕ್ಕೆ ಬರುತ್ತಿದ್ದಾರೆ. ಇವತ್ತು ಗಣಿಗಾರಿಕೆ ಎನ್ನುವುದು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಉಳ್ಳವರ ಸ್ವತ್ತಾಗಿದೆ. ಈಗ ಭೋವಿ ಜನಾಂಗಕ್ಕೆ ಮೀಸಲಾಗಿದ್ದ ಗಣಿಗಾರಿಕೆ, ಅಂದರೆ ಕಲ್ಲು ಕುಟ್ಟುವಂತಹ ಕೆಲಸ. ಇವತ್ತು ಅವರ್ಯಾರಿಗೂ ಸಹ ಈ ಗಣಿಗಾರಿಕೆ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ.

(ಮುಂದು)

**(1198) 21.12.2021 11.40 LL-MD(VK)** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಮುನಿರಾಜುಗೌಡ ಪಿ.ಎಂ.(ಮುಂದು):-**

ಇವೊತ್ತಿನ ದಿವಸ auction-cum-tender ಮುಖಾಂತರವಾಗಿ 120 ರಿಂದ 130 ರೂಪಾಯಿ ಪ್ರತಿ ಟನ್‌ಗಳಿಗೆ ಹೆಚ್ಚು ಹಣ ವಸೂಲು ಮಾಡುವುದರ ಮೂಲಕ ಇಲಾಖೆ ಕೆಲಸ ಮಾಡುತ್ತಿದೆ. ಇದರ ಜೊತೆಯಲ್ಲಿ revision application ಹಾಕುವಂಥದ್ದಕ್ಕೆ ಕರ್ನಾಟಕ ರಾಜ್ಯದಲ್ಲಿ ಎರಡು ಕಡೆ revision authority ಯನ್ನು ಇಟ್ಟಿದ್ದಾರೆ. ಒಂದು ಮೈಸೂರು ಜಿಲ್ಲೆಯಲ್ಲಿ ಮತ್ತೊಂದನ್ನು ಬಳ್ಳಾರಿ ಜಿಲ್ಲೆಯಲ್ಲಿ ಇಡಲಾಗಿದೆ. ಆ ಎರಡೂ ಕಡೆಯಲ್ಲಿಯೂ ಒಬ್ಬರೇ ಜಂಟಿ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದಾರೆ. ಸದರಿ ಜಂಟಿ ನಿರ್ದೇಶಕರ ಮನೆ ಚಿತ್ರದುರ್ಗ ಜಿಲ್ಲೆಯಲ್ಲಿದ್ದು, ಅವರು ಚಿತ್ರದುರ್ಗದಿಂದ ಮೈಸೂರಿಗೆ ಬರಬೇಕು ಮತ್ತು ಮೈಸೂರಿನಿಂದ ಬಳ್ಳಾರಿಗೆ ಹೋಗಬೇಕು. ಇದರಿಂದಾಗಿ, ಅವರ ಮುಂದೆ ಸಾವಿರಾರು ಅರ್ಜಿಗಳು ವಿಲೇ ಆಗದೇ ಬಾಕಿ ಉಳಿದಿರುತ್ತವೆ. ಏತಕ್ಕಾಗಿ ಇಷ್ಟು ವಿಳಂಬ ಮಾಡಬೇಕು?

ಇನ್ನೊಂದು ವಿಚಾರ ಹೇಳಬೇಕೆಂದರೆ, ಬೆಂಗಳೂರು ನಿವಾಸಿಯಾದಂತಹ ಶ್ರೀ ಶ್ಯಾಮ್ ಎಂಬ ಗಣಿ ನಿರ್ವಹಣೆ ಮಾಡುವಂತಹ ಒಬ್ಬ ವ್ಯಕ್ತಿಗೆ ಕಳೆದ 8 ವರ್ಷಗಳಿಂದ ಅವರ ಅರ್ಜಿಯನ್ನು ವಿಲೇ ಮಾಡದೇ ಬಾಕಿ ಇಟ್ಟುಕೊಂಡಿರುತ್ತಾರೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಯನ್ನು ಕೇಳಿದರೆ, "ನನ್ನ ಮೇಲೆ ಓರ್ವ ಮಾಜಿ ಸಚಿವರ ಒತ್ತಡ ಇದೆ" ಎಂದು ಹೇಳುವುದನ್ನು ಮಾನ್ಯ ಸಚಿವರು ಗಮನಿಸಬೇಕು. ಇದರ ಜೊತೆಯಲ್ಲಿ ಕಳೆದ 3-4 ವರ್ಷಗಳ ಹಿಂದೆ ಇಡೀ ರಾಜ್ಯದಲ್ಲಿ ಮರಳಿನ ಅಭಾವ ಇದೆಯೆಂದು ಮಲೇಷಿಯಾ ದೇಶದಿಂದ ಮರಳನ್ನು ಆಮದು ಮಾಡಿಕೊಳ್ಳುವಂತಹ ಕೆಲಸವನ್ನು ಇಲಾಖೆ ಮಾಡಿರುತ್ತದೆ. ಅದರಂತೆ, ಸಾವಿರಾರು ಕೋಟಿ ರೂಪಾಯಿ ಹಣವನ್ನು ವ್ಯಯ ಮಾಡಿ ಆಂಧ್ರಪ್ರದೇಶದ ಕೃಷ್ಣಾಪಟ್ಟಣಂ ಮುಖಾಂತರವಾಗಿ ಲಕ್ಷಾಂತರ ಟನ್ ಮರಳನ್ನು ರಾಜ್ಯಕ್ಕೆ ಆಮದು ಮಾಡಿಕೊಳ್ಳಲಾಗಿರುತ್ತದೆ. ಆದರೆ, ಇದುವರೆವಿಗೂ ಆ ಮರಳನ್ನು ಯಾರಿಗೆ ಮಾರಾಟ ಮಾಡಿದ್ದಾರೆ? ಅದರಿಂದ ಸರ್ಕಾರಕ್ಕೆ ಎಷ್ಟು ರಾಜಧನ ಬಂದಿದೆ? ಅದರಿಂದಾಗಿ, ಸರ್ಕಾರಕ್ಕೆ ಲಾಭ ಎಷ್ಟಾಗಿದೆ ಎಂಬ ಮಾಹಿತಿ ಸಿಗುತ್ತಿಲ್ಲ. ಈ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ಕೋರುತ್ತೇನೆ.

ಇವೊತ್ತಿನ ದಿವಸ ಗಣಿಗಾರಿಕೆ ಮಾಡುವಂತಹ ಕೆಲಸವನ್ನು ಕೆಳಸ್ತರದ ಜನರು ಯಾರೂ ಸಹ ಮಾಡುವುದಕ್ಕೆ ಆಗುತ್ತಿಲ್ಲ. ಹಾಗಾಗಿ, ಮುಂದಿನ ದಿನಗಳಲ್ಲಿ ಅವರಿಗೆ ನ್ಯಾಯ ಒದಗಿಸಿಕೊಡುವಂತಹ

ಕೆಲಸವನ್ನು ಮಾಡಬೇಕು ಮತ್ತು ಸಮಾನವಾದ ಏಕರೂಪ royalty ಯನ್ನು ಅಂದರೆ, 70 ರೂಪಾಯಿ ಇದ್ದಂತಹ ರಾಯಲ್ಟಿಯನ್ನು 95 ರೂಪಾಯಿಗೆ ಹೆಚ್ಚು ಮಾಡಿದ್ದಾರೆ. 2016ರ ನಂತರದ royalty ಯನ್ನು ಏತಕ್ಕಾಗಿ ಹೆಚ್ಚು ಮಾಡಲಾಗಿದೆ?

**ಸಭಾಪತಿಯವರು:-** ಆಯಿತು. ಮಾನ್ಯ ಸಚಿವರು ತಮ್ಮ ಪ್ರಶ್ನೆಗೆ ಉತ್ತರ ಕೊಡುತ್ತಾರೆ. ಆ ನಂತರ ತಮ್ಮ ಉಪ ಪ್ರಶ್ನೆ ಕೇಳಿ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿದಂತಹ ಎಲ್ಲಾ ಪ್ರಶ್ನೆಗಳಿಗೆ ಉತ್ತರ ನೀಡಿರುತ್ತೇವೆ. ಆದಾಗ್ಯೂ, ಮಾನ್ಯ ಸದಸ್ಯರು ಸ್ವಲ್ಪ ಹೆಚ್ಚಿಗೆ ಮಾಹಿತಿ ಕೇಳಿದ್ದಾರೆ. ಆ ನಿಟ್ಟಿನಲ್ಲಿ ಸಹ ನಾನು ಉತ್ತರ ಕೊಡುತ್ತೇನೆ. ದಿನಾಂಕ:12.08.2016ರಂದು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳಿಗೆ 1994ರ ತಿದ್ದುಪಡಿಗೆ ತಂದ ನಂತರ saved and un-saved application ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆ ಕೇಳಿರುತ್ತಾರೆ. 1994ಕ್ಕೆ ಇದ್ದಂತಹ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳ ಪ್ರಕಾರ ಸಾಕಷ್ಟು ಜನ ರಾಜ್ಯಾದ್ಯಂತ ಅರ್ಜಿಗಳನ್ನು ಕೊಟ್ಟಿದ್ದರು. ತದನಂತರ, 2016ರಲ್ಲಿ ಸದರಿ ನಿಯಮಗಳಿಗೆ ತಿದ್ದುಪಡಿಯಾದ ನಂತರ, ಯಾರು ಅರ್ಜಿದಾರ ಇರುತ್ತಾನೆ, ಆತ ಗಣಿಗಾರಿಕೆಗೆ ಪೂರಕವಾದಂತಹ ಕಾಗದ ಪತ್ರಗಳನ್ನು ಕೊಟ್ಟರೆ ಅಂದರೆ, Forest clearance, Revenue clearance, Department clearance ಇರಬಹುದು, ಆ ಎಲ್ಲಾ ನಿರಾಪೇಕ್ಷಣಾ ಪತ್ರಗಳನ್ನು ಕೊಟ್ಟಂತಹವರನ್ನು saved application ಎಂದು ಪರಿಗಣನೆ ಮಾಡಲಾಗಿದೆ. ಆದರೆ, 2016ರ ನಂತರ ಸದರಿ ನಿರಾಪೇಕ್ಷಣಾ ಪತ್ರಗಳನ್ನು ಕೊಡದೇ ಇರತಕ್ಕಂತಹವರನ್ನು un-saved application ಎಂದು ಮಾಡಲಾಗಿದೆ. ಅದರಂತೆ, ಅಂತಹ ಸುಮಾರು 5 ಸಾವಿರ ಅರ್ಜಿಗಳು ಇಲಾಖೆಯಲ್ಲಿ ಬಾಕಿ ಉಳಿದಿರುತ್ತವೆ.

ಸದರಿ ಅರ್ಜಿಗಳ ವಿಲೇವಾರಿ ಬಗ್ಗೆ ಸರ್ಕಾರದಲ್ಲಿ ಚಿಂತನೆ ಮಾಡಿ, ಈ ಬಗ್ಗೆ ಸಚಿವ ಸಂಪುಟದ ಉಪ ಸಮಿತಿಯನ್ನು ರಚನೆ ಮಾಡಲಾಗಿದೆ. ಈಗಾಗಲೇ ಸದರಿ ಉಪ ಸಮಿತಿಯು ಸಭೆ ಕೂಡ ನಡೆಸಿದ್ದು, ಆ ಸಭೆಯಲ್ಲಿ ಏನಾದರೂ ಮಾಡಿ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಚರ್ಚಿಸಲಾಗಿರುತ್ತದೆ. ಇದರ ಜೊತೆಯಲ್ಲಿ ನಮ್ಮ ರಾಜ್ಯದಲ್ಲಿ ಮರಳಿನ ಕೊರತೆ ಬಹಳ ಇದೆ. ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ 45 ದಶಲಕ್ಷ ಟನ್ ಮರಳು ಬೇಡಿಕೆ ಇದ್ದರೆ, ಸರ್ಕಾರದಿಂದ ಸ್ವಾಭಾವಿಕ ಮರಳು ಇರಬಹುದು ಅಥವಾ ಎಂ ಸ್ಯಾಂಡ್ ಇರಬಹುದು ಇವೆಲ್ಲವನ್ನೂ ಒಟ್ಟುಗೂಡಿಸಿದರೆ ಕೇವಲ 35 ದಶಲಕ್ಷ ಟನ್ ಮರಳು ಸಿಗುತ್ತದೆ. ಹಾಗಾಗಿ, ನಮ್ಮಲ್ಲಿರುವ ಮರಳಿನ ಕೊರತೆಯನ್ನು ನೀಗಿಸಬೇಕಾದರೆ, ಇವೊತ್ತಿನ ದಿವಸ ನಾವು ಎಂ ಸ್ಯಾಂಡ್ ಅನ್ನು ಹೆಚ್ಚು ಉತ್ಪಾದನೆ ಮಾಡುವುದಕ್ಕೆ ಉತ್ತೇಜನ ಕೊಡಬೇಕೆಂಬ ನಿಟ್ಟಿನಲ್ಲಿ ಸರ್ಕಾರದ

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಹಂತದಲ್ಲಿ ಚಿಂತನೆ ಮಾಡಲಾಗುತ್ತಿದೆ. ಅದಕ್ಕಾಗಿ, ನಾವು ಯಾವ scope ಕೊಡಬೇಕೋ ಅದೆಲ್ಲವನ್ನೂ ಕೊಡುವುದಕ್ಕೆ ನಾವು ಚಿಂತನೆ ಮಾಡುತ್ತಿದ್ದೇವೆ.

**ಶ್ರೀ ಮುನಿರಾಜುಗೌಡ .ಪಿ.ಎಂ.:-** ಮಾನ್ಯ ಸಭಾಪತಿಯವರೇ, 2016ರ ನಂತರ ಎನ್.ಓ.ಸಿ. ಪಡೆದಂತಹ ಹಲವಾರು ಜನ ಅರಣ್ಯ ಇಲಾಖೆಯಿಂದ ಮತ್ತು ಕಂದಾಯ ಇಲಾಖೆಯಿಂದ ನಿರಾಪೇಕ್ಷಣಾ ಪತ್ರ ಪಡೆದಿರುತ್ತಾರೆ. ಮಾನ್ಯ ಸಚಿವರು ಆಗಲೇ ಮಾತನಾಡುತ್ತಾ, ಸದರಿ ನಿರಾಪೇಕ್ಷಣಾ ಪತ್ರ ಪಡೆಯದೇ ಇರುವಂತಹ 5 ಸಾವಿರ ಅರ್ಜಿಗಳು ಬಾಕಿ ಇವೆ ಎಂದು ಹೇಳಿರುತ್ತಾರೆ. ಆದರೆ, ಅದರಲ್ಲಿ ಸುಮಾರು ಜನರು 2016ರ ನಂತರ ಎನ್.ಓ.ಸಿ.ಗಳ ಪಡೆದಿದ್ದು, ಅವರನ್ನು ಸಹ ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

**ಶ್ರೀ ಆಚಾರ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಯವರೇ, ಸದರಿ ವಿಷಯದ ಬಗ್ಗೆಯೂ ಸಹ ಸಚಿವ ಸಂಪುಟದ ಉಪ ಸಮಿತಿಯಲ್ಲಿ ಪರಿಗಣಿಸುವುದಕ್ಕೆ ನಾವು ಚರ್ಚೆ ಮಾಡುತ್ತಿದ್ದೇವೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಪ್ರಶ್ನೆ ಸಂಖ್ಯೆ:901**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ವಿಜಯಸಿಂಗ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದಾರೆ. ಆದರೆ, ಬಸವಕಲ್ಯಾಣ ಹಾಗೂ ಹುಲಸೂರು ತಾಲ್ಲೂಕಿನಲ್ಲಿ 78 ಅಂಗನವಾಡಿ ಕಟ್ಟಡಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ ಎಂದು ಹೇಳಿದ್ದಾರೆ. ಕಳೆದ ಸಾಲಿನಲ್ಲಿ 15 ಅಂಗನವಾಡಿ ಕೇಂದ್ರಗಳಿಗೆ ಅನುದಾನ ನೀಡಿದ್ದು, ಉಳಿದ ಅಂಗನವಾಡಿ ಕೇಂದ್ರಗಳಿಗೆ ಅನುದಾನವನ್ನು ಯಾವಾಗ ಕೊಡುತ್ತಾರೆಂಬ ಪ್ರಶ್ನೆಯನ್ನು ಕೇಳುತ್ತೇನೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಯವರೇ, ಕಳೆದ 2 ವರ್ಷಗಳಲ್ಲಿ ಸುಮಾರು 15 ಅಂಗನವಾಡಿ ಕಟ್ಟಡಗಳನ್ನು ನಿರ್ಮಾಣ ಮಾಡಲಾಗಿದೆ. ಇನ್ನುಳಿದ ಅಂಗನವಾಡಿ ಕೇಂದ್ರಗಳ ಕಟ್ಟಡಗಳನ್ನು ಆದ್ಯತೆ ಮೇರೆಗೆ ಆದಷ್ಟು ಬೇಗ ಅಂದರೆ, ಈ ಸಾಲಿನ ಬಜೆಟ್‌ನಲ್ಲಿ ಸ್ವಲ್ಪ ಹೆಚ್ಚಿನ ಅನುದಾನ ಇಟ್ಟುಕೊಳ್ಳಬೇಕು ಮತ್ತು ಆ ಕಟ್ಟಡಗಳನ್ನು ಯಾವ ರೀತಿ ಪೂರೈಸಬೇಕು ಎನ್ನುವ ನಿಟ್ಟಿನಲ್ಲಿ ಸರ್ಕಾರ ಆಲೋಚನೆ ಮಾಡುತ್ತಿದೆ.

**ಶ್ರೀ ವಿಜಯಸಿಂಗ್:-** ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ಆದಷ್ಟು ಬೇಗ ಅಂದರೆ ಆಗುವುದಿಲ್ಲ. ಆದರೆ, ಅದು ಯಾವಾಗ ಎಂದು ಟೈಮ್‌ಲೈನ್ ಕೊಟ್ಟರೆ ಒಳ್ಳೆಯದು.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಯವರೇ, ಈ ವರ್ಷದ ಬಜೆಟ್‌ನಲ್ಲಿ ಅಂಗನವಾಡಿ ಕೇಂದ್ರ ಕಟ್ಟಡಗಳ ನಿರ್ಮಾಣಕ್ಕೆ ಹೆಚ್ಚು ಅನುದಾನವನ್ನು ಮೀಸಲಿಡಬೇಕೆಂದು ಸ್ಪಷ್ಟವಾಗಿ ನಿರ್ಣಯ ಮಾಡಿದ್ದು, ಆ ನಿಟ್ಟಿನಲ್ಲಿ ಕೆಲಸ ಮಾಡುತ್ತೇವೆ.

**ಶ್ರೀ ವಿಜಯಸಿಂಗ್:-** ಮಾನ್ಯ ಸಭಾಪತಿಯವರೇ, ಇನ್ನೊಂದು ವಿಚಾರವೇನೆಂದರೆ, ಬಸವಕಲ್ಯಾಣ ನಗರದಲ್ಲಿ ಒಟ್ಟು 54 ಅಂಗನವಾಡಿ ಕೇಂದ್ರಗಳ ಅವಶ್ಯಕತೆ ಇದೆ. ಆದರೆ, ಈಗ ಅದರಲ್ಲಿ 07 ಅಂಗನವಾಡಿ ಕೇಂದ್ರಗಳು ನಡೆಯುತ್ತಿವೆ. ಬಾಕಿ ಕಟ್ಟಡಗಳಲ್ಲಿ ಯಾವ ರೀತಿ ಕೆಲಸ ಕೂಡ ನಡೆಯುತ್ತಿಲ್ಲ. ಹಾಗಾಗಿ, ಆ ಕಟ್ಟಡಗಳ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತಾರೆಂದು ಕೇಳುತ್ತೇನೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಯವರೇ, ಆ ಬಗ್ಗೆ ನಾವು ತಕ್ಷಣವೇ ಕ್ರಮ ತೆಗೆದುಕೊಂಡು, ಅಂಗನವಾಡಿ ಕಟ್ಟಡ ಕೆಲಸ ಪ್ರಾರಂಭ ಮಾಡುವುದಕ್ಕೆ ಸಹ ಕ್ರಮ ತೆಗೆದುಕೊಳ್ಳುತ್ತೇವೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ವಿಜಯಸಿಂಗ್:-** ಮಾನ್ಯ ಸಭಾಪತಿಯವರೇ, ಸದರಿ ಕೆಲಸವನ್ನು ಆದಷ್ಟು ಬೇಗ ಮಾಡಬೇಕು.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಯವರೇ, ತಾವು ಹೇಳಿದಂತೆ ಆದಷ್ಟು ಬೇಗ ಮಾಡುತ್ತೇವೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಪ್ರಶ್ನೆ ಸಂಖ್ಯೆ:920**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ವಿವರವಾದ ಉತ್ತರವನ್ನು ಒದಗಿಸಿದ್ದಾರೆ. ನಾನು ಹಿರಿಯ ನಾಗರಿಕರಿಗೆ ಹಾಗೂ ವಿಕಲಚೇತನರಿಗೆ ಸಂಬಂಧಪಟ್ಟ ವ್ಯಾಜ್ಯಗಳ ಪ್ರಕರಣಗಳನ್ನು ಇಂತಿಷ್ಟು ದಿನಗಳಲ್ಲಿ ಪೂರ್ಣಗೊಳಿಸಬೇಕೆಂಬ ನಿಯಮ ಇದೆಯೇ ಎಂಬ ಪ್ರಶ್ನೆ ಕೇಳಿದ್ದೆನು. ಅದಕ್ಕೆ ಮಾನ್ಯ ಸಚಿವರು, “ಹಿರಿಯ ನಾಗರಿಕರ ವ್ಯಾಜ್ಯಗಳನ್ನು ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿತವಾದ ನಿರ್ವಹಣಾ ನ್ಯಾಯಮಂಡಳಿಯಲ್ಲಿ 90 ದಿವಸಗಳಲ್ಲಿ ತೀರ್ಮಾನ ಮಾಡಬೇಕು. ಸದರಿ 90 ದಿವಸಗಳಲ್ಲಿ ಅದು ಸಾಧ್ಯವಾಗದೇ ಇದ್ದರೆ, ಅದನ್ನು ಲಿಖಿತವಾಗಿ ದಾಖಲಿಸಿ ಪುನಃ 30 ದಿವಸ ಆ ವ್ಯಾಜ್ಯವನ್ನು ಮುಂದಕ್ಕೆ ಹಾಕಬೇಕು” ಎಂದು ಉತ್ತರ ನೀಡಿರುತ್ತಾರೆ.

ತದನಂತರ, ಸದರಿ ನ್ಯಾಯಮಂಡಳಿಯ ತೀರ್ಪಿನ ವಿರುದ್ಧ 90 ದಿವಸದಲ್ಲಿ ಮೇಲ್ಮನವಿಯನ್ನು ಸಲ್ಲಿಸಬಹುದೆಂದು ಉತ್ತರ ನೀಡಿರುತ್ತಾರೆ. ಇದರ ಜೊತೆಗೆ, 90 ದಿವಸದ ನಂತರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸದರಿ ವ್ಯಾಜ್ಯಗಳ ಇತ್ಯರ್ಥಕ್ಕೆ ಮೇಲ್ಮನವಿ ನ್ಯಾಯಮಂಡಳಿಯಲ್ಲಿ ಅವಕಾಶ ಮಾಡಿರುವ ಬಗ್ಗೆ ವಿಸ್ತೃತವಾಗಿ ಹೇಳಲಾಗಿರುತ್ತದೆ. ಇವೊತ್ತಿನ ದಿವಸ, ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಹಿರಿಯ ನಾಗರಿಕರ ವ್ಯಾಜ್ಯಗಳನ್ನು 90 ದಿವಸದಲ್ಲಿ ಇತ್ಯರ್ಥಪಡಿಸಬೇಕೆಂಬ ಏನು ಸೂಚನೆ ಇದೆ, ಅದು ಕೇವಲ ಕಾಗದದಲ್ಲಿ ಇದೆ. 90 ದಿವಸ ಅಲ್ಲ, 900 ದಿವಸ ಆದರೂ ಸಹ ಈ ಒಂದು ಹಿರಿಯ ನಾಗರಿಕರ ವ್ಯಾಜ್ಯಗಳು ಇತ್ಯರ್ಥ ಆಗುತ್ತಿಲ್ಲ. ಅದರ ನಂತರ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಮೇಲ್ಮನವಿ ನ್ಯಾಯಮಂಡಳಿಗೆ ಏನಾದರೂ ಅವರು ಮೇಲ್ಮನವಿ ಹೋದರೆ ಆ ವ್ಯಾಜ್ಯ ಇತ್ಯರ್ಥವಾಗುವುದಕ್ಕೆ ಬಹಳಷ್ಟು ವಿಳಂಬವಾಗುತ್ತದೆ. ಏಕೆಂದರೆ, ಜಿಲ್ಲಾಧಿಕಾರಿಗಳ ಕಛೇರಿ ಊರಿನಿಂದ ಹೊರಗಡೆ ಸುಮಾರು 8 ರಿಂದ 10 ಕಿಲೋಮೀಟರ್ ದೂರದಲ್ಲಿರುವುದರಿಂದ, ವರ್ಷಾನುಗಟ್ಟಲೆ ಸದರಿ ವ್ಯಾಜ್ಯಗಳು ಇತ್ಯರ್ಥವಾಗದೇ, ಸುಮಾರು ಹಿರಿಯ ನಾಗರಿಕರು ಹಾಗೆಯೇ ಸತ್ತು ಹೋಗುವವರನ್ನು ನಾವು ಕಣ್ಣಾರೆ ಕಂಡಿರುತ್ತೇವೆ. ಮಾನ್ಯ ಸದಸ್ಯರಾದ ಶ್ರೀ ನಾರಾಯಣಸ್ವಾಮಿಯವರು ಸಹ ಇದೇ ವಿಷಯದ ಬಗ್ಗೆ ಪ್ರಶ್ನೆ ಕೇಳಿರುತ್ತಾರೆ. ಹಾಗಾಗಿ, ಸರ್ಕಾರವು ಈ ವಿಷಯದ ಬಗ್ಗೆ ತೀಕ್ಷ್ಣವಾಗಿ ಪರಿಶೀಲನೆ ಮಾಡಬೇಕು.

ತದನಂತರ, ವಿಕಲಚೇತನರ ವ್ಯಾಜ್ಯಗಳನ್ನು ಪೂರ್ಣಗೊಳಿಸಲು ನಿಗದಿಗೊಳಿಸಿರುವ ಅವಧಿ ಬಗ್ಗೆ ಉತ್ತರ ನೀಡಿದ್ದು, ಅದರಲ್ಲಿ, “2016ರನ್ವಯ ವಿಶೇಷ ನ್ಯಾಯಾಲಯಗಳನ್ನು ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳ ಸಹಮತಿಯೊಂದಿಗೆ ಪ್ರತಿಯೊಂದು ಜಿಲ್ಲೆಯಲ್ಲಿ ಸ್ಥಾಪಿಸಿ, ಅದರಂತೆ, ಪ್ರತಿ ವಿಶೇಷ ನ್ಯಾಯಾಲಯಕ್ಕೆ ಓರ್ವ ಸಾರ್ವಜನಿಕ ಅಭಿಯೋಜಕರನ್ನು ನೇಮಿಸಲು ಅವಕಾಶವಿದೆ” ಎಂದು

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಉತ್ತರ ನೀಡಿರುತ್ತಾರೆ. ಆದರೆ, ಆ ರೀತಿ ವಿಶೇಷ ನ್ಯಾಯಾಲಯಗಳ ಸ್ಥಾಪನೆ ಆಗಿದೆಯೇ ಹಾಗೂ ಅಲ್ಲಿ ಸರ್ಕಾರಿ ಅಭಿಯೋಜಕರನ್ನು ನೇಮಿಸಿದ್ದಾರೆಯೇ ಎಂಬ ಬಗ್ಗೆ ಸರಿಯಾದ ಉತ್ತರ ಹೇಳಬೇಕು.

ಅದರ ನಂತರ, ನಿಗದಿತ ಅವಧಿಯೊಳಗೆ ನಡೆಸಲಾಯಿತೇ ಅಥವಾ ಇಲ್ಲವೇ ಎಂಬುದನ್ನು ಇಲಾಖೆಯವರು ಪರಿಶೀಲಿಸಿದ್ದಲ್ಲಿ ಅದರ ವರದಿಯ ಪ್ರತಿಯನ್ನು ಒದಗಿಸುವುದು ಎಂದು ಪ್ರಶ್ನೆ ಕೇಳಿದ್ದೇನೆ. ಅದರಂತೆ, ಸದರಿ ವರದಿಯನ್ನು ನೀಡಲಾಗಿದೆಯೇ? ಪರಿಶೀಲಿಸಿಲ್ಲ ಎಂಬುದಾದ್ದರೆ, ಇದರ ಜವಾಬ್ದಾರಿ ಯಾರದ್ದಾಗಿರುತ್ತದೆ" ಎಂದು ಪ್ರಶ್ನೆ ಕೇಳಿರುತ್ತೇನೆ. ಅದಕ್ಕೆ, "ಹಿರಿಯ ನಾಗರಿಕರ ಅಧಿನಿಯಮಾನುಸಾರ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಅಧಿನಿಯಮದ ಅನುಷ್ಠಾನ, ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಹೊಂದಿರುತ್ತಾರೆ" ಎಂದು ಉತ್ತರ ನೀಡಿರುತ್ತಾರೆ. ಈ ಬಗ್ಗೆ ನೀಡಿರುವ ಉತ್ತರ ಸರಿಯಾಗಿದೆ. ಆದರೆ, ಅವರು ಸದರಿ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆಯೇ ಇಲ್ಲವೇ ಎಂಬುದನ್ನು inventory ಮೂಲಕ ತನಿಖೆ ಮಾಡಿಸಬೇಕು. ಏಕೆಂದರೆ, ಇವೊತ್ತಿನ ದಿವಸ ಹಿರಿಯ ನಾಗರಿಕರು ಅಥವಾ ವಿಕಲಚೇತನರು ಇರಬಹುದು ಅವರು ಸಮಾಜದ ಕಟ್ಟಕಡೆಯ ವ್ಯಕ್ತಿಗಳಾಗಿರುತ್ತಾರೆ. ಹಾಗಾಗಿ, ಈ ವಿಷಯದಲ್ಲಿ ಇಲಾಖೆಯ ಜವಾಬ್ದಾರಿ ಪಾಲನೆಯಾಗುತ್ತಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ದಯಮಾಡಿ ಪರಿಶೀಲನೆ ಮಾಡಬೇಕು. ಅದನ್ನು ಒಂದು ಕಾಲಮಿತಿಯಲ್ಲಿ ಅಂದರೆ, ಕನಿಷ್ಠ ಪಕ್ಷ 1 ತಿಂಗಳು, 3 ತಿಂಗಳು ಅಥವಾ 6 ತಿಂಗಳ ಅವಧಿಯಲ್ಲಿ ಬೆಂಗಳೂರಿನಲ್ಲಿ ಇಲಾಖೆಯ ಮುಖ್ಯಸ್ಥರು ಇರುತ್ತಾರೆ ಅವರ ಮುಖಾಂತರ ಈ ಕಾರ್ಯಕ್ರಮಗಳ ಅನುಷ್ಠಾನ ಆಗುತ್ತಿದೆಯೇ ಎನ್ನುವುದನ್ನು ಸರ್ಕಾರ ಪಾಲನೆ ಮಾಡಬೇಕು. ಇದರ ಜೊತೆಗೆ, "ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016ರ ಅನುಸಾರ ರಾಜ್ಯ ಆಯುಕ್ತರು, ಸದರಿ ಅಧಿನಿಯಮದ ಅನುಷ್ಠಾನ ಹಾಗೂ ಮೇಲ್ವಿಚಾರಣೆ ಜವಾಬ್ದಾರಿಯನ್ನು ಹೊಂದಿರುತ್ತಾರೆ" ಎಂದು ಉತ್ತರ ನೀಡಿರುತ್ತಾರೆ.

(ಮುಂದು)

**(1199) 21.12.2021 11.50 YL-AK** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಗೋವಿಂದರಾಜು (ಮುಂದು):-**

ಆದರೆ, ಕಳೆದ 2-3 ವರ್ಷಗಳಿಂದ ರಾಜ್ಯ ಆಯುಕ್ತರ ಹುದ್ದೆ ನೇಮಕ ಕುರಿತು ಸರ್ಕಾರದ ಗಮನಕ್ಕೆ ಬಂದಿದ್ದರೂ ಸಹಿತ ಇದುವರೆವಿಗೂ ಆಯುಕ್ತರನ್ನು ನೇಮಕ ಮಾಡಿಲ್ಲ. ಸಕ್ಷಮ ಪ್ರಾಧಿಕಾರದನ್ವಯ ಅವರ ದೂರುಗಳನ್ನು ಕೇಳುವವರು ಯಾರು? ದಯವಿಟ್ಟು ಇದರ ಕಡೆ ಗಮನಹರಿಸಬೇಕು. ಮಾನ್ಯ ಸಚಿವರು ಏನು ಹೇಳಿದ್ದಾರೆ ಅದರ ಪ್ರಕಾರ ಪಾಲನೆಯಾದರೆ, ಯಾರಿಗೂ ಸಮಸ್ಯೆ ಇರುವುದಿಲ್ಲ. ಆದರೆ, ಅದು ಪಾಲನೆ ಆಗುತ್ತಿಲ್ಲ. ವರ್ಷಾನುಗಟ್ಟಲೆ ಕಳೆದರೂ ಸಹ ಹಿರಿಯ ನಾಗರಿಕರಿಗೆ ಮತ್ತು ವಿಕಲಚೇತನರಿಗೆ ಈ ವ್ಯಾಜ್ಯಗಳು ಇತ್ಯರ್ಥವಾಗುತ್ತಿಲ್ಲ. ಸಕ್ರಮ ಪ್ರಾಧಿಕಾರ ಎಂದು ಏನು ಹೇಳುತ್ತಾರೆ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅದರ ರೀತ್ಯಾ 30 ದಿವಸಗಳೊಳಗೆ ಇತ್ಯರ್ಥಗೊಳಿಸಬೇಕೆಂದು ಹೇಳುತ್ತಾರೆ, ಅದರ ಪ್ರಕಾರ 30 ದಿವಸಗಳು ಮಾತ್ರವಲ್ಲ, 300 ದಿವಸಗಳು ಕಳೆದರೂ ಸಮಸ್ಯೆ ಇತ್ಯರ್ಥವಾಗುತ್ತಿಲ್ಲ. ಇದಕ್ಕೆ ಕೂಡಲೇ ಆಯುಕ್ತರನ್ನು ನೇಮಕ ಮಾಡಬೇಕು. ಕಾಲಕಾಲಕ್ಕೆ ಪರಿಶೀಲನೆ ಮಾಡಿ, ಬಹಳ ಬೇಗ ಅವರುಗಳ ವ್ಯಾಜ್ಯಗಳು ಇತ್ಯರ್ಥಗೊಳಿಸಲು ಕಾಯ್ದೆಯಲ್ಲಿ ಯಾವ ರೀತಿ ಅವಕಾಶ ಇದೆ, ಅದರ ಪ್ರಕಾರ ವ್ಯಾಜ್ಯಗಳನ್ನು ಇತ್ಯರ್ಥಗೊಳಿಸಬೇಕೆಂದು ಸದನದ ಮೂಲಕ ಮಾನ್ಯ ಸಚಿವರಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಎಂ.ನಾರಾಯಣಸ್ವಾಮಿಯವರು ಕೇಳಿದಂತಹ ಪ್ರಶ್ನೆಯ ಜೊತೆಗೆ ಮಾನ್ಯ ಗೋವಿಂದರಾಜುರವರು ತಂದಿರುವಂಥ ಅಂಗವಿಕಲಚೇತನರ ವ್ಯಾಜ್ಯಗಳನ್ನು ಪೂರ್ಣಗೊಳಿಸಲು ನಿಗದಿಗೊಳಿಸಿರುವ ಅವಧಿ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಮಾನ್ಯ ಸದಸ್ಯರು ಈಗಾಗಲೇ ಹೇಳಿದ ಹಾಗೆ, ಯಾವ ರೀತಿ ನ್ಯಾಯವನ್ನು ಒದಗಿಸುವ ನಿಟ್ಟಿನೊಳಗೆ ಸಾರ್ವಜನಿಕ ಅಭಿಯೋಜಕರನ್ನು ನೇಮಿಸಿ ಅಲ್ಲಿಂದಲೇ ಇತ್ಯರ್ಥಪಡಿಸಲಾಗುವುದು. ಅಷ್ಟೇ ಸಮಾನವಾಗಿ ಅಂಗವಿಕಲಚೇತನ ಆಯುಕ್ತರಿಂದ ಈ ಸಮಸ್ಯೆಯನ್ನು ಇತ್ಯರ್ಥಗೊಳಿಸುವಂಥ ಕೆಲಸ ಮಾಡಲಾಗಿದೆ. ಮಾನ್ಯ ಸದಸ್ಯರೇ ಹೇಳಿದ ಹಾಗೆ ಏನೇನು ಲೋಪಗಳಿದ್ದು, ಹಾಗೆಯೇ ಬಾಕಿ ಉಳಿದಿರುವ ವ್ಯಾಜ್ಯಗಳನ್ನು ಗಮನಕ್ಕೆ ತಂದಿದ್ದಾರೆ, ಅದನ್ನು ಎರಡು-ಮೂರು ತಿಂಗಳುಗಳೊಳಗೆ ಜಿಲ್ಲಾವಾರು ಸಹಾಯಕ ಆಯುಕ್ತರ ಮತ್ತು ಆಯುಕ್ತರ ಹತ್ತಿರ ಇರುವಂಥ ಎಲ್ಲಾ ವರದಿಗಳನ್ನು ತರಿಸಿಕೊಂಡು ಆದಷ್ಟು ಬೇಗ ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರಕ್ಕೆ ಒತ್ತಾಯ ಮಾಡುತ್ತದೆ. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಹಾಗೂ ಜಿಲ್ಲಾಧಿಕಾರಿಗಳ ಮೂಲಕ ಎಲ್ಲಿಯೂ ಈ ವ್ಯಾಜ್ಯಗಳು ಬಾಕಿ ಉಳಿಯದಂತೆ ಇತ್ಯರ್ಥಗೊಳಿಸಬೇಕೆಂದು ಸರ್ಕಾರವು ಸ್ಪಷ್ಟವಾಗಿ ತಿಳಿಸುತ್ತದೆ. ಮಾನ್ಯ ಸದಸ್ಯರು ಹೇಳಿದ ಹಾಗೆ, ನಾನು ಸಹ ಆ ವರದಿಯನ್ನು ತರಿಸಿ, ಮಾನ್ಯ ಸದಸ್ಯರಿಗೆ ಸಲ್ಲಿಸಲಾಗುವುದು.

**ಶ್ರೀ ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ವಿಶೇಷ ನ್ಯಾಯಾಲಯವನ್ನು ಸ್ಥಾಪನೆ ಮಾಡಿ, ಸಾರ್ವಜನಿಕ ಅಭಿಯೋಜಕರನ್ನು ನೇಮಿಸಲು ಅವಕಾಶ ಇದೆ ಎಂದು ಹೇಳಿದ್ದು, ಅದನ್ನು ಮಾಡಲಾಗಿದೆಯೇ ಎಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಲು ಬಯಸುತ್ತೇನೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾಪತಿಯವರೇ, ಸರ್ಕಾರಿ ಅಭಿಯೋಜಕರನ್ನು ನಿಯುಕ್ತಿಗೊಳಿಸುವಂಥ ಕೆಲಸವು ನಡೆಯುತ್ತದೆ. ಅದಕ್ಕೆ parallel ಆಗಿ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ವಿಕಲಚೇತನರ ಆಯುಕ್ತರು ಏನಿದ್ದಾರೆ, ಅವರು ಆ ಕೆಲಸವನ್ನು ಮಾಡುತ್ತಾರೆ. ಹಾಗಾಗಿ ಎರಡೂ ಕಡೆಯಿಂದ ವರದಿಯನ್ನು ತರಿಸಿಕೊಂಡು, ...

**ಶ್ರೀ ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, 30 ಜಿಲ್ಲೆಗಳಲ್ಲಿಯು ವಿಶೇಷ ನ್ಯಾಯಾಲಯ ಸ್ಥಾಪನೆ ಆಗಿದೆಯೇ?

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಯವರೇ, ಆಗಿದೆ.

**ಪ್ರಶ್ನೆ ಸಂಖ್ಯೆ 951**

**ಸಭಾಪತಿಯವರು:-** ಮಾನ್ಯ ಪಿ.ಆರ್.ರಮೇಶ್‌ರವರ ಪ್ರಶ್ನೆ ಸಂಖ್ಯೆ 951 ಕ್ಕೆ ಮಾನ್ಯ ಸಚಿವರು ಕಾಲಾವಕಾಶವನ್ನು ಕೇಳಿದ್ದಾರೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಎಷ್ಟು ದಿವಸಗಳ ಕಾಲ ಸಮಯವನ್ನು ಕೇಳುತ್ತಾರೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೆ, ಸದನ ಮುಗಿಯುವುದರೊಳಗೆ ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರವನ್ನು ತರಿಸಿ ಕೊಡಿ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದ ವಿಷಯವಾಗಿದೆ. ನಮ್ಮ ರಾಜ್ಯಕ್ಕೆ ಸಣ್ಣ ಕೈಗಾರಿಕೆಯಿಂದ ಬರುತ್ತಿರುವಂಥ ಆದಾಯ ಇಲ್ಲದೇ ಸಣ್ಣ ಕೈಗಾರಿಕೆಗಳು ಸಂಪೂರ್ಣವಾಗಿ ಕುಸಿಯುತ್ತಿದೆ. ಇದೇ ರೀತಿ ಮುಂದುವರೆದರೆ ನಾನು ಗಲಾಟೆ ಮಾಡಬೇಕಾಗುತ್ತದೆ.

**ಸಭಾಪತಿಯವರು:-** ಆ ರೀತಿ ಮಾಡುವುದು ಬೇಡ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಬಹಳ ಅರ್ಥಪೂರ್ಣವಾಗಿದೆ, ಸದನ ಮುಗಿಯುವುದರೊಳಗೆ ಉತ್ತರವನ್ನು ತರಿಸಿಕೊಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೆ ಎರಡು ದಿವಸ ನೋಡಿ, ಮತ್ತೊಮ್ಮೆ ಚುಕ್ಕೆ ಗುರುತಿನ ಪ್ರಶ್ನೆಯ ಮೂಲಕ ತರಿಸಬೇಕಾಗುತ್ತದೆ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ 919**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ|| ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿರುವ ಒಟ್ಟು ಕೊಳವೆ ಬಾವಿಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಲಭ್ಯವಿರುವ ಜಲ ಮೂಲ ಯಾವ ಹಂತಗಳಲ್ಲಿ ದೊರೆಯುತ್ತಿದೆ; ಎನ್ನುವಂಥ ಪ್ರಶ್ನೆಯನ್ನು ಕೇಳಿದ್ದೆನು. ಅದಕ್ಕೆ ಮಾನ್ಯ ಸಚಿವರು 2013-14ನೇ ಸಾಲಿನ ಚಿತ್ರಣವನ್ನು ನೀಡಿದ್ದು, ಅದರಲ್ಲಿ 1216000 ಬಾವಿ ಮತ್ತು ಕೊಳವೆಬಾವಿಗಳು ಇರುತ್ತವೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಅವರು ನೀಡಿರುವ ಚಿತ್ರಣದ ಪ್ರಕಾರ ಕಳೆದ 6 ವರ್ಷಗಳ ಅಂಕಿಸಂಖ್ಯೆಯೇ ಇಲ್ಲ. ನಮ್ಮ ಸರ್ಕಾರ ಅಧಿಕಾರದಲ್ಲಿದ್ದು, ನಮ್ಮ ಸರ್ಕಾರ, ನಮ್ಮ ಇಲಾಖೆ ಏನೇನು ಕೆಲಸಗಳನ್ನು ಮಾಡಿದ್ದೆ ಎಂಬುದನ್ನು ತಿಳಿದುಕೊಳ್ಳುವ ಅವಕಾಶವೇ ನನಗೆ ಸಿಕ್ಕಿಲ್ಲ. ಜೊತೆಗೆ ನೀರಿನ ಲಭ್ಯತೆಗೆ ಸಂಬಂಧಿಸಿದಂತೆ ಮಾಹಿತಿ ನೀಡುವಾಗ ಸ್ಪಷ್ಟವಾಗಿ ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ರಾಮನಗರ ಮತ್ತು ತುಮಕೂರು ಭಾಗಗಳಲ್ಲಿ ಮೀಟರ್‌ಗಳಲ್ಲಿ; ಅಂದರೆ 250 ಮೀಟರ್‌ಗಿಂತ ಜಾಸ್ತಿ ಎಂದರೆ, ಅದು 1000 ಅಡಿಗಿಂತ ಮೇಲೆ ಇರುತ್ತದೆ. 1000 ಅಡಿಗಿಂತ ಮೇಲಕ್ಕೆ ಅಂತರ್ಜಲವನ್ನು ತೆಗೆಯಬೇಕಾದರೆ, ಒಬ್ಬ ರೈತನಿಗೆ ಒಂದು ಮೋಟಾರ್ ಅಳವಡಿಸಬೇಕಾದರೆ 5.00 ಲಕ್ಷ ರೂಪಾಯಿ ಬರುತ್ತದೆ ಹಾಗೂ ಸರಿಯಾದ ಗುಣಮಟ್ಟ ಇಲ್ಲದ ಎಲೆಕ್ಟ್ರಿಸಿಟಿ ಮತ್ತು ಸರಾಗವಾಗಿ ವಿದ್ಯುತ್ ಸರಬರಾಜು ಆಗದೇ ಇರುವುದರಿಂದ ಯಾವಾಗಲೂ ಮೋಟಾರ್ ಸುಟ್ಟು ಹೋಗುತ್ತದೆ. ಒಬ್ಬ ರೈತ ಮೋಟಾರ್ ಅಳವಡಿಸಿ, ಬೆಳೆಯನ್ನು ತೆಗೆಯಬೇಕಾದರೆ, ಸರ್ಕಾರ ನೀಡುವಂಥ ಎಲ್ಲಾ ಯೋಜನೆಯ ಪರಿಹಾರ ಅದಕ್ಕೆ ಹೋಗುತ್ತದೆ. ಆ ಕಾಳಜಿಯಿಂದಲೇ ನಾನು ಆ ಬಗ್ಗೆ ಪ್ರಶ್ನೆಯನ್ನು ಕೇಳಿರುವುದು. ಅಂತರ್ಜಲ ಯೋಜನೆಗಳಿದ್ದು, ಯಾವ್ಯಾವ ಯೋಜನೆಗೆ ಸರ್ಕಾರ ಆದ್ಯತೆ ನೀಡಲಾಗಿದೆ? ಹಾಗೂ ಸರ್ಕಾರ ಜಾರಿಗೊಳಿಸಿರುವ ಅಂತರ್ಜಲ ಪೂರ್ಣ ಯೋಜನೆಗೆ ಅತಿಯಾದ ಆಳದ ಕೊಳವೆಬಾವಿಗಳು ಮಾರಕವಾಗಿದೆಯೇ ಎಂದು ಪ್ರಶ್ನೆಯನ್ನು ಕೇಳಿದ್ದೆನು. ಮಾನ್ಯ ಸಚಿವರು ನೀಡಿರುವ ಉತ್ತರವನ್ನು ಈಗಾಗಲೇ ಓದಿಕೊಂಡಿದ್ದು, ಅದು ಮಾರಕವೇ ಅಥವಾ ಪೂರಕವೇ ಎಂಬುದನ್ನು ಮಾನ್ಯ ಸಚಿವರೆ ತಿಳಿಸಬೇಕು. ಅಧಿಕಾರಿಗಳು ಈ ರೀತಿಯಾಗಿ ಉತ್ತರ ನೀಡಿದರೆ, ಇದು ಗೋಕುಲಾಷ್ಟಮಿಗೂ ಇಮಾಂಸಾಬಿಗೂ ಸಂಬಂಧ ಇಲ್ಲದಂತಾಗಿದೆ. ಅವರು ನೀಡಿರುವುದು ಉತ್ತರವೇ ಅಲ್ಲ ಅನಿಸುತ್ತದೆ. ಹಾಗೆಯೇ ಭೂಗರ್ಭದಲ್ಲಿ ಇತ್ತೀಚೆಗೆ ಘಟಿಸುತ್ತಿರುವ ಗೋಚರ-ಅಗೋಚರ ಭೂಕಂಪನಗಳನ್ನು ಮಾಪನ ಮಾಡಲಾಗುತ್ತಿದೆಯೇ ಎಂದು ಪ್ರಶ್ನೆಯನ್ನು ಕೇಳಿದ್ದೆನು. ಜನವಸತಿ ಪ್ರದೇಶಗಳಲ್ಲಿ ಭೂಕಂಪನ ಸಂಭವಿಸಿ, ಆ ಜನರು ಹೊರಗಡೆ ಓಡಿ ಬರುವಂತಹ ಘಟನೆ ಪುಟ್ಟ-ಪುಟ್ಟ ಬಡವರ ಮನೆಗಳಲ್ಲಿ ನಡೆಯುತ್ತಿದ್ದೆ. ಏಕೆಂದರೆ, ಭೂಗರ್ಭ ರಚನೆಯಲ್ಲಿ ಸ್ವತಃ ನೈಸರ್ಗಿಕ ವಿಕೋಪಗಳು ನಡೆಯುತ್ತಿರುವುದು ಒಂದು ಕಡೆಯಾದರೆ, ಆಗಾಗ ಭೂಮಿ ರಚನೆಯಲ್ಲಿ ಏನಾಗುತ್ತಿದೆ, ನಿಸರ್ಗಕ್ಕೆ ಏನು ತೊಂದರೆಯಾಗುತ್ತಿದೆ ಎಂಬುದನ್ನು ನೋಡಬೇಕಲ್ಲವೇ? ಇತ್ತೀಚೆಗೆ ಅರ್ಜಿ ಸಮಿತಿ ಮೂಲಕ ಕಬಿನಿ ಜಲಾಶಯದ ಬಳಿ ಇರುವ ನಾಗರಹೊಳೆ ಮತ್ತು ಬಂಡೀಪುರ ರಾಷ್ಟ್ರೀಯ ಉದ್ಯಾನವನಕ್ಕೆ ಭೇಟಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನೀಡಿದ್ದೆವು. ನನಗೆ ಅಲ್ಲಿ ಖುಷಿಯಾಗಿದ್ದು ಏನೆಂದರೆ, ಅರಣ್ಯ ಇಲಾಖೆಯವರು 'ಎಷ್ಟೋ ಜೀವಿಗಳು ಹೋಗುತ್ತವೆ ಎಂದು ಮನುಷ್ಯ ಭೂಮಿಗೆ ಕಾಲು ಇಡಬೇಕಾದರೆ ಆ ಭೂಮಿಯ ಕ್ಷಮಾಪಣೆಯನ್ನು ಕೋರಬೇಕಾಗುತ್ತದೆ' ಎನ್ನುವಂಥ ಮಾತನ್ನು ಹೇಳಿದ್ದರು. ನೆಲ, ಜಲ, ಮರಗಿಡಗಳನ್ನು ಪೂಜೆ ಮಾಡುವಂಥ ಪೂಜ್ಯ ಭಾವನೆ ಇತ್ತು. ಆದರೆ, ಇವತ್ತು ಭೂಮಿಯ ಮೇಲೆ ಅತ್ಯಾಚಾರ ನಡೆಯುತ್ತಿದೆ. ವೈಜ್ಞಾನಿಕವಾಗಿ mild ಸ್ಫೋಟಕಗಳನ್ನು ಎಲ್ಲಿ ಉಪಯೋಗಿಸಬೇಕು, ದೊಡ್ಡ ಸ್ಫೋಟಕಗಳನ್ನು ಎಲ್ಲಿ ಉಪಯೋಗಿಸಬೇಕು, ಅದರಿಂದ ಆಗುವಂಥ ತೊಂದರೆಗಳೇನು ಎಂಬುದೆಲ್ಲವನ್ನೂ ಕೇಳಿ, ಭೂಮಿಯ ರಕ್ಷಣೆ ಮತ್ತು ಕಾಳಜಿಯಿಂದಾಗಿ ಮಾನ್ಯ ಸಚಿವರಲ್ಲಿ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂಥ 3 ಪ್ರಶ್ನೆಗಳಾದ (ಅ) ರಾಜ್ಯದಲ್ಲಿರುವ ಒಟ್ಟು ಕೊಳವೆ ಬಾವಿಗಳ ಸಂಖ್ಯೆ ಎಷ್ಟು; (ಆ) ಸರ್ಕಾರವು ಜಾರಿಗೊಳಿಸಿರುವ ಅಂತರ್ಜಲ ಪೂರ್ಣ ಯೋಜನೆಗೆ ಅತಿಯಾದ ಆಳದ ಕೊಳವೆ ಬಾವಿಗಳು ಮಾರಕವಾಗಿವೆ; (ಇ) ಭೂಗರ್ಭದಲ್ಲಿ ಇತ್ತೀಚೆಗೆ ಘಟಿಸುತ್ತಿರುವ ಗೋಚರ-ಅಗೋಚರ ಭೂಕಂಪನಗಳನ್ನು ಮಾಪನ ಮಾಡಲಾಗುತ್ತಿದೆಯೇ ಎಂಬುದಾಗಿದೆ. ನನ್ನ ಇಲಾಖೆಗೆ ಸಂಬಂಧಪಡುವುದಿಲ್ಲ. ಆದರೂ ನಾನು ಸಂಬಂಧಪಟ್ಟ ಇಲಾಖೆಯಿಂದ ಉತ್ತರವನ್ನು ತರಿಸಿ, ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ ಉತ್ತರ ನೀಡಲು ಪ್ರಯತ್ನ ಮಾಡಿದ್ದೇನೆ. Minor Irrigation and Ground Water Development Department ದವರು ಕೊಳವೆಬಾವಿಗಳು ಸಂಖ್ಯೆ ಎಷ್ಟಿವೆ ಎಂಬುದರ ಕುರಿತು 2013-14ನೇ ಸಾಲಿನ Survey Report ನ್ನು ಸಲ್ಲಿಸಿದ್ದು, ಅದನ್ನು ನಾನು ಮಾನ್ಯ ಸದಸ್ಯರಿಗೆ ಸಲ್ಲಿಸಿದ್ದೇನೆ. ಹಾಗೆಯೇ ಅಂತರ್ಜಲಕ್ಕೆ ಸಂಬಂಧಿಸಿದಂತೆ ಪ್ರಶ್ನೆಯನ್ನು ಕೇಳಲಾಗಿದ್ದು, ಭೂಪದರಗಳಲ್ಲಿ Shallow Aquifer and Deeper Aquifer ಎಂದು ಎರಡು ಪದರಗಳಲ್ಲಿ ನೀರು ಇರುತ್ತವೆ ಎಂದು ತಿಳಿಸಿರುವ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಸಲ್ಲಿಸಿದ್ದೇನೆ. ಅದರ ಜೊತೆಗೆ ಇತ್ತೀಚೆಗೆ ಘಟಿಸುತ್ತಿರುವ ಗೋಚರ-ಅಗೋಚರ ಭೂಕಂಪನಗಳನ್ನು ಮಾಪನ ಮಾಡಲಾಗುತ್ತಿದೆಯೇ ಎನ್ನುವ ಪ್ರಶ್ನೆಗೆ ಸಂಬಂಧಿಸಿದಂತೆ, Seismometer ಗಳನ್ನು ಎಲ್ಲೆಲ್ಲಿ ಅಳವಡಿಸಿರುತ್ತಾರೆ, ಅದರ ಮೇಲೆಯೇ seismic waves ನ್ನು count ಮಾಡಿ ಅದರ ಮೇಲೆ ವರದಿಯನ್ನು ಸಲ್ಲಿಸುತ್ತಾರೆ. ಹೀಗಾಗಿ, ಕಂದಾಯ ಇಲಾಖೆಯ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದವರು ಅದನ್ನು ನೋಡಿಕೊಳ್ಳುತ್ತಾರೆ. 4ನೇ ಪ್ರಶ್ನೆ ನನ್ನ ಇಲಾಖೆಗೆ ಸಂಬಂಧಿಸಿದ್ದು, ಕಲ್ಲು ಗಣಿಗಾರಿಕೆದಾರರಿಗೆ ವೈಜ್ಞಾನಿಕವಾದ ಭೂಗರ್ಭ ರಚನೆ ಕುರಿತು ಮಾಹಿತಿ ನೀಡಲಾಗುತ್ತಿದೆಯೇ; ಎಂದು ಪ್ರಶ್ನೆ ಕೇಳಲಾಗಿತ್ತು. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಎಸ್.ಎಲ್.ಪಿ. ಸಂಖ್ಯೆ 19628-19629/2009, ದಿನಾಂಕ: 27.02.2012ರ (ದೀಪಕ್ ಕುಮಾರ್ v/s ಹರಿಯಾಣ ರಾಜ್ಯ) ಆದೇಶದ ಪ್ರಕಾರ ನಾವಾದರೂ ಸಹ ಪರಿಸರದ ಅನುಮತಿ ಪಡೆಯುತ್ತೇವೆ. ಕ್ವಾರಿಯಿಂಗ್ ಪ್ಲಾನ್ ಮತ್ತು ಮೈನ್ ಕ್ಲೋಷರ್ ಪ್ಲಾನ್ ಅವಶ್ಯವಿರುತ್ತದೆ. ಇದೆಲ್ಲವನ್ನಿಟ್ಟುಕೊಂಡು ಗಣಿಗಾರಿಕೆ ನಡೆಸಲಾಗುತ್ತಿದೆ. ನೇರವಾಗಿ ಅರ್ಜಿ ಸಲ್ಲಿಸಿದ್ದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೂಡಲೇ ಕ್ವಾರಿಯಿಂಗ್ ಪ್ಲಾನ್ ಮತ್ತು ಮೈನ್ ಕ್ಲೋಷರ್ ಪ್ಲಾನ್ ಇಲ್ಲದೇ ಗಣಿಗಾರಿಕೆ ನಡೆಸಲು ಅವಕಾಶ ನೀಡಲು ಸಾಧ್ಯವಿಲ್ಲ. ನಿಯಮಗಳನ್ನು ಪಾಲಿಸಿಯೇ ಮಾಡಲಾಗುತ್ತದೆ. 5ನೇ ಪ್ರಶ್ನೆಯಾದ ವೈವಿಧ್ಯಮಯದ ಗ್ರಾನೈಟ್ ಶಿಲಾ ಸಂಪತ್ತು ಎಷ್ಟಿದೆ; ಎನ್ನುವುದಕ್ಕೆ ಸಂಬಂಧಿಸಿದಂತೆ, ಈಗಾಗಲೇ ಮಾನ್ಯ ಸದಸ್ಯರಿಗೆ ಮಾಹಿತಿಯಲ್ಲಿ ತಿಳಿಸಲಾಗಿದೆ. ರಫ್ತಿನಿಂದ ರಾಜ್ಯದ ಬೊಕ್ಕಸಕ್ಕೆ ಬಂದ ಲಾಭವೆಷ್ಟು; ಎಂದು ಪ್ರಶ್ನೆಯಲ್ಲಿ ಕೇಳಿದ್ದು, ಒಟ್ಟಾರೆಯಾಗಿ ಸ್ಥಳೀಯವಾಗಿ ಮಾರಾಟ ಮಾಡಿರುವ ವಿವರವನ್ನು ಮಾನ್ಯ ಸದಸ್ಯರಿಗೆ ನೀಡಲಾಗಿದೆ. ಸ್ಥಳೀಯವಾಗಿ ಮಾರಾಟ ಮಾಡಿರುವುದು 1272759 ಪ್ರಮಾಣ, ಕ್ಯೂಬಿಕ್ ಮೀಟರ್‌ಗೆ ರಾಜಧನ ಪಡೆದಿರುವುದು 236.87 ಕೋಟಿ ರೂಪಾಯಿ. ರಫ್ತು ಮಾಡಿರುವ 489138 ಕ್ಯೂಬಿಕ್ ಮೀಟರ್‌ಗೆ ರಾಜಧನ ರೂ.136.11 ಕೋಟಿ. ಒಟ್ಟು 1761897 ಕ್ಯೂಬಿಕ್ ಮೀಟರ್‌ಗೆ ರೂ.372.98 ಕೋಟಿ ರಾಜಧನವನ್ನು ಸರ್ಕಾರ ಪಡೆದಿದೆ ಎನ್ನುವ ಮಾತನ್ನು ಹೇಳಲು ಇಚ್ಛಿಸುತ್ತೇನೆ. 6ನೇ ಪ್ರಶ್ನೆಯಲ್ಲಿ ತೆರಿಗೆ-ರಾಜಧನ ಸೋರಿಕೆಯಿಂದ ಬೊಕ್ಕಸಕ್ಕೆ ನಷ್ಟ ಸಂಭವಿಸಿದೆಯೇ; ಎಲ್ಲೆಲ್ಲಿ, ಯಾವ ವರ್ಷಗಳಲ್ಲಿ? ಎಂದು ಕೇಳಿದ್ದು, 1994ರ ನಿಯಮ 36 ರಂತೆ ಯಾವುದೇ ಮೆಟೀರಿಯಲ್ ಕ್ವಾರಿಯಿಂದ ಹೋಗಬೇಕಾದರೆ, ರಾಜಧನವನ್ನು ತುಂಬಿಸಿಕೊಂಡು, ಅಲ್ಲಿಂದ permit ಪಡೆದ ಮೇಲೆ ಗಾಡಿ ಮುಂದೆ ಹೋಗುತ್ತದೆ. ಇಲ್ಲದಿದ್ದರೆ, ಗಾಡಿ ಮುಂದೆ ಹೋಗುವುದಿಲ್ಲ. ಸಾಧ್ಯವಾದಷ್ಟು ಕಾನೂನಿನಡಿಯಲ್ಲಿ ಮಾಡುವಂಥ ನಿಯಮಗಳಿವೆ. ಜೊತೆಗೆ ಬಿಲ್ಡಿಂಗ್ ಸ್ಟೋನ್‌ನಲ್ಲಿ ಸ್ವಲ್ಪ ವ್ಯತ್ಯಾಸ ಇದ್ದು, ಅದಕ್ಕೂ ಸಹ streamline ಗೆ ತರಬೇಕಾದರೆ, ನಿಯಮಗಳಲ್ಲಿ ಬದಲಾವಣೆ ಮಾಡಿಕೊಂಡು ಈ ರಾಜಧನ ಎಲ್ಲಿಯೂ ಸೋರಿಕೆ ಆಗದ ರೀತಿ ಹೆಚ್ಚಿನ ಪ್ರಯತ್ನವನ್ನು ಮಾಡಲಾಗುತ್ತಿದೆ.

(ಮುಂದು)

**(1200) 21-12-2021 /12.00 / SK-AK** **(ಸಭಾಪತಿಯವರ ಉಪಸ್ಥಿತಿ)**

**ಡಾ. ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ವೈಜ್ಞಾನಿಕವಾಗಿ ಗಣಿಗಾರಿಕೆ ಮಾಡುವುದು ಬಹಳ ಸರಳವಾದದ್ದು. ಭೂಮಿಯ ಮೇಲಿನ ಕಲ್ಲನ್ನು ಮತ್ತು ಭೂಗರ್ಭದೊಳಗೆ ಇರುವಂತಹ ಕಲ್ಲನ್ನು ಯಾವ ರೀತಿ ತೆಗೆಯಬೇಕು. ಆದರೆ ಕಾನೂನು ಖಂಡಿತ ಇದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಕಾನೂನು ಸ್ಪಷ್ಟವಾಗಿದೆ. ಆದರೆ ಅನುಷ್ಠಾನ ಮಾತ್ರ ಇಲ್ಲಿ ಸಮಸ್ಯೆಯಾಗಿದೆ. ಒಂದು ನಿರ್ಮಿತಿ ಕೇಂದ್ರದ ಮೂಲಕ ಸರ್ಕಾರಿ ಯೋಜನೆಗಳನ್ನು ಪ್ರಾರಂಭ ಮಾಡಲೇ ಬೇಕು. ಅದಕ್ಕೆ royalty ಅನ್ನು ಕಟ್ಟಲೇಬೇಕು. ರಸ್ತೆಯಲ್ಲಿ ಲಾರಿಗಳು ಹೆಚ್ಚು ಲೋಡ್ ಮಾಡಿಕೊಂಡು ಹೋಗುವಂತಹದ್ದು. ಕೋಟ್ಯಾಂತರ ರಸ್ತೆಗಳು ಹಾಳಾಗುತ್ತಿರುವುದರಿಂದ, ಮತ್ತೆ ಮತ್ತೆ ಹಣ ಕೊಡುವುದಕ್ಕೆ ಯಾವುದೇ ಸರ್ಕಾರವಿದ್ದರೂ ಕೂಡ ಸಾಧ್ಯವಾಗುವುದಿಲ್ಲ. ಅದು ಸರ್ಕಾರದ ಆಸ್ತಿ. ರಸ್ತೆಗಳನ್ನು ಸರ್ಕಾರದ ಆಸ್ತಿ ಎಂದು ಹೇಳಿ, ವಿಮೆ ಮಾಡಬೇಕಾದ ಸಂದರ್ಭ ಇವತ್ತು ಬಂದಿದೆ ಎಂದು ನಾನು ಹೇಳುತ್ತೇನೆ. ಅತಿವೃಷ್ಟಿಯಾಗಿ ರಸ್ತೆಗಳು ಹಾಳಾಗುತ್ತವೆ. ಅದರ ಜೊತೆಗೆ ಲಾರಿಗಳಲ್ಲಿ 29 ಟನ್ ಇರಬೇಕು ಎಂದು ಹೇಳಿದ್ದಾರೆ. ನಾನು ಹೇಳುವುದೇನೆಂದರೆ, ಯಾವುದೇ ಸರ್ಕಾರವಿರಲಿ, ಈ ಇಲಾಖೆ ಎಲ್ಲಿಯ ತನಕ ಪ್ರಾಮಾಣಿಕವಾಗಿ ಕಾನೂನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಪ್ರಾರಂಭ ಮಾಡುವುದಿಲ್ಲವೋ, 29 ಟನ್ ಬದಲಾಗಿ 42 ಟನ್‌ಗಳಷ್ಟು ಲಾರಿಗಳಲ್ಲಿ ಲೋಡ್ ಮಾಡಿಕೊಂಡು, ರಸ್ತೆಗಳ ಮೇಲೆ ಓಡಾಡುತ್ತೇವೆ. ನನ್ನ ಗ್ರಾಮದಲ್ಲಿ ರಸ್ತೆಯ ಮೇಲೆ ಲಾರಿ ಹೋಗಿರುವಂತಹ ರಸೀದಿಯ ಜೊತೆಗೆ ಗ್ರಾಮಸ್ಥರು ತೆಗೆದುಕೊಂಡಿರುವುದನ್ನು ನಾನು ಇಲ್ಲಿ ಕೊಡುತ್ತಿದ್ದೇನೆ. ಅದು ಸಾಧ್ಯವಿಲ್ಲ.ಉಪ ವಸ್ತುಗಳು ಕಾಡಿನಲ್ಲಿ ಏನು ಉತ್ಪಾದನೆಯಾಗುತ್ತದೆ. ಕಾಡಿನಲ್ಲಿ ಹಾಗೇ ಬಿಟ್ಟುಬಿಡುತ್ತಾರೆ. ಕಾಡು ಪ್ರಾಣಿಗಳಿಗೆ ಮಾರಕ ಮತ್ತು ಸಸ್ಯಗಳಿಗೆ ಮಾರಕವಾಗಿ, ಹುಲ್ಲು ಬೆಳೆಯವುದಿಲ್ಲ. ಇದನ್ನು ವೈಜ್ಞಾನಿಕವಾಗಿ ವಿತರಣೆ ಮಾಡುತ್ತಿಲ್ಲ. ನಾನು ಗ್ರಾನೈಟ್ ಬಗ್ಗೆ ಕೇಳಿದೆ. ಮಧ್ಯಮ ವರ್ಗದ ಜನರು ಗ್ರಾನೈಟ್ ಉಪಯೋಗಿಸುವುದಕ್ಕಾಗುವುದಿಲ್ಲವೇ, ನಮ್ಮ ರಾಜ್ಯದಲ್ಲಿನ ಹಾಸನ ಗ್ರೀನ್ ಗ್ರಾನೈಟ್, ಕೊಳ್ಳೆಗಾಲ ಬ್ಲ್ಯಾಕ್ ಗ್ರಾನೈಟ್‌ನ್ನು ಜೆಟ್ ಬ್ಲ್ಯಾಕ್ ಗ್ರಾನೈಟ್ ಎಂದು ಕರೆಯುತ್ತೇವೆ. ಅದು ವಿದೇಶಕ್ಕೆ ಹೋಗುತ್ತದೆ. ನಮ್ಮ ಸುವರ್ಣ ವಿಧಾನ ಸೌಧದಲ್ಲಿ ಹಾಕಿರುವಂತಹ ಇಳಕಲ್ ಪಿಂಕ್ ಮತ್ತು ಇಳಕಲ್ ರೆಡ್ ಗ್ರಾನೈಟ್‌ಗಳು ತುಂಬಾ ಸುಂದರವಾಗಿದೆ. ಇದರ ಜೊತೆಗೆ ಹಾಸನ ಗ್ರೀನ್ ಮತ್ತು ಶಿರಾ ಗ್ರೀನ್ ಗ್ರಾನೈಟ್‌ಗಳು ಏನಿವೆ, ದಯವಿಟ್ಟು, ಮಧ್ಯಮ ವರ್ಗದವರಿಗೂ ಸಿಗುವ ರೀತಿ ಕಡಿಮೆ ಬೆಲೆಗೆ ಸಿಗುವಂತೆ ದೇಶೀಯ ಮಾರುಕಟ್ಟೆಯಲ್ಲಿ ಒದಗಿಸಬೇಕು. ಬರೀ ವಿದೇಶಕ್ಕೆ ಕಳುಹಿಸುವುದಲ್ಲ. ಅಪರಾಧ ಪ್ರಕರಣಗಳ ಸಂಖ್ಯೆಗಳನ್ನು ಕೊಟ್ಟಿದ್ದಾರೆ. 2018-19 ರಲ್ಲಿ ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ 41. ವಸೂಲಿ ಮಾಡಿರುವ ದಂಡ ರೂ. 3,754/-. ಆದರೆ 2020 ರಲ್ಲಿ ದಾಖಲಿಸಿರುವ ಮೊಕದ್ದಮೆಗಳು 40. ಆದರೆ ವಸೂಲಿ ಮಾಡಿರುವ ದಂಡ ರೂ. 26.74 ಲಕ್ಷಗಳು ಮಾತ್ರ. ಇದು ಹೇಗೆ ಎಂದು ಗೊತ್ತಾಗುತ್ತಿಲ್ಲ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಯವರೇ, ಲಾರಿಗಳು ಹೆಚ್ಚಿಗೆ ಲೋಡ್ ಮಾಡಿಕೊಂಡು ರಸ್ತೆಯಲ್ಲಿ ಅಡ್ಡಾಡುತ್ತಿವೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆರ್.ಟಿ.ಓ.ದಲ್ಲಿ ಜಿಲ್ಲಾ ಟಾಸ್ಕ್‌ಫೋರ್ಸ್ ಎನ್ನುವ ಒಂದು ಕಮಿಟಿಯೇ ಇದೆ. ಆರ್.ಟಿ.ಓ. ಜಿಲ್ಲಾ ಟಾಸ್ಕ್ ಫೋರ್ಸ್ ಕಮಿಟಿಯೇ ಇದೆ. ಎಲ್ಲಾ ಭಾಗದಲ್ಲಿ ಲಾರಿಗಳು ಹೋಗಬೇಕಾದರೆ, ಹೆಚ್ಚು ಕಡಿಮೆ ಆರ್.ಟಿ.ಓ., ಪೋಲಿಸರು check ಆಗಿ ಹೋಗುತ್ತವೆ. ಕೆಲವು ಸ್ಥಳೀಯ ಸಮಸ್ಯೆಗಳಿವೆ. ನಾನು ಇಲ್ಲವೆಂದು ಹೇಳುವುದಿಲ್ಲ. Building stones ಇರುವ ಲಾರಿ ಹೋಗುವಂತಹ ಸಂದರ್ಭದೊಳಗೆ 20 ಟನ್ ಎಂದು ಹೇಳಿರುತ್ತಾನೆ. 40 ಟನ್ ಲಾರಿನಲ್ಲಿ ಹಾಕಿಕೊಂಡು ಕ್ರಷರ್‌ನಲ್ಲಿ ಹೋಗುವಂತಹದ್ದು ಮತ್ತು ರಸ್ತೆಯನ್ನು ಹಾಳು ಮಾಡುವಂತಹದ್ದು ಇದೆ. ಅದಕ್ಕೆ ನಾವು ಬದಲಾವಣೆಯನ್ನು ತೆಗೆದುಕೊಂಡು ಬಂದು, ಒಟ್ಟಾರೆಯಾಗಿ, ಹೊಸ ನೀತಿಯನ್ನು ಮಾಡಿ, ಅಲ್ಲಿ ಎಲ್ಲಿಯೂ ಕೂಡ ಹೆಚ್ಚಿಗೆ ಲೋಡ್ ಹಾಗದೇ ಇರುವ ರೀತಿ ಮತ್ತು ಸೋರಿಕೆಯಾಗದ ರೀತಿಯಲ್ಲಿ ಅದನ್ನು ಮಾಡುವುದಕ್ಕೆ ನಾವು ಮಾಡುತ್ತೇವೆ. ಕೊನೆಯದಾಗಿ, ದಾಖಲಿಸಿರುವ ಮೊಕದ್ದಮೆಗಳ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಇನ್ನುಳಿದ ಮೊಕದ್ದಮೆಗಳಿಗೆ ದಂಡವನ್ನು ಕಟ್ಟಿಸಿಕೊಂಡು, ಬಿಟ್ಟಿರುತ್ತಾರೆ. ಹೀಗಾಗಿ ಸಂಖ್ಯೆ ಇದೆ.

**ಪ್ರಶ್ನೆ ಸಂಖ್ಯೆ 455**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ಬೀದಿ ಬದಿ ವ್ಯಾಪಾರಿಗಳ ಹಿತರಕ್ಷಣೆಗಾಗಿ ಸರ್ಕಾರವು ಯಾವುದಾದರೂ ಕಲ್ಯಾಣ ಯೋಜನೆಗಳನ್ನು ಕೈಗೊಂಡಿದೆಯೇ ಎಂಬ ಪ್ರಶ್ನೆಯನ್ನು ಕೇಳಿದ್ದೆ. ಕೇಂದ್ರ ಸರ್ಕಾರದಿಂದ ಪ್ರಧಾನ ಮಂತ್ರಿ ಆತ್ಮ ನಿರ್ಭರ್ ನಿಧಿ ಯೋಜನೆಯು ಪೂರ್ಣವಾಗಿ ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಪ್ರತಿ ಬೀದಿ ಬದಿ ವ್ಯಾಪಾರಿಗಳಿಗೆ ರೂ.10,000/- ಗಳಿಂದ ರೂ.20,000/- ಗಳವರೆಗೆ ಶೇಕಡ 7 ಬಡ್ಡಿಯಂತೆ ಸಾಲವನ್ನು ಕೊಡುತ್ತಿದೆ ಎಂದು ಮಾನ್ಯ ಸಚಿವರು ಉತ್ತರದಲ್ಲಿ ತಿಳಿಸಿದ್ದಾರೆ. ಶೇಕಡ 7 ಬಡ್ಡಿಯತೆ ಸಾಲ ಎಲ್ಲಾ ವ್ಯಾಪಾರಿಗಳಿಗೂ ಸಿಗುತ್ತದೆ. ಅವರು ಬೀದಿ ಬದಿ ವ್ಯಾಪರಸ್ಥರು. ಅವರಿಗೆ ನೆರವು ಇರುವುದಿಲ್ಲ ಮತ್ತು ಆಸ್ತಿಯೂ ಇರುವುದಿಲ್ಲ. ಅವರು ಬ್ಯಾಂಕಿಗೆ ಏನಾದರೂ ಹೋದರೆ, ಎನ್.ಓ.ಸಿ., ಯೂ ಸಿಗುತ್ತಿಲ್ಲ. ಮಾನ್ಯ ಸಚಿವರು ಸೂಕ್ಷ್ಮವಾಗಿ ಗಮನಿಸಬೇಕು. ಸಾಕಷ್ಟು ಜನ ಬೀದಿ ಬದಿ ವ್ಯಾಪಾರಸ್ಥರು ಯಾರದೇ ಅಂಗು ಇಲ್ಲದೇ, ಅವರು ವ್ಯಾಪಾರ ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ. ನಮ್ಮ ಮಾನ್ಯ ಕುಮಾರ ಸ್ವಾಮಿಯವರು ಸಮ್ಮಿಶ್ರ ಸರ್ಕಾರವಿದ್ದಾಗ, 'ಬಡವರ ಬಂಧು' ಎಂಬ ಕಾರ್ಯಕ್ರಮವನ್ನು ಯಾವುದೇ ಬಡ್ಡಿ ಇಲ್ಲದ ಹಾಗೇ ರೂ. 10,000/- ಗಳನ್ನು ಕೊಡುವಂತಹ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದರು ಮತ್ತು ಬಜೆಟ್‌ನಲ್ಲಿಯೂ ಕೂಡ ಘೋಷಣೆ ಮಾಡಿದ್ದರು. ಅದರ ಬಗ್ಗೆ ತಾವೂ ಏನು ಹೇಳಿಲ್ಲ.

**ಡಾ: ಸಿ.ಎನ್.ಅಶ್ವಥ್‌ನಾರಾಯಣ:-** ಮಾನ್ಯ ಸಭಾಪತಿಯವರೇ, ಇದಲ್ಲದೇ ರಾಜ್ಯ ಸರ್ಕಾರದಿಂದ ಒಂದು ಲಕ್ಷ ಆರವತ್ತೈದು ಸಾವಿರ ಚಿಲ್ಲರೆ ಜನ ವ್ಯಾಪಾರಿಗಳಿಗೆ ಎರಡು ಸಾವಿರ ರೂಪಾಯಿ ಕೊಡುವಂತಹದ್ದಾಗಿದೆ. ಇದರ ಜೊತೆಗೆ ಮಾರುಕಟ್ಟೆ ಅಭಿವೃದ್ಧಿ ಮತ್ತು ಹಲವಾರು ಕಾರ್ಯಕ್ರಮಗಳನ್ನು ಇವರಿಗೆ ವಿಸ್ತರಣೆ ಮಾಡುವಂತಹದ್ದಾಗುತ್ತಿದೆ. ಇದಲ್ಲದೇ ಸಾಮಾನ್ಯ ಎಂಟು ಕಾರ್ಯಕ್ರಮವನ್ನು ಬೀದಿ ಬದಿ ಇರುವ ವ್ಯಾಪಾರಿಗಳಿಗೆ ವಿಸ್ತರಣೆ ಮಾಡಲಾಗುತ್ತಿದೆ. ಗುರುತಿನ ಚೀಟಿ, ವೆಂಡಿಂಗ್ ಸರ್ಟಿಫಿಕೇಟ್, ವೆಂಡಿಂಗ್ ಮಾರ್ಕೆಟ್‌ಗಳೆಲ್ಲವನ್ನು ಮಾಡಿಕೊಡುವಂತಹದ್ದಾಗುತ್ತಿದೆ. ಬೀದಿ ಬದಿ ವ್ಯಾಪಾರಿಗಳಿಗೆ ಬ್ಯಾಂಕ್‌ನಲ್ಲಿ ಯಾವ ರೀತಿ ಸಾಲ ಸಿಗುತ್ತಿತ್ತು ಎಂಬ ಬಗ್ಗೆ ಮಾನ್ಯ ಸದಸ್ಯರಿಗೂ ಮತ್ತು ಎಲ್ಲರಿಗೂ ಗೊತ್ತಿರುವಂತಹ ವಿಚಾರವಾಗಿದೆ. ಅವರು ಮೀಟರ್ ಬಡ್ಡಿಯಲ್ಲಿ ಹಣವನ್ನು ಸಾಲವನ್ನು ತೆಗೆದುಕೊಳ್ಳುವಂತಹದ್ದಾಗುತ್ತಿತ್ತು. ಸಾಲವನ್ನು ತೆಗೆದುಕೊಂಡು ಬಂದು, ಬೆಳಗ್ಗೆ ವ್ಯಾಪಾರ ಮಾಡಿ ಬಂದಂತಹ ಹಣದಲ್ಲಿ ಸಾಲವನ್ನು ಕೊಟ್ಟವನಿಗೆ, ಶೇಕಡ 10 ರಷ್ಟು ಬಡ್ಡಿ ಹಣ ಕೊಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈಗ ಏನು ಮಾಡಿದ್ದೇವೆಂದರೆ, ರೂ. 10,000/- ಗಳನ್ನು ಪ್ರಾರಂಭದಲ್ಲಿ ಕೊಟ್ಟಿದ್ದೇವೆ. ರೂ. 10,000/- ಸಾಲವನ್ನು ಭರಿಸದವರಿಗೆ ಪುನಃ ರೂ.20,000/- ಗಳನ್ನು ಕೊಡುತ್ತೇವೆ. ಈಗ ಐದು ಸಾವಿರ ಜನ ಬೀದಿ ವ್ಯಾಪಾರಿಗಳು ರೂ.20,000/-ಗಳನ್ನು ತೆಗೆದುಕೊಂಡವರು ಇದ್ದಾರೆ. ರೂ.20,000/- ಸಾಲವನ್ನು

ಮರು ಪಾವತಿ ಮಾಡಿದವರಿಗೆ ರೂ.50,000/- ಗಳ ಏರಿಕೆ ಮಾಡಿದ್ದೇವೆ. ಈ ರೀತಿಯ ಹಂತ ಹಂತವಾಗಿ ಅವರಿಗೆ ಸಾಲದ ಲಭ್ಯತೆಯನ್ನು ಹೆಚ್ಚಿಸುವಂತಹದ್ದು. ಇದಲ್ಲದೇ ಕೌಶಲ್ಯತೆಯನ್ನು ಇವರಿಗೆ ಕೊಡುವಂತಹದ್ದು ಆಗುತ್ತಿದೆ. ಒಟ್ಟಾರೆ ಎಲ್ಲಾ ರೀತಿಯಾದಂತಹ ಸಹಕಾರ ಮತ್ತು ನೆರವನ್ನು ಅವರಿಗೆ ಕೊಟ್ಟು, ಉತ್ತಮವಾಗಿ ಬಾಳಿ ಬದುಕುವುದಕ್ಕೆ ಎಲ್ಲಾ ರೀತಿಯ ಅವಕಾಶವನ್ನು ಮಾಡಿಕೊಡುವಂತಹದ್ದಾಗುತ್ತಿದೆ.

**ಶ್ರೀ ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸುಮಾರು ರೂ. 10,000/- ಗಳಿಂದ ಪ್ರಾರಂಭ ಮಾಡಿದ್ದೇವೆಂದು ಹೇಳಿದ್ದಾರೆ. ರೂ. 10,000/- ಗಳ ಸಾಲವನ್ನು ಶೇಕಡ 7 ರಷ್ಟು ಬಡ್ಡಿಯಲ್ಲಿ ಕೊಟ್ಟಿದ್ದಾರೆ. ಸರ್ಕಾರಿ ಸಾಲಗಳು ಶೂನ್ಯ ಬಡ್ಡಿ ದರದಲ್ಲಿ ಈಗ ಸಾಕಷ್ಟು ಸರ್ಕಾರಿ ಬ್ಯಾಂಕ್‌ಗಳ ಮುಖಾಂತರ ಸಾಲವನ್ನು ಕೊಡುತ್ತಿದ್ದೀರಿ. ಬೀದಿ ಬದಿ ವ್ಯಾಪಾರಿಗಳಿಗೂ ಸಹ ಯಾವುದೇ ಬಡ್ಡಿ ಇಲ್ಲದೇ ಅಂದರೆ ಬಡ್ಡಿ ರಹಿತ ಸಾಲವನ್ನು ನೀಡಬೇಕಾಗಿ, ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಅದಲ್ಲದೇ ಸಮ್ಮಿಶ್ರ ಸರ್ಕಾರವಿದ್ದಾಗ 'ಬಡವರ ಬಂಧು' ಕಾರ್ಯಕ್ರಮವನ್ನು ತಾವೂ ಕೂಡ ಅನುಷ್ಠಾನ ಮಾಡಿದ್ದೀರಾ ಅಥವಾ ಮಾಡಿಲ್ಲ ಎಂಬುದರ ಬಗ್ಗೆ ಕೇಳಿದ್ದೆ. ಅದರ ಬಗ್ಗೆ ಸ್ಪಷ್ಟವಾದ ಉದಾಹರಣೆ ಕೊಡಲಿಲ್ಲ. ಬೀದಿ ಬದಿ ವ್ಯಾಪಾರಸ್ಥರನ್ನು ಗುರುತಿಸಲು ಸರ್ವೆ ಕಾರ್ಯ ಮಾಡಲಾಗಿದೆಯೇ ಎಂಬ ಪ್ರಶ್ನೆಯನ್ನು ಕೇಳಿದ್ದೆ. ಸರ್ವೆ ಮಾಡಿದ್ದೇವೆ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ತಮ್ಮ ಇಲಾಖೆಯಲ್ಲಿ ಅದಕ್ಕೆ ಸಾಫ್ಟ್‌ವೇರ್ ಕೂಡ ಅಪ್‌ಡೇಟ್ ಆಗಿಲ್ಲ. ಇದಕ್ಕೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಇದರಲ್ಲಿ ಸರ್ವೆಯಾದರೆ, ನಾನಾ ರೀತಿಯ ಬೀದಿ ಬದಿಯ ವ್ಯಾಪಾರಸ್ಥರು ಇದ್ದಾರೆ. ರಸ್ತೆಯ ಬದಿಯಲ್ಲಿ ವ್ಯಾಪಾರ ಮಾಡುತ್ತಾರೆ. ಕೆಲವರು ತಳ್ಳು ಗಾಡಿ ಇಟ್ಟುಕೊಂಡು, ವ್ಯಾಪಾರ ಮಾಡುತ್ತಾರೆ. ಕೆಲವರು ಸೈಕಲ್ ಮೇಲೆ ಇಟ್ಟುಕೊಂಡು ವ್ಯಾಪಾರ ಮಾಡುತ್ತಾರೆ. ಹೆಣ್ಣು ಮಕ್ಕಳು ತನ್ನ ತಲೆಯ ಮೇಲೆ ಮಂಕರಿಯನ್ನಿಟ್ಟುಕೊಂಡು ವ್ಯಾಪಾರ ಮಾಡಿಕೊಂಡು ಬರುತ್ತಾರೆ. ತಾವು ಏನೊಂದು ಕೂಲಕಷವಾಗಿ ಸರ್ವೆ ಮಾಡಿದ್ದೀರಿ, ಅದು ತಪ್ಪಿದೆ. ತಮ್ಮ ಇಲಾಖೆಯ ಅಧಿಕಾರಿಗಳು ಮಾನ್ಯ ಸಚಿವರಿಗೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ದಯವಿಟ್ಟು, ಮಾನ್ಯ ಸಚಿವರು ಅದನ್ನು ಪರಿಶೀಲನೆ ಮಾಡಬೇಕು. ಇದು ಸರಿಯಾದ ರೀತಿಯಲ್ಲಿ ಪರಿಶೀಲನೆ ಮಾಡಿ, ನಿಜವಾದ ಬೀದಿ ಬದಿ ವ್ಯಾಪಾರಸ್ಥರು ಯಾರಿದ್ದಾರೋ, ಅವರನ್ನು ಗುರುತಿಸಿ, ಅವರಿಗೆ ಸರ್ಕಾರದಿಂದ ಸಾಕಷ್ಟು ಸಹಾಯಧನ ಮಾಡಿಕೊಡಬೇಕು. ಅವರು ನೆಮ್ಮದಿ ಜೀವನ ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

**ಡಾ: ಸಿ.ಎನ್.ಅಶ್ವಥ್‌ನಾರಾಯಣ:-** ಮಾನ್ಯ ಸಭಾಪತಿಯವರೇ, ಬೀದಿ ಬದಿ ವ್ಯಾಪಾರಿಗಳಿಗೆ ಉತ್ತಮವಾದ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಸರ್ಕಾರ ಸಂಪೂರ್ಣವಾಗಿ ಬದ್ಧವಾಗಿದೆ. ಅವರಿಗೆ ಉತ್ತಮವಾದ ಕೌಶಲ್ಯತೆಗಳನ್ನು ಕೊಟ್ಟು, ಅವರು ವ್ಯಾಪಾರ ಮಾಡುವಂತಹ ಸ್ಥಳವನ್ನು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಉತ್ತಮವಾಗಿರುವುದಕ್ಕೆ, ಸುಮಾರು 43 ವೆಂಡಿಂಗ್ ಮಾರುಕಟ್ಟೆಗಳನ್ನು ಮಾಡುತ್ತಿದ್ದೇವೆ. ಅದು ಪ್ರಗತಿಯಲ್ಲಿಯೂ ಕೂಡ ಇದೆ. ಅದಕ್ಕೂ ಕೂಡ ಸುಮಾರು ಹದಿನೈದು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಂತಹದ್ದಾಗುತ್ತಿದೆ. ಉತ್ತಮವಾಗಿ ವೆಂಡಿಂಗ್ ಕಮಿಟಿಗಳು ಕೂಡ ಆಗಿರುವಂತಹದ್ದು ಇದೆ. ಸ್ಥಳೀಯ ಮಟ್ಟದಲ್ಲಿ ಮತ್ತು ನಗರ ಮಟ್ಟದಲ್ಲಿ ವ್ಯವಸ್ಥಿತವಾಗಿ ನಡೆಯುವಂತಹದ್ದು ಇದೆ ಮತ್ತು ಒಳ್ಳೆಯ ಅವಕಾಶ ಆಗುತ್ತಿದೆ. ಅವರಲ್ಲಿ ಹೆಚ್ಚಿನ ಬೆಳವಣಿಗೆ ಮತ್ತು ಸಬಲೀಕರಣ ಹಾಗೂ ಸುಧಾರಣೆ ಆಗಿರುವಂತಹದ್ದು. ಎಲ್ಲಾ ರೀತಿಯ unorganized sector ನಲ್ಲಿ ಇರುವಂತಹ ಇವರಿಗೆ ಸರ್ಕಾರದ ಪ್ರತಿಯೊಂದು ಯೋಜನೆಗಳನ್ನು ಕೇವಲ ಹಣವನ್ನು ಕೊಟ್ಟು ಬಿಟ್ಟಿಲ್ಲ. ಅವರಿಗೆ ರೂಪಿಸಿರುವ ಎಂಟು ಯೋಜನೆಗಳನ್ನೆಲ್ಲಾ, ಅದರ ಫಲ, ಲಾಭ ಪಡೆದುಕೊಂಡಿದ್ದೀರಾ. ಎಲ್ಲಾ ಬೀದಿ ಬದಿ ವ್ಯಾಪಾರಗಳನ್ನು ಸರ್ವೆ ಮಾಡಿ, ಎಲ್ಲಾ ಅನುಕೂಲತೆಗಳನ್ನು ಪ್ರತಿಯೊಬ್ಬ ವ್ಯಾಪಾರಿಗಳಿಗೂ ತಲುಪಿಸುವಂತಹ ಸರ್ಕಾರ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತಿದೆ. ಇನ್ನು ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನದಾಗಿ ಒಳ್ಳೆಯದು ಮಾಡುವುದಕ್ಕಾಗುತ್ತದೆ. ಅವರ ಸಲಹೆಗಳನ್ನು ತೆಗೆದುಕೊಳ್ಳುವಂತಹದ್ದು ಆಗುತ್ತದೆ. ಇನ್ನು ಕಡಿಮೆ ಬಡ್ಡಿ ದರದಲ್ಲಿ ಕೊಡಿಸುವುದಕ್ಕೆ ಏನೊಂದು ಪ್ರಯತ್ನವಾಗುತ್ತದೆಯೋ, ಅದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದು ಇನ್ನು ಹೆಚ್ಚಿನ ಪ್ರಯತ್ನ ಮಾಡುವಂತಹದ್ದಾಗುತ್ತದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 21 ನೇ ಡಿಸೆಂಬರ್ 2021, ಸಮೂಹ-2 ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 112 ಪ್ರಶ್ನೆಗಳ ಪೈಕಿ 81 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**ಸಭಾಪತಿಯವರು:- ಮಂಡಿಸಲಾಯಿತು.**

(ಮುಂದು)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(1201)21.12.2021/12.10/ಎಂ.ಎಂ-ಆರ್.ಎನ್ (ಸಭಾಪತಿಯವರ ಉಪಸ್ಥಿತಿ)

**2. ಪ್ರಕಟಣೆ**

**ಸಭಾಪತಿಯವರು**:- ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಸಚಿವರು.

1. ಶ್ರೀ ಕೆ.ಎಸ್. ಈಶ್ವರಪ್ಪ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು
2. ಶ್ರೀ ಆರ್. ಅಶೋಕ್, ಮಾನ್ಯ ಕಂದಾಯ ಸಚಿವರು
3. ಶ್ರೀ ಶ್ರೀರಾಮುಲು, ಮಾನ್ಯ ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
4. ಶ್ರೀ ಬಿ.ಸಿ. ಪಾಟೀಲ್, ಮಾನ್ಯ ಕೃಷಿ ಸಚಿವರು
5. ಶ್ರೀ ಕೆ.ಸಿ. ನಾರಾಯಣಗೌಡ, ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು
6. ಶ್ರೀ ಎನ್. ಮುನಿರತ್ನ, ಮಾನ್ಯ ತೋಟಗಾರಿಕೆ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಮಾನ್ಯ ಸಭಾನಾಯಕರೇ, ಮಾನ್ಯ ಸಚಿವರಾದ ಶ್ರೀ ಮುನಿರತ್ನರವರು ಮತ್ತು ಶ್ರೀ ಬಿ. ಶ್ರೀರಾಮುಲುರವರನ್ನು ಸದನಕ್ಕೆ ಬರುವುದಕ್ಕೆ ತಿಳಿಸಿ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## 3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

### ಅ) ವಿಷಯ:- ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ಹೋಗುವ ನಂದಿ ಮಾರ್ಗದಲ್ಲಿ ಭಾರಿ ಮಳೆಯಿಂದ ಎರಡು ಕಡೆ ಭೂಮಿ ಕುಸಿದಿರುವ ಬಗ್ಗೆ.

\- - - - -

**ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮೈಸೂರು ನಗರದ ಪ್ರಮುಖ ಧಾರ್ಮಿಕ, ಐತಿಹಾಸಿಕ, ಸಾಂಸ್ಕೃತಿಕ ಮತ್ತು ಪ್ರವಾಸಿ ಆಕರ್ಷಣೆಯ ಕ್ಷೇತ್ರವೆಂದರೆ ಪ್ರಾಕೃತಿಕ ಸೊಬಗಿನಿಂದ ಕೂಡಿರುವ ಚಾಮುಂಡಿ ಬೆಟ್ಟ. ಈಚೆಗೆ ಬಿದ್ದ ಭಾರಿ ಮಳೆಯಿಂದ ಈ ಬೆಟ್ಟಕ್ಕೆ ಹೋಗುವ ನಂದಿ ಮಾರ್ಗದಲ್ಲಿ ಭೂಮಿಯು 15 ದಿವಸದಲ್ಲಿ ಮೂರು ಬಾರಿ ಎರಡು ಸ್ಥಳದಲ್ಲಿ ಕುಸಿದಿದೆ. ಇನ್ನೂ ಕುಸಿಯುವ ಸಂಭವ ಇದೆ. ಇದಕ್ಕೆ ಕಾರಣ ಬೆಟ್ಟಕ್ಕೆ ಹೋಗುವ ಘಾಟ್ ರಸ್ತೆಯ ಕಳಪೆ ನಿರ್ವಹಣೆಯೇ ಆಗಿದೆ. ಪ್ರಮುಖ ಪ್ರವಾಸಿ ಆಕರ್ಷಣೆಯಾದ ಬೃಹತ್ ನಂದಿಗೆ ಹೋಗುವ ರಸ್ತೆಯು ಕುಸಿದಿದ್ದು, ಪ್ರವಾಸಿಗರು ಅಲ್ಲಿಗೆ ಹೋಗುವುದನ್ನು ನಿಲ್ಲಿಸಲಾಗಿದೆ. ಬೆಟ್ಟದ ಮೇಲೆ ಅರಣ್ಯೀಕರಣವೂ ಕೂಡಾ ಸರಿಯಾಗಿ ನಡೆಯುತ್ತಿಲ್ಲ. ಇದರಿಂದ ರಸ್ತೆಯ ಪಕ್ಕದ ಭೂಮಿ ಸಡಿಲವಾಗಿ ಕುಸಿಯುತ್ತಿದೆ. ರಸ್ತೆಗೆ ಕಟ್ಟಿರುವ ತಡೆಗೋಡೆಯು ಸರಿಯಾಗಿ ನಿರ್ವಹಣೆ ಇಲ್ಲದೆ ಅನೇಕ ಕಡೆ ಬಿರುಕು ಬಿಟ್ಟು ಬೀಳುವ ಸಂಭವ ಇದೆ. ಆದಕಾರಣ ಈ ರಸ್ತೆಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡಬೇಕು. ಬೆಟ್ಟದ ಮೇಲೆ ತಿರುಪತಿಯ ಬೆಟ್ಟದಂತೆ ದಟ್ಟ ಅರಣ್ಯ ಬೆಳೆಸಲು ಕ್ರಮ ತೆಗೆದುಕೊಳ್ಳಬೇಕು.

ಈಗ ಬೆಟ್ಟದ ಮೇಲಕ್ಕೆ ಸರ್ಕಾರಿ ಬಸ್‌ಗಳು, ಖಾಸಗಿ ಬಸ್‌ಗಳು ಪ್ರತಿದಿನ ನೂರಾರು ಸಂಖ್ಯೆಯಲ್ಲಿ ಸಂಚರಿಸುತ್ತಿವೆ. ಇದರಿಂದ ರಸ್ತೆಯ ಮೇಲಿನ ಒತ್ತಡವೂ ಜಾಸ್ತಿಯಾಗಿದೆ. ತಿರುಪತಿ ಬೆಟ್ಟದ ರೀತಿಯಲ್ಲಿ ಚಾಮುಂಡಿ ಬೆಟ್ಟಕ್ಕೂ ಖಾಸಗಿ ವಾಹನಗಳ ಸಂಚಾರವನ್ನು ನಿಲ್ಲಿಸಬೇಕು. ಬೆಟ್ಟದ ಕೆಳಗೆ ಪ್ರವೇಶ ದ್ವಾರದ ಬಳಿ ದೊಡ್ಡ ಬಸ್ ನಿಲ್ದಾಣವನ್ನು ನಿರ್ಮಿಸಿ ಖಾಸಗಿ ಬಸ್‌ಗಳನ್ನು ಅಲ್ಲಿಯೇ ನಿಲ್ಲಿಸಿ ಪ್ರವಾಸಿಗರು ಹಾಗೂ ಭಕ್ತರೆಲ್ಲರೂ ಕೇವಲ ಸರ್ಕಾರಿ ಬಸ್‌ಗಳಲ್ಲಿ ಮಾತ್ರ ಹೋಗಿ ಬರುವ ವ್ಯವಸ್ಥೆ ಮಾಡಬೇಕು. ಸರ್ಕಾರಿ ಬಸ್‌ಗಳು ಮೊದಲು ಚಾಮುಂಡೇಶ್ವರಿ ದೇವಾಲಯದ ಹತ್ತಿರ ಹೋಗಿ, ವಾಪಸ್ ಬರುವಾಗ ನಂದಿಯ ಮೂಲಕ ಬರುವ ವ್ಯವಸ್ಥೆ ಮಾಡಿದಲ್ಲಿ ಪ್ರವಾಸಿಗರಿಗೆ ಎರಡು ಕಡೆ ಸಂದರ್ಶನ ಮಾಡಲು ಅವಕಾಶವಾಗುತ್ತದೆ.

ಖಾಸಗಿ ಕಾರ್‌ಗಳಿಗೆ, ಬೈಕ್‌ಗಳಿಗೆ ಬೆಟ್ಟದ ಮೇಲಕ್ಕೆ ಹೋಗಲು ಪ್ರವೇಶ ದರ ನಿಗದಿ ಮಾಡಬೇಕು. ಇದರಿಂದ ಸರ್ಕಾರಕ್ಕೆ ಆದಾಯವೂ ಬರುತ್ತದೆ. ಬೆಟ್ಟದ ಸುರಕ್ಷತೆಯೂ ಹೆಚ್ಚುತ್ತದೆ. ಇದರಿಂದ ಬರುವ ಆದಾಯದಲ್ಲಿ ಬೆಟ್ಟದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಹಕಾರಿಯಾಗುತ್ತದೆ. ಈಗ ರಸ್ತೆಯು

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಕುಸಿದಿರುವ ಕಡೆ ರಸ್ತೆಯನ್ನು ದುರಸ್ತಿ ಮಾಡುವ ಕಾರ್ಯವನ್ನು ಕೈಗೊಳ್ಳಬೇಕೆಂದು ಶೂನ್ಯವೇಳೆಯಲ್ಲಿ ಸರ್ಕಾರದ ಗಮನ ಸೆಳೆಯುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಸಂದೇಶ್ ನಾಗರಾಜುರವರು ಶೂನ್ಯವೇಳೆಯಲ್ಲಿ ಕೇಳಿದ ಪ್ರಶ್ನೆಗೆ ಮಾನ್ಯ ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಆ) ವಿಷಯ:- ಬಾಗಲಕೋಟೆ ಜಿಲ್ಲೆ ಸಾವಳಗಿ ಪಟ್ಟಣವನ್ನು ತಾಲ್ಲೂಕನ್ನಾಗಿ ಘೋಷಿಸಲು ಕೋರಿ ಮನವಿ.**

\- - - - -

**ಶ್ರೀ ನಿರಾಣಿ ಹಣಮಂತ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇತ್ತೀಚಿನ ದಿನಪತ್ರಿಕೆಗಳಲ್ಲಿ ಪ್ರಕಟವಾಗಿರುವಂತೆ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಸಾವಳಗಿ ಪಟ್ಟಣವನ್ನು ತಾಲ್ಲೂಕು ಕೇಂದ್ರವನ್ನಾಗಿಸಬೇಕೆಂದು ಅಲ್ಲಿನ ಜನರ ಮಹಾದಾಸೆ ಮತ್ತು ಒಕ್ಕೊರಲಿನ ಕೂಗಾಗಿದೆ. ಸಾವಳಗಿ ಪಟ್ಟಣವನ್ನು ತಾಲ್ಲೂಕು ಕೇಂದ್ರವನ್ನಾಗಿಸುವ ಕುರಿತು ಈಗಾಗಲೇ ಮಾನ್ಯ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಈ ವಿಷಯದ ಕುರಿತು ಮಾಹಿತಿ ಮತ್ತು ಸ್ಪಷ್ಟ ಅಭಿಪ್ರಾಯ ನೀಡುವಂತೆ ತಾಲ್ಲೂಕು ಪುನರ್ ರಚನಾ ಸಮಿತಿಗೆ ಕೋರಿರುವುದು ತಿಳಿದುಬಂದಿದೆ.

ಆದರೆ ತಾಲ್ಲೂಕು ಪುನರ್ ರಚನಾ ಸಮಿತಿಯು ಶಿಫಾರಸ್ಸು ಮಾಡದೇ ಇರುವ ಪಟ್ಟಣಗಳನ್ನು ಸಹ ನೂತನ ತಾಲ್ಲೂಕುಗಳೆಂದು ಘೋಷಿಸಲಾಗಿದೆ. ಸಾವಳಗಿ ಹೋಬಳಿಯು 1 ಲಕ್ಷಕ್ಕಿಂತ ಹೆಚ್ಚು ವಿಸ್ತೀರ್ಣ ಮತ್ತು 1ಲಕ್ಷಕ್ಕಿಂತ ಅಧಿಕ ಜನಸಂಖ್ಯೆಯನ್ನು ಹೊಂದಿದೆ ಹೀಗಾಗಿ ಹೊಸ ಹೋಬಳಿಯನ್ನು ಸೃಷ್ಟಿಸದೇ ನೂತನ ತಾಲ್ಲೂಕು ಕೇಂದ್ರವನ್ನಾಗಿ ರಚಿಸಲು ಸೂಕ್ತವಾಗಿದೆ. ಹೀಗಾಗಿ ಸದರಿ ಪಟ್ಟಣವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸಬೇಕೆಂದು ಮಾನ್ಯ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರಸ್ತಾವನೆಯನ್ನು ಸಹ ಸಲ್ಲಿಸಿರುತ್ತಾರೆ, ಆದರೂ ಸಹ ಇಲ್ಲಿಯವರೆಗೆ ಈ ಪಟ್ಟಣವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸದೇ ಇರುವುದು ವಿಷಾದನೀಯವಾಗಿದೆ.

ಈ ಹೋಬಳಿಯು ಒಟ್ಟು 24 ಗ್ರಾಮಗಳಿಂದ ಕೂಡಿದೆ, ಇದರ ವಿಸ್ತೀರ್ಣ 1.09.050 ಎಕರೆ ಪ್ರದೇಶ, 2011ರ ಜನಗಣತಿ ಪ್ರಕಾರ 96.073 ಜನಸಂಖ್ಯೆಯನ್ನು ಹೊಂದಿತ್ತು. ಪ್ರಸ್ತುತ 1ಲಕ್ಷಕ್ಕಿಂತ ಅಧಿಕ ಜನಸಂಖ್ಯೆ ಹೊಂದಿದೆ ಹಾಗೂ ಈಗಾಗಲೇ ಈ ಪಟ್ಟಣವು ನಾಡ ಕಛೇರಿ, ಪೊಲೀಸ್ ಠಾಣೆ, ರೈತ ಸಂಪರ್ಕ ಕೇಂದ್ರ, ಪಶು ಚಿಕಿತ್ಸಾಲಯ, ಸರ್ಕಾರಿ ಕಾಲೇಜು ಮತ್ತು ಇತ್ಯಾದಿ ಕಚೇರಿಗಳನ್ನು ಹೊಂದಿದೆ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಈ ಪಟ್ಟಣವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸಿದ ಸಂದರ್ಭದಲ್ಲಿ ಸಾವಳಗಿ ಗ್ರಾಮ ಪಂಚಾಯತಿ ವ್ಯಾಪ್ತಿಯ ನಾಕೂರು ಪುನರ್ ವಸತಿ ಕೇಂದ್ರದಲ್ಲಿ ಬಳಕೆಯಾಗದೇ ಇರುವ ಸುಮಾರು 35ಕ್ಕಿಂತ ಅಧಿಕ ಕಟ್ಟಡಗಳನ್ನು ಸರ್ಕಾರದ ಇತರೆ ಕಚೇರಿಗಳಿಗಾಗಿ ಬಳಸಿಕೊಳ್ಳಬಹುದಾಗಿದೆ ಎಂಬುದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತಾ, ಈಗಾಗಲೇ ಎರಡು ಬಾರಿ ಎಲ್ಲಾ ಚುನಾವಣೆಗಳನ್ನು ಬಹಿಷ್ಕರಿಸಿದ್ದಾರೆ ಮತ್ತು ಇತ್ತೀಚೆಗೆ ನಡೆದ ಸಾರ್ವತ್ರಿಕ ಸ್ಥಳೀಯ ಸಂಸ್ಥೆಗಳ ವಿಧಾನ ಪರಿಷತ್ ಚುನಾವಣೆಯನ್ನು ಸಹ ಬಹಿಷ್ಕರಿಸಿದ್ದಾರೆ ಮತ್ತು ಸಾವಳಗಿ ಪಟ್ಟಣವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುವವರೆಗೂ ಮುಂದಿನ ಎಲ್ಲಾ ಚುನಾವಣೆಗಳನ್ನು ಬಹಿಷ್ಕರಿಸುವುದಾಗಿ ಅಲ್ಲಿನ ಜನರು ತೀರ್ಮಾನಿಸಿರುವ ವಿಷಯ ನಿಜಕ್ಕೂ ವಿಷಾದನೀಯವಾಗಿದೆ.

ಆದ್ದರಿಂದ ಈ ಮೇಲಿನ ಎಲ್ಲ ಅಂಶಗಳನ್ನು ಪರಿಗಣಿಸಿ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಸಾವಳಗಿ ಪಟ್ಟಣವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸಬೇಕೆಂದು ಮಾನ್ಯ ಕಂದಾಯ ಸಚಿವರನ್ನು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ನಿರಾಣಿ ಹಣಮಂತ ರುದ್ರಪ್ಪ ರವರು ಶೂನ್ಯವೇಳೆಯಲ್ಲಿ ಕೇಳಿದ ಪ್ರಶ್ನೆಗೆ ಮಾನ್ಯ ಕಂದಾಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಇ) ವಿಷಯ:- ಪ್ರೌಢಶಾಲಾ ಮುಖ್ಯೋಪಾಧ್ಯಾಯರ ವರ್ಗಾವಣೆ ಬಗ್ಗೆ.**

- - - - -

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ವರ್ಗಾವಣೆ ಪ್ರಕ್ರಿಯೆ ನಡೆಯುತ್ತಿದೆ. ಸರಕಾರಿ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ವರ್ಗಾವಣೆಗೆ ಇರುವ ಶೇ.2ರ ಮಿತಿಯನ್ನು ತೆಗೆದುಹಾಕಿ ಶೇ. 7ರಷ್ಟು ವರ್ಗಾವಣೆಗೆ ಅವಕಾಶ ಕಲ್ಪಿಸಬೇಕು. ರಾಜ್ಯದಲ್ಲಿ ಸಾವಿರಕ್ಕಿಂತ ಹೆಚ್ಚು ಪ್ರೌಢಶಾಲೆಗಳಿದ್ದು, ಈಗಿರುವ ನಿಯಮದ ಪ್ರಕಾರ ಕೇವಲ 81 ಪ್ರೌಢಶಾಲಾ ಶಿಕ್ಷಕರಿಗೆ ಮಾತ್ರ ವರ್ಗಾವಣೆ ತೆಗೆದುಕೊಳ್ಳಲು ಅವಕಾಶ ದೊರೆಯಲಿದೆ. ಬಾಕಿ ಶಿಕ್ಷಕರಿಗೆ ವರ್ಗಾವಣೆ ದೊರೆಯದಿದ್ದರೆ ಮಾನಸಿಕವಾಗಿ ನೊಂದು ಗುಣಮಟ್ಟದ ಶಿಕ್ಷಣದ ಮೇಲೆ ಪರಿಣಾಮ ಬೀರಲಿದೆ. ಹಾಗಾಗಿ ಸರಕಾರ ಶಿಕ್ಷಕರ ವರ್ಗಾವಣೆ ಸಮಸ್ಯೆ ಪರಿಹರಿಸಬೇಕು ಹಾಗೂ ಶೇ.25ರಷ್ಟು ಶಿಕ್ಷಕರ ಹುದ್ದೆ ಖಾಲಿ ಇರುವ ತಾಲ್ಲೂಕಿನಿಂದ ಹೊರಗೆ ಹೋಗಲು ಅವಕಾಶವಿಲ್ಲ ಎಂಬ ನಿಯಮ ಸರಿಯಲ್ಲ. ಶಿಕ್ಷಕರ ಹುದ್ದೆ ಖಾಲಿ ಇರಲು ಸರಕಾರ ನೇಮಕಾತಿ ಮಾಡಿಕೊಳ್ಳದೇ ಇರುವುದು ಕಾರಣ. ಆದ್ದರಿಂದ ಈ ನಿಯಮವನ್ನು ತೆಗೆದು ಹಾಕಬೇಕು. ಎಲ್ಲರಿಗೂ ವರ್ಗಾವಣೆಗೆ ಮುಕ್ತ ಅವಕಾಶ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕೊಡಬೇಕು. ವೃಂದ ಬಲ ಪರಿಗಣಿಸುವಾಗ ಸಹ ಶಿಕ್ಷಕರು ಮತ್ತು ಮುಖ್ಯೋಪಾಧ್ಯಾಯರನ್ನು ಬೇರೆ ಬೇರೆಯಾಗಿ ಪರಿಗಣಿಸಬೇಕು. ಶೇ. 25ರಷ್ಟು ಮಿತಿಯಲ್ಲಿ ಮುಖ್ಯೋಪಾಧ್ಯಾಯರನ್ನು ಪರಿಗಣಿಸಬಾರದು ಎಂದು ಮುಖ್ಯೋಪಾಧ್ಯಾಯರು ತಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಡುತ್ತಿದ್ದಾರೆ. ಈ ನಿಟ್ಟಿನಲ್ಲಿ ಕೂಡಲೇ ಸರ್ಕಾರ ಅವರ ವರ್ಗಾವಣೆ ಬೇಡಿಕೆಗಳನ್ನು ಈಡೇರಿಸುವಂತೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಿಗೆ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಅರುಣ ಶಹಾಪೂರರವರು ಶೂನ್ಯವೇಳೆಯಲ್ಲಿ ಕೇಳಿದ ಪ್ರಶ್ನೆಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಈ) ವಿಷಯ:- ಹೆಲ್ಮೆಟ್ ಧರಿಸದ ಬೈಕ್ ಸವಾರರನ್ನು ಪೊಲೀಸರು ಹಿಡಿಯಲೆತ್ನಿಸುವಾಗ ಅಪಘಾತಕ್ಕೀಡಾಗಿ ಮೃತನಾಗಿರುವ ಬಗ್ಗೆ.**

\- - - - -

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಬೆಂಗಳೂರಿನ ವಿಜಯನಗರದ ಸಂಚಾರ ಠಾಣೆ ವ್ಯಾಪ್ತಿಯ ಆರ್‌ಪಿಸಿ ಬಡಾವಣೆಯ ಸರ್ವಿಸ್ ರಸ್ತೆಯಲ್ಲಿ ವಾಹನಗಳ ತಪಾಸಣೆ ನಡೆಸುತ್ತಿದ್ದ ಪೊಲೀಸರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ ಸಂಭವಿಸಿದ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದ ಯುವಕ ಚಿಕಿತ್ಸೆ ಫಲಿಸದೆ ಮೃತಪಟ್ಟಿರುವುದು ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ.

ನ್ಯೂ ಬಿನ್ನಿಪೇಟೆ ನಿವಾಸಿ ಶರವಣ ಎಂಬುವರ ಪುತ್ರ ಕೌಶಿಕ್ ಮೃತಪಟ್ಟಿರುವ ಯುವಕ. ಚೇತನ ಎಂಬಾತನ ಜೊತೆ ಕೌಶಿಕ್ ಹಿಂಬದಿ ಸವಾರನಾಗಿ ಕುಳಿತಿದ್ದು, ಪೊಲೀಸರಿಂದ ತಪ್ಪಿಸಿಕೊಳ್ಳುವ ಭರದಲ್ಲಿ ಚೇತನ್ ವೇಗವಾಗಿ ಬೈಕ್ ಓಡಿಸಿ ರಸ್ತೆ ಮಧ್ಯೆ ನಿಂತಿದ್ದ ಗೃಹರಕ್ಷಕ ದಳದ ಸಿಬ್ಬಂದಿಗೆ ಅಪಘಾತ ಮಾಡಿ ಬೈಕ್ ನಿಯಂತ್ರಣ ತಪ್ಪಿದ ಕಾರಣ ಹಿಂಬದಿ ಸವಾರನಾದ ಕೌಶಿಕ್ ತಲೆಗೆ ಹೆಲ್ಮೆಟ್ ಧರಿಸದ ಕಾರಣ, ತೀವ್ರ ಪೆಟ್ಟಾಗಿ, ಪ್ರಜ್ಞಾಹೀನಸ್ಥಿತಿ ತಲುಪಿ, ಅಂತಿಮವಾಗಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುವುದು ಮನಃಕಲಕುವ ವಿಷಯವಾಗಿರುತ್ತದೆ. 'ಪುತ್ರ ಶೋಕಂ ನಿರಂತರಂ' ಎನ್ನುವಂತೆ ಆತನ ಕುಟುಂಬವು ಬಳಲಿದೆ.

ಹೆಲ್ಮೆಟ್ ಧರಿಸದ ಬೈಕ್ ಸವಾರರನ್ನು ಪೊಲೀಸರು ಅಟ್ಟಾಡಿಸಿಕೊಂಡು ಹಿಡಿಯಲೆತ್ನಿಸಿದ್ದೇ ಕೌಶಿಕ್ ಪ್ರಾಣ ಕಳೆದುಕೊಳ್ಳಲು ಕಾರಣವಾಗಿದೆ ಎಂಬುದು ಸ್ಥಳೀಯ ಪ್ರತ್ಯಕ್ಷದರ್ಶಿಗಳ ಆರೋಪವಾಗಿರುತ್ತದೆ. ಪ್ರಸ್ತುತ ನಿಯಮಾವಳಿಗಳನ್ವಯ ಪೊಲೀಸರು ವಾಹನಗಳ ತಪಾಸಣೆ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ನಡೆಸುವಂತಿಲ್ಲ. ದಂಡ ವಿಧಿಸುವಿಕೆ ಎಲ್ಲವೂ ಆನ್‌ಲೈನ್‌ನಲ್ಲೇ ಜರುಗುತ್ತಿರುವುದರಿಂದ ವಾಹನಗಳನ್ನು ಅಡ್ಡಗಟ್ಟಿ ಅಥವಾ ಹಿಂಬಾಲಿಸಿಕೊಂಡು ಹಿಡಿಯುವುದು ಇಂತಹ ದುರಂತಗಳಿಗೆ ಅವಕಾಶ ಮಾಡಿಕೊಡುತ್ತಿದೆ. ಪೊಲೀಸರು ಜನರಕ್ಷಕರಾಗಬೇಕೇ ಹೊರತು ಭಕ್ಷಕರಾಗಬಾರದೆನ್ನುವ ಸಂದೇಶವನ್ನು ಎಲ್ಲಾ ಠಾಣೆಗಳಿಗೂ ತಲುಪಿಸುವ ಕೆಲಸವಾಗಬೇಕು, ಇನ್ನು ಮುಂದೆ ಇಂತಹ ಪ್ರಕರಣಗಳಲ್ಲಿ ಯುವ ಜನರ ಬಲಿಯಾಗದಂತೆ ಎಚ್ಚರಿಕೆ ವಹಿಸಬೇಕೆನ್ನುವ ವಿಷಯದ ಬಗ್ಗೆ ಮಾನ್ಯ ಗೃಹ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಯು.ಬಿ. ವೆಂಕಟೇಶ್‌ರವರು ಶೂನ್ಯವೇಳೆಯಲ್ಲಿ ಕೇಳಿದ ಪ್ರಶ್ನೆಗೆ ಮಾನ್ಯ ಗೃಹ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಉ) ವಿಷಯ:- ಬೀದರ್ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ತಹಶೀಲ್ದಾರ್‌ರವರು ಸಾರ್ವಜನಿಕ ಹಿತಾಸಕ್ತಿಗೆ ಅನುಸಾರವಾಗಿ ಕಾರ್ಯನಿರ್ವಹಿಸುತ್ತಿರುವುದರ ಬಗ್ಗೆ.**

\- - - - -

**ಶ್ರೀ ವಿಜಯಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬೀದರ್ ಜಿಲ್ಲೆ ಬಸವಕಲ್ಯಾಣ ಮತಕ್ಷೇತ್ರದ ನಾಗರೀಕರು ಬಸವಕಲ್ಯಾಣ ತಾಲ್ಲೂಕಿನ ತಹಶೀಲ್ದಾರ್‌ರವರಾದ ಶ್ರೀಮತಿ ಸಾವಿತ್ರಿ ಶರಣು ಸಲಗಾರ್‌ರವರು ಆ ಕ್ಷೇತ್ರದ ಶಾಸಕರ ಪತ್ನಿಯಾಗಿದ್ದು, ಕಳೆದ ಮೂರುವರೆ ವರ್ಷಗಳಿಂದ ಒಂದೇ ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರದ ಕಾರ್ಯಕ್ರಮಗಳನ್ನು ಶಾಸಕಾಂಗ ಹಾಗೂ ಕಾರ್ಯಾಂಗದ ಯಾವುದೇ ನಿಯಮವನ್ನು ಪಾಲಿಸದೆ ಅನುಷ್ಠಾನಗೊಳಿಸುತ್ತಿರುವುದರಿಂದ ಹಾಗೂ ತಾಲ್ಲೂಕಿನ ಸಾರ್ವಜನಿಕರಿಗೆ ಹಾಗೂ ಜನ ಪ್ರತಿನಿಧಿಗಳಿಗೆ ಸಾಮಾಜಿಕ ನ್ಯಾಯ ದೊರಕುವಲ್ಲಿ ಅಡಚಣೆಯಾಗುತ್ತಿದ್ದು, ಈ ಭಾಗದ ಜನ ಸಾಮಾನ್ಯರಿಗೆ ನ್ಯಾಯ ಸಿಗಬೇಕಾದರೆ ತಾಲ್ಲೂಕಿನ ತಹಶೀಲ್ದಾರ್‌ರವರನ್ನು ನಿಯಮಾನುಸಾರ ವರ್ಗಾವಣೆ ಮಾಡಿ ಆ ಭಾಗದ ಜನರಿಗೆ ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡಲು ಈ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾವನೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ವಿಜಯಸಿಂಗ್‌ರವರು ಶೂನ್ಯವೇಳೆಯಲ್ಲಿ ಕೇಳಿದ ಪ್ರಶ್ನೆಗೆ ಮಾನ್ಯ ಕಂದಾಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

(ಮುಂದು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(1202) 21-12-2021 KH/RN 12-20 **(ಸಭಾಪತಿಯವರ ಉಪಸ್ಥಿತಿ)**

**ಊ) ವಿಷಯ:- ರಾಜ್ಯ ಸರ್ಕಾರಿ ನೌಕರರಿಗೆ ಕೇಂದ್ರ ಸರ್ಕಾರಿ ನೌಕರರಿಗೆ ನೀಡುವ ವೇತನ ಶ್ರೇಣಿಯನ್ನು ನೀಡುವ ಬಗ್ಗೆ.**

- - - - -

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯ ಸರ್ಕಾರಿ ನೌಕರರಿಗೆ ಕೇಂದ್ರ ಸರ್ಕಾರಿ ನೌಕರರಿಗೆ ನೀಡುವ ವೇತನ ಶ್ರೇಣಿಯನ್ನು ನೀಡಬೇಕೆಂದು ಆಗ್ರಹಿಸಿ ವೇತನ ಚಳುವಳಿ ಕಹಳೆ ಕುರಿತು 'ವಿಜಯವಾಣಿ' ಪತ್ರಿಕೆಯ ಮುಖಪುಟದಲ್ಲಿ ಪ್ರಕಟಗೊಂಡ ಗಂಭೀರವಾದ ವಿಷಯವನ್ನು ಶೂನ್ಯ ಅವಧಿಯಲ್ಲಿ ಪ್ರಸ್ತಾಪಿಸಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

ರಾಜ್ಯದ ಸರ್ಕಾರಿ ನೌಕರರ ವೇತನ ತಾರತಮ್ಯದ ಕಾರಣಕ್ಕಾಗಿ ನಿರಂತರವಾಗಿ ರಾಜ್ಯದ ಸರ್ಕಾರಿ ನೌಕರರ ಸಂಘದವರು ಹೋರಾಟ ಮಾಡುತ್ತಲೇ ಬಂದಿದ್ದಾರೆ. ಆದರೆ, ಅವರ ಬೇಡಿಕೆ ಈಡೇರದ ಹಿನ್ನೆಲೆಯಲ್ಲಿ ಪುನಃ ಹೋರಾಟಕ್ಕೆ ಅಣಿಯಾಗಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಿ ನೌಕರರ ಕೆಲಸದಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಆದಾಗ್ಯೂ ಕೂಡ ವೇತನದಲ್ಲಿ ವ್ಯತ್ಯಾಸವೇಕೇ? ಎಂಬ ಪ್ರಶ್ನೆಯನ್ನು ಸರ್ಕಾರಿ ನೌಕರರು ಮಾಡುತ್ತಿರುವರು. ಹಾಗಾಗಿ ಕೇಂದ್ರ ಸರ್ಕಾರಿ ನೌಕರರಿಗೆ ನೀಡುವ ವೇತನ ಶ್ರೇಣಿ ಹಾಗೂ ಎಲ್ಲಾ ಸೌಲಭ್ಯ ನೀಡಬೇಕು ಎಂದು ಆಗ್ರಹಿಸಿ ಒತ್ತಾಯಿಸುತ್ತಿರುವರು. ಇದಲ್ಲದೇ ಸರ್ಕಾರಿ ಹುದ್ದೆಗಳನ್ನು ರದ್ದತಿ ಮಾಡುವುದನ್ನು ನಿಲ್ಲಿಸಬೇಕು ಇಲ್ಲದಿದ್ದರೆ ಇದ್ದ ನೌಕರರ ಮೇಲೆ ಒತ್ತಡ ಹೆಚ್ಚಾಗುತ್ತದೆ ಎಂದು ಹೇಳಿಕೆ ನೀಡಿರುವರು.

ರಾಜ್ಯದಲ್ಲಿ ಕಾಲಕಾಲಕ್ಕೆ ವೇತನ ಆಯೋಗಗಳನ್ನು ರಚನೆ ಮಾಡಿದರೆ ಈ ರೀತಿಯ ವ್ಯತ್ಯಾಸ ಆಗುವುದಿಲ್ಲ ಎಂಬ ಬೇಡಿಕೆಗಳನ್ನು ಇಟ್ಟುಕೊಂಡು ಹೋರಾಟಕ್ಕೆ ಸಜ್ಜಾಗಿದ್ದಾರೆ. ಆದ್ದರಿಂದ, ಸಮಾನ ಕೆಲಸಕ್ಕೆ ಸಮಾನ ವೇತನ ಎಂಬ ನೀತಿಯಂತೆ ಕೇಂದ್ರ ಸರ್ಕಾರಿ ನೌಕರರಿಗೆ ನೀಡಿದ ಸರಿಸಮಾನವಾದ ವೇತನ ಶ್ರೇಣಿಯನ್ನು ನೀಡಬೇಕೆಂದು ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ವ್ಹಿ.ಸಂಕನೂರರವರು ಕೇಳಿದ ಶೂನ್ಯವೇಳೆಯ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ಮಂಡಿಸಲಾಗುವುದು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಖ) ವಿಷಯ:- ಕೇಂದ್ರ ಸರ್ಕಾರ ಸೇಫ್ ಸಿಟಿ ಯೋಜನೆ ಅಡಿ ಬೆಂಗಳೂರು ನಗರಕ್ಕೆ 667 ಕೋಟಿ ನಿಧಿ ಲಭ್ಯವಿದ್ದರೂ ರಾಜ್ಯ ಸರ್ಕಾರ ಬಳಕೆ ಮಾಡಿಕೊಳ್ಳದೇ ಇರುವ ಬಗ್ಗೆ.**

\- - - - - -

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಹಿಳೆಯರ ಸುರಕ್ಷತೆ ಹಾಗೂ ಭದ್ರತೆಗಾಗಿ 2013ರಲ್ಲಿ ರಚಿಸಲಾಗಿದ್ದ "ಸೇಫ್ ಸಿಟಿ ಯೋಜನೆ"ಯನ್ನು ಸದ್ಬಳಕೆ ಮಾಡುವಲ್ಲಿ ರಾಜ್ಯ ಸರ್ಕಾರ ನಿರ್ಲಕ್ಷ್ಯ ತೋರಿರುವುದು ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ.

ಕೇಂದ್ರ ಸರ್ಕಾರ ಸೇಫ್ ಸಿಟಿ ಯೋಜನೆಯಡಿ ಬೆಂಗಳೂರು ನಗರಕ್ಕೆ ಕಳೆದ ಎರಡು ವರ್ಷಗಳ ಹಿಂದೆ ಮಂಜೂರಾದ ರೂ.667.00 ಕೋಟಿ ನಿಧಿ ಲಭ್ಯವಿದ್ದರೂ ಅದನ್ನು ಬಳಕೆ ಮಾಡಿಕೊಳ್ಳುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ.

ದೇಶಾದ್ಯಂತ ಎಲ್ಲಾ ಮೆಟ್ರೋಪಾಲಿಟನ್ ಸಿಟಿಗಳಲ್ಲೂ ಕಳೆದ 2 ವರ್ಷಗಳಿಂದ ಒಂದಿಲ್ಲೊಂದು ಕಾರ್ಯಕ್ರಮಗಳು ಈ ಯೋಜನೆಯಡಿ ನಡೆಯುತ್ತಿದ್ದರೂ ಬೆಂಗಳೂರು ಮಾತ್ರ ಇದರಿಂದ ಹೊರತಾಗಿ ಇನ್ನೂ ಟೇಕಾಫ್ ಆಗುವ ರೀತಿಯಲ್ಲೇ ಇದೆ.

ನಗರದ ಹೆಣ್ಣು ಮಕ್ಕಳ ಭದ್ರತೆ ಮತ್ತು ಸುರಕ್ಷತೆ ಸಲುವಾಗಿ 16 ಸಾವಿರ ಕ್ಯಾಮೆರಾಗಳನ್ನು ಅಳವಡಿಸಲು ಈ ಹಿಂದೆ ಉದ್ದೇಶಿಸಲಾಗಿತ್ತು. ಆದರೆ ಟೆಂಡರ್‌ನಲ್ಲಾದ ಗೊಂದಲಗಳು, ಕೆಲವು ಆಂತರಿಕ ಕಲಹಗಳಿಂದ ಈ ಯೋಜನೆ ನನೆಗುದಿಗೆ ಬಿದ್ದಿರುವುದು ಅಪಹಾಸ್ಯವೇ ಸರಿ. ಪ್ರಸ್ತುತ ಟೆಂಡರ್ ಅಂತಿಮಗೊಂಡು ವರ್ಕ್ ಆರ್ಡರ್ ನೀಡಲಾಗಿದೆ ಎನ್ನುವ ಮಾತುಗಳು ಕೇಳಿ ಬರುತ್ತಿದ್ದು, ಯಾವ ಕಾಲಮಿತಿಯೊಳಗೆ ಈ ಯೋಜನೆಗೆ ಕೇಂದ್ರ ಸರ್ಕಾರ ಒದಗಿಸಿರುವ ಅನುದಾನವನ್ನು ಸದ್ಬಳಕೆ ಮಾಡಿಕೊಳ್ಳಲಾಗುವುದು ಎನ್ನುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಕೇಳಿದ ಶೂನ್ಯವೇಳೆಯ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ಮಂಡಿಸಲಾಗುವುದು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಎ) ವಿಷಯ:- ಉಕ್ಕು ಮತ್ತು ಇತರೆ ಕಚ್ಚಾ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಸಣ್ಣ ಕೈಗಾರಿಕೆಗಳು ಪ್ರತಿಭಟನೆ ಮಾಡುತ್ತಿರುವ ಬಗ್ಗೆ.**

\- - - - - - -

**ಶ್ರೀ ಎಸ್.ರುದ್ರೇಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಉಕ್ಕು ಹಾಗೂ ಇತರೇ ಕಚ್ಚಾವಸ್ತುಗಳ ಬೆಲೆ ಏರಿಕೆ ಖಂಡಿಸಿ, ಸಣ್ಣ ಕೈಗಾರಿಕೆಗಳು ಹಾಗೂ ವಿವಿಧ ಸಂಘಟನೆಗಳು ರಾಜ್ಯಾದ್ಯಂತ ಪ್ರತಿಭಟನೆ ಮಾಡಿದ್ದು, ಈ ಕುರಿತು ಶೂನ್ಯವೇಳೆಯಲ್ಲಿ ವಿಷಯವನ್ನು ಪ್ರಸ್ತಾಪಿಸುತ್ತೇನೆ.

ಕಳೆದ 2 ವರ್ಷಗಳಿಂದ ಈ ಕೋವಿಡ್‌ನಿಂದಾಗಿ ಇಡೀ ದೇಶದ ಜನತೆ ಸಂಕಷ್ಟಕ್ಕೀಡಾಗಿದ್ದಾರೆ. ಈ ಸಂದರ್ಭದಲ್ಲಿ ನಮ್ಮ ದೇಶದ ಅನೇಕ ಕೈಗಾರಿಕೆಗಳು ನಷ್ಟಕ್ಕೀಡಾಗಿ ಶೇಕಡಾ 15 ರಷ್ಟು ಬೀಗ ಮುದ್ರೆ ಬಿದ್ದಿದೆ ಹಾಗೂ ಲಕ್ಷಾಂತರ ಕಾರ್ಮಿಕರು ಕೂಡ ಕೆಲಸ ಕಳೆದುಕೊಂಡಿರುತ್ತಾರೆ. ಇಂತಹ ಸಂಕಷ್ಟದ ಸಂದರ್ಭದಲ್ಲಿ ಕೈಗಾರಿಕೆಗಳ ಅಗತ್ಯ ವಸ್ತುಗಳಾದ ಉಕ್ಕು ಮತ್ತು ಇತರೇ ಕಚ್ಚಾ ವಸ್ತುಗಳ ಬೆಲೆಯು ಶೇಕಡಾ 40 ರಿಂದ ಶೇಕಡಾ 70 ರಷ್ಟು ಏರಿಕೆ ಆಗಿದೆ. ಇದರಿಂದ ದೇಶದ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ದೊಡ್ಡ ಆರ್ಥಿಕ ಸಂಕಷ್ಟ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಸಣ್ಣ ಕೈಗಾರಿಕೆಗಳ ಹಾಗೂ ಉದ್ದಿಮೆದಾರರ ಸಂಘಟನೆಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಆದ್ದರಿಂದ, ಸರ್ಕಾರ ಕೈಗಾರಿಕೆಗಳ ಅಗತ್ಯವಿರುವ ಕಚ್ಚಾವಸ್ತುಗಳ ಏರಿದ ದರವನ್ನು ನಿಯಂತ್ರಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ನಾನು ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ರುದ್ರೆಗೌಡರವರು ಕೇಳಿದ ಶೂನ್ಯವೇಳೆಯ ಪ್ರಶ್ನೆಗೆ ಮಾನ್ಯ ಸಣ್ಣ ಕೈಗಾರಿಕೆ ಮತ್ತು ಪೌರಾಡಳಿತ ಸಚಿವರಿಂದ ಉತ್ತರವನ್ನು ಮಂಡಿಸಲಾಗುವುದು.

**ಬಿ) ವಿಷಯ:- ಮುಖ್ಯೋಪಾಧ್ಯಾಯರಿಗೆ ಬಡ್ತಿ ನೀಡುವಲ್ಲಿ ಆಗುತ್ತಿರುವ ವಿಳಂಬ ಕುರಿತು.**

\- - - - - -

**ಡಾ|| ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತಿದ್ದೇನೆ. ಕರ್ನಾಟಕ ರಾಜ್ಯದಲ್ಲಿನ ಮೂರು ವಿಭಾಗಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಸಹ ಶಿಕ್ಷಕರಿಗೆ ಮುಖ್ಯೋಪಾಧ್ಯಾಯರಾಗಿ ಬಡ್ತಿ ನೀಡುವಲ್ಲಿ ವಿಳಂಬವಾಗುತ್ತಿದೆ ಹಾಗೂ ತಾರತಮ್ಯವಾಗುತ್ತಿದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಬಡ್ತಿ ನೀಡುವ ಪ್ರಕ್ರಿಯೆ ಗುಲ್ಬರ್ಗ ಮತ್ತು ಧಾರವಾಡ ವಿಭಾಗದಲ್ಲಿ ಕಾಲಕಾಲಕ್ಕೆ ನೀಡುತ್ತಿದ್ದು, 2004ರ ಬ್ಯಾಚ್ ತನಕ ನೀಡಲಾಗಿದೆ.

ಆದರೆ, ಬೆಂಗಳೂರು ಮತ್ತು ಮೈಸೂರು ವಿಭಾಗದಲ್ಲಿ ಸರ್ಕಾರಿ ಪ್ರೌಢ ಶಾಲೆಗಳ ಸಹ ಶಿಕ್ಷಕರಿಂದ ಮುಖ್ಯೋಪಾಧ್ಯಾಯರಾಗಿ ಬಡ್ತಿ ನೀಡುವ ಪ್ರಕ್ರಿಯೆ ಬಹಳ ವಿಳಂಬವಾಗುತ್ತಿದ್ದು, 1994ರಲ್ಲಿ ನೇಮಕವಾದ ಸಹ ಶಿಕ್ಷಕರಲ್ಲಿ ಸುಮಾರು ಜನ ನಿವೃತ್ತಿಯಾಗುತ್ತಿದ್ದಾರೆ ಮತ್ತು ಅವರು ತಮ್ಮ ಜೀವಮಾನದಲ್ಲಿ ಕನಿಷ್ಟ ಒಂದು ಬಡ್ತಿ ತೆಗೆದುಕೊಳ್ಳದೇ ನಿವೃತ್ತಿಯಾಗುತ್ತಿರುವುದು ಬಹಳ ವಿಷಾದನೀಯ ಸಂಗತಿ ಎಂದು ತಮಗೆ ತಿಳಿಸುತ್ತೇನೆ.

ಈ ಬಗ್ಗೆ ನಾನು ಸುಮಾರು ಬಾರಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ, ಈ ಸಂಬಂಧ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಲು ವಿನಂತಿ ಮಾಡಿದ್ದರೂ ಇದುವರೆಗೂ ಈ ವರ್ಗಕ್ಕೆ ನ್ಯಾಯ ಕೊಡಿಲು ಪ್ರಯತಿಸಿದ್ದರೂ ಈ ಸಂಬಂಧ ನಿರೀಕ್ಷಿತ ಮಟ್ಟದಲ್ಲಿ ಕೆಲಸ ಸಾಗಲಿಲ್ಲ ಎಂದು ಬಹಳ ನೋವಿನಿಂದ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ.

ಆದ್ದರಿಂದ, ಬೆಂಗಳೂರು ಮತ್ತು ಮೈಸೂರು ವಿಭಾಗದಲ್ಲಿ ಸುಮಾರು 200 ಮುಖ್ಯ ಶಿಕ್ಷಕರ ಹುದ್ದೆಗಳು ಖಾಲಿಯಿದ್ದು, ಇದಕ್ಕೆ ಬಡ್ತಿ ನೀಡಲು ಜೇಷ್ಠತಾ ಪಟ್ಟಿಯನ್ನು ತಕ್ಷಣವೇ ಪೂರ್ತಿಗೊಳಿಸಿ, ಸಹ ಶಿಕ್ಷಕರನ್ನು ಹಾಲಿ ಚಾಲ್ತಿಯಲ್ಲಿರುವ ಮುಖ್ಯ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ಪ್ರಾರಂಭವಾಗುವುದಕ್ಕೆ ಮುಂಚೆ ಸದರಿ ಸಹ ಶಿಕ್ಷಕರಿಗೆ ನ್ಯಾಯಯುತವಾಗಿ ದೊರಕಬೇಕಾದ ಮುಖ್ಯ ಶಿಕ್ಷಕರ ಹುದ್ದೆಗೆ ಪದೋನ್ನತಿ ನೀಡಿ, ಅವರ ಆತಂಕವನ್ನು ನಿವಾರಿಸಬೇಕಾಗಿ ತಮ್ಮ ಮೂಲಕ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಲ್ಲಿ ಕೇಳುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ವೈ.ಎ.ನಾರಾಯಣಸ್ವಾಮಿಯವರು ಕೇಳಿದ ಶೂನ್ಯವೇಳೆಯ ಪ್ರಶ್ನೆಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಐ) ವಿಷಯ:- ಅನುದಾನಿತ ಪೌಢಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು.**

\- - - - - - -

**ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅನುದಾನಿತ ಪೌಢ ಶಾಲೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ತುಂಬಲು ಪತ್ರಿಕಾ ಪ್ರಕಟಣೆ ಕುರಿತಂತೆ ಶೂನ್ಯವೇಳೆಯಲ್ಲಿ ಪ್ರಾಥಮಿಕ ಮತ್ತು ಪೌಢ ಶಿಕ್ಷಣ ಸಚಿವರ ಗಮನ ಸೆಳೆಯಲು ಇಷ್ಟಪಡುತ್ತೇನೆ.

ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪೌಢ ಶಿಕ್ಷಣ ಇಲಾಖೆ ಇವರು ದಿನಾಂಕ:30-10-2021 ರಂದು ತುರ್ತು ಆದೇಶದಂತೆ ಪ್ರಾಥಮಿಕ ಮತ್ತು ಪೌಢ ಶಿಕ್ಷಣ ಇಲಾಖೆ ಆಯುಕ್ತರಿಗೆ ಅನುದಾನಿತ ಪೌಢಶಾಲೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ತುಂಬಲು ಪತ್ರಿಕಾ ಪ್ರಕಟಣೆ ಕುರಿತಂತೆ ಸರ್ಕಾರ/ಇಲಾಖಾ ವತಿಯಿಂದ ಅನುಮತಿಸಿರುವ ಖಾಲಿ ಹುದ್ದೆಗಳ ನೇಮಕಾತಿಗೆ ಸಂಬಂಧಪಟ್ಟಂತೆ ಹೆಚ್ಚಾಗಿ ಪ್ರಚಾರವಾಗಿರುವ ಒಂದು ರಾಜ್ಯ ಮಟ್ಟದ ಮತ್ತು ಜಿಲ್ಲಾ ಮಟ್ಟದ ಪತ್ರಿಕೆಯಲ್ಲಿ ನೀಡಿದ್ದಲ್ಲಿ ಅದನ್ನು ಪರಿಗಣಿಸಿ ನೇಮಕಾತಿ ಪ್ರಕ್ರಿಯೆಗೆ ಅನುಮೋದನೆ ನೀಡಲು ಕೂಡಲೇ ಕ್ರಮ ಕೈಗೊಳ್ಳಲು ಸರ್ಕಾರ ಅನುಮೋದನೆ ನೀಡಿದೆ ಎಂದು ತಿಳಿಸಿ ಆದೇಶವನ್ನು ನೀಡಿದ್ದು, ಇದಕ್ಕೆ ಇಲಾಖೆಯ ಆಯುಕ್ತರು ಸರ್ಕಾರದ ಆದೇಶಕ್ಕೆ ಪ್ರತ್ಯುತ್ತರವಾಗಿ ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪೌಢ ಶಿಕ್ಷಣ ಇಲಾಖೆ ರವರಿಗೆ ಕಾರಣ ನೀಡಿ ಪತ್ರ ಬರೆದಿರುತ್ತಾರೆ, ಇದರಿಂದ ಈಗಾಗಲೇ ಸರ್ಕಾರದ ವಿವಿಧ ಹಂತಗಳಲ್ಲಿ ಅನುಮೋದನೆಗೊಂಡು ಆಯುಕ್ತರ ಕಚೇರಿಯಲ್ಲಿ ಅನುಮೋದನೆ ಆಗದೇ ಇರುವ ಶಿಕ್ಷಕರ ವಯೋಮಿತಿ ಮೀರಿದೆ ಹಾಗೂ ಮೀರುವ ಹಂತದಲ್ಲಿದ್ದಾರೆ.

ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ ಮತ್ತು ಅನುಮೋದಿಸಿದ್ದರೆ ಇಲ್ಲಿಯವರೆಗೂ ಎಷ್ಟು ಹುದ್ದೆಗಳನ್ನು ಅನುದಾನ ಸಹಿತವಾಗಿ ಅನುಮೋದಿಸಿದ್ದೀರಿ? ಉಳಿಕೆ ಎಷ್ಟು? ಚಾಲ್ತಿಯಲ್ಲಿರುವ ಹುದ್ದೆಗಳನ್ನು ಅನುಮೋದಿಸದೆ ಇರಲು ಕಾರಣವೇನು?

**ಸಲಹೆಗಳು:** ಕೋವಿಡ್-19 ಆರ್ಥಿಕ ಮಿತವ್ಯಯಕ್ಕಿಂತ ಮುಂಚೆ ಯಾವ ರೀತಿಯಲ್ಲಿ ನೇಮಕಾತಿ ಮಾಡಲಾಗಿದೆಯೋ ಅದೇ ರೀತಿಯಲ್ಲಿ ತುರ್ತಾಗಿ ಅನುಮೋದನೆ ನೀಡುವುದು. ಏಕೆಂದರೆ, ಈಗಾಗಲೇ ಆಯುಕ್ತರ ಕಛೇರಿಗೆ ಅರ್ಜಿಗಳು ಬಂದು ಎರಡು ವರ್ಷಗಳು ಕಳೆದಿವೆ. ಇದರಿಂದ ಎಷ್ಟೋ ಶಿಕ್ಷಕರ ವಯೋಮಿತಿ ಮೀರಿದೆ ಮತ್ತು ಮೀರುವ ಹಂತದಲ್ಲಿದೆ.

ಮುಂದೆ ನೇಮಕಾತಿಗಾಗಿ ಪ್ರಸ್ತಾವನೆಗಳು ಬಂದಾಗ, ಸರ್ಕಾರ ಸೂಕ್ತ ಸಲಹೆಗಳೊಂದಿಗೆ ಮತ್ತು ನಿಯಮಗಳೊಂದಿಗೆ ಕೆಳಗಿನ ಅಧಿಕಾರಿಗಳಿಗೆ ಹಾಗೂ ಅನುದಾನಿತ ಸಂಸ್ಥೆಗಳಿಗೆ ನಿರ್ದೇಶಿಸಿ ಹುದ್ದೆಗಳನ್ನು ತುಂಬಲು ಅನುಮತಿ ನೀಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಚಿದಾನಂದ್ ಎಂ.ಗೌಡರವರು ಕೇಳಿದ ಶೂನ್ಯವೇಳೆಯ ಪ್ರಶ್ನೆಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

(ಮುಂದು)

**(1203) ಎಸ್‌ಪಿಆರ್/ವಿಕೆ 12:30 21/12/2021 (ಸಭಾಪತಿಯವರ ಉಪಸ್ಥಿತಿ)**

**ಒ) ವಿಷಯ :- ಕಿತ್ತೂರ ತಾಲ್ಲೂಕಿನ ಕುಲವಳ್ಳಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯ 9 ಹಳ್ಳಿಗಳಿಗೆ ರೈತರ ಸಾಗುವಳಿ ಚೀಟಿ ನೀಡುವ ಬಗ್ಗೆ.**

- - - - -

**ಶ್ರೀ ಆರ್.ಬಿ.ತಿಮ್ಮಾಪೂರ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಬೆಳಗಾವಿ ಜಿಲ್ಲೆ, ಚಿ.ಕಿತ್ತೂರ ತಾಲ್ಲೂಕು, ಕುಲವಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ 9 ಹಳ್ಳಿಗಳಲ್ಲಿನ ರೈತರು ಮುತ್ತಜ್ಜನ ಕಾಲದಿಂದಲೂ ಜಮೀನು ಸಾಗುವಳಿ ಮಾಡುತ್ತಾ ಬರುತ್ತಿದ್ದು, ಅವರುಗಳಿಗೆ ಈವರೆಗೂ ಹಕ್ಕುಪತ್ರ ನೀಡದಿರುವುದು ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ. 2016ರಲ್ಲಿ ಅಂದಿನ ಕಂದಾಯ ಸಚಿವರಾದ ಶ್ರೀ ಕಾಗೋಡು ತಿಮ್ಮಪ್ಪನವರು ಹಾಗೂ ಮಾಜಿ ಸಚಿವರು ಮತ್ತು ಶಾಸಕರಾಗಿದ್ದ ಶ್ರೀ ಡಿ.ಬಿ. ಇನಾಂದಾರ್ ಹಾಗೂ ಬೆಳಗಾವಿ ಜಿಲ್ಲಾಧಿಕಾರಿಗಳು ಈ ಹಳ್ಳಿಗಳಿಗೆ ಭೇಟಿ ನೀಡಿ ಸಾಗುವಳಿ ಮಾಡುತ್ತಿರುವ ಜಮೀನುಗಳಿಗೆ ಸರ್ವೆ ಮಾಡಲು ಆದೇಶವನ್ನು ನೀಡಿದ ಕಾರಣ, 2016 ನೇ ಇಸ್ವಿಯಲ್ಲಿಯೇ ಸರ್ವೆ ಕಾರ್ಯವು ಮುಕ್ತಾಯಗೊಂಡಿರುತ್ತದೆ. ಆದರೆ, ಇದುವರೆಗೆ ಯಾವುದೇ ರೈತರಿಗೆ ಹಕ್ಕುಪತ್ರ ನೀಡಿರುವುದಿಲ್ಲ. ಈ ಸಂಬಂಧ ಅನೇಕ ಮನವಿಗಳನ್ನು ಸಲ್ಲಿಸಿದ್ದರೂ, ಯಾವುದೇ ಕ್ರಮವಾಗಿರುವುದಿಲ್ಲ. ಆದಕಾರಣ, ತತ್‌ಕ್ಷಣವೇ 9 ಹಳ್ಳಿಗಳ ರೈತರಿಗೆ ಸಾಗುವಳಿ ಹಕ್ಕುಪತ್ರ ನೀಡಲು ಜರೂರು ಕ್ರಮ ಕೈಗೊಳ್ಳಬೇಕೆಂದು ಕಂದಾಯ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟಂತೆ, ಕಂದಾಯ ಮಂತ್ರಿಗಳಿಂದ ಉತ್ತರವನ್ನು ತರಿಸಿ ಕೊಡಲಾಗುವುದು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಓ) ವಿಷಯ :- ರಾಜ್ಯದ ನಾನಾ ಭಾಗಗಳಲ್ಲಿ ಅಕಾಲಿಕ ಮಳೆ, ಬೆಳೆ ಹಾನಿ ತತ್ತರಿಸಿರುವ ಕಬ್ಬು ಬೆಳೆಗಾರರಿಗೆ ಕಟಾವು ಖರ್ಚನ್ನು ಸರ್ಕಾರ, ಮಾಲೀಕರು ಭರಿಸುವ ಬಗ್ಗೆ.**

\- - - - - -

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಉತ್ತರ ಕನ್ನಡ ಜಿಲ್ಲೆಗಳಲ್ಲಿ ಹಾಗೂ ರಾಜ್ಯದ ನಾನಾ ಭಾಗಗಳಲ್ಲಿ ಅಕಾಲಿಕ ಮಳೆ, ಬೆಳೆ ಹಾನಿ, ಬೆಲೆ ಏರಿಕೆಯಿಂದ ತತ್ತರಿಸಿರುವ ಕಬ್ಬು ಬೆಳೆಗಾರರು ಈಗ ಬೆಳೆಸಿದ ಕಬ್ಬನ್ನು ಸಕ್ಕರೆ ಕಾರ್ಖಾನೆಗಳಿಗೆ ಸಾಗಿಸಲು ಪರದಾಡುವಂತಾಗಿದೆ. ಕಬ್ಬು ಬೆಳೆದ 12 ತಿಂಗಳಲ್ಲಿ ಕಟಾವು ಮಾಡಿ ಸಾಗಿಸಬೇಕು. ಆದರೆ, ಇದೀಗ ಕಬ್ಬು ಬೆಳೆದು 15-16 ತಿಂಗಳುಗಳು ಕಳೆದಿದ್ದರೂ ಕಟಾವು ಆಗಿಲ್ಲ; ಇದರ ಪರಿಣಾಮ ಕಬ್ಬಿನ ತೂಕವು ಕಡಿಮೆಯಾಗುತ್ತಿದೆ. ಇದರಿಂದ ಆಂತಕಗೊಂಡಿರುವ ಬೆಳೆಗಾರರು ಹೆಚ್ಚುವರಿಯಾಗಿ ಅಂದರೆ ಕಾರ್ಖಾನೆಗೆ ಒಂದು ಟ್ರ್ಯಾಕ್ಟರ್ ಕಬ್ಬಿಗೆ ಸುಮಾರು 2-3 ಸಾವಿರ ರೂಪಾಯಿಗಳನ್ನು ನೀಡಿ, ಕಟಾವು ಮಾಡಿಸಬೇಕಾಗುತ್ತದೆ. ರೈತರು ಬೆಳೆದ ಕಬ್ಬು ಜಮೀನಿನಿಂದ ಹೋದರೆ ಸಾಕೆಂದು ನಿರ್ಧರಿಸಿದ್ದಾರೆ ಮತ್ತು ರೈತರು ಸಾಲ ಮಾಡಿ ಗ್ಯಾಂಗ್‌ಗಳಿಗೆ ಹಣ ಪಾವತಿಸುತ್ತಿದ್ದಾರೆ. ಆದ್ದರಿಂದ ಆತಂಕಗೊಂಡ ಕಬ್ಬು ಬೆಳೆದ ರೈತರಿಗೆ ಕಬ್ಬು ಕಟಾವಿನ ವೆಚ್ಚವನ್ನು ಸರ್ಕಾರ ಹಾಗೂ ಖಾಸಗಿ ಕಾರ್ಖಾನೆಗಳ ಮಾಲೀಕರು ಭರಿಸುವಂತೆ ಶೂನ್ಯ ವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದಸ್ಯರು ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟಂತೆ, ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಸಚಿವರಿಂದ ಉತ್ತರವನ್ನು ತರಿಸಿ ಕೊಡಲಾಗುವುದು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## 4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾಗಿದ್ದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು

**ಅ) ವಿಷಯ:- ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಸೊಳ್ಳೆಗಳ ನಿಯಂತ್ರಣಕ್ಕೆ ಫಾಗಿಂಗ್ ಕೆಲಸಕ್ಕೆ ಟೆಂಡರ್ ಕರೆಯದೇ ಅವ್ಯವಹಾರ ನಡೆದಿರುವ ಬಗ್ಗೆ.**

\- - - - - - -

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ದಿನಾಂಕ 15/12/2021 ರಂದು ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್ ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ವಿಷಯ:- ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಒಳಪಡುವ ರಸ್ತೆಗಳಿಗೆ ಪದೇ ಪದೇ ಡಾಂಬರೀಕರಣ ಹಾಗೂ ಗುಂಡಿ ಮುಚ್ಚುವುದರಿಂದ ಸರ್ಕಾರದ ಹಣ ಪೋಲಾಗುತ್ತಿರುವ ಬಗ್ಗೆ.**

\- - - - - - -

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ದಿನಾಂಕ 15/12/2021 ರಂದು ಸದಸ್ಯರಾದ ಶ್ರೀ ಪಿ.ಆರ್.ರಮೇಶ್ ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಇ) ವಿಷಯ :- ಚಿಕ್ಕಪೇಟೆಯ ಪಾರ್ವತಿಪುರದಲ್ಲಿ ಒಳಚರಂಡಿ ಕೊಳವೆ ಬದಲಿಸುವ ಕಾಮಗಾರಿಯನ್ನು BWSSB ಬದಲಿಗೆ BBMP ಕೈಗೊಂಡಿರುವ ಬಗ್ಗೆ.**

**- - - - - - -**

**ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ದಿನಾಂಕ 16/12/2021 ರಂದು ಸದಸ್ಯರಾದ ಶ್ರೀ ಪಿ.ಆರ್.ರಮೇಶ್ ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಈ) ವಿಷಯ:-ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯದ ಅಭಿವೃದ್ಧಿಗಾಗಿ ಹೆಚ್ಚುವರಿಯಾಗಿ 150 ಕೋಟಿ ರೂಪಾಯಿಗಳ ವಿಶೇಷ ಅನುದಾನ ಬಿಡುಗಡೆ ಕುರಿತು**

\- - - - - -

**ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಉನ್ನತ ಶಿಕ್ಷಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ದಿನಾಂಕ 17/12/2021 ರಂದು ಸದಸ್ಯರಾದ ಡಾ|| ತಳವಾರ ಸಾಬಣ್ಣರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಿದೆ)**

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

## 5. ಚುನಾವಣಾ ಪ್ರಸ್ತಾವ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಗೆ ವಿಧಾನ ಪರಿಷತ್ತಿನ ಇಬ್ಬರು ಸದಸ್ಯರುಗಳನ್ನು ಚುನಾಯಿಸಬೇಕೆಂಬ ಪ್ರಸ್ತಾವನೆಯನ್ನು ದಿನಾಂಕ 16/12/2021 ರಂದು ಮಂಡಿಸಲಾಗಿರುತ್ತದೆ. ನಡೆದು ಬಂದಿರುವ ಸದನದ ಪದ್ಧತಿಯಂತೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಗೆ ವಿಧಾನ ಪರಿಷತ್ತಿನ ಸದಸ್ಯರುಗಳನ್ನು ಚುನಾಯಿಸುವ ಬದಲು ನಾಮನಿರ್ದೇಶಿಸಲು ಈ ಸದನವು ಮಾನ್ಯ ಸಭಾಪತಿಯವರಿಗೆ ಅಧಿಕಾರ ನೀಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಗೆ ವಿಧಾನ ಪರಿಷತ್ತಿನ ಸದಸ್ಯರುಗಳನ್ನು ಚುನಾಯಿಸುವ ಬದಲು ನಾಮನಿರ್ದೇಶಿಸುವುದು."

ಸಭಾನಾಯಕರು ಮಂಡಿಸಿದ ಪ್ರಸ್ತಾವಕ್ಕೆ ಸದನದ ಅನುಮತಿ ಇದೆ ಎಂದು ಭಾವಿಸುತ್ತೇನೆ.

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

## 6. ಪ್ರಕಟಣೆ

**ಸಭಾಪತಿಯವರು:-** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ.

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳು 104 ನೇ ನಿಯಮದ ಮೇರೆಗೆ, ವಿಧಾನ ಸಭೆಯು ದಿನಾಂಕ 20/12/2021 ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನಹ ಸಹಮತಿ ನೀಬೇಕೆಂದು ಕೋರಿರುತ್ತಾರೆ.

(1) ಕರ್ನಾಟಕ ನಗರ ಪಾಲಿಕೆಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2021

(2) ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2021

(3) ಕರ್ನಾಟಕ ಕೆಲವು ಇನಾಮುಗಳ ರದ್ದಿಯಾತಿ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2021

(4) ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯ, ವಿಧೇಯಕ, 2021

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## ಗೈರು ಹಾಜರಿಗೆ ಅನುಮತಿ

**ಸಭಾಪತಿಯವರು:-** ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅಡಗೂರು ಹೆಚ್.ವಿಶ್ವನಾಥ್ ರವರು ಬರೆದ ಪತ್ರವು ನನಗೆ ಬಂದಿದ್ದು, ಅದು ಈ ರೀತಿ ಇದೆ.

'ಶ್ರೀ ಅಡಗೂರು ಹೆಚ್.ವಿಶ್ವನಾಥ್ ರವರು ಪಸಕ್ತ ಅಧಿವೇಶನವನ್ನು ಅನಾರೋಗ್ಯದ ನಿಮಿತ್ತ ಗೈರು ಹಾಜರಾಗಲು ಅನುಮತಿ ಕೋರಿದ್ದಾರೆ'.

ಮಾನ್ಯ ಸದಸ್ಯರು ಗೈರು ಹಾಜರಾಗಲು ಸಭೆಯು ಸಮ್ಮತಿಸುತ್ತದೆಯೇ?

**ಸಭೆಯು ಒಪ್ಪಿಗೆ ಸೂಚಿಸಿತು**

**ಸಭಾಪತಿಯವರು:-** ಸದಸ್ಯರ ಗೈರು ಹಾಜರಿಗೆ ಅನುಮತಿ ನೀಡಲಾಗಿದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## 7. ನಿಯಮ 68ರ ಮೇರೆಗೆ ಮುಂದುವರೆದ ಚರ್ಚೆ

**ವಿಷಯ:- ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ.**

\- - - - - -

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಅದರಲ್ಲೂ ಈ ನಾಡಿನ ಅಭಿವೃದ್ಧಿಗೆ ಸಂಬಂಧಿಸಿದ ಜಲಾಶಯಗಳ ಮತ್ತು ಕುಡಿಯುವ ನೀರಿನ ವಿಚಾರದ ಬಗ್ಗೆ ಪ್ರಸ್ತಾಪಿಸಲು ಅವಕಾಶ ನೀಡಿದ್ದಕ್ಕಾಗಿ ನಾನು ತಮಗೆ ಅಭಾರಿಯಾಗಿದ್ದೇನೆ.

**(ಈ ಹಂತದಲ್ಲಿ ಉಪಸಭಾಪತಿಗಳಾದ ಶ್ರೀ ಎಂ.ಕೆ.ಪ್ರಾಣೇಶ್ ರವರು ಸಭಾಪತಿ ಪೀಠವನ್ನು ಅಲಂಕರಿಸಿದರು)**

ರಾಜ್ಯದ ನೀರಾವರಿ ಯೋಜನೆಗಳಿಗೂ ಮುನ್ನ ಕುಡಿಯುವ ನೀರಿನ ವಿಚಾರದಲ್ಲಿ ಕಳೆದ ಮೂರ್ನಾಲ್ಕು ದಶಕಗಳಿಂದ ನಿರಂತರವಾಗಿ ಸಮಸ್ಯೆಯಲ್ಲಿಯೇ ಹೂತುಹೋಗಿರುವ ಮಹದಾಯಿ ಯೋಜನೆಯ ಬಗ್ಗೆ ಪ್ರಸ್ತಾಪಿಸಲು ಬಯಸುತ್ತೇನೆ. ಮಹದಾಯಿ ನದಿಯು ಕರ್ನಾಟಕ ರಾಜ್ಯದ ಪ್ರಮುಖ ನದಿಗಳಲ್ಲೊಂದಾಗಿದೆ. ಇದನ್ನು 'ಮಾಂಡೋವಿ ನದಿ' ಎಂಬುದಾಗಿಯೂ ಸಹ ಕರೆಯುತ್ತಾರೆ. ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಕನಕಂಬಿ ಇದರ ಉಗಮ ಸ್ಥಾನವಾಗಿದ್ದು, ಇದರ ಒಟ್ಟು ಉದ್ದ 77 ಕಿಲೋಮೀಟರ್. ಈ ನದಿಯು ನಮ್ಮ ರಾಜ್ಯದಲ್ಲಿ ಸರಿಸುಮಾರು 30-32 ಕಿಲೋಮೀಟರ್‌ಗಳಷ್ಟು ಹರಿಯುತ್ತದೆ. ನಂತರದಲ್ಲಿ ಗೋವಾ ರಾಜ್ಯದಲ್ಲಿ ಹರಿದು, ಸುಮಾರು 1-1½ ಕಿಲೋಮೀಟರ್‌ನಷ್ಟು ಮಹಾರಾಷ್ಟ್ರ ರಾಜ್ಯವನ್ನು ಸಂಪರ್ಕಿಸಿ, ಅರಬ್ಬಿ ಸಮುದ್ರವನ್ನು ಸೇರುತ್ತದೆ.

ವಾಸ್ತವವಾಗಿ, ಈ ಮಹಾದಾಯಿ ನದಿಯಿಂದ ಕಳಸಾ-ಬಂಡೂರಿ ಯೋಜನೆಗಳ ಮೂಲಕ, ಸುಮಾರು 20 ಲಕ್ಷಕ್ಕಿಂತಲೂ ಹೆಚ್ಚು ಜನಸಂದಣಿಯನ್ನು ಹೊಂದಿದ ಅವಳಿ ನಗರಗಳಾದ ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಬಾಗಲಕೋಟೆ ಮತ್ತು ಗದಗ – ಈ ನಾಲ್ಕು ಜಿಲ್ಲೆಗಳಿಗೆ ಒದಗಿಸಲಾಗುವ ಕುಡಿಯುವ ನೀರಿನ ಮಹತ್ವದ ಯೋಜನೆಯಾಗಿದೆ. ಈ ಯೋಜನೆಯನ್ನು ಜಾರಿಗೊಳಿಸಲು ಕಳೆದ ಮೂರು ದಶಕಗಳಿಂದಲೂ ನಿರಂತರವಾದ ಪ್ರಯತ್ನಗಳು ನಡೆಯುತ್ತಿವೆ. ಅದಕ್ಕಾಗಿ ಹೋರಾಟಗಳೂ ಸಹ ನಡೆದಿವೆ. ಕಳೆದ ನಾಲ್ಕೈದು ವರ್ಷಗಳಿಂದ ತೀವ್ರತರವಾದ ಹೋರಾಟಗಳು ನಡೆಯುತ್ತಿವೆ. ಅದರಲ್ಲೂ ವಿಶೇಷವಾಗಿ ಕಳೆದ ಮೂರುವರೆ-ನಾಲ್ಕು ವರ್ಷಗಳಿಂದ ನಿರಂತರವಾಗಿ ನರಗುಂದ ಮತ್ತು ನವಲಗುಂದ ತಾಲ್ಲೂಕುಗಳಲ್ಲಿ ಇಂದಿಗೂ ರೈತರು ನಿರಂತರವಾಗಿ ಹೋರಾಟ ಮಾಡುತ್ತಾ, ಬೀದಿಯಲ್ಲಿಯೇ ಇದ್ದಾರೆ. ಹತ್ತಾರು ಪಕ್ಷಗಳ ಸರ್ಕಾರಗಳು ರಾಜ್ಯದಲ್ಲಿ ಆಡಳಿತಕ್ಕೆ ಬಂದು ಹೋದವು; ವ್ಯವಸ್ಥೆಗಳೂ ಸಹ ಬದಲಾದವು. ಅದೇ ರೀತಿಯಾಗಿ ಕೇಂದ್ರದಲ್ಲಿಯೂ ಸಹ ಸರ್ಕಾರಗಳ ಬದಲಾವಣೆಯಾಯಿತು. ಆದರೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಹಾದಾಯಿ ಯೋಜನೆಯು ಮಾತ್ರವೇ ಇನ್ನೂ ಜಾರಿಗೊಂಡಿಲ್ಲ; ಕಾಮಗಾರಿಗಳು ಅನುಷ್ಠಾನಗೊಳ್ಳಲಿಲ್ಲ.

ವಾಸ್ತವವಾಗಿ, ಈ ನದಿಯಿಂದ 100 ಕ್ಕೂ ಹೆಚ್ಚು ಟಿ.ಎಂ.ಸಿ. ಪ್ರಮಾಣದಷ್ಟು ನೀರು ವ್ಯರ್ಥವಾಗಿ ಸಮುದ್ರಕ್ಕೆ ಹರಿದು ಹೋಗುತ್ತಿದೆ. ಈ ಕುಡಿಯುವ ನೀರಿನ ಯೋಜನೆಗಾಗಿ ಗೋವಾ ರಾಜ್ಯವು ನಿರಂತರವಾಗಿ ಅಡ್ಡಿಪಡಿಸುತ್ತಲೇ ಬಂದಿದೆ. 1978 ನೇ ಇಸ್ವಿಯಲ್ಲಿ ಈ ಯೋಜನೆಯು ಸಿದ್ಧಗೊಂಡಿತ್ತು. ರಾಜ್ಯದ ಇಂದಿನ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿರವರ ತಂದೆಯವರಾದ ಶ್ರೀ ಎಸ್.ಆರ್.ಬೊಮ್ಮಾಯಿ ರವರ ಆಯೋಗವು ಈ ಯೋಜನೆಯನ್ನು ಸಿದ್ಧಪಡಿಸಿತ್ತು. ಈ ಹಿಂದೆ ಅವರ ನೇತೃತ್ವದಲ್ಲಿ ಆಯೋಗವೊಂದನ್ನು ರಚಿಸಲಾಗಿತ್ತು; ಸದರಿ ಆಯೋಗವು 1980 ರ ಹೊತ್ತಿನಲ್ಲಿ ಈ ಯೋಜನೆಯನ್ನು ರೂಪಿಸಿ ಕೊಟ್ಟಿತ್ತು. 1988 ನೇ ಇಸ್ವಿಯ ಹೊತ್ತಿನಲ್ಲಿ ರಾಜ್ಯ ಸರ್ಕಾರವು ಆ ಯೋಜನೆಯನ್ನು ಅನುಮೋದಿಸಿತು. ಬಹಳ ಆಳವಾದ ಸತ್ಯವೇನೆಂದರೆ, ಆಗ ಗೋವಾ ಸರ್ಕಾರವು ತಾತ್ವಿಕವಾದ ಒಪ್ಪಿಗೆಯನ್ನು ನೀಡಿತ್ತು. ಅದೇ ರೀತಿಯಾಗಿ ಕೇಂದ್ರ ಸರ್ಕಾರವೂ ಸಹ ತನ್ನ ಒಪ್ಪಿಗೆಯನ್ನು ಸೂಚಿಸಿತ್ತು. ಅಂದಿನ ಗೋವಾ ರಾಜ್ಯದ ಮುಖ್ಯಮಂತ್ರಿಗಳಾದ ಪ್ರತಾಪ್ ಸಿಂಗ್ ರಾಣೆ ಮತ್ತು ನಮ್ಮ ರಾಜ್ಯದ ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಎಸ್.ಆರ್.ಬೊಮ್ಮಾಯಿ ರವರುಗಳು ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಮಾತುಕತೆಯನ್ನು ನಡೆಸಿದ್ದರು. ಅದರನ್ವಯ 45 ಟಿ.ಎಂ.ಸಿ.ಯಷ್ಟು ನೀರನ್ನು ರಾಜ್ಯವು ಬಳಸಿಕೊಳ್ಳಲು ಅನುಮತಿ ನೀಡಲಾಗಿತ್ತು. ಇದು ಕುಡಿಯುವ ನೀರು ಮತ್ತು ವಿದ್ಯುಚ್ಛಕ್ತಿ ಉತ್ಪಾದನೆಗಳನ್ನು ಒಳಗೊಂಡಿತ್ತು. ಆದರೆ ಈ ಯೋಜನೆಯ ಅನುಷ್ಠಾನದ ಹಂತದಲ್ಲಿ ಗೋವಾ ರಾಜ್ಯವು ತಕರಾರನ್ನು ಪ್ರಾರಂಭಿಸಿತು; ನ್ಯಾಯಾಲಯದ ಮೋರೆ ಹೋಯಿತು. ನ್ಯಾಯಾಲಯದಲ್ಲಿ ಸಲ್ಲಿಸಿರುವ ಪ್ರಕರಣದ ಕಾರಣದಿಂದಾಗಿ, ಈ ಯೋಜನೆಯು ಅಂದಿನ ದಿನ ಸ್ಥಗಿತಗೊಂಡಿತು. ಗೋವಾ ರಾಜ್ಯದ ತಕರಾರು ದಿನಾಂಕ 05/05/2002 ರಂದು ಆರಂಭವಾಯಿತು. ಈ ಕಾರಣದಿಂದಾಗಿ ನ್ಯಾಯಾಧೀಕರಣದ ರಚನೆಯಾಯಿತು; ಸದರಿ ನ್ಯಾಯಾಧೀಕರಣವು ತನ್ನ ತೀರ್ಮಾನವನ್ನು ಇತ್ತೀಚೆಗೆ ನೀಡಿದೆ. ಇದು ಮಧ್ಯಂತರ ಆದೇಶವನ್ನು ನೀಡದೇ, ತನ್ನ ಅಂತಿಮ ತೀರ್ಮಾನವನ್ನು ನೀಡಿತು. ಅದರನ್ವಯ, ಇವತ್ತಿನ ದಿವಸ ನಮ್ಮ ರಾಜ್ಯಕೆ 13.42 ; ಮಹಾರಾಷ್ಟ್ರ ರಾಜ್ಯಕ್ಕೆ 1.33 ಮತ್ತು ಗೋವಾ ರಾಜ್ಯಕ್ಕೆ 33.395 ಟಿ.ಎಂ.ಸಿ. ಪ್ರಮಾಣಗಳಷ್ಟು ನೀರು ಹಂಚಿಕೆಯಾಗಿದೆ. ನ್ಯಾಯಾಧೀಕರಣವು ದಿನಾಂಕ 14/08/2018 ರಂದು ಮೇಲ್ಕಂಡಂತೆ ತೀರ್ಪು ನೀಡಿದೆ. ಮಹಾದಾಯಿ ನದಿಯ ಒಟ್ಟಾರೆ 188 ಟಿ.ಎಂ.ಸಿ. ಗಳಷ್ಟು ನೀರಿನ ಪೈಕಿ ಕರ್ನಾಟಕ ರಾಜ್ಯವು ತತ್‌ಕ್ಷಣ 13.42 ಟಿ.ಎಂ.ಸಿ.ಯಷ್ಟು ನೀರನ್ನು ಬಳಸಿಕೊಳ್ಳಬೇಕು. ಈ ವಿಚಾರಕ್ಕೆ ಸಂಬಂಧಪಟ್ಟಂತೆ, 'ಮಹಾದಾಯಿ ನೀರು ನಿಯಂತ್ರಣ ಮಂಡಳಿ' ಇರಬೇಕೆಂಬ ತೀರ್ಮಾನವನ್ನೂ ಸಹ ಮಂಡಳಿಯು ನೀಡಿದೆ. ಆದರೆ, ಈ ವಿಚಾರದಲ್ಲಿ ನಿರಂತರವಾಗಿ ಗೋವಾ ರಾಜ್ಯವು ತನ್ನ ಅಸಹಮತಿಯನ್ನು ಸೂಚಿಸುತ್ತಾ ಬಂದಿದೆ. ನ್ಯಾಯಾಧೀಕರಣದ ತೀರ್ಮಾನ ಬಂದರೂ ಸಹ ಅದರ ಅನುಷ್ಠಾನಕ್ಕೆ ಗೋವಾ ರಾಜ್ಯವು ಅಡ್ಡಗಾಲನ್ನು

ಹಾಕುತ್ತಲೇ ಬಂದಿದೆ. ನಮ್ಮ ರಾಜ್ಯಕ್ಕೆ ಹಂಚಿಕೆಯಾದ 13.42 ಟಿ.ಎಂ.ಸಿ.ಗಳಷ್ಟು ನೀರಿನಲ್ಲಿ 5.5 ಟಿ.ಎಂ.ಸಿ.ಗಳಷ್ಟು ನೀರನ್ನು ಕುಡಿಯುವ ನೀರಿಗಾಗಿ ಬಳಸಬಹುದು. ಕಳಸಾ ಯೋಜನೆಯಲ್ಲಿ 1.12 ಟಿ.ಎಂ.ಸಿ.ಯಷ್ಟು ಮತ್ತು ಬಂಡೂರಿ ನಾಲೆ ಯೋಜನೆಯಲ್ಲಿ 2.18 ಟಿ.ಎಂ.ಸಿ.ಗಳಷ್ಟು ನೀರನ್ನು ಬಳಕೆ ಮಾಡಬಹುದಾಗಿದೆ. ಇನ್ನುಳಿದ ನೀರನ್ನು ವಿದ್ಯುಚ್ಛಕ್ತಿ ಉತ್ಪಾದನೆಗಾಗಿ ಬಳಸಿಕೊಳ್ಳಬಹುದಾಗಿದೆ. ಕಳಸಾ ಯೋಜನೆಯನ್ನು ರೂಪಿಸುವ ಸಂದರ್ಭದಲ್ಲಿ ಯೋಜನೆಯ ಗಾತ್ರ ಕೇವಲ 44 ಕೋಟಿ ರೂಪಾಯಿಗಳಷ್ಟಾಗಿತ್ತು.

(ಮುಂದು)

(1204) 12.40 21-12-2021 CS-VK

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಮುಂದು):-**

ಆದರೆ, ಇವತ್ತು ಅದರ ಖರ್ಚು 428 ಕೋಟಿ ರೂಪಾಯಿಗಳನ್ನು ಮುಟ್ಟಿದೆ. ಬಂಡೂರಿ ಯೋಜನೆ ಸಹ ಇಂತಹದ್ದೇ ಸಂದರ್ಭಕ್ಕೆ ಸಾಕ್ಷಿಯಾಗಿದೆ. ಅದು ಆರಂಭದಲ್ಲಿ ರೂ.49 ಕೋಟಿ ಇದ್ದದ್ದು ಇಂದಿಗೆ ರೂ.370 ಕೋಟಿಯನ್ನು ಮುಟ್ಟಿದೆ. Tribunal Award ನಂತೆ 27-07-2020ರಂದು gazette notification ಆಗಿದೆ. ಆದರೆ ಅರಣ್ಯ ಇಲಾಖೆ ಮತ್ತು ಪರಿಸರ ಸಂರಕ್ಷಣಾ ಇಲಾಖೆಯ ಅನುಮತಿಯನ್ನು ಪಡೆದು ಈ ಯೋಜನೆಯನ್ನು ಜಾರಿಗೆ ತರಬೇಕೆಂದು ಕೆಲವು ಷರತ್ತುಗಳನ್ನು gazette notification ನಲ್ಲಿ ವಿಧಿಸಲಾಗಿದೆ. ಈ ಯೋಜನೆಯ ಜಾರಿಗೊಳಿಸುವ ಸಲುವಾಗಿ ಇಂದಿನ ನಮ್ಮ ಮುಖ್ಯಮಂತ್ರಿಗಳಾದ ಮಾನ್ಯ ಬಸವರಾಜ ಬೊಮ್ಮಯಿಯವರು, ಹಿಂದೆ ಈ ಹೋರಾಟ ಸಮಿತಿಯ ಅಧ್ಯಕ್ಷರಾಗಿದ್ದರು. ಅವರು ಅಂದು ರೈತರನ್ನು ಸಂಘಟಿಸಿಕೊಂಡು 230 ಕಿ.ಮೀ ಪಾದಯಾತ್ರೆಯನ್ನು ಮಾಡಿ, ಸರ್ಕಾರವನ್ನು ಆಗ್ರಹಿಸಿದ್ದು ಇತಿಹಾಸವಾಗಿದೆ. ಇವತ್ತು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಆಗ್ರಹ ಮಾಡುವುದೇನೆಂದರೆ ಮಾನ್ಯ ಮುಖ್ಯಮಂತ್ರಿಗಳ ತಂದೆಯವರಾದ ಶ್ರೀ ಎಸ್. ಆರ್. ಬೊಮ್ಮಾಯಿಯವರ ಕಾಲದಲ್ಲಿ ಆಯೋಗದವರು ಸಿದ್ಧಪಡಿಸಿದ ಈ ಯೋಜನೆಯನ್ನು ಜಾರಿಗೆ ತರುವಂತಹ ಒಂದು ಸವಾಲು ಮಾನ್ಯ ಮುಖ್ಯಮಂತ್ರಿಗಳ ಮುಂದಿದೆ. ಇವತ್ತು ಈ ವಿಚಾರದಲ್ಲಿ gazette notification ಆಗಿದೆ. ನ್ಯಾಯಾಧೀಕರಣದ ತೀರ್ಪು ಬಂದಿದೆ. ನಮ್ಮ ಸರ್ಕಾರವೂ ಕೇಂದ್ರ ಸರ್ಕಾರದ ಮನವನ್ನೊಲಿಸಿ, ಈ ಯೋಜನೆ ಜಾರಿಗೆ ತರಲು ಟೆಂಡರ್ ಕರೆಯುವುದು ಮಾತ್ರ ಬಾಕಿ ಉಳಿದಿದೆ. ಇನ್ನಾವುದೇ Awards ಇದಕ್ಕೆ ಇಲ್ಲ. Gazette notification ಆಗಬೇಕಾಗಿತ್ತು, ಅದು ಕೂಡ ಆಗಿದೆ. ಸುಪ್ರೀಮ್ ಕೋರ್ಟ್‌ನಿಂದ ಅಂತಿಮ ತೀರ್ಪು ಏನಾದರೂ ಬರಲಿ. ಇವತ್ತು ಅಲೋಕೇಷನ್ ಆಗಿರುವ ರೀತ್ಯಾ 13.5 ಟಿಎಂಸಿ ನೀರನ್ನು ಬಳಸಿಕೊಳ್ಳುವುದಕ್ಕೆ , ಕಳಸಾ ಬಂಡೂರಿ ಯೋಜನೆಯನ್ನು ಮಾಡಲು ನಮ್ಮ ಸರ್ಕಾರಕ್ಕೆ ಯಾವ ಅಡ್ಡಿಯೂ ಇಲ್ಲ. ಕೇವಲ ಅರಣ್ಯ ಇಲಾಖೆ ಮತ್ತು ಪರಿಸರ ಸಂರಕ್ಷಣಾ ಇಲಾಖೆಯ ಅನುಮತಿಯನ್ನು ಮಾತ್ರ ಪಡೆದು ಟೆಂಡರ್ ಕರೆಯುವ ನಿರ್ಣಯವನ್ನು ಮಾತ್ರ ಮಾಡಬೇಕಾಗಿದೆ. ಅದಕ್ಕಾಗಿ ಸರ್ಕಾರ ಆಯವ್ಯಯದಲ್ಲಿ ಹಣವನ್ನು ತೆಗೆದಿರಿಸಬೇಕಾಗಿದೆ. ಬಹುಶಃ 3 ದಶಕಗಳಲ್ಲಿ ಮಾನ್ಯ ಎಸ್. ಆರ್.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬೊಮ್ಮಾಯಿಯವರ ಕಾಲದಲ್ಲಿ ಪ್ರಾರಂಭಗೊಂಡ ಈ ಯೋಜನೆ ಈಗ ಅನುಷ್ಠಾನಕ್ಕೆ ಬರುವಂತಹ ಸ್ಥಿತಿಗೆ ಬಂದಿದೆ. ಈ ಸುವರ್ಣ ವಿಧಾನಸೌಧದಲ್ಲಿ ಈ ಯೋಜನೆಯ ಬಗ್ಗೆ ಘೋಷಣೆಯನ್ನು ಮಾಡುವುದರ ಮೂಲಕ ಒಂದು ಇತಿಹಾಸಕ್ಕೆ ನಾಂದಿಯಾಗಬೇಕೆಂದು ತಮ್ಮ ಮೂಲಕ ನಾನು ಸರ್ಕಾರವನ್ನು ಆಗ್ರಹಿಸುತ್ತೇನೆ.

ಏಕೆಂದರೆ ಈ ವಿಚಾರದ ಬಗ್ಗೆ ದೆಹಲಿಯಲ್ಲಿ ನಿರಂತರವಾಗಿ ಒಂದು ವರ್ಷಗಳ ಕಾಲ ಹೋರಾಟ ನಡೆಯಿತು. ಕಾಯಿದೆಗಳನ್ನು ಹಿಂದಕ್ಕೆ ಪಡೆದಿದ್ದು ಆಯಿತು. ಆದರೆ ನರಗುಂದ ಹಾಗೂ ನವಿಲುಗುಂದದಲ್ಲಿ ಇನ್ನೂ ಸಹ ಹೋರಾಟ ನಿಂತಿಲ್ಲ. ಸರ್ಕಾರ ಟೆಂಡರ್ ಕರೆದು ಯೋಜನೆಯನ್ನು ಚಾಲೂ ಮಾಡುವ ತನಕ ಅಲ್ಲಿನ ಜನರು ವಿರಮಿಸುವುದಿಲ್ಲ. ಈ ಯೋಜನೆಯ ಅನುಷ್ಠಾನಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳೇ, ಹಿಂದೆ ಪಾದಯಾತ್ರೆಯನ್ನು ಮಾಡಿರುವವರು ಇನ್ನು ಎಷ್ಟು ದಿವಸ ಈ ಯೋಜನೆಯನ್ನು ಮುಂದಕ್ಕೆ ಹಾಕಿಕೊಂಡು ಹೋಗುತ್ತೀರಿ? ಈಗ ಯಾವ ಅಡ್ಡಿ ಸರ್ಕಾರಕ್ಕೆ ಇದೆ? ಇದು ಹೇಳಿ-ಕೇಳಿ ಕುಡಿಯುವ ನೀರಿನ ವಿಚಾರ. ಈ ಯೋಜನೆಯಿಂದ ಹುಬ್ಬಳ್ಳಿ, ಧಾರವಾಡ, ಗದಗ, ಬೆಳಗಾವಿ ಮತ್ತು ಬಾಗಲಕೋಟೆ ನಾಲ್ಕು ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸಬಹುದು. ಇದಕ್ಕಾಗಿ ಒಂದು ಇತಿಹಾಸವನ್ನು ಸೃಷ್ಟಿ ಮಾಡುವ ಅವಕಾಶ ಇಂದಿನ ಸರ್ಕಾರಕ್ಕೆ ಮತ್ತು ಇಂದಿನ ಮುಖ್ಯಮಂತ್ರಿಗಳಿಗೆ ಒದಗಿ ಬಂದಿದೆ. ಈ ಹಿಂದೆ ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿ, ಹಾಗೂ ಮಾನ್ಯ ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಗಳಾಗಿದ್ದ ಮತ್ತು ಶ್ರೀ ಕೆ.ಎಸ್. ಈಶ್ವರಪ್ಪನವರು ನೀರಾವರಿ ಸಚಿವರಾಗಿದ್ದ ಸಂದರ್ಭದಲ್ಲಿ 125 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಲಾಗಿತ್ತು. ಮಾನ್ಯ ಯಡಿಯೂರಪ್ಪನವರು ಮತ್ತು ಈಶ್ವರಪ್ಪನವರು ಈ ಯೋಜನೆಗೆ ಪೂಜೆಯನ್ನು ಮಾಡಿದ ಮೇಲೆ ಗೋವಾ ಸರ್ಕಾರದವರು ಸುಪ್ರೀಮ್ ಕೋರ್ಟ್‌ನಲ್ಲಿ ದಾವೆ ಹಾಕಿದರು. ಇವತ್ತು ಈ ಬಗ್ಗೆ ಸುಪ್ರೀಮ್ ಕೋರ್ಟ್ ಕೂಡ ಹಸಿರು ನಿಶಾನೆಯನ್ನು ತೋರಿದೆ. ಕೇಂದ್ರದ gazette notification ಮುಗಿದಿದೆ. ಈಗ ಈ ಸರ್ಕಾರ ಯೋಜನೆಗಾಗಿ ಟೆಂಡರ್ ಕರೆಯುವುದು ಮಾತ್ರ ಬಾಕಿ ಉಳಿದಿದೆ. ಈಗ ಟೆಂಡರ್ ಕರೆದು ಸರ್ಕಾರ ಯೋಜನೆಯ ಅನುಷ್ಠಾನಕ್ಕೆ ಸೂಕ್ತ ಕ್ರಮ ಕೈಗೊಳ್ಳದೇ ಹೋದರೆ ಈ ಭಾಗದ ಜನರು ಸರ್ಕಾರವನ್ನು ಸಹಿಸಿಕೊಳ್ಳುವುದಿಲ್ಲ. ಅಂದು ಪಾದಯಾತ್ರೆ ಮತ್ತು ಹೋರಾಟವನ್ನು ಮಾಡಿದಂತಹ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು. ಏಕೆಂದರೆ 4 ವರ್ಷಗಳ ನಿರಂತರ ಹೋರಾಟದಲ್ಲಿ 12 ಜನ ರೈತರೂ ಸಹ ಸಾವನ್ನಪ್ಪಿದ್ದಾರೆ. ಅವರಲ್ಲಿ 6 ಜನರ ಕುಟುಂಬಕ್ಕೆ ಸರ್ಕಾರ ಪರಿಹಾರ ನೀಡಿದೆ, ಇನ್ನುಳಿದ 6 ಜನರಿಗೆ ಯಾವುದೇ ಪರಿಹಾರವನ್ನು ನೀಡಿರುವುದಿಲ್ಲ. ದಯಮಾಡಿ 6 ಜನರಿಗೆ ಪರಿಹಾರ ಕೊಡುವ ವ್ಯವಸ್ಥೆಯಾಗಬೇಕು. ಮತ್ತು ಯೋಜನೆಯನ್ನು ಜಾರಿಗೊಳಿಸಲು ಟೆಂಡರ್ ಕರೆದು ನೀರಾವರಿ ಇಲಾಖೆಯ ನಿಯಮಗಳಂತೆ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ನಾನು ಆಗ್ರಹಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಗಳೇ, ನಮ್ಮ ಇಂದಿನ ಸಭಾಪತಿಯವರು, ಉತ್ತರ ಕರ್ನಾಟಕದ ಬಗ್ಗೆ, ಇಲ್ಲಿರತಕ್ಕ ಜಲಾಶಯಗಳ ಬಗ್ಗೆ ಚರ್ಚೆ ಆಗಬೇಕೆಂದು ಬಯಸಿ, ಇಂದಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ಈ ವಿಚಾರವನ್ನು ಸೇರಿಸಲಾಗಿದೆ. ಆದರೆ ಸದನದಲ್ಲಿ ಈ ಬಗ್ಗೆ ಚರ್ಚೆ ನಡೆಯುತ್ತಿರುವ ಸಂರ್ಭದಲ್ಲಿ ನೀರಾವರಿ ಸಚಿವರೇ ಇಲ್ಲದಿರುವುದು ಏಕೆ ಎಂದು ನನಗೆ ಅರ್ಥ ಆಗುತ್ತಿಲ್ಲ. ಏಕೆಂದರೆ ಇವತ್ತು ಬಹಳ ಮಹತ್ವವಾದ ವಿಚಾರಗಳನ್ನು ಇಲ್ಲಿ ಚರ್ಚೆ ಮಾಡಬೇಕಾಗಿದೆ. ಈ ವಿಚಾರ ಮುಗಿದ ಮೇಲೆ ನಾನು ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ಚರ್ಚೆ ಮಾಡಬೇಕೆಂದಿದ್ದೇನೆ. ಕಾವೇರಿ ನದಿಯ ಮೇಕೆದಾಟು ಯೋಜನೆಯ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಸದನದಲ್ಲಿ ನೀರಾವರಿ ಸಚಿವರೇ ಇಲ್ಲದೇ ನಮ್ಮ ಕಂಠಶೋಷಣೆಯನ್ನು ಮಾಡಿಕೊಳ್ಳುವುದು ಎಷ್ಟರಮಟ್ಟಿಗೆ ಸರಿ ಎನ್ನುವ ನೋವು ಸಹ ನನ್ನನ್ನು ಕಾಡುತ್ತಿದೆ. ಏಕೆಂದರೆ ನಾನೀಗ ಪ್ರಸ್ತಾಪಿಸುತ್ತಿರುವ ಕುಡಿಯುವ ನೀರಿನ ವಿಚಾರದ ಬಗ್ಗೆ ಉತ್ತರ ನೀಡಲು ಯಾರು ಜವಾಬ್ದಾರಿಯನ್ನು ಹೊರುತ್ತಾರೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಗಳೇ, ಮಾನ್ಯ ನೀರಾವರಿ ಸಚಿವರು ಕೆಳಮನೆಯಲ್ಲಿದ್ದಾರೆ. ಈಗ ಅವರನ್ನು ಈ ಸದನಕ್ಕೆ ಕರೆಯಿಸಲಾಗುವುದು.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಗಳೇ, ಸಚಿವರಷ್ಟೇ ಇಲ್ಲ, ಸದನದಲ್ಲಿ ಇಂತಹ ವಿಚಾರಗಳ ಚರ್ಚೆ ನಡೆಯುವ ಸಂದರ್ಭದಲ್ಲಿ ನೀರಾವರಿ ಇಲಾಖೆ, ಲೋಕೋಪಯೋಗಿ ಇಲಾಖೆ ಮತ್ತು ಆರ್ಥಿಕ ಇಲಾಖೆಯ ಹಿರಿಯ ಅಧಿಕಾರಿಗಳು ಸಹ ಇರಬೇಕಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)**:-ಮಾನ್ಯ ಸಭಾಪತಿಗಳೇ, ಈಗ ಕೆಲವು ಅಧಿಕಾರಿಗಳಿದ್ದಾರೆ. ಮಂತ್ರಿಗಳ ಜೊತೆಯಲ್ಲಿ ಉಳಿದ ಅಧಿಕಾರಿಗಳನ್ನು ಕರೆಯಿಸುತ್ತೇನೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಯಾರು ಇದ್ದಾರೆ, ಎಂದು ಹೇಳಿ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಗಳೇ, ನಾವು ಬಹಳ ಕಾಡಿ, ಬೇಡಿ, ಮಾನ್ಯ ಸಭಾಪತಿಯವರಿಗೆ ಮನವಿಯನ್ನು ಮಾಡಿ, ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳ ಬಗ್ಗೆ ಚರ್ಚಿಸಲು ಅವಕಾಶ ಪಡೆದಿದ್ದೇವೆ. ಈಗ ಚರ್ಚೆ ನಡೆಯುವ ಸಂದರ್ಭದಲ್ಲಿ ಸಚಿವರೇ ಸದನದಲ್ಲಿ ಇಲ್ಲದಿದ್ದರೆ ನಮ್ಮ ಹಣೆಬರಹವೇ ಇಷ್ಟೆಂದು ಕಾಣುತ್ತದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಉಪಸಭಾಪತಿಯವರು:-** ಈಗ ಮಾನ್ಯ ಸಭಾನಾಯಕರು, ಸಚಿವರನ್ನು ಕರೆಯಿಸುವುದಾಗಿ ಹೇಳಿದ್ದಾರೆ. ತಾವು ಚರ್ಚೆಯನ್ನು ಮುಂದುವರೆಸಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಗಳೇ, ಈ ಭಾಗದ ಬಗ್ಗೆ ಚರ್ಚೆ ನಡೆಯುತ್ತಿರುವಾಗ ಸದನದಲ್ಲಿರುವ ಮಂತ್ರಿಗಳ ಸಂಖ್ಯೆಯನ್ನು ನೋಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-**ಮಾನ್ಯ ಸಭಾಪತಿಗಳೇ, 4 ಜನ ಮಂತ್ರಿಗಳಿದ್ದಾರೆ.

**ಉಪಸಭಾಪತಿಯವರು:-** ಸಭಾನಾಯಕರೆ ಆದಷ್ಟು ಬೇಗ ಸಂಬಂಧಪಟ್ಟ ಸಚಿವರುಗಳನ್ನು ಕರೆಯಿಸಿ. ಈ ವಿಚಾರದ ಬಗ್ಗೆ ಮಾತನಾಡಲು ಸಾಕಷ್ಟು ಸಮಯ ಬೇಕಾಗುತ್ತದೆ. ಶ್ರೀಕಂಠೇಗೌಡರೆ ತಮ್ಮ ಚರ್ಚೆಯನ್ನು ಮುಂದುವರೆಸಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಗಳೇ, ಮಾನ್ಯ ನೀರಾವರಿ ಸಚಿವರು ಈಗ ಸದನದಲ್ಲಿ ಇರಲೇಬೇಕಾಗಿತ್ತು.

**ಉಪಸಭಾಪತಿಯವರು:-** ಅವರನ್ನು ಕರೆಯಿಸಲಾಗುವುದು, ಶ್ರೀಕಂಠೇಗೌಡರೆ ತಮ್ಮ ಚರ್ಚೆಯನ್ನು ಮುಂದುವರೆಸಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಗಳೇ, ಇಂದು ಉತ್ತರ ಕರ್ನಾಟಕದ ಭಾಗದಲ್ಲಿನ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆಯನ್ನು ಮಾಡಲು ದಿನಾಂಕವನ್ನು ನಿಗಧಿ ಮಾಡಲಾಗಿದೆ. ಅದನ್ನು ಇಂದಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ಹಾಗೆಯೇ ನಿಯಮ 68ರ ಅಡಿಯಲ್ಲಿ ಚರ್ಚೆಗೆ ಅವಕಾಶವನ್ನು ಕೋರಿ ಈಗಾಗಲೇ 4 ದಿವಸಗಳು ಕಳೆದಿವೆ.

**ಉಪಸಭಾಪತಿಯವರು:-** ಅವರನ್ನು ಕರೆಯಿಸಲಾಗುವುದು, ಶ್ರೀಕಂಠೇಗೌಡರೆ ತಮ್ಮ ಚರ್ಚೆಯನ್ನು ಮುಂದುವರೆಸಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ಇನ್ನು ಮಹಾದಾಯಿಯ ಸವಾಲನ್ನು ನಮ್ಮ ಸರ್ಕಾರ ಸ್ವೀಕಾರ ಮಾಡಬೇಕಾಗಿದೆ. ಈ ಅಧಿವೇಶನದಲ್ಲಿಯೇ ಆ

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಯೋಜನೆಯ ಘೋಷಣೆ, ಮತ್ತು ಟೆಂಡರ್ ನಿರ್ಣಯವನ್ನು ಮಾಡಬೇಕಾಗಿದೆ ಎಂದು ನಾನು ಸರ್ಕಾರವನ್ನು ಆಗ್ರಹಿಸುತ್ತೇನೆ.

ಇನ್ನು ಕೃಷ್ಣಾ ನದಿಯ ಬಗ್ಗೆ ನಾನು ಚರ್ಚೆ ಮಾಡಬೇಕಾಗಿದೆ. ನಮ್ಮ ಭಾರತ ದೇಶದಲ್ಲಿಯೇ ಅತ್ಯಂತ ದೊಡ್ಡ ನದಿ ನಮ್ಮ ಕೃಷ್ಣಾ ನದಿ. ಗಂಗಾ ನದಿಯ ನಂತರ 2ನೇ ಸ್ಥಾನದಲ್ಲಿರುವ ನದಿ. ಅದು 1392 ಕಿ.ಮೀ ಉದ್ದದ ವಿಸ್ತೀರ್ಣವನ್ನು ಹೊಂದಿದೆ. ಅದು ಮಹಾರಾಷ್ಟ್ರ ರಾಜ್ಯದ ಮಹಾಬಲೇಶ್ವರದಲ್ಲಿ ಹುಟ್ಟಿ, ಕರ್ನಾಟಕ ರಾಜ್ಯದಲ್ಲಿ ಹರಿದು ಆಂಧ್ರಪ್ರದೇಶದ ಮೂಲಕ ಬಂಗಾಳಕೊಲ್ಲಿಯನ್ನು ಸೇರುತ್ತದೆ. ಮಹದಾಯಿ ನದಿ ಅರಬ್ಬಿ ಸಮುದ್ರವನ್ನು ಸೇರಿದರೆ ಕೃಷ್ಣಾ ನದಿ ಬಂಗಾಳಕೊಲ್ಲಿಯನ್ನು ಸೇರುತ್ತದೆ. ಇವತ್ತು ಆಂಧ್ರಪ್ರದೇಶ ಮತ್ತು ತೆಲಂಗಾಣದ ವಿಭಜನೆಯಿಂದಾಗಿ ನಮ್ಮ ಈ 3ನೇ ಹಂತದ ಯೋಜನೆಯ ಅನುಷ್ಠಾನಕ್ಕೆ ಒಂದು ದೊಡ್ಡ ಅಡ್ಡಿ ಉಂಟಾಗಿದೆ. ಇವತ್ತು ಕೃಷ್ಣಾ ಜಲವಿವಾದದಲ್ಲಿ 2 ನ್ಯಾಯಮಂಡಳಿಗಳಾಗಿದ್ದು, ಮೊದಲನೆಯ ನ್ಯಾಯಮಂಡಳಿ ನೀರಿನ ಲಭ್ಯತೆಯ ಶೇಕಡ 75ರಷ್ಟು ಆಧಾರದ ಮೇಲೆ ಕರ್ನಾಟಕ ರಾಜ್ಯಕ್ಕೆ ಎ ಸ್ಕೀಮ್‌ನಲ್ಲಿ 173 ಟಿಎಂಸಿ ನೀರನ್ನು allocation ಮಾಡುತ್ತದೆ. ಮೊದಲನೆಯ ನ್ಯಾಯಾಧೀಕರಣದಿಂದ 173 ಟಿಎಂಸಿ ನೀರು ನಮ್ಮ ರಾಜ್ಯಕ್ಕೆ ಬಂದರೆ, 2ನೇ ಕೃಷ್ಣಾ ಜಲವಿವಾದ ನ್ಯಾಯಾಧೀಕರಣ ಬಿ ಸ್ಕೀಮ್‌ನಲ್ಲಿ 130 ಟಿ.ಎಂ.ಸಿ ನೀರನ್ನು ಆಲಮಟ್ಟಿಯ UKP (Upper Krishna Project) ಗೆ allocation ಮಾಡುತ್ತದೆ. ಈ ಎರಡೂ ಸೇರಿದಂತೆ 303 ಟಿಎಂಸಿ ನೀರನ್ನು ನಮ್ಮ ರಾಜ್ಯಕ್ಕೆ ಹಂಚಿಕೆ ಮಾಡಲಾಗಿದೆ. ಸ್ಕೀಮ್ ಎ ನಲ್ಲಿ 15 ಲಕ್ಷ 36 ಸಾವಿರ ಎಕರ ಭೂಮಿಯನ್ನು ನೀರಾವರಿಗೆ ಒಳಪಡಿಸತಕ್ಕ ಒಂದು ಯೋಜನೆ ಇದಾಗಿದೆ. ಅದರ ಸಂಪೂರ್ಣ ಆಯೋಜನೆ ಮುಗಿದಿದೆ. ಬಿ ಸ್ಕೀಮ್‌ನಲ್ಲಿ 13 ಲಕ್ಷ ಎಕರೆ ಭೂಮಿಯನ್ನು ನೀರಾವರಿಗೆ ಒಳಪಡಿಸುವ ಒಂದು ಚಿಂತನೆಯನ್ನು ಮಾಡಲಾಗುತ್ತಿದೆ. ಒಟ್ಟು 28 ಲಕ್ಷದ 30 ಸಾವಿರ ಎಕರೆ ಭೂಮಿಗೆ ನೀರಾವರಿ ಒದಗಿಸುವ ಕರ್ನಾಟಕದ ಒಂದು ಬೃಹತ್ ನೀರಾವರಿ ಯೋಜನೆ ಇದಾಗಿದೆ.

ಆಲಮಟ್ಟಿ ಜಲಾಶಯದಲ್ಲಿ ಪ್ರಸ್ತುತ 227 ಟಿ.ಎಂ.ಸಿ ನೀರನ್ನು ಸಂಗ್ರಹ ಮಾಡಿಟ್ಟುಕೊಳ್ಳುವ ಸಾಮರ್ಥ್ಯವನ್ನು ನಾವು ಇಟ್ಟುಕೊಂಡಿದ್ದೇವೆ. ಆದರೆ ವಾಸ್ತವಾಗಿ 300 ಟಿ.ಎಂ.ಸಿ ನೀರನ್ನು ಸಂಗ್ರಹ ಮಾಡುವಷ್ಟು ಸಾಮರ್ಥ್ಯದ ಅಣೆಕಟ್ಟನ್ನು ನಿರ್ಮಾಣ ಮಾಡಲಾಗಿದೆ. ಅದರಲ್ಲಿ ಜಿಜ್ಞಾಸೆ, ವಿವಾದಗಳಿದ್ದ ಕಾರಣ 300 ಟಿ.ಎಂ.ಸಿ ನೀರನ್ನು ಸಂಗ್ರಹಿಸಲು ಅವಕಾಶ ಇದ್ದರೂ ಸಹ ಪ್ರಸ್ತುತ 227 ಟಿ.ಎಂ.ಸಿಯ ನೀರಿನ ಸಂಗ್ರಹಕ್ಕೆ ಸೀಮಿತಗೊಳಿಸಿದ್ದೇವೆ. ಹಾಗಾಗಿ 519.60 ಮೀಟರ್ ಉದ್ದಕ್ಕೆ ಸಂಗ್ರಹದ ಮಿತಿಯನ್ನು ಹಾಕಿದ್ದು, 524.25ಮೀಟರ್ ಅಂತಿಮ 303 ಟಿಎಂಸಿ ನೀರನ್ನು ಸಂಗ್ರಹಿಸತಕ್ಕ FRL (Full Reservoir Level) ಗೆ ಅನುಗುಣವಾಗಿ ಅಣೆಕಟ್ಟನ್ನು ನಿರ್ಮಾಣ ಮಾಡಲಾಗಿದೆ.

(ಮುಂದು)

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(1205)/12-50/21-12-2021/ಎಲ್‌ಎಂ/ಬಿಎನ್‌ಎಸ್

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಮುಂದು)**:-

ಅದಕ್ಕೆ ಬೇಕಾದ spillway gates ಗಳನ್ನು ಎತ್ತರಿಸಲಾಗಿದೆ. Spillway ಗೇಟ್‌ನ್ನು ಎತ್ತರಿಸಿ 300 ಟಿಎಂಸಿ ನೀರನ್ನು ಹಿಡಿದಿಟ್ಟುಕೊಳ್ಳಲು ಕೇಂದ್ರಸರ್ಕಾರದಿಂದ ನಿರ್ಣಯವಾಗಬೇಕಾಗಿದೆ. ವಾಸ್ತವಾಗಿ ದಿನಾಂಕ: 29-5-2019 ರಂದು ಕೆಂದ್ರ ಸರ್ಕಾರಕ್ಕೆ ನಮ್ಮ ರಾಜ್ಯ ಸರ್ಕಾರದಿಂದ ಒಂದು ಪತ್ರವನ್ನು ಬರೆಯುತ್ತಾರೆ. ಆಂದ್ರಪ್ರದೇಶ ಮತ್ತು ತೆಲಂಗಾಣ ಎಂದು ಎರಡು ರಾಜ್ಯಗಳಾಗಿ ವಿಭಜನೆಯಾಗಿದೆ, ಅದಕ್ಕಾಗಿ ತಾವು ಮಾಡಿರುವ ನೀರಿನ ಹಂಚಿಕೆಯ ಪ್ರಮಾಣದಲ್ಲಿ ಬದಲಾವಣೆ ಮಾಡಿ ನಮಗೆ ಇನ್ನು ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಕೊಡಬೇಕೆಂದು ಸುಪ್ರೀಮ್ ಕೋರ್ಟ್ ಗೆ ಹೋಗಿದ್ದರಿಂದ ಅದಕ್ಕೆ ಸ್ಟೇ ಸಿಕ್ಕಿದೆ. ಈ stay order ನ್ನು vacate ಮಾಡಿಸಬೇಕೆಂದು ಮತ್ತು ಈ ಯೋಜನೆಗೆ ಅವಕಾಶ ಮಾಡಿಕೊಡಬೇಕೆಂದು ನಮ್ಮ ಸರ್ಕಾರ ದಿನಾಂಕ: 29-5-2019ರಂದು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದೆ. ಮತ್ತೆ ದಿನಾಂಕ: 6-8-2019ರಂದು reminder ಪತ್ರವನ್ನು ಬರೆದಿದ್ದಾರೆ. ಆದರೆ ಈ ವಿಷಯದಲ್ಲಿ ಇದುವರೆಗೆ ಭಾರತ ಸರ್ಕಾರದಿಂದ ಯಾವುದೇ ಭರವಸೆಯು ಸಿಕ್ಕಿರುವುದಿಲ್ಲ ಮತ್ತು ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಇದು ನಮ್ಮ ದುರ್ದೈವ. ಕೇಂದ್ರದಲ್ಲಿಯು ಬಿಜೆಪಿ ಸರ್ಕಾರವಿದೆ, ರಾಜ್ಯದಲ್ಲಿಯು ಬಿಜೆಪಿ ಸರ್ಕಾರವಿದೆ. ಅಲ್ಲದೆ ಕೇಂದ್ರದಲ್ಲಿ 26 ಜನ ಎಂ.ಪಿ.ಗಳನ್ನು ಈ ರಾಜ್ಯ ಚುನಾಯಿಸಿ ಕಳುಹಿಸಿದೆ. ಆದರೆ ನ್ಯಾಯಾಧೀಕರಣ ತೀರ್ಮಾನ ಕೊಟ್ಟರು, ಕೇಂದ್ರದಿಂದ ಯಾವುದೇ ಕ್ರಮವಾಗಿರುವುದಿಲ್ಲ. ಹಿಂದೆ ಕಾವೇರಿ ವಿಚಾರದಲ್ಲಿ ಕೇಂದ್ರ ಸರ್ಕಾರ ತುದಿಗಾಲಿನಲ್ಲಿ ನಿಂತು ತಮಿಳನಾಡಿನ ಪರವಾಗಿ Gazette Notification ಹೊರಡಿಸಿತ್ತು. ಆದರೆ ನಮ್ಮ ರಾಜ್ಯದ ವಿಚಾರದಲ್ಲಿ ಕೇಂದ್ರ ಸರ್ಕಾರ ಮಲತಾಯಿ ಧೋರಣೆಯನ್ನು ಅನುಸರಿಸುತ್ತಿದೆ. ಈಗಲೂ ಕೂಡಾ ತೆಲಂಗಾಣ ಮತ್ತು ಆಂದ್ರಪ್ರದೇಶಗಳ ಮಾತಿಗೆ ಮಣಿದು, ಒಂದು affidavit ಮೂಲಕ ನ್ಯಾಯಾಧೀಕರಣ ಕೊಟ್ಟಿರುವ ತೀರ್ಪು ಸರಿ ಇದೆ ಇದರ ಪ್ರಕಾರವೇ ನಡೆದುಕೊಳ್ಳಬೇಕೆಂದು ಸುಪ್ರೀಮ್ ಕೋರ್ಟ್ ಮುಂದೆ ಕೇಂದ್ರ ಸರ್ಕಾರ ಹೇಳಲು ಸಾಧ್ಯವಾಗಿರುವುದಿಲ್ಲ. ಇವತ್ತು ಇದರ ಜವಾಬ್ದಾರಿಯನ್ನು ಈ ಸರ್ಕಾರ ಹೊರಬೇಕಾಗಿದೆ. ನಮ್ಮ ರಾಜ್ಯ ಸರ್ಕಾರದ ಎರಡೂ ಪತ್ರಗಳಿಗೆ ಉತ್ತರವಾಗಿ ಕೇಂದ್ರ ಸರ್ಕಾರದ ಜಲಸಂಪನ್ಮೂಲ ಇಲಾಖೆಯ ಸಚಿವರು, ದಿನಾಂಕ:3-12-2019ರಂದು ನಮ್ಮ ನೀರಾವರಿ ಕಾಯಿದೆಯ ಸೆಕ್ಷನ್ 5(3)ರ ಅಡಿಯಲ್ಲಿ ನ್ಯಾಯಮಂಡಳಿಯಿಂದ ಮುಂದಿನ ವರದಿಯನ್ನು ಪಡೆದ ನಂತರವೇ ಗೆಜೆಟ್‌ನಲ್ಲಿ ನ್ಯಾಯಾಂಗ ತೀರ್ಪನ್ನು ಪ್ರಕಟಿಸುವುದು ಎಂದು ನಮ್ಮ ರಾಜ್ಯ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದಾರೆ. ದಿನಾಂಕ: 3-12-2019ರಂದು ಅತ್ಯಂತ ನೋವಿನ ಮತ್ತು ದು:ಖಕರವಾದ ಪತ್ರ ನಮ್ಮ ರಾಜ್ಯ ಸರ್ಕಾರಕ್ಕೆ ಬಂದಿದೆ. ಎರಡನೆಯ ಹಂತದ Tribunal ಕೊಟ್ಟಿರುವ ತೀರ್ಮಾನ ಸಮಯೋಜಿತ ಮತ್ತು ಸಮಂಜಸವಾಗಿದೆ, ಕಾವೇರಿ ವಿಚಾರದಲ್ಲಿ ತಮಿಳುನಾಡಿಗೆ ಮಾಡಿಕೊಟ್ಟ ಹಾಗೆ ನಮಗೂ ಗೆಜಿಟ್ ನೋಟಿಫಿಕೇಷನ್ ಮಾಡಿಕೊಡಿ, ಇದರಿಂದ ಈ ಯೋಜನೆಯನ್ನು ಅನುಷ್ಠಾನ ಮಾಡಲು ಸಾಧ್ಯವಾಗುತ್ತದೆ ಎಂದು ಹೇಳಿದರೆ, ಈ ರೀತಿಯ ಉತ್ತರವನ್ನು ಕರ್ನಾಟಕ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸರ್ಕಾರಕ್ಕೆ ಕೇಂದ್ರ ಸರ್ಕಾರ ಉತ್ತರ ಕೊಟ್ಟಿದೆ. ಈ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರ ಮಧ್ಯಂತರ ಅರ್ಜಿಯನ್ನು ಹಾಕಬೇಕು ಎಂದು ನಾವು ಆಗ್ರಹ ಮಾಡುತ್ತೇವೆ. ಮಧ್ಯಂತರ ಅರ್ಜಿಯನ್ನು ಹಾಕುವುದರ ಮುಖಾಂತರ ದಿನಾಂಕ: 29-12-2013ರಲ್ಲಿ ಎರಡನೆ ಜಲ ವಿವಾದ ನ್ಯಾಯ ಮಂಡಳಿ (Tribunal) ಕೊಟ್ಟಿರುವ ತೀರ್ಪನ್ನು ಅಂತಿಮವಾಗಿ Gazette Notification ಮಾಡಬೇಕು ಎಂದು ಮಧ್ಯಂತರ ಅರ್ಜಿಯ ಮೂಲಕ ಸುಪ್ರೀಮ್ ಕೋರ್ಟ್‌ಗೆ ಅರ್ಜಿಯನ್ನು ಸಲ್ಲಿಸದೆ ಹೋದರೆ, ಇದನ್ನು ಬಹಳಷ್ಟು ಕಾಲ ನೆನೆಗುದಿಗೆ ಬೀಳುವ ಎಲ್ಲ ಸಾಧ್ಯತೆಗಳು ಇವೆ. ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಂಬಂಧಪಟ್ಟ ಹಾಗೆ ಮೂರು ಹಂತಗಳು ಇವೆ. ಮೊದಲನೆಯ ಮತ್ತು ಎರಡನೇಯ ಹಂತಗಳು ಸರಿ ಸುಮಾರಾಗಿ ಮುಗಿಯುತ್ತಾ ಬಂದಿವೆ. ನೀರು ನಿಲುಗಡೆಗೆ ರೈತರ ಜಮೀನನ್ನು ವಶಪಡಿಸಿಕೊಂಡಿರುವುದಕ್ಕೆ ಸರ್ಕಾರ ಕೊಟ್ಟಿರುವ ಪರಿಹಾರದ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ. ಈ ಯೋಜನೆಯು 1963ರಲ್ಲಿ ಪ್ರಾರಂಭವಾಗಿದೆ. 'ಜೈ ಜವಾನ್, ಜೈ ಕಿಸಾನ್' ಎನ್ನುವ ಘೋಷಣೆ ಮಾಡಿದಂತಹ ಹಿಂದಿನ ಪ್ರಧಾನ ಮಂತ್ರಿಗಳಾದ ದಿ: ಲಾಲ್‌ಬಹದ್ದೂರ್ ಶಾಸ್ತ್ರಿಯವರು ಈ ಯೋಜನೆಗೆ ಚಾಲನೆಯನ್ನು ನೀಡಿದರು. ಈ ಯೋಜನೆ ಪ್ರಾರಂಭವಾಗಿ ಇವತ್ತಿಗೆ 58 ವರ್ಷಗಳಾಗಿವೆ. ಸಮಾರು ೬ ದಶಕಗಳು ಗತಿಸಿ ಹೋಗಿವೆ. ಈ ಯೋಜನೆಗೆ 75,000 ಕೋಟಿ ರೂಪಾಯಿಗಳು ಈಗಾಗಲೇ ಖರ್ಚಾಗಿದೆ. ಈ ದೇಶದಲ್ಲಿ ಹಾಗೂ ರಾಜ್ಯದಲ್ಲಿ ಈ ಯೋಜನೆಯ ಬೆನ್ನಿಗೆ ನಿಂತವರು ಎಂದರೆ, ಪೂಜ್ಯ ಎಚ್.ಡಿ.ದೇವೇಗೌಡರವರು, ನೀರಾವರಿ ಸಚಿವರಾಗಿದ್ದಾಗ, ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ಮತ್ತು ಪ್ರಧಾನ ಮಂತ್ರಿಗಳಾಗಿದ್ದಾಗ ಈ ಯೋಜನೆಯ ಮತ್ತು ಕಾವೇರಿ ಯೋಜನೆಯ ಬಗ್ಗೆ ವಿಶೇಷವಾದ ಆಸಕ್ತಿಯನ್ನು ವಹಿಸಿ ಕೇಂದ್ರದಿಂದ ಸಾವಿರಾರು ಕೋಟಿ ರೂಪಯಿಗಳು ಈ ಯೋಜನೆಗಳಿಗೆ ಹರಿದು ಬರುವಂತೆ ಮಾಡಿದ್ದರು. ಮುಂದೆ ಬಂದ ಯಾವ ಕೇಂದ್ರ ಸರ್ಕಾರಗಳು ಈ ಕೆಲಸವನ್ನು ಮಾಡಲಿಲ್ಲ. ಅದಕ್ಕಾಗಿ ಕೃಷ್ಣಾ ಯೋಜನೆಯ ಸುತ್ತ-ಮುತ್ತಲಿನ ಮತ್ತು ಕಾವೇರಿ ಸುತ್ತ-ಮುತ್ತಲಿನ ಜನರು ಶ್ರೀಮಾನ್ ಎಚ್.ಡಿ.ದೇವೇಗೌಡರನ್ನು ನೆನಪಿಸಿಕೊಳ್ಳುತ್ತಾರೆ ಮತ್ತು ಸಿಂದಗಿಯಲ್ಲಿ ಅವರ ಪ್ರತಿಮೆಯನ್ನು ಸ್ಥಾಪನೆ ಮಾಡಿದ್ದಾರೆ. ಹೀಗಾಗಿ ಇವತ್ತಿನ ಸರ್ಕಾರಗಳಿಂದ ಅಂತಹ ಇಚ್ಛಾಶಕ್ತಿಯನ್ನು ತೋರಿಸುವಂತಹ ಕೆಲಸವಾಗಬೇಕಾಗಿದೆ. ನಮ್ಮ ರಾಜ್ಯ ಸರ್ಕಾರ ಈ ಮೂರನೇ ಯೋಜನೆಯನ್ನು ಜಾರಿಗೊಳಿಸಬೇಕಾದರೆ ಅಂದಾಜು ಕನಿಷ್ಠ ಪಕ್ಷ 65,000 ಕೋಟಿ ರೂಪಾಯಿಗಳು ಬೇಕು. ಅದರಲ್ಲಿ ಈಗಾಗಲೇ ಸುಮಾರು 11,500 ಕೋಟ್ಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ದಿನಗಳನ್ನು ಹಾಗೆ ಮುಂದೂಡತ್ತಾ ಹೋದರೆ ಇನ್ನು 60,000-70,000 ಕೋಟಿ ರೂಪಾಯಿಗಳಾಗಬಹುದು. ಇದು ನಮ್ಮ ರಾಜ್ಯದ ಬೃಹತ್ ಯೋಜನೆಯಾಗಿದೆ. ಈ ಯೋಜನೆಯನ್ನು ರಾಷ್ಟ್ರೀಯ ಯೋಜನೆಯಾಗಿ ಘೋಷಣೆ ಮಾಡಬೇಕು ಎಂದು ಕೇಂದ್ರಕ್ಕೆ ಮನವಿ ಮಾಡಿಕೊಂಡರು, ಕೇಂದ್ರದಿಂದ ಯಾವುದೇ ಪ್ರತಿಕ್ರಿಯೆ ಇಲ್ಲ. ನರ್ಮದಾ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಣೆ ಮಾಡಿ ಸಾವಿರಾರು ಕೋಟಿ ರೂಪಾಯಿಗಳನ್ನು ಆ ಬೇರೆ ರಾಜ್ಯಗಳು ಕೇಂದ್ರದಿಂದ ಪಡೆದಿರುವ ಇತಿಹಾಸ ನಮ್ಮ ಮುಂದೆ ಇದೆ. ಆದರೆ ನಮ್ಮ ರಾಜ್ಯದ ಯಾವ ಯೋಜನೆಯು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರಾಷ್ಟ್ರೀಯ ಯೋಜನೆಯಾಗಿ ಘೋಷಣೆಯಾಗಿರುವುದಿಲ್ಲ. ಈ ವಿಚಾರಕ್ಕಾಗಿ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ಹಾಕಬೇಕಾಗಿದೆ. ಇದನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಣೆ ಮಾಡಿ, ಅದರ ಮುಖಾಂತರ ಮೂರನೇ ಹಂತದ ಯೋಜನೆಯನ್ನು ಪೂರ್ಣಗೊಳಿಸಬೇಕು ಎಂದು ಸುಪ್ರಿಮ್ ಕೋರ್ಟ್‌ಗೆ ಒಂದು interim application ಹಾಕಿ, ಇಲ್ಲವೆಂದರೆ Gazette Notification ಮಾಡಿ ಈ ಯೋಜನೆಗೆ ಅನುವು ಮಾಡಿಕೊಡಬೇಕು ಎಂದು ಈ ಎರಡು ಕೆಲಸಗಳನ್ನು ರಾಜ್ಯ ಸರ್ಕಾರ ಮಾಡಬೇಕಾಗಿದೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಗಳೆ, ಮಾನ್ಯ ಶ್ರೀಕಂಠೇಗೌಡರು ಮಹದಾಯಿ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಸರ್ಕಾರವನ್ನು ಬಡಿದೆಬ್ಬಿಸುವಂತೆ ಮಾತನಾಡುತ್ತಿದ್ದಾರೆ. ಆದರೆ ಬಹಳಷ್ಟು ನಾಯಕರು, ಕೃಷ್ಣ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯಾಗಿ ಘೋಷಣೆ ಮಾಡಿ ನಂತರ ೩ನೇ ಹಂತದ ಯೋಜನೆಯನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತಿದ್ದಾರೆ. ಈ ವಿಚಾರದಲ್ಲಿ ನನಗೆ ಸಹಮತಿ ಇಲ್ಲ. ಏಕೆಂದರೆ ಇದನ್ನು ರಾಷ್ಟ್ರೀಯ ಯೋಜನೆ ಎಂದು ಕೇಂದ್ರ ಸರ್ಕಾರ ಘೋಷಣೆ ಮಾಡದೆ ಇದ್ದರೆ? ಮೂರನೇ ಹಂತದ ಯೋಜನೆಯಿಂದ ೧೩೦ ಟಿಎಂಸಿ ನೀರು ನಮಗೆ allocation ಆಗಿದೆ, 15ಲಕ್ಷ ಹೆಕ್ಟೇರ್ ಎಕರೆ ಭೂಮಿ ನೀರಾವರಿಯಾಗಿ 7 ಜಿಲ್ಲೆಗಳಿಗೆ ಫಲಪ್ರದವಾಗುತ್ತದೆ. ರಾಷ್ಟ್ರೀಯ ಯೋಜನೆಯಾಗದಿದ್ದರೆ ಮೂರನೇ ಹಂತದ ಯೋಜನೆಯನ್ನು ತೆಗೆದುಕೊಳ್ಳುವುದು ಬೇಡವೆ? ಯೋಜನೆಯು ಅಷ್ಟಕ್ಕೆ ನಿಲ್ಲಬೇಕಾ? ಇದನ್ನು ರಾಷ್ಟ್ರೀಯ ಯೋಜನೆಯಾದರೂ ಮಾಡಿ, ಅಂತರ್ರಾಷ್ಟ್ರೀಯ ಯೋಜನೆಯಾದರು ಮಾಡಿ ಒಟ್ಟಿನಲ್ಲಿ ಈ ಯೋಜನೆ ಪೂರ್ತಿಯಾಗಬೇಕು ಎನ್ನುವುದು ನಮ್ಮ ಬೇಡಿಕೆ. ರಾಷ್ಟ್ರೀಯ ಯೋಜನೆ ಮಾಡದಿದ್ದರೂ ಈ ಯೋಜನೆಯನ್ನು ತೆಗೆದುಕೊಳ್ಳಲೇ ಬೇಕು ಎನ್ನುವುದನ್ನು ನಾನು ನಂತರ ಮಾತನಾಡುತ್ತೇನೆ. ಮಾನ್ಯ ಶ್ರೀಕಂಠೇಗೌಡರು ಉತ್ತರ ಕರ್ನಾಟಕದ ಬಗ್ಗೆ ತೋರಿಸುತ್ತಿರುವ ಕಳಕಳಿಗೆ ನಾನು ಅಭಿನಂದಿಸುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಗಳೆ, ಅಂತಿಮವಾಗಿ ಕೃಷ್ಣ ಮೇಲ್ದಂಡೆ ಯೋಜನೆಯ ವಿಚಾರವಾಗಿ ಎರಡು ವಿಷಯಗಳ ಬಗ್ಗೆ ನಾನು ಸರ್ಕಾರವನ್ನು ಆಗ್ರಹಿಸುತ್ತೇನೆ. ಕೃಷ್ಣಾ ಜಲ ವಿವಾದ ನ್ಯಾಯ ಮಂಡಳಿಯ -2ರ ದಿನಾಂಕ: 29-11-2013ರ ಅಂತಿಮ ತೀರ್ಪು ಮತ್ತು ಆದೇಶವು ಅಧಿಕೃತವಾಗಿ Gazette Notification ನಲ್ಲಿ ಬರುವಂತೆ ಮಾಡುವುದು. ಕೇಂದ್ರ ಸರ್ಕಾರದ ಜಲಸಂಪನ್ಮೂಲ ಸಚಿವರ ಮೇಲೆ ಒತ್ತಡ ತರುತ್ತೀರೋ ಅಥವಾ ಕೇಂದ್ರದಿಂದ ಸುಪ್ರೀಮ್ ಕೋರ್ಟ್‌ಗೆ affidavit ಹಾಕಿಸುತ್ತಿರೋ ನನಗೆ ಗೊತ್ತಿಲ್ಲ, ನ್ಯಾಯ ಮಂಡಳಿ-2 ೧೩೦ ಟಿಎಂಸಿ ನೀರಿನ ಬಳಕೆಗೆ ತೀರ್ಪನ್ನು ಕೊಟ್ಟಿದೆ, ನೀರಿನ ಹಂಚಿಕೆ ಮಾಡಿ ತೀರ್ಪನ್ನು ಕೊಟ್ಟಿದೆ, ಅದು ಕೂಡಲೇ Gazette Notification ಬರುವಂತೆ ಮಾಡಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಎರಡನೆಯದ್, ಕೃಷ್ಣಾ ಮೇಲ್ದಂಡೆ ಮೂರನೆಯ ಯೋಜನೆಯನ್ನು ಮತ್ತು ಇಡೀ ಯೋಜನೆಯನ್ನು ರಾಷ್ಟ್ರೀಯ ಯೋಜನೆಯಾಗಿ ಕೇಂದ್ರ ಸರ್ಕಾರ ಘೋಷಣೆ ಮಾಡುವ ಹಾಗೆ ಮಾಡಿ. ರಾಷ್ಟ್ರೀಯ ಯೋಜನೆಯಾಗಿ ಘೋಷಣೆ ಮತ್ತು Gazette Notification ಎರಡು ಆದರೆ ಆರು ದಶಕಗಳ, 58 ವರ್ಷಗಳ ಇತಿಹಾಸಕ್ಕೆ ತಿಲಾಂಜಲಿ ಇಟ್ಟಹಾಗಾಗುತ್ತದೆ. ಇದು ಈ ಭಾಗದ ಜನರ ಬಹಳ ವರ್ಷದ ಕನಸು. ಏಕೆಂದರೆ ನೀರಾವರಿ ಯೋಜನೆಗಳು ವಾಸ್ತವವಾಗಿ ಜನರ ಬದುಕನ್ನು ಕಟ್ಟಿಕೊಡುತ್ತದೆ. ನೀವು ನೀರು, ವಿದ್ಯುತ್ ಕೊಡಿ ಸಾಕು ಬೇರೆ ಏನು ಬೇಡ ಎಂದು ಬಹಳ ಜನ ಬಹಳ ಸಾರಿ ಹೇಳಿದ್ದಾರೆ. ರೈತನಿಗೆ ನೀರ್ರು ಕೊಟ್ಟರೆ ಸಾಕು ಅಥವಾ ರೈತ ಪಂಪ್‌ಸೆಟ್ ಮೇಲೆ ಅವಲಂಬಿತನಾಗಿದ್ದರೆ ವಿದ್ಯುತ್ ಕೊಟ್ಟರೆ ಸಾಕು. ರೈತ ತನ್ನ ಪಾಡಿಗೆ ತಾನು ಬದುಕಿಕೊಳ್ಳುತ್ತಾನೆ. ಉತ್ತರ ಕರ್ನಾಟಕದ ಮೊದಲು 15 ಲಕ್ಷ 30 ಸಾವಿರ ಮತ್ತು ಈಗ 13 ಲಕ್ಷ ಒಟ್ಟು 28 ಲಕ್ಷ 30 ಸಾವಿರ ಎಕರೆ ಜಮೀನು ನೀರಾವರಿಯಾದರೆ ಅದರಿಂದ ಈ ಭಾಗದ ಜನರ ಭಾಗ್ಯದ ಬಾಗಿಲು ತೆಗೆದಂತೆ. ಈ ಭಾಗದ ಜನರು ಸದಾ ನಿಮ್ಮ ಹಿಂದೆ ಇರುತ್ತಾರೆ. ಆದರೆ ನೀವು ಈ ಜನರಿಗೆ ಕೊಟ್ಟಿರುವುದು ಏನು?

(ಮುಂದು)

(1206)21-12-2021(01-00)bsd-bns

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಮುಂದು)**

ಮಾನ್ಯ ಎಸ್.ಆರ್. ಬೊಮ್ಮಾಯಿರವರ ಕನಸಿನ ಯೋಜನೆಯಾದ ಮಹದಾಯಿ ಯೋಜನೆಯ ಅನುಷ್ಠಾನಕ್ಕೆ ಮುಂದಾಗಲಿಲ್ಲ, ಅದನ್ನು ಅನುಷ್ಠಾನ ಮಾಡುವ ಕೆಲಸ ಮಾಡಲಿಲ್ಲ, ಅದಕ್ಕೆ gazette notification ಆಗಿದ್ದು, tender ಮಾಡಲಿಲ್ಲ. Upper Krishna ಯೋಜನೆಯನ್ನು ಮಾನ್ಯ ಪ್ರಧಾನ ಮಂತ್ರಿಯವರ ಬಳಿ ಕುಳಿತುಕೊಳ್ಳುತ್ತಾರೋ ಅಥವಾ ಯಾರ ಬಳಿ ಕುಳಿತುಕೊಳ್ಳುತ್ತಾರೋ, ಗೊತ್ತಿಲ್ಲ, ಬೇರೆ ಬೇರೆ ವಿಚಾರಗಳಿಗೆ ಮಾನ್ಯ ಪ್ರಧಾನ ಮಂತ್ರಿಗಳ ಬಳಿ ಕುಳಿತುಕೊಳ್ಳುತ್ತಾರೆ, ರಾಷ್ಟ್ರೀಯ ಯೋಜನೆ ಎಂದು ಘೋಷಿಸಬೇಕೆಂದು ಒತ್ತಾಯ ಮಾಡಿ ಏಕೆ ಕುಳಿತುಕೊಳ್ಳುವುದಿಲ್ಲ? ಸರ್ವ ಪಕ್ಷಗಳ ನಿಯೋಗವನ್ನು ಕರೆದುಕೊಂಡು ಹೋಗಲಿ, ಅಗತ್ಯ ಬಿದ್ದರೆ ಮಾನ್ಯ ದೇವೇಗೌಡರನ್ನು ಕರೆದುಕೊಂಡು ಹೋಗಲಿ. ಮಾನ್ಯ ಪ್ರಧಾನಮಂತ್ರಿಗಳು ಮಾನ್ಯ ದೇವೇಗೌಡರನ್ನು ಬೇರೆ ಕರೆದು ಮಾತನಾಡುತ್ತಾರೆ. ರಾಷ್ಟ್ರೀಯ ಯೋಜನೆ ಎಂದು ಘೋಷಣೆ ಮಾಡಿಸಿ, gazette notification ಆಗುವಂತೆ ನೋಡಿಕೊಳ್ಳಬೇಕು. ಬಹುಶಃ ಆಗ ಕೃಷ್ಣಾ ಮೇಲ್ದಂಡೆ ಯೋಜನೆಗೆ ನ್ಯಾಯ ಕೊಡಲು ಸಾಧ್ಯವಾಗುತ್ತದೆ.

ಇನ್ನು ಕೊನೆಯದಾಗಿ, ಕಾವೇರಿ ಯೋಜನೆ ಬಗ್ಗೆ ಸೂಕ್ಷ್ಮವಾಗಿ ಕಡಿಮೆ ಮಾತುಗಳನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಏಕೆಂದರೆ ನಾನು ಬೆಂಗಳೂರಿನ ಅಧಿವೇಶನ ನಡೆದ ಸಂದರ್ಭದಲ್ಲಿ ವಿವರವಾದ ಮಾತುಗಳನ್ನು ಆಡುತ್ತೇನೆ. ಕರ್ನಾಟಕ ಮತ್ತು ತಮಿಳುನಾಡು ನಡುವಣ ಕಾವೇರಿ ವಿವಾದವು ನೂರಾರು ವರ್ಷಗಳದ್ದಾಗಿದ್ದು, ವಾಸ್ತವವಾಗಿ ಆ ಸಮಸ್ಯೆಯನ್ನು ಬ್ರಿಟಿಷರು ಹುಟ್ಟು ಹಾಕಿದರು. ಕರ್ನಾಟಕ ಮತ್ತು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ತಮಿಳುನಾಡಿಗೆ ಸಂಬಂಧಪಟ್ಟ Tribunal ನೀರಿನ ಹಂಚಿಕೆ ಮಾಡಿದ ಮೇಲೆ ಅಂತಿಮವಾಗಿ Supreme Court ಮರುಹಂಚಿಕೆಯನ್ನು ಮಾಡುತ್ತದೆ. ಆ ಮರು ಹಂಚಿಕೆಯಲ್ಲಿ ಮಾನ್ಯ ದೇವೇಗೌಡರ ಪಾತ್ರ ಬಹಳ ದೊಡ್ಡದಾಗಿದ್ದು, ಮಾನ್ಯ ಕುಮಾರಸ್ವಾಮಿ ರವರು ಮುಖ್ಯಮಂತ್ರಿಗಳಾಗಿದ್ದಾಗ ಅವರ ಹೆಗಲ ಮೇಲೆ ಕುಳಿತು Supreme Court ಗೆ Tribunal ವಿರುದ್ಧ ಅರ್ಜಿ ಹಾಕಿಸಿದರು. ಇದರಿಂದ ನಮಗೆ ೧೯೨ ಟಿಎಂಸಿ ನೀರು ಬಿಡಬೇಕಾದ್ದನ್ನು ತಪ್ಪಿಸಿ ೧೪.೭೫ ಟಿಎಂಸಿ ಹೆಚ್ಚು ನೀರು ಸಿಗುವಂತೆ ನೋಡಿಕೊಂಡರು. ನಮ್ಮಲ್ಲಿದ್ದ ಕೊರತೆಯನ್ನು ನೀಗಿಸಿದರು. ಆದರೆ ಪ್ರತಿ ವರ್ಷ ೧೭೭ ಟಿಎಂಸಿ ನೀರನ್ನು ಕಾವೇರಿ ಜಲ್ಲಾನಯನ ಭಾಗದಿಂದ ತಮಿಳುನಾಡಿಗೆ ತಿಂಗಳುವಾರು ಹರಿಸಬೇಕಾಗಿದೆ. ಮಳೆ ಬೀಳಲಿ ಅಥವಾ ಬೀಳದಿದ್ದರೂ ಈ ನೀರನ್ನು ಹರಿಸಬೇಕಾಗಿದೆ. ಕರ್ನಾಟಕ ಮತ್ತು ತಮಿಳುನಾಡಿನ ನಡುವಣ ಇರುವ ವೈಮನಸ್ಯ ಮತ್ತು ತಿಕ್ಕಾಟಕ್ಕೆ ಶಾಶ್ವತವಾದ ಪರಿಹಾರ ಮೇಕೆದಾಟು ಯೋಜನೆಯಾಗಿದೆ. ಮೇಕೆದಾಟು ಯೋಜನೆಯು ೩ ಆಶಯಗಳನ್ನು ಹೊತ್ತಿದ್ದು, ಬೆಂಗಳೂರು ನಗರಕ್ಕೆ ಕುಡಿಯುವ ನೀರನ್ನು ಪೂರೈಸುವುದಾಗಿದೆ. Supreme Court ಬೆಂಗಳೂರಿಗೆ ಹೆಚ್ಚುವರಿಯಾಗಿ ೧೦ ಟಿಎಂಸಿ ನೀರನ್ನು ಮಂಜೂರು ಮಾಡಿದೆ. ಅದಕ್ಕಾಗಿ ಯೋಜನೆಯನ್ನು ರೂಪಿಸುವ ಬಗ್ಗೆಯೂ ಹೇಳಿದೆ. ಬೆಂಗಳೂರು ನಗರ ಮತ್ತು ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರನ್ನು ಒದಗಿಸಬೇಕು. ಈ ರಾಜ್ಯ ಮತ್ತು ದೇಶದ ವಿವಿಧ ಜನರೆಲ್ಲರೂ ಬೆಂಗಳೂರಿನಲ್ಲಿ ವಾಸಿಸುತ್ತಾರೆ. ನಮ್ಮಲ್ಲಿರುವ ಕಟ್ಟೆಗಳಿಂದ ಕೇವಲ ಇಡಿಯಾಗಿ ನೀರನ್ನು ಕೊಡಲು ಸಾಧ್ಯವಾಗುವುದಿಲ್ಲ. ಅದರಂತೆ ಕುಡಿಯುವ ನೀರು ಮತ್ತು ಉಳಿದಂತೆ ತಮಿಳುನಾಡಿಗೆ ನೀರನ್ನು ಹರಿಸಲು ೪೦ ಟಿಎಂಸಿ ಸಾಮರ್ಥ್ಯದ balancing reservoir, ಅಂದರೆ ಸಮತೋಲನ ಜಲಾಶಯವನ್ನು ನಿರ್ಮಾಣ ಮಾಡಲು ಮೇಕೆದಾಟು ಯೋಜನೆ ಕಾರಣವಾಗಿದೆ. ಅದರ ಜೊತೆಗೆ ೪೦೦ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುವುದು ಯೋಜನೆಯ ಗುರಿಯಾಗಿದೆ. ಇದರ ಒಟ್ಟು ಅಂದಾಜು ವೆಚ್ಚ ಕೇವಲ ರೂ.೯ ಸಾವಿರ ಕೋಟಿಯಾಗಿದೆ. ಏಕೆಂದರೆ ಡ್ಯಾಂ ಗೆ ಸರಿಯಾದ ಜಾಗವನ್ನು ಆಯ್ಕೆ ಮಾಡಲಾಗಿದೆ. ಕೃಷ್ಣ ನದಿ ಮೇಲ್ದಂಡೆ ಯೋಜನೆಯ ೩ನೇ ಹಂತಕ್ಕೆ ರೂ.೬೫ ಸಾವಿರ ಕೋಟಿ ಬೇಕಾಗಿದೆ. ಆದರೆ ಇಡೀ ಮೇಕೆದಾಟು ಯೋಜನೆಗೆ ಕೇವಲ ರೂ.೯ ಸಾವಿರ ಕೋಟಿ ಸಾಕಾಗಿದೆ. ಇವತ್ತು DPR (Detailed Project Report) ಗೂ ಅನುಮತಿ ಸಿಕ್ಕಿದ್ದು ಕೇಂದ್ರದ ಮೇಲೆ ಒತ್ತಡ ಹಾಕಬೇಕಾಗಿದೆ. ತಮಿಳುನಾಡು ಪರ gazette notification ಅನ್ನು ವೇಗವಾಗಿ ಮಾಡಿದ್ದು, ಮೇಕೆದಾಟು ಯೋಜನೆಗೆ ಯಾರ ಅನುಮತಿಯೂ ಬೇಕಾಗಿರುವುದಿಲ್ಲ. ಆದರೆ ಅನುಷ್ಠಾನ ಮಾಡುವ ಇಚ್ಛಾಶಕ್ತಿ ಬೇಕಾಗಿದೆ. ವಾಸ್ತವವಾಗಿ Supreme Court ನಲ್ಲಿ ೨೦೦೦ ನೇ ಇಸವಿಯ ಒಂದು ತೀರ್ಮಾನ ಇದ್ದು, ಈ ವಿಚಾರದಲ್ಲಿ ಯಾರ ಅನುಮತಿ ಇಲ್ಲದೇ ಮೇಕೆದಾಟು ಯೋಜನೆ ಮಾಡಲು ಅನುಮತಿ ಇದೆ. ಆದರೆ ಕರ್ನಾಟಕ ಸರ್ಕಾರದ ಇಚ್ಛಾಶಕ್ತಿ ಬೇಕಾಗಿದೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಮುರುಗೇಶ್ ಆರ್.ನಿರಾಣಿ:-** ಮಾನ್ಯ ಸಭಾಪತಿಯವರೇ, ಕಾವೇರಿ ವಿಚಾರದ ಬಗ್ಗೆ ಮಾತನಾಡಲು ಬೆಂಗಳೂರಿನಲ್ಲಿ ಸಾಕಷ್ಟು ಸಲ ಅವಕಾಶ ಸಿಗುತ್ತದೆ. ಈಗ ಅಧಿವೇಶನ ಒಂದು ವಾರದ ಕಾಲ ನಡೆಯುತ್ತದೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಮಹದಾಯಿ ನೀರಿನ ವಿಚಾರವಾಗಿ ಸುಧೀರ್ಘವಾಗಿ ಮಾತನಾಡಿದ್ದೇನೆ. ಕೃಷ್ಣ ಮೇಲ್ದಂಡೆ ವಿಚಾರವಾಗಿ ಸುದೀರ್ಘವಾಗಿ ಮಾತನ್ನಾಡಿದ್ದು, ಈ ರಾಜ್ಯವನ್ನು ನಾನು ಸಮಾನವಾಗಿ ಪ್ರೀತಿಸುತ್ತೇನೆ.

**ಉಪಸಭಾಪತಿಯವರು:-** ಇವತ್ತು ಉತ್ತರ ಕರ್ನಾಟಕ-ಕಲ್ಯಾಣ ಕರ್ನಾಟಕ ಬಗ್ಗೆ ಚರ್ಚೆ ಮಾಡಬೇಕೆಂಬ ವಿಷಯ ಇದೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಅದೇ ಕ್ಷೇತ್ರದಿಂದ ಬಂದವನಾಗಿದ್ದು, ಚರ್ಚೆಯಲ್ಲಿ ಶೇಕಡ ೮೦ ರಿಂದ ೮೫ ರಷ್ಟು ಭಾಗವನ್ನು ಉತ್ತರ ಕರ್ನಾಟಕದ ಸಮಸ್ಯೆಗಳಿಗೆ ಮೀಸಲಿಟ್ಟು, ಕೇವಲ ಶೇಕಡ ೧೦-೧೫ ರಷ್ಟು ಉಳಿದಿರುವುದನ್ನು ಮಾತನಾಡುತ್ತೇನೆ.

**ಉಪ ಸಭಾಪತಿಯವರು:-** ಬಹಳ ಜನ ಮಾತನಾಡುವವರಿದ್ದು, ಇದೇ ವಿಷಯದ ಮೇಲೆ ಮಾತನಾಡಿದರೆ ಸುಲಭವಾಗುತ್ತದೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾನು ನಿಯಮ ೬೮ರಡಿ ಕೊಟ್ಟಿರುವ ನಿಲುವಳಿ ಸೂಚನೆಯಲ್ಲಿ ಕೃಷ್ಣ ಮೇಲ್ದಂಡೆ ಯೋಜನೆ, ಮಹದಾಯಿ ಯೋಜನೆ ಮತ್ತು ಕಾವೇರಿಯ ಮೇಕೆದಾಟು ನೀರಾವರಿ ಯೋಜನೆಗಳ ಬಗ್ಗೆ ಪ್ರಸ್ತಾಪ ಮಾಡುವ ಬಗ್ಗೆ ತಿಳಿಸಿದ್ದೇನೆ. ನನ್ನ ನಿಲುವಳಿ ಸೂಚನೆಗೆ ನಾನು justice ಕೊಡಬೇಕಲ್ಲವೇ? ಹಾಗಾಗಿ ಕಡಿಮೆ ಮಾತುಗಳನ್ನು ಇದರ ಬಗ್ಗೆ ಹೇಳುತ್ತೇನೆ. ನಿಲುವಳಿ ಸೂಚನೆಯ ಆರಂಭದ ಮಾತುಗಳನ್ನು ಹೇಳಿ, ಮುಂದಿನದ್ದನ್ನು ಮಾನ್ಯ ವಿರೋಧ ಪಕ್ಷದ ನಾಯ್ಯಕರು ಮುಂದುವರೆಸುತ್ತಾರೆ.

ಮಾನ್ಯ ಸಭಾಪತಿಯವರೇ, ಮೇಕೆದಾಟು ಯೋಜನೆ ಕೇವಲ ರೂ.೯ ಸಾವಿರ ಕೋಟಿಗೆ ಸೀಮಿತವಾಗಿದೆ. ಈ ಯೋಜನೆಗೆ ಯಾವ ಅಡ್ಡಿಯೂ ಇಲ್ಲದೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಇಚ್ಛಾ ಶಕ್ತಿ ಬೇಕಾಗಿದೆ. DPR ಕೂಡ ಆಗಿದೆ. ನಾನು ಅಂತಿಮವಾಗಿ ಸರ್ಕಾರ ಮತ್ತು ಮಾನ್ಯ ಮುಖ್ಯಮಂತ್ರಿಗಳನ್ನು ಆಗ್ರಹ ಮಾಡುವುದೇನೆಂದರೆ, ಅವರು ಮಹದಾಯಿಯ ಅನುಷ್ಠಾನಕ್ಕೆ ೨೦೦ ಕಿಲೋಮೀಟರ್

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪಾದಯಾತ್ರೆ ಮಾಡಿದ್ದಾರೆ. ಈಗ ಇಡೀ ಅಧಿಕಾರ ಅವರ ಕೈಯಲ್ಲಿದ್ದು, ರಾಜ್ಯದ ಚುಕ್ಕಾಣಿ ಮುಖ್ಯಮಂತ್ರಿಗಳ ಕೈಲಿದೆ. ಅವರ ತಂದೆಯವರ ಕನಸಿನ ಯೋಜನೆಯಾಗಿದ್ದು, ಅವರ ಆಯೋಗದ ಅಧ್ಯಕ್ಷರೇ ಕೊಟ್ಟಿರುವ ಯೋಜನೆಯಾಗಿದೆ. ಅದನ್ನು ಅನುಷ್ಠಾನಕ್ಕೆ ತಂದು ಅಲ್ಲಿಯ ಜನರ ಹೋರಾಟಕ್ಕೆ ವಿಶ್ರಾಂತಿ ಕೊಡಬೇಕಲ್ಲವೇ? ನಾಲ್ಕಾರು ವರ್ಷಗಳು ಕಳೆದರೂ ಅವರಿಗೆ ವಿಶ್ರಾಂತಿ ಕೊಡದೇ, ಕುಡಿಯುವ ನೀರನ್ನು ಕೊಡದೇ ಇದ್ದರೆ ಹುಬ್ಬಳ್ಳಿ-ಧಾರವಾಡ ಜನರು ಕ್ಷಮಿಸುತ್ತಾರೆಯೇ? ಬೆಳಗಾವಿ, ಗದಗ್, ಬಾಗಲಕೋಟೆ ಜನರು ಕ್ಷಮಿಸುತ್ತಾರೆಯೇ? ಈ ಕೂಡಲೇ ಇದಕ್ಕೆ tender ಮಾಡಿ ನಾಳೆಯೇ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕು. There are no hurdles at all. ಇದಕ್ಕೆ ಯಾವ ಅಡ್ಡಿ ಮತ್ತು ವಿರೋಧವೂ ಇಲ್ಲದೇ, gazette notification ಸಹ ಮುಗಿದಿದೆ. ಈ ನಿರ್ಣಯವನ್ನು ಮಾಡಬೇಕು. ಕೃಷ್ಣ ಮೇಲ್ದಂಡೆ ಯೋಜನೆಯ ೩ನೇ ಹಂತ ಬಗ್ಗೆ ಹೇಳಿದ್ದೇನೆ. ಅದರ ೧೩೦ ಟಿಎಂಸಿ ನೀರನ್ನು ಬಳಸಿಕೊಳ್ಳಲು gazette notification ಆಗಬೇಕು, ೨ನೇ Tribunal ಕೊಟ್ಟಿರುವ ತೀರ್ಮಾನವು ಅನುಷ್ಠಾನಕ್ಕೆ ಬರಬೇಕು. ಜೊತೆಗೆ ಕೇಂದ್ರ ಸರ್ಕಾರದಿಂದ ಕೃಷ್ಣ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ನಿರ್ಣಯ ಮಾಡುವ ತೀರ್ಮಾನ ಮಾಡಿದರೆ, ಈ ರಾಜ್ಯದ ಹಾಗೂ ಉತ್ತರ ಕರ್ನಾಟಕದ ಜನರ ಪರವಾಗಿ ದೀರ್ಘ ದಂಡ ನಮಸ್ಕಾರ ಹಾಕುತ್ತೇನೆ ಎಂದು ಹೇಳುತ್ತಾ, ಈ ಸವಾಲವನ್ನು ಅವರು ಸ್ವೀಕಾರ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಸದನದಲ್ಲಿದ್ದು, ಎರಡೂ ಸದನಗಳಲ್ಲಿ ನಾವು ಮಾತನಾಡಿರುವಂತೆ ಪಕ್ಷ, ಬೇಧ, ಭಾವನೆ ಮರೆತು unanimous ಆಗಿ resolution ಮಾಡಬೇಕು, ಇಲ್ಲಿ ಕಾಂಗ್ರೆಸ್, ಬಿಜೆಪಿ, ಜನತಾದಳ ಎಂಬ ಭಾವನೆ ಇಲ್ಲ, ನಾವೆಲ್ಲರೂ ಕನ್ನಡಿಗರಾಗಿದ್ದು, ಕೆಳಮನೆ ಮತ್ತು ಮೇಲ್ಮನೆ ಸೇರಿದಂತೆ resolution ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ, ಕೂಡಲೇ ಜಾರಿಗೆ ತರಬೇಕು ಎನ್ನುವ ಒತ್ತಾಯ ಮಾಡಿದರೆ ಮಾತ್ರ ಹೊರಗಡೆ ಜನರು ಬೆಳಗಾವಿಯಲ್ಲಿ ಅಧಿವೇಶನ ಮಾಡಿದ್ದಕ್ಕೂ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತಾರೆ. ದಯವಿಟ್ಟು ಇದನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸಿ ಈ ಕೆಲಸ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಕೃಷ್ಣ ಜಲವಿವಾದ ನ್ಯಾಯಮಂಡಳಿಯಿಂದ ನಮಗೆ ಹಂಚಿಕೆಯಾಗಿರುವ ನೀರಿನ ಪ್ರಮಾಣ ಹಾಗೂ ಕೃಷ್ಣ ನದಿ ಕೊಳ್ಳದಲ್ಲಿ ದೊರೆಯುವ ನೀರಿನ ಪ್ರಮಾಣವನ್ನು ನೋಡಬೇಕಾಗುತ್ತದೆ. ಒಟ್ಟು ೨,೫೭೮ ಟಿಎಂಸಿ ನೀರು ದೊರೆಯುತ್ತಿದ್ದು, ೬೬೬ ಟಿಎಂಸಿ ನೀರು ಮಹಾರಾಷ್ಟ್ರಕ್ಕೆ, ಕರ್ನಾಟಕಕ್ಕೆ ೯೦೭ ಟಿಎಂಸಿ, ಅವಿಭಜಿತ ಆಂಧ್ರ ಪ್ರದೇಶಕ್ಕೆ ೧,೦೦೫ ಟಿಎಂಸಿ ನೀರು ಹೋಗುತ್ತದೆ. ನ್ಯಾಯಮಂಡಳಿ ತೀರ್ಪಿನಲ್ಲಿ ಒಂದು rider ಇದ್ದು, ೨೦೨೦ನೇ ಇಸವಿ ನಂತರ ಈ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ತೀರ್ಪನ್ನು ಪುನರ್‌ವಿಮರ್ಶೆ ಮಾಡುವ ಬಗ್ಗೆ ತಿಳಿಸಲಾಗಿದೆ. ಅಂದರೆ ಹೆಚ್ಚುವರಿ ನೀರು ಬಂದಾಗ ಪುನಃ ಮರು ಹಂಚಿಕೆಯಾಗಬಹುದು. ಒಂದು ವೇಳೆ ಯಾವುದಾದರೊಂದು ರಾಜ್ಯ ನೀರನ್ನು ಬಳಕೆ ಮಾಡದಿದ್ದರೆ ಮರುವಿಂಗಡನೆ ಆಗುವ chances ಕೂಡ ಇದೆ. ಇದೊಂದು ತೂಗುಗತ್ತಿಯಾಗಿದೆ. ಯಾವುದೇ ಸರ್ಕಾರ ಇರಬಹುದು, ಇದನ್ನು ಗಮನದಲ್ಲಿಟ್ಟುಕೊಂಡು ಈ ಭಾಗದ ಜನರ ಅಭಿವೃದ್ಧಿಗೆ ಏನಾದರೂ ಮಾಡುವುದಿದ್ದರೆ ಈ ಯೋಜನೆ ಅನುಷ್ಠಾನ ಆಗಲೇಬೇಕು.

ಇನ್ನು ಕೃಷ್ಣ ಮೇಲ್ದಂಡೆ ಯೋಜನೆಯ ಬಗ್ಗೆ ಮಾತ್ರ ಹೆಚ್ಚಿನ ಒತ್ತು ಕೊಡಬೇಕಾಗಿದ್ದು, ಮಲ್ಲಪ್ರಭಾ, ಘಟಪ್ರಭಾ, ತುಂಗಾಭದ್ರ ನದಿಗಳೆಲ್ಲವೂ ಕೃಷ್ಣ ನದಿ ಕೊಳ್ಳದಲ್ಲಿಯೇ ಬರುತ್ತಿದೆ. ಅದರ ನೀರು ಹಂಚಿಕೆಯಾಗಿ, ಬಳಕೆಯೂ ಆಗುತ್ತಿದೆ.

(ಮುಂದು)

1207/21.12.2021/1.10/ಹೆಚ್‌ವಿ:ಜಿಆರ್ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ಮುಂದು):-**

ಮಾನ್ಯ ಸಭಾಪತಿಯವರೇ, ಕೃಷ್ಣಾ ಮೇಲ್ದಂಡೆ ಯೋಜನೆ ಮತ್ತು ಅದರ ಅನುಷ್ಠಾನಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೇ, ಸ್ಕೀಮ್ 'ಎ' ನಲ್ಲಿ 123 ಟಿ.ಎಂ.ಸಿ., ಮತ್ತು ಸ್ಕೀಮ್ 'ಬಿ' ಯಲ್ಲಿ 130 ಟಿ.ಎಂ.ಸಿ., ಆಗಿದೆ. ಈಗಾಗಲೇ allocation ಆಗಿರುವಂತಹ 170 ಟಿ.ಎಂ.ಸಿ., ನೀರನ್ನು ಮೊದಲನೆ ಮತ್ತು ಎರಡನೆಯ ಹಂತದಲ್ಲಿ ಬಳಸಿಕೊಂಡಿದ್ದೇವೆ. ಇದು 1963ರಲ್ಲಿ ಪ್ರಾರಂಭವಾಗಿರುವಂತಹ ಯೋಜನೆಯಾಗಿದ್ದರೂ ಸಹ, ಸಾಕಷ್ಟು ನೆನಗುದಿಗೆ ಬಿದ್ದು ಈ ಯೋಜನೆಯ ಅನುಷ್ಠಾನ ಕುಂಠಿತವಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಪ್ರಮುಖವಾಗಿರುವ ಅಂಶವೆಂದರೆ, ಮೊದಲನೆಯದಾಗಿ ಆಲಮಟ್ಟಿ ಅಣೆಕಟ್ಟು ಅದನ್ನು 'ಲಾಲ್ ಬಹದ್ದೂರ್ ಶಾಸ್ತ್ರಿ ಸಾಗರ' ಎನ್ನುವ ಹೆಸರಿನಿಂದಲೂ ಕರೆಯಲಾಗುತ್ತದೆ. ಮತ್ತೊಂದು ಬಸವ ಸಾಗರ ಜಲಾಶಯ ಅಥವಾ ನಾರಾಯಣಪುರ ಜಲಾಶಯವಾಗಿದೆ. ಆಲಮಟ್ಟಿ ಜಲಾಶಯದ ಪೂರ್ಣ ಪ್ರಮಾಣದ ಮಟ್ಟ ಸುಮಾರು 519.6 ಮೀಟರ್‌ಗಳಾಗಿವೆ. ಇದಕ್ಕೆ Central Water Commission (C.W.C.,) ಅವರಿಂದ ಕೂಡ ಅನುಮೋದನೆಯನ್ನು ಪಡೆದುಕೊಳ್ಳಲಾಗಿದೆ. ಜಲಾಶಯವನ್ನು ಕಟ್ಟಬೇಕಾದರೆ, sluice gate ಮಾದರಿಯಲ್ಲಿ 1970ರಲ್ಲಿ ನಿರ್ಮಾಣ ಮಾಡಲಾಗಿದೆ. ಇದರಲ್ಲಿ ಪೂರ್ಣ ಪ್ರಮಾಣದಲ್ಲಿ ನೀರನ್ನು ಸಂಗ್ರಹ ಮಾಡಬೇಕಾದರೆ, ಈ ಜಲಾಶಯದ ಎತ್ತರವನ್ನು 524.256 ಮೀಟರ್‌ಗೆ ಎತ್ತರಿಸಬೇಕಾದರೆ, ಈ sluice gate ಅನ್ನು ಅಳವಡಿಸುವಂತಹ ಉದ್ದೇಶವಿತ್ತು. ಆದರೆ, ಅಂದಿನ ಅವಿಭಾಜ್ಯ ಆಂಧ್ರಪ್ರದೇಶದ ಮುಖ್ಯಮಂತ್ರಿಗಳು, 'ನಮ್ಮ ಪ್ರದೇಶಗಳು ಮುಳುಗಡೆಯಾಗುತ್ತವೆ ನಾವು ಇನ್ನೂ ಕೂಡ ಪುನರ್ವಸತಿಯನ್ನು ಕಲ್ಪಿಸಿಲ್ಲ' ಎಂದು ತೆಗೆದಂತಹ ತಗಾದೆ ಮತ್ತು ತಕರಾರು ಮಾಡಿದ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ನೀಡಿದಂತಹ ಆದೇಶದನ್ವಯ ಗೇಟ್ ಅನ್ನು ಹಾಗೇ ಉಳಿಸಿಕೊಂಡು ಅದರ

ಲೀಫ್‌ಗಳನ್ನು ತೆಗೆದು ಬೇರೆ ಕಡೆ ಇಟ್ಟಿದ್ದಾರೆ. ಸುಪ್ರೀಂ ಕೋರ್ಟ್‌ನ ಆದೇಶದ ನಂತರ ಅವುಗಳನ್ನು ಜೋಡಿಸಿಕೊಂಡು 524.256 ಮೀಟರ್‌ಗೆ ಎತ್ತರಕ್ಕೆ ನಾವು ನೀರನ್ನು ಸಂಗ್ರಹ ಮಾಡಿಕೊಳ್ಳಬಹುದಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಈ ಭಾಗದ ಜನರಿಗೆ ನೀರಾವರಿಯನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ಮಹತ್ವದ ಕಾರ್ಯವನ್ನು ಮಾಡಿರುವಂತಹ ಈ ದೇಶದ ಪ್ರಧಾನ ಮಂತ್ರಿಗಳಾಗಿದ್ದ ನಮ್ಮ ವರಿಷ್ಠರಾಗಿರುವ ಶ್ರೀ ಹೆಚ್.ಡಿ.ದೇವೇಗೌಡರ ಪಾತ್ರವನ್ನು ನಾನು ಇಲ್ಲಿ ಉಲ್ಲೇಖಿಸಿದರೆ ಅದು ಅತಿಶಯೋಕ್ತಿ ಆಗುವುದಿಲ್ಲ. 1983ನೇ ಇಸವಿಯಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರ ನೇತೃತ್ವದ ಜನತಾ ಪರಿವಾರ ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ ಮಾನ್ಯ ಹೆಚ್.ಡಿ.ದೇವೇಗೌಡರು ಲೋಕೋಪಯೋಗಿ ಮತ್ತು ನೀರಾವರಿ ಸಚಿವರಾಗಿದ್ದಾಗ, ರಾಜ್ಯದ ನೀರಾವರಿ ಯೋಜನೆಗಳಿಗೆ ಸಾಕಷ್ಟು ಅನುದಾನವನ್ನು ನೀಡಿಲ್ಲ ಅದರಲ್ಲೂ ವಿಶೇಷವಾಗಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಾಕಷ್ಟು ಹಣವನ್ನು ಬಿಡುಗಡೆ ಮಾಡಿಲ್ಲವೆಂದು ಅವರು ಎರಡು ಮೂರು ಬಾರಿ ರಾಜಿನಾಮೆಯನ್ನು ನೀಡಿದ್ದರು. ಇದರ ಬಗ್ಗೆ ಸದನದಲ್ಲಿ ಹಲವಾರು ಬಾರಿ ಚರ್ಚೆಯಾಗಿದೆ. ವಿಶ್ವ ಬ್ಯಾಂಕ್‌ನಿಂದ ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಾಲ ತೆಗೆದುಕೊಳ್ಳುವುದಕ್ಕೂ ಮಾನ್ಯ ಹೆಚ್.ಡಿ.ದೇವೇಗೌಡರು ಪ್ರಮುಖ ಕಾರಣಕರ್ತರಾಗಿದ್ದಾರೆ. ವಿಶ್ವಬ್ಯಾಂಕ್ ಹಾಕಿರುವಂತಹ ಎಲ್ಲ ಷರತ್ತುಗಳನ್ನು ನಿರ್ವಹಣೆ ಮಾಡುತ್ತೇನೆಂದು ಹೇಳಿ ವಾಷಿಂಗ್‌ಟನ್‌ಗೆ ಹೋಗಿ ಮಾತನಾಡಿ ಸುಮಾರು 110 ಲಕ್ಷ ಡಾಲರ್‌ಗಳಷ್ಟು ಸಾಲವನ್ನು ಪಡೆದುಕೊಂಡು ಬಂದಿದ್ದರು.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ದೇವೇಗೌಡರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಜಲಾಶಯ ನಿರ್ಮಾಣವಾಗಿತ್ತು ಕಾಲುವೆಗಳು ನಿರ್ಮಾಣವಾಗಿರಲಿಲ್ಲ. ಕಾಲುವೆಗಳ ನಿರ್ಮಾಣವಾಗಬೇಕು ಮತ್ತು ಅಲ್ಲಿ ಲಭ್ಯವಿರುವ ನೀರಿನ ಬಳಕೆಯಾಗಬೇಕೆನ್ನುವ ದೃಷ್ಟಿಯಿಂದ ಕಾಲುವೆಗಳನ್ನು ನಿರ್ಮಾಣ ಮಾಡುವುದಕ್ಕೆ ಅಧಿಕಾರಿಗಳ ಶಿಫಾರಸ್ಸಿನ ಮೇರೆಗೆ ಅರ್ಹತೆಯ ಆಧಾರದ ಮೇಲೆ ಅರ್ಹ ಗುತ್ತಿಗೆದಾರರಿಗೆ ಕಾರ್ಯವನ್ನು ವಹಿಸಿ direct entrustment ಮಾಡಿ, ಆ ಕಾರ್ಯವನ್ನು ನಿರ್ದಿಷ್ಟ ಸಮಯದಲ್ಲಿ ಮುಕ್ತಾಯಗೊಳಿಸಲಾಯಿತು. ಇದಕ್ಕೆ ಸಾಕ್ಷಿಯಾಗಿರುವುದು ನಾರಾಯಣಪುರ ಬಲದಂಡೆ ಕಾಲುವೆ. ಇಂದು ರಾಯಚೂರು ಮತ್ತು ದೇವದುರ್ಗದಲ್ಲಿ ಸದಾಕಾಲ ಬರಗಾಲದಿಂದ ಬಳಲುತ್ತಿದ್ದ ರೈತರಿಗೆ ನೀರುಣಿಸುವ ಯೋಜನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಹೆಚ್.ಡಿ.ದೇವೇಗೌಡರು ಈ ರಾಷ್ಟ್ರದ ಪ್ರಧಾನ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ದೇಶದಲ್ಲಿರುವ ಯಾವ ರಾಜ್ಯದ ನೀರಾವರಿ ಯೋಜನೆಗಳು ನೆನಗುದಿಗೆ ಬಿದ್ದಿದ್ದವು, ಯಾವುದನ್ನು ಅನುಷ್ಠಾನಗೊಳಿಸುವುದಕ್ಕೆ ಸಾಧ್ಯವಾಗಿರಲಿಲ್ಲ ಅವುಗಳನ್ನು

ಪುನರ್ಚ್ಚೇತನಗೊಳಿಸಬೇಕೆನ್ನುವ ದೃಷ್ಟಿಯಿಂದ ಮತ್ತು ಈ ನೀರಾವರಿ ಯೋಜನೆಗಳು ರೈತರಿಗೆ ಸಹಾಯಕವಾಗಬೇಕಾದರೆ, ಕೇಂದ್ರ ಸರ್ಕಾರದ ನೆರವು ಅತ್ಯಗತ್ಯವೆಂದು ಮನಗಂಡ ಅವರು Accelerated Irrigation Benefit Programme (AIBP) ಕಾರ್ಯಕ್ರಮವನ್ನು ಜಾರಿಗೆ ತಂದರು. ಇವತ್ತಿಗೂ ಕೂಡ ಆ ಯೋಜನೆಯನ್ನು ಕೇಂದ್ರ ಜಲಶಕ್ತಿ ಯೋಜನೆಯಡಿಯಲ್ಲಿ ವಿಲೀನಗೊಳಿಸಲಾಗಿದೆ. ಇದರಿಂದಾಗಿ ನಮ್ಮ ರಾಜ್ಯಕ್ಕೆ ಸುಮಾರು 28 ಸಾವಿರ ಕೋಟಿ ರೂಪಾಯಿಗಳಷ್ಟು ಅನುದಾನ ದೊರಕಿದೆ. ಇದಲ್ಲಿ ಸುಮಾರು 15-16 ಸಾವಿರ ಕೋಟಿ ರೂಪಾಯಿಗಳಷ್ಟು ಅನುದಾನ ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ನೀಡಲಾಗಿದೆ. ನಾನು ಅವರ ಬಗ್ಗೆ ಹೆಚ್ಚಿನ ಹೊಗಳಿಕೆಗೆ ಹೋಗುವುದಿಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲನೆ ಮತ್ತು ಎರಡನೆಯ ಹಂತದ ಯೋಜನೆಗಳು ಮುಕ್ತಾಯಗೊಂಡಿವೆ. ಮೂರನೆ ಹಂತದಲ್ಲಿ ಇರುವಂತಹ ಕ್ಲಿಷ್ಟವಾಗಿರುವ ಸಮಸ್ಯೆಗಳನ್ನು ಸರ್ಕಾರ ಯಾವ ರೀತಿಯಲ್ಲಿ ಬಗೆಹರಿಸಬೇಕು ಎನ್ನುವ ನಿಟ್ಟಿನಲ್ಲಿ ಸರ್ಕಾರಕ್ಕೆ ಒಂದೆರಡು ಅಂಶಗಳನ್ನು ಮನದಟ್ಟು ಮಾಡುವುದಕ್ಕೆ ಬಯಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಿ.ಎಂ.ಇಬ್ರಾಹಿಂರವರು ಮಾತನಾಡುತ್ತಾ, ಎರಡೂ ಸದನಗಳಲ್ಲಿ ಈ ವಿಚಾರಕ್ಕೆ ಸಂಬಂಧಪಟ್ಟಂತೆ ಒಂದು ನಿರ್ಣಯವನ್ನು ಮಾಡಿದರೆ, ಆ ನಿರ್ಣಯವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟು ಈ ಯೋಜನೆಗಳನ್ನು ಅನುಷ್ಠಾನಗೊಳಿಸುವುದಕ್ಕೆ ನೆರವಾಗುತ್ತದೆ' ಎನ್ನುವ ಮಾತುಗಳನ್ನು ಹೇಳಿದ್ದರೆ. ನಿಜಕ್ಕೂ ಇದು ಸ್ವಾಗತಾರ್ಹ, ಈ ನಿಟ್ಟಿನಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ ಕೃಷ್ಣಾ ಜಲ ವಿವಾದಕ್ಕೆ ಸಂಬಂಧಪಟ್ಟಂತೆ ಕೃಷ್ಣಾ ನ್ಯಾಯ ಮಂಡಳಿಯ ತೀರ್ಪು ಹೊರಬಂದಿದೆ. ಸೆಕ್ಷನ್ 5(1)ರಡಿಯಲ್ಲಿ ನೋಟಿಫಿಕೇಶನ್ ಸಹ ಆಗಿದೆ. ಸೆಕ್ಷನ್ 6(1) ಅಡಿಯಲ್ಲಿ ಅಂತಿಮವಾಗಿ ನೋಟಿಫಿಕೇಶನ್ ಆಗುವುದು ಬಾಕಿ ಉಳಿದಿದೆ. ಹಿಂದೆ ಅವಿಭಾಜ್ಯ ಆಂಧ್ರಪ್ರದೇಶಕ್ಕೆ ಹಂಚಿಕೆಯಾಗಿತ್ತು. ಈಗ ತೆಲಂಗಾಣ ಮತ್ತು ಆಂಧ್ರಪ್ರದೇಶವೆಂದು ವಿಭಜನೆಯಾದ ಮೇಲೆ ಈಗಿನ ಆಂಧ್ರಪ್ರದೇಶದ ಸರ್ಕಾರ, 'ನೀರಿನ ಮರು ಹಂಚಿಕೆಯಾಗಬೇಕಾಗಿದೆ, ಮತ್ತೊಂದು ನ್ಯಾಯ ಮಂಡಳಿಯ ರಚನೆ ಮಾಡಿ, ನಂತರ ನೀರಿನ ಹಂಚಿಕೆಯಾಗಬೇಕು' ಎನ್ನುವ ಒಂದು ತಕರಾರು ಅರ್ಜಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆ. ಕೇಂದ್ರ ಸರ್ಕಾರ ಈ ಅರ್ಜಿಯನ್ನು ಕೃಷ್ಣಾ ಜಲ ನ್ಯಾಯಮಂಡಳಿಗೆ ಕಳುಹಿಸಿಕೊಟ್ಟಿದೆ. ಅವರು 'ಈಗಾಗಲೇ ಅವಿಭಾಜ್ಯ ಆಂಧ್ರಪ್ರದೇಶಕ್ಕೆ ಕೊಡಬೇಕಾಗಿರುವ ನೀರಿನ ಹಂಚಿಕೆಯ ತೀರ್ಮಾನವಾಗಿದೆ. ತಮ್ಮಲ್ಲಿ ಏನಾದರು ಭಿನ್ನಾಭಿಪ್ರಾಯಗಳಿದ್ದರೆ ಅಥವಾ ಗೊಂದಲಗಳಿದ್ದರೆ ಅದನ್ನು ತಾವೇ ತೀರ್ಮಾನ ಮಾಡಿಕೊಳ್ಳಬೇಕು' ಎನ್ನುವ ಅಭಿಪ್ರಾಯವನ್ನು ಕಳುಹಿಸಿಕೊಟ್ಟಿದ್ದಾರೆ. ನ್ಯಾಯ ಮಂಡಳಿ ತನ್ನ ಅಭಿಪ್ರಾಯವನ್ನು ನೀಡಿದ್ದರು ಸಹ ಆಂಧ್ರಪ್ರದೇಶ ಸುಪ್ರೀಂ ಕೋರ್ಟಿನಲ್ಲಿ ಒಂದು ತಕರಾರು ಅರ್ಜಿಯನ್ನು ಸಲ್ಲಿಸಿದೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸನ್ಮಾನ್ಯ ಸಭಾಪತಿಯವರೇ, ರಾಜ್ಯದ ಹಿತದೃಷ್ಟಿಯಿಂದ ಸರ್ಕಾರಕ್ಕೆ ನನ್ನ ಸಲಹೆ ಏನೆಂದರೆ, ರಾಜ್ಯದಲ್ಲಿಯೂ ಭಾರತೀಯ ಜನತಾ ಪಕ್ಷದ ಸರ್ಕಾರ ಅಧಿಕಾರದಲ್ಲಿದೆ ಕೇಂದ್ರದಲ್ಲಿ ಭಾರತೀಯ ಜನತಾ ಪಕ್ಷದ ಸರ್ಕಾರ ಅಧಿಕಾರದಲ್ಲಿದೆ. ರಾಜ್ಯದಿಂದ ಒಂದು ಸರ್ವ ಪಕ್ಷಗಳ ನಿಯೋಗವನ್ನು ತೆಗೆದುಕೊಂಡು ಹೋಗಿ ಕೇಂದ್ರದ ಮೇಲೆ ಈ ವಿಚಾರವಾಗಿ ಒತ್ತಡವನ್ನು ತರೋಣ. ಸರ್ಕಾರ ಮಧ್ಯಂತರ ಅರ್ಜಿಯನ್ನು ಸಲ್ಲಿಸಬೇಕಾಗಿದೆ. ತೆಲಂಗಾಣ ಮತ್ತು ಆಂಧ್ರಪ್ರದೇಶದ ನಡುವೆ ಉಂಟಾಗಿರುವ ಜಲ ವಿವಾದಕ್ಕೆ ಒಂದು ನ್ಯಾಯ ಮಂಡಳಿಯನ್ನು ರಚನೆ ಮಾಡಲಾಗಿದೆ. ಅದು ಏನುಬೇಕಾದರು ತೀರ್ಮಾನವನ್ನು ನೀಡಲಿ. ನಮ್ಮ ರಾಜ್ಯ ಸರ್ಕಾರ ಸೆಕ್ಷನ್ 6(1)ರಡಿಯಲ್ಲಿ ಅಂತಿಮ ನೋಟಿಫಿಕೇಶನ್ ಹೊರಡಿಸಿ ಎಂದು ನಾವು ಒತ್ತಾಯ ಮಾಢಬಹುದು. ಇದನ್ನು ಮಾಡದೇ ಹೋದರೆ, ಕೃಷ್ಣಾ ಮೇಲ್ದಂಡೆ ಯೋಜನೆಯ ಮೂರನೆಯ ಹಂತದ ಯೋಜನೆಯಲ್ಲಿ ಬಹುತೇಕ ಪ್ರಮುಖ ಏತ ನೀರಾವರಿ ಯೋಜನೆಗಳಾಗಿವೆ. ಇದಕ್ಕೆ ಸಂಬಂಧಪಟ್ಟಂತೆ ಟೆಂಡರ್ ಕರೆದು ಕಾಲುವೆಗಳನ್ನು ಮಾಡುವಂತಹ ಕಾರ್ಯ ನಡೆಯುತ್ತಿದೆ. ಆದರೆ, crush gate ಹಾಕಿ ನೀರನ್ನು ತಡೆಹಿಡಿದರೆ, ಮುಳುಗಡೆಯಾಗುವ ಸುಮಾರು 54 ರಿಂದ 56 ಹಳ್ಳಿಗಳ ಸ್ಥಳಾಂತರವಾಗಲಿಲ್ಲ ಮತ್ತು ಅವರುಗಳಿಗೆ ಪುನರ್ವಸತಿಯನ್ನು ಕಲ್ಪಿಸಿಕೊಟ್ಟಿಲ್ಲ. ಈ ಯೋಜನೆಯ ಅಂದಾಜು ವೆಚ್ಚ ಸುಮಾರು 50-60 ಸಾವಿರ ಕೋಟಿ ರೂಪಾಯಿಗಳಾಗಿವೆ. ಆದರೆ, 2021-22ರ ಅಂದಾಜು ಪಟ್ಟಿಯಲ್ಲಿ ಬಹುಶಃ ಇದರ ಅಂದಾಜು ವೆಚ್ಚ ಸುಮಾರು ಒಂದು ಲಕ್ಷ ಕೋಟಿ ರೂಪಾಯಿಗಳಾಗಬಹುದು.

(ಮುಂದು)

(1208) 21.12.2021 1.20 ಪಿಕೆ:ಜಿಆರ್

**ಶ್ರೀ ಕೆ.ಎ.ತಿಪ್ಪೇಸ್ವಾಮಿ**(ಮುಂದು)

ಆದ್ದರಿಂದ ಸರ್ಕಾರ ಇದರ ಬಗ್ಗೆ ಕಾಳಜಿ ವಹಿಸಿ ಭಾರತ ಸರ್ಕಾರದ ಮೇಲೆ ಒತ್ತಾಯ ತನ್ನಿ. ಆದಷ್ಟು ಬೇಗ ಸೆಕ್ಷನ್ 6(1)ರ ಅಡಿಯಲ್ಲಿ ಇದರ ಗೆಜೆಟ್ ನೋಟಿಫಿಕೇಷನ್ ತರುವ ವ್ಯವಸ್ಥೆ ಮಾಡಬೇಕು.

ತುಂಗಭದ್ರಾ ಜಲಾಶಯ ಹಳೆಯದಾದ ಜಲಾಶಯ. ಈ ಜಲಾಶಯದಲ್ಲಿ ಸಂಗ್ರಹ ಆಗುವ ನೀರು ಆಂಧ್ರ ಪ್ರದೇಶ ಮತ್ತು ಕರ್ನಾಟಕ ರಾಜ್ಯಗಳ ನಡುವೆ ಹಂಚಿಕೆ ಆಗುತ್ತದೆ. ಮತ್ತೆ ನಮಗೆಲ್ಲರಿಗೂ ಗೊತ್ತಿರುವ ಹಾಗೆ ಹೂಳಿನ ಪ್ರಮಾಣ ಜಾಸ್ತಿಯಾಗಿರುವುರಿಂದ ನೀರಿನ ಸಂಗ್ರಹ ಇಲ್ಲಿ ಕಡಿಮೆ ಆಗುತ್ತಿದೆ. ಇದಕ್ಕೆ ಸಂಬಂಧಪಟ್ಟಂತೆ, ಪರ್ಯಾಯವಾಗಿ ನವಿಲೆ ಎನ್ನುವ ಕಡೆ ಕೂಡ ಒಂದು ಸಮತೋಲನ ಜಲಾಶಯ ಕಟ್ಟಬೇಕು ಎನ್ನುವ ಒಂದು ಪ್ರಸ್ತಾಪ ಕೂಡ ಇದೆ. ಈ ಕುರಿತು ವಿಸ್ತೃತ ಯೋಜನಾ ವರದಿ ಕೂಡ ತಯಾರಾಗಿದೆ. ಆದರೆ ಏಕೋ ಸರ್ಕಾರ ಇದಕ್ಕೆ ಮೀನಾ-ಮೇಷ ಎಣಿಸುತ್ತಿದೆ. ದಯಮಾಡಿ ಇದರ ಡಿ.ಪಿ.ಆರ್., ತಯಾರಿಸಿ. ಆಂಧ್ರ ಪ್ರದೇಶದವರನ್ನು ಕರೆದು, ಅವರು ಎಷ್ಟು ಶೇರ್ ಕೊಡುತ್ತಾರೆ ಮತ್ತು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾವು ಎಷ್ಟು ಶೇರ್ ಕೊಡಬೇಕೆಂದು ಮಾತನಾಡಿ. ಹೈ ಲೆವೆಲ್ ಕಮಿಟಿ ಮಾಡಿ ತೀರ್ಮಾನಕ್ಕೆ ಬರಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಮಹದಾಯಿಗೆ ಸಂಬಂಧಪಟ್ಟಂತೆ ಕೂಡ ಅಂತಿಮವಾಗಿ ಗೆಜೆಟ್ ನೋಟಿಫಿಕೇಷನ್ ಆಗಿದೆ. ಇಲ್ಲೇನಾಗಿದೆ ಎಂದರೆ, ಹಿಂದೆ ಸ್ಟೇ ಆರ್ಡರ್ ಇದ್ದಾಗ ನಮ್ಮ ರಾಜ್ಯ ಸರ್ಕಾರ ಕೆಲವೊಂದು ಕಾಮಗಾರಿಗಳನ್ನು ಓವರ್‌ಲುಕ್ ಮಾಡಿ ಮಾಡಿದ್ದಾರೆ ಎಂದು ಗೋವಾ ಸರ್ಕಾರ ಸುಪ್ರೀಮ್ ಕೋರ್ಟ್‌ನಲ್ಲಿ ಒಂದು Contempt Petition ಹಾಕಿದೆ. ಅದರಿಂದ ಈ ಕೆಲಸ ನಿಂತು ಹೋಗಿದೆ. ಗೋವಾ, ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳ ಉನ್ನತ ಅಧಿಕಾರಿಗಳ ಒಂದು ಟೀಮ್ ಬಂದಿತ್ತು. ನಂತರ ಮುಂದೆ ಏನಾಯಿತು ಎಂದು ಯಾರೂ ಫಾಲೋ ಮಾಡಲಿಲ್ಲ. ಕಳೆದ ಅಧಿವೇಶನದಲ್ಲಿ ನಾವು ಇದೇ ವಿಷಯದ ಬಗ್ಗೆ ಚರ್ಚೆ ಮಾಡಿದ್ದೇವೆ. ಇದರ ಬಗ್ಗೆ ಸದನಕ್ಕೆ ಮಾಹಿತಿ ಕೊಡಿ. ಕರ್ನಾಟಕದ ಬಗ್ಗೆ ಕಾಳಜಿ ಇದ್ದರೆ ಇದರ ಬಗ್ಗೆ ನೀವು ಏನು ಮಾಡುತ್ತಿದ್ದೀರಿ ಎಂಬ ಬಗ್ಗೆ ಸರ್ಕಾರ ಸ್ಪಷ್ಟವಾದ ನಿಲುವನ್ನು ತಿಳಿಸಬೇಕು. ತುಂಗಾಭದ್ರ ಜಲಾಶಯಕ್ಕೆ ಪರ್ಯಾಯವಾಗಿ ಕಟ್ಟುತ್ತಿರುವ ಸಮತೋಲನ ಜಲಾಶಯದ ಬಗ್ಗೆ ದಯವಿಟ್ಟು ತಿಳಿಸಿ.

ಮೇಕೆದಾಟು ಮತ್ತು ಮಹದಾಯಿ ಬಗ್ಗೆ ಯಾವುದೇ ಚಕಾರ ಇಲ್ಲ. ಆದಷ್ಟು ಬೇಗ ನೀವು ತೀರ್ಮಾನ ತೆಗೆದುಕೊಳ್ಳಿ. ಕಳಸ-ಬಂಡೂರಿ ನಾಲಾ ತಿರುವು ಯೋಜನೆಯಿಂದ ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳಿಗೆ ನೀರನ್ನುಣಿಸಬೇಕಿದೆ. ಇವುಗಳನ್ನು ದಯವಿಟ್ಟು ಮರೆಯಬೇಡಿ. ಎಲ್ಲರೂ ಇದರ ಬಗ್ಗೆ ಕಾಳಜಿ ಇದೆ ಎಂದು ಹೇಳುತ್ತಾರೆ. ಆದರೆ ವಾಸ್ತವದಲ್ಲಿ ಕೆಲಸ ಆಗಬೇಕು ಅಲ್ಲವೇ? ದಯಮಾಡಿ ಇದರ ಬಗ್ಗೆ ಎಚ್ಚರ ವಹಿಸಬೇಕು.

ಮೇಕೆದಾಟು ಯೋಜನೆಯ ಸಾಮರ್ಥ್ಯ ಒಟ್ಟು 60 ಟಿ.ಎಂ.ಸಿ., ನೀರನ್ನು ಹಿಡಿದಿಟ್ಟುಕೊಳ್ಳಬೇಕು ಎನ್ನುವುದು. ಪ್ರಮುಖವಾಗಿ ಅಂತಾರಾಷ್ಟ್ರೀಯ ನಗರವಾದ ಬೆಂಗಳೂರಿಗೆ ಕುಡಿಯುವ ನೀರನ್ನು ಪೂರೈಕೆ ಮಾಡುವಂಥದ್ದು ಮತ್ತು ಸಾಂದರ್ಭಿಕವಾದಂತಹ ವಿದ್ಯುತ್ ಉತ್ಪಾದನೆ ಮಾಡಬೇಕು ಎನ್ನುವುದು ಉದ್ದೇಶವಾಗಿದೆ. ಇದಕ್ಕೊಂದು ವಿಸ್ತೃತವಾದ ಯೋಜನಾ ವರದಿ ತಯಾರಾಗಿದೆ. ಇದನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಾಗಿದೆ. ಅಂದಿನ ಕೇಂದ್ರ ಸರ್ಕಾರದ ನೀರಾವರಿ ಸಚಿವರಾಗಿದ್ದ ಮಾನ್ಯ ಗಡ್ಕರಿಯವರೂ ಕೂಡ ಇದನ್ನು ಪರಿಶೀಲನೆ ಮಾಡಿ, ಇದಕ್ಕೆ ಯಾವುದೇ ಬಾಧಕ ಬೇಡ, ನೀವು ಪರಿಸರ ಅಧ್ಯಯನ ಮಾಡಿ ಎಂದು ಹೇಳಿ ಕ್ಲಿಯರೆನ್ಸ್ ಕೊಟ್ಟಿದ್ದಾರೆ. ಈ ಮಧ್ಯೆ ತಮಿಳುನಾಡಿನಲ್ಲಿ ಚುನಾವಣೆ ಬಂತು. ಎ.ಐ.ಎ.ಡಿ.ಎಂ.ಕೆ., ಮತ್ತು ಬಿ.ಜೆ.ಪಿ., ಒಟ್ಟಾಗಿ ಹೋಗುತ್ತಿದ್ದ ಹಿನ್ನೆಲೆಯಲ್ಲಿ ಅವರೊಂದು ಅರ್ಜಿ ಕೊಟ್ಟರು ಎನ್ನುವ ಕಾರಣಕ್ಕೆ ಅದನ್ನು ಸ್ಟೇ ಮಾಡಿದರು. ಇದು ಮುಂದುವರೆಯದೇ ಹಾಗೆಯೇ ನಿಂತಿದೆ. ಈ ಮಧ್ಯೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

60 ಟಿ.ಎಂ.ಸಿ., ಎಂದಿರುವುದನ್ನು 30 ಟಿ.ಎಂ.ಸಿ., ಗೆಂದು ಒಂದು ಡಿ.ಪಿ.ಆರ್., ತಯಾರು ಮಾಡುತ್ತಿದ್ದಾರೆ. ದಯಮಾಡಿ ಆ ಕೆಲಸ ಮಾಡಬೇಡಿ. ಬೆಂಗಳೂರು ನಗರ ಅಂತಾರಾಷ್ಟ್ರೀಯ ನಗರ. ಅದಕ್ಕೆ ಕುಡಿಯುವ ನೀರಿನ ಸಮಸ್ಯೆ ಇದೆ. ಮುಂಬರು 2040ಕ್ಕೆ 60 ಟಿ.ಎಂ.ಸಿ., ನೀರು ಬೇಕು ಎಂದು ಕಾವೇರಿ ನ್ಯಾಯಾಧಿಕರಣ ತೀರ್ಮಾನ ಮಾಡಿದೆ.

ಎತ್ತಿನಹೊಳೆ ಯೋಜನೆಗೆ ಸಂಬಂಧಪಟ್ಟಂತೆ ಭೈರಗೊಂಡಲು ಜಲಾಶಯದ ಸಾಮರ್ಥ್ಯವೇನು 10 ಟಿಎಂಸಿ ಇದ್ದುದನ್ನು ಕಡಿಮೆ ಮಾಡುತ್ತಿದ್ದೀರೋ ಇದರಿಂದ ಚಿಕ್ಕಬಳ್ಳಾಪುರ, ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುವುದಿಲ್ಲ. ಎತ್ತಿನಹೊಳೆ ಯೋಜನೆಯೇ ಮುಖ್ಯವಾಗಿ ಈ ಪ್ರದೇಶಗಳಿಗೆ ಇರುವಂಥದ್ದಾಗಿದೆ. ಯಾವುದೇ ಕಾರಣಕ್ಕೂ ಅದರ ಸಾಮರ್ಥ್ಯವನ್ನು ಕಡಿಮೆ ಮಾಡಬೇಡಿ. ಅಲ್ಲಿರುವ ಸಮಸ್ಯೆಗಳ ಕುರಿತಂತೆ ರೈತರ ಜೊತೆ ಕುಳಿತು ಬಗೆಹರಿಸಿಕೊಳ್ಳಿಸಿಕೊಳ್ಳಿ. ಕೃಷ್ಣಾ ಮೇಲ್ದಂಡೆ ಯೋಜನೆ ಜಾರಿಗೆ ಬರಬೇಕಾದರೆ ಅದಕ್ಕೆ ಇಟ್ಟಿರುವ allocation ಸಾಕಾಗುತ್ತಿಲ್ಲ. ಅದಕ್ಕಿಂತ ಹೆಚ್ಚಾಗಿ, ಇರುವ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಗಮನಹರಿಸಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ನೀರು ಮತ್ತು ಮಣ್ಣು ಜಗತ್ತಿನ ಶ್ರೇಷ್ಠ ಸಂಪನ್ಮೂಲ. ನೈಸರ್ಗಿಕವಾಗಿ ಸೃಷ್ಟಿಯಾಗಿರುವಂತಹ ಭೂಮಿ ಮತ್ತು ನೀರು ಇವುಗಳನ್ನು, ಮಾನವನ ಅವಿಷ್ಕಾರಗಳಿಂದ ಸೃಷ್ಟಿ ಮಾಡುವುದಕ್ಕೆ ಆಗುವುದಿಲ್ಲ. ಯಾವ ಬುದ್ಧಿ ಶಕ್ತಿಯೂ ಕೂಡ ಭೂಮಿಯನ್ನಾಗಲಿ ನೀರನ್ನಾಗಲಿ ತಯಾರಿಸುವುದಕ್ಕೆ ಸಾಧ್ಯವಿಲ್ಲ. ಭೂಮಿಯ ಒಟ್ಟು ಮೇಲ್ಮೈ ಶೇಕಡ 71ರಷ್ಟು ನೀರಿನಿಂದ ಆವೃತಗೊಂಡಿದೆ. ಆವೃತಗೊಂಡಿರುವ ಒಟ್ಟು ನೀರಿನಲ್ಲಿ ಶೇಕಡ 97ರಷ್ಟು ಪ್ರಮಾಣದ ನೀರು ಸಮುದ್ರದಲ್ಲಿದೆ. ಅಂದರೆ ಅದು ಲವಣಾಂಶದಿಂದ ಕೂಡಿದ ನೀರಾಗಿದೆ. ಉಳಿದ ಶೇಕಡ 3ರಷ್ಟು ನೀರನ್ನು ಕುಡಿಯುವುದಕ್ಕೆ, ಉದ್ದಿಮೆಗಳಿಗೆ ಮತ್ತು ನೀರಾವರಿಗೆ ಬಳಸುತ್ತಿದ್ದೇವೆ. ದಯವಿಟ್ಟು ನಾವು ಇದನ್ನು ಗಮನಿಸಬೇಕು. ಇಷ್ಟು ಪ್ರಮಾಣದ ನೀರು ನದಿಗಳಿಂದ ಸಿಗುತ್ತಿದ್ದು ನೀರಾವರಿಗೆ ಮತ್ತು ಕುಡಿಯುವುದಕ್ಕೆ ಬಳಕೆ ಮಾಡಬೇಕಾಗಿರುವುದರಿಂದ ನೀರನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಕೃಷ್ಣಾ ನದಿ ಮತ್ತು ಮಹದಾಯಿ ನದಿಯ ಮುಖಾಂತರ ನೀರು ಹರಿಯುವುದನ್ನು ಗಮನಿಸಿದಾಗ ಶೇಕಡ 3 ರಷ್ಟು ಇರುವ ಈ ನೀರನ್ನು ನಾವು ಬಳಸಿಕೊಂಡು ಕೃಷಿಯನ್ನು ಅಭಿವೃದ್ಧಿ ಪಡಿಸಬೇಕು. ಕೃಷಿಯ ಜೊತೆಗೆ ಕುಡಿಯುವ ನೀರಿಗೋಸ್ಕರ ಸಮರ್ಪಕವಾಗಿ ಬಳಕೆ ಮಾಡಬೇಕಿದೆ. ಇತ್ತೀಚಿನ ದಿನಮಾನಗಳಲ್ಲಿ ಮಳೆಯ ಪ್ರಮಾಣ ಕೂಡ ಸಾಕಷ್ಟು ಕಡಿಮೆ ಆಗಿರುವುದರಿಂದ ನೀರಿನ ಪ್ರಮಾಣ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನದಿಗಳಲ್ಲಿ ಕಡಿಮೆ ಆಗಿರುವುದನ್ನು ನಾವು ಗಮನಿಸಿದ್ದೇವೆ. ಹೀಗಾಗಿ “ಜಲ್ ಹೈ ತೋ ಕಲ್ ಹೈ” , ಅಂದರೆ ನೀರಿದ್ದರೆ ಮಾತ್ರ ನಾಳೆಗಳು ಇವೆ ಎನ್ನುವ ಮಾತನ್ನು ಸಾಹಿತಿಗಳು ಹೇಳುತ್ತಾರೆ. ಎಲ್ಲಿ ನೀರಿಲ್ಲವೋ ನಾಳೆಗಳೂ ಕೂಡ ಬರಡಾಗುತ್ತವೆ ಎಂದು ನಾವು ಮನದಲ್ಲಿ ಇಟ್ಟುಕೊಂಡು ನೀರಿನ ಸದ್ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಇವತ್ತು ನಾವೆಲ್ಲರೂ ಮುನ್ನಡೆಯಬೇಕಾಗಿದೆ. ಭೂಮಿಯ ಫಲವತ್ತತೆಯನ್ನು ಉಳಿಸಿಕೊಳ್ಳಬೇಕು. ಜೊತೆಗೆ ನೀರನ್ನು ಸಮರ್ಪಕವಾಗಿ ಬಳಸಬೇಕು ಎನ್ನುವುದನ್ನು ಗಮನಿಸುತ್ತಾ, ಮಹತ್ವಪೂರ್ಣವಾದ ಯೋಜನೆ ಕುರಿತು ಮಾನ್ಯ ಶ್ರೀಕಂಠೇಗೌಡರು ಸಾಕಷ್ಟು ವಿಷಯಗಳ ಬಗ್ಗೆ ಮಾತನಾಡಿದ್ದಾರೆ. ಕೃಷ್ಣಾ ನದಿಯ ಬಗ್ಗೆ ನಾವೆಲ್ಲರೂ ಕೂಡ ಬಹಳ ಸಲ ಮಾತನಾಡುತ್ತೇವೆ. ಆದರೆ, ಇಲ್ಲಿಯವರೆಗೂ ಕೂಡ ಮೂರನೆ ಹಂತದ ಯೋಜನೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ಸಫಲರಾಗಿಲ್ಲ. ಯಾವುದೇ ಯೋಜನೆಯಾಗಲಿ, ಅದನ್ನು ಕಾಲಮಿತಿಯಲ್ಲಿ ಮುಗಿಸಿದರೆ ಖರ್ಚು-ವೆಚ್ಚಗಳು ಕಡಿಮೆ ಆಗುತ್ತದೆ. ಮಹಾರಾಷ್ಟ್ರದ ಮಹಾಬಲೇಶ್ವರದಲ್ಲಿ ಕೃಷ್ಣಾ ನದಿ ಉಗಮವಾಗಿ ಪಶ್ಚಿಮಾಭಿಮುಖವಾಗಿ, ಪಶ್ಚಿಮ ಘಟ್ಟಗಳ ಮುಖಾಂತರ ಸುಮಾರು 1400 ಕಿ.ಮೀ. ಅಂತರದಲ್ಲಿ ತನ್ನ ಪ್ರಯಾಣವನ್ನು ಮಾಡಿಕೊಂಡು, ಮಹಾರಾಷ್ಟ್ರ, ಕರ್ನಾಟಕ, ತೆಲ್ಲಂಗಾಣ ಮತ್ತು ಆಂಧ್ರ ಪ್ರದೇಶಗಳ ಮುಖಾಂತರ ಸಮುದ್ರ ಸೇರುತ್ತದೆ. ಬಹಳ ಮಹತ್ವಪೂರ್ಣವಾದ ನದಿಯಾದ ಇದು ಹೆಚ್ಚು ಜಲರಾಶಿಯನ್ನು ಹೊಂದಿದೆ.

(ಮುಂದು)

(1209) 21-12-2021 1.30 DS-MD

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ** (ಮುಂದು):-

ಕರ್ನಾಟಕ ರಾಜ್ಯದಲ್ಲಿ ಈ ನದಿಯ ಭೌಗೋಳಿಕ ವಿಸ್ತೀರ್ಣ 1,90,641 ಚ.ಕಿ.ಮೀ ನಷ್ಟು ಹೊಂದಿದೆ. ಈ ಪ್ರಮಾಣದಲ್ಲಿ ಶೇಕಡ 60ರಷ್ಟು ಕೃಷ್ಣಾ ಕಣಿವೆಯ ಹರಿವನ್ನು ನಾವು ಗಮನಿಸಬಹುದಾಗಿದೆ. ಆ ಹಿನ್ನೆಲೆಯಲ್ಲಿ ಕೃಷ್ಣಾ ನದಿಯ ಒಟ್ಟು ವಿಸ್ತೀರ್ಣ 2570 ಲಕ್ಷ ಚ.ಕಿ.ಮೀ. ಆಗಿದೆ. ಈ ಒಂದು ಪ್ರಮಾಣದಲ್ಲಿ ನಾವು ಭೂಮಿಯನ್ನು ನೀರಾವರಿ ಮಾಡಬೇಕಾಗುತ್ತದೆ. ನೀರಾವರಿಗೆ ಒಳಪಡಿಸತಕ್ಕಂಥ ನಿಟ್ಟಿನಲ್ಲಿ ದಿನಾಂಕ: 22-5-1964 ರಂದು ಅಂದಿನ ಪ್ರಧಾನ ಮಂತ್ರಿಗಳಾಗಿದ್ದಂಥ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು ಶಂಕುಸ್ಥಾಪನೆಯನ್ನು ಮಾಡಿದರು. ಇಂದಿಗೆ 55 ವರ್ಷಗಳನ್ನು ಗತಿಸಿದರೂ ಸಹ ಇವತ್ತಿಗೂ ಸಹ ಅದು ಪೂರ್ತಿಯಾಗಿಲ್ಲವೆಂಬುದನ್ನು ನಾವೆಲ್ಲರೂ ಗಮನಿಸಿದರೆ ಬಹಳ ಕುಂಠಿತವಾಗಿ ಈ ಯೋಜನೆ ನಡೆಯುತ್ತಿದೆ. ಜೊತೆಗೆ ಒಂದನೇ ಹಂತ ಇಲ್ಲಿಯವರೆವಿಗೂ FRL (Full Reservoir Level) 515 metre ಗೆ ಏರಿಸಿ ಆ ಭಾಗದಲ್ಲಿರತಕ್ಕಂಥ ಕಟ್ಟಡಗಳನ್ನು, ಗ್ರಾಮಗಳನ್ನು ಸ್ಥಳಾಂತರ ಮಾಡಿ ಅವರಿಗೆ ಪರಿಹಾರವನ್ನು ಕೊಡಲಾಗಿದೆ. 2ನೇ ಹಂತದಲ್ಲಿ 519.6 metre ಗೆ ಎತ್ತರ ಮಾಡಿದಾಗ ಸುಮಾರು 157 ಗ್ರಾಮಗಳು ಮುಳುಗಡೆಯಾಗಿವೆ. ಈ ರೀತಿ ಮುಳುಗಡೆಯಾದಾಗ ನಾವು ಬಳಸತಕ್ಕಂತ ನೀರು 5.90 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕಾಗಿದೆ. ಆದರೆ ಮಹತ್ವಪೂರ್ಣವಾಗಿರತಕ್ಕಂಥ 524.256 metre ಗೆ ನಾವು ಜಲಾಶಯವನ್ನು ಎತ್ತರಿಸಬೇಕಾದುದು ಇವತ್ತು

“ ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಸರ್ಕಾರದ ಮುಂದೆ ಇರತಕ್ಕಂಥ ವಿಷಯವಾಗಿದೆ. 524.256 metre ಗೆ ನಾವು ಜಲಾಶಯದ ಮಟ್ಟವನ್ನು ಎತ್ತರಿಸಿದಾಗ 130 ಟಿಎಂಸಿ ನೀರನ್ನು ನ್ಯಾಯಾಧಿಕರಣ ಆದೇಶದ ಮುಖಾಂತರ ತೀರ್ಪು ಈಗಾಗಲೇ ಬಂದಿದೆ. ಶ್ರೀ ಬ್ರಿಜೇಶ್ ಕುಮಾರ್ ನೇತೃತ್ವದ ಕೃಷ್ಣಾ ನ್ಯಾಯಾಧಿಕರಣ 2010ರ ಡಿಸೆಂಬರ್‌ನಲ್ಲಿ ತೀರ್ಪನ್ನು ಕೊಟ್ಟಿದ್ದಾರೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೆ, ಈ 3ನೇ ಹಂತದ ನೀರಾವರಿ ಬಗ್ಗೆ ಏನು ಇವತ್ತು ಚರ್ಚೆಗಳನ್ನು ಮಾಡುತ್ತಿದ್ದಾರೆ, ಸಾಕಷ್ಟು ಜನ ಹಿರಿಯ ಸದಸ್ಯರುಗಳು ಮಾತನಾಡುತ್ತಿದ್ದಾರೆ. ನೀರಾವರಿ ಸಚಿವರು ಇಲ್ಲಿಯೇ ಇರುವುದರಿಂದ ನಾನು ಒಂದು ವಿಚಾರವನ್ನು ಅವರ ಗಮನಕ್ಕೆ ತರಲು ಬಯಸುತ್ತೇನೆ. 524 ಮೀಟರ್‌ಗೆ ಜಲಾಶಯದ ಮಟ್ಟವನ್ನು ಎತ್ತರಿಸಿದರೆ ಎಲ್ಲಿಯವರೆವಿಗೂ ಜಮೀನು ಮುಳುಗಡೆಯಾಗುತ್ತದೆಂದು ಒಂದು ಸರ್ವೇ ಆಗಿದೆ. ಸರ್ವೇ ಆಗಿರುವಂಥ ಏರಿಯಾವನ್ನು ನಿಗದಿಗೊಳಿಸಲಾಗಿದೆ. 4(1), 6(1), 9(1) ನೋಟಿಫಿಕೇಶನ್ ಕೊಟ್ಟಿದ್ದಾರೆ. ಈಗ ಅದು ಆಗುವಂಥ ಹಂತಕ್ಕೆ ಬಂದು ನಿಂತಿದೆ. ಪುನಃ ಈಗ ಅಲ್ಲಿಯವರೆವಿಗೂ ನೀರು ನಿಲ್ಲುವುದಿಲ್ಲ. ಅಧಿಕಾರಿಗಳು ತಪ್ಪು ಮಾಡಿ ಹೆಚ್ಚುವರಿ ಜಮೀನು ಗುರುತಾಗಿದೆ ಎಂದು ಹೇಳಿ ಮತ್ತೆ ನೋಟಿಫಿಕೇಶನ್ ರದ್ದು ಮಾಡುತ್ತಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ 5 ಹಳ್ಳಿಗಳು ಬರುತ್ತವೆ. ಅಲ್ಲಿ ಸರ್ವೇ ಮಾಡತಕ್ಕಂಥ ಅಧಿಕಾರಿಗಳು ರೈತರಿಗೆ ತಪ್ಪು ಕಲ್ಪನೆಗಳನ್ನು ನೀಡಿ ಅವರಿಗೆ ಆಮಿಷಗಳನ್ನು ಒಡ್ಡಿ, ಅವರ ಕಡೆಯಿಂದ ಹಣ ಪಡೆದುಕೊಂಡು ಸರ್ವೇ ಮಾಡಿದರೋ ಅಥವಾ ಅವರು ಮಾಡಿದ್ದು ಸರಿಯೋ ಅಥವಾ ಇವತ್ತು ಪುನಃ ಅಲ್ಲಿಯವರೆವಿಗೂ ಮುಳುಗಡೆ ಆಗುವುದಿಲ್ಲವೆನ್ನುವುದನ್ನು ಹೇಳಿ ನೋಟಿಫಿಕೇಶನ್‌ಗಳನ್ನು ರದ್ದು ಮಾಡಿರುವುದರಿಂದ ಬಹಳಷ್ಟು ಜನ ರೈತರು ಆತಂಕಕ್ಕೆ ಒಳಗಾಗಿದ್ದಾರೆ. 519 ಮೀಟರ್‌ಗೆ ನೀರು ನಿಂತಿರುವಂಥಾದ್ದು. ನೀರಿನ ಲೆವೆಲ್ ಮೇಲೆ ಬಂದು water table improvement ಆಗಿ ಮುಳ್ಳುಗಡೆ ಆಗತಕ್ಕಂಥ ಅನೇಕ ಜಮೀನು ಸವಳು-ಜವಳು ಆಗಿದೆ. ಸವಳು-ಜವಳು ಬಂದಿರುವುದರಿಂದ ಆದಷ್ಟು ಈ ಜಮೀನನ್ನು ಮುಳುಗಡೆಯೊಳಗೆ ತೆಗೆದುಕೊಂಡು ನಮಗೆ ಪರಿಹಾರ ಕೊಟ್ಟರೆ ಸಾಕು ಎನ್ನುವಂಥ ಒಂದು ಸ್ಥಿತಿಯಲ್ಲಿರುವಂಥ ಸಂದರ್ಭದಲ್ಲಿ ಪುನಃ ನೋಟಿಫಿಕೇಶನ್‌ಗಳು ರದ್ದಾಗಿರುವಂಥಾದ್ದು ಅದು ಬಹಳ ದಿವಸಗಳಿಂದ ನಮ್ಮ ಗಮನಕ್ಕೆ ಬಂದಿದೆ. ನೀರಾವರಿ ಸಚಿವರು ಇಲ್ಲಿಯೇ ಇದ್ದಾರೆ. ಅದಕ್ಕೋಸ್ಕರ ಜನರು ಸಹ ಬಂದಿದ್ದಾರೆ, ತಾವು ಊಟಕ್ಕೆ ವಿರಾಮ ಬಿಟ್ಟಾಗ ಅವರಿಗೆ ಒಂದು ಮನವಿಯನ್ನು ಕೊಡುತ್ತಾರೆ. ಅದರ ಬಗ್ಗೆ ಕೂಲಂಕಷಕವಾಗಿ ಪರಿಶೀಲನೆ ಮಾಡಿ ಆವತ್ತು ಏನಾದರೂ ರೈತರಿಗೆ ಸುಳ್ಳು ಹೇಳಿ ವಂಚನೆ ಮಾಡಿದ್ದರೆ, ಹಿಂದೆ ಇರತಕ್ಕಂಥ ಅಧಿಕಾರಿಗಳ ಮೇಲೆ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕು. ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಂಡು ಎಲ್ಲಿಯವರೆವಿಗೂ ಜಮೀನು ಮುಳುಗಡೆಯಾಗುತ್ತದೆ, ಅಲ್ಲಿಯವರೆವಿಗೂ ತಕ್ಷಣ ಸಂಬಂಧಪಟ್ಟವರಿಗೆ ಪರಿಹಾರದ ಹಣ ಕೊಟ್ಟು ಆ ಜಮೀನನ್ನು ವಶಪಡಿಸಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಚಿವರೇ, ನೀವು ಆಮೇಲೆ ಉತ್ತರ ಕೊಡಿ.

**ಶ್ರೀ ಗೋವಿಂದ ಎಂ.ಕಾರಜೋಳ(ಜಲಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೇ, ಅವರು ಕೇಳಿರುವ ವಿಚಾರ ಸಣ್ಣದಿದೆ. ಇಡೀ ಸದನ ಚರ್ಚೆ ಮಾಡಿರುವುದಕ್ಕೆ ನಾನು ಆಮೇಲೆ ಉತ್ತರ ಕೊಡುತ್ತೇನೆ. ಸರ್ವೆ ಮಾಡುವಾಗ ಹೆಚ್ಚು ಭೂಮಿ ಹೋಗುತ್ತದೆ ಎಂದು ರದ್ದು ಮಾಡಿದ್ದಾರೆ ಎನ್ನುವಂಥದ್ದು ಸರಿಯಾದಂತಹ ವಿಚಾರವಲ್ಲ. ಸರ್ಕಾರ ಒಂದು ಇಂಚು ಭೂಮಿ ಮುಳುಗಡೆಯಾದರೂ ಕೂಡ ಪರಿಹಾರ ಕೊಡುವಂತಹ ಕೆಲಸ ಮಾಡುತ್ತದೆ. ಸಾರ್ವಜನಿಕ ಆಸ್ತಿಪಾಸ್ತಿ ಒಂದೇ ಮುಳುಗಡೆಯಾದರೂ ಕೂಡ ಪರಿಹಾರ ಕೊಡುವಂತಹ ಕೆಲಸ ಮಾಡುತ್ತದೆ. ನಾವು ಯಾವಾಗ ಫೈನಲ್ ಮಾಡುತ್ತೇವೆಂದರೆ, ಸರ್ವೆ ಕಾರ್ಯ ಪೂರ್ಣವಾಗಿ ನಿಶ್ಚಿತವಾಗಿ ಇಲ್ಲಿಯವರೆಗೂ ನೀರು ನಿಲ್ಲುತ್ತದೆ ಎಂದು ಗೊತ್ತಾದಾಗ ಅಲ್ಲಿಯವರೆಗೂ ನಾವು ಭೂಸ್ವಾಧೀನ ಮಾಡುತ್ತೇವೆ. 4(1) ನೋಟಿಫಿಕೇಶನ್ ಮಾಡುವುದಕ್ಕಿಂತಲೂ ಮುಂಚೆ ಅವರೇನು ಸರ್ವೆ ಮಾಡಿದ್ದಾರೆಯೋ, ಕೆಲವು ರೈತರಿಗೆ ವಂಚನೆಯಾಗಿದೆ ಎಂದು ಹೇಳುತ್ತಿದ್ದಾರಲ್ಲಾ, ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. ಆದರೆ, ಸರ್ಕಾರ ಇಷ್ಟು ಮಾತ್ರ ಹೇಳಬಹುದು, ಒಂದು ಇಂಚು ಭೂಮಿ ಯಾರದ್ದೇ ಮುಳುಗಡೆಯಾಗಿದ್ದರೂ ಅದು ರೈತರದಾಗಲಿ, ಮತ್ತೊಬ್ಬರದಾಗಲಿ ಅವರಿಗೆ ಖಂಡಿತವಾಗಿಯೂ ಪರಿಹಾರವನ್ನು ಕೊಟ್ಟೇ ನೀರು ನಿಲ್ಲಿಸುತ್ತೇವೆ ಎನ್ನುವಂತಹ ಭರವಸೆಯನ್ನು ಕೊಡುತ್ತಿದ್ದೇನೆ.

**ಉಪ ಸಭಾಪತಿಯವರು:-** ಮಾನ್ಯ ನಿರಾಣಿ ಹಣಮಂತ ರುದ್ರಪ್ಪನವರೇ, ಊಟವಾದ ಮೇಲೆ ಮತ್ತೆ ತಮಗೆ ಅವಕಾಶ ಕೊಡುತ್ತೇನೆ. ಈಗ ಸದನವನ್ನು 2 ಗಂಟೆ 45 ನಿಮಿಷದವರೆಗೆ ಮುಂದೂಡಲಾಗಿದೆ.

**(ಮಧ್ಯಾಹ್ನ 1 ಗಂಟೆ 36 ನಿಮಿಷದಿಂದ ಮಧ್ಯಾಹ್ನ 2 ಗಂಟೆ 45 ನಿಮಿಷದವರೆಗೆ ಭೋಜನ ವಿರಾಮಕ್ಕೆ ಸದನವನ್ನು ಮುಂದೂಡಲಾಯಿತು)**

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(1210) 21.12.2021 03.00 ಎಸ್‌ವಿ-ಎಕೆ**

**(ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 1 ಗಂಟೆ 36 ನಿಮಿಷಕ್ಕೆ ಮುಂದೂಡಲ್ಪಟ್ಟಿದ್ದ ಸದನವು ಪುನಃ ಮಧ್ಯಾಹ್ನ 03 ಗಂಟೆ 09 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಉಪ ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಾದರು)**

**<u>ನಿಯಮ 68ರ ಮೇರೆಗೆ ಮುಂದುವರೆದ ಚರ್ಚೆ</u>**

**ವಿಷಯ:- ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ.**

\- - - - - -

**ಶ್ರೀ ನಿರಾಣಿ ಹಣಮಂತ ರುದ್ರಪ್ಪ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ ಅವಕಾಶಕ್ಕಾಗಿ ವಂದಿಸುತ್ತೇನೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಮೂರನೆಯ ಹಂತದ ಕಾಮಗಾರಿಗಾಗಿ ಬ್ರಿಜೇಶ್ ಕುಮಾರ್ ನೇತೃತ್ವದ ಕೃಷ್ಣಾ ನ್ಯಾಯಾಧಿಕರಣದ ತೀರ್ಪು ದಿನಾಂಕ 30.12.2010ರಂದು ಬಂದು ಕೃಷ್ಣಾ ಕಣಿವೆಯ ಭಾಗವಾದ 173 ಟಿ.ಎಂ.ಸಿ.ಯ ನೀರಿನ ಬಳಕೆಯ ಜೊತೆಗೆ 130 ಟಿ.ಎಂ.ಸಿ. ನೀರನ್ನು ಆಲಮಟ್ಟಿ ಜಲಾಶಯದ ಮೂರನೆಯ ಹಂತದಲ್ಲಿ ಶೇಖರಣೆ ಮಾಡಲಿಕ್ಕೆ ಈಗಾಗಲೇ ಆದೇಶವನ್ನು ಹೊರಡಿಸಲಾಗಿದೆ.

(ಮುಂದು)

**(1211)21-12-2021(3.10)ಕೆಜಿ – ಎಕೆ** **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಮುಂದು):-**

2010 ರಿಂದ ಇಲ್ಲಿಯವರೆಗೆ ಸುಮಾರು 10 ವರ್ಷಗಳು ಕಳೆದರೂ ಸಹ, 130 ಟಿ.ಎಂ.ಸಿ., ನೀರನ್ನು ಬಳಕೆ ಮಾಡಿಕೊಳ್ಳುವಲ್ಲಿ ನಮ್ಮ ಸರ್ಕಾರ ಯಾವುದೇ ರೀತಿಯಲ್ಲಿ ಸರಿಯಾದಂತಹ ಕ್ರಮವನ್ನು ಜರುಗಿಸದಿರುವುದು ಆ ಭಾಗದ ರೈತರ ನೋವಿಗೆ ಕಾರಣವಾಗಿದೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. 524.256 ಮೀಟರ್ ಎತ್ತರಕ್ಕೆ dam ಹೋದಾಗ, ಹೆಚ್ಚುವರಿಯಾಗಿ 130 ಟಿ.ಎಂ.ಸಿ ನೀರನ್ನು ಸಂಗ್ರಹಣೆ ಮಾಡುವುದಕ್ಕೆ ಅವಕಾಶ ಇದೆ. 130 ಟಿ.ಎಂ.ಸಿ ನೀರನ್ನು ಬಳಕೆ ಮಾಡುವುದಕ್ಕೆ ಈಗಾಗಲೇ ನೀರಾವರಿ ಯೋಜನೆಗಳನ್ನು ಮುಳವಾಡ್, ಚಿಮ್ಮಲಗಿ, ಹಿಂಡಿ ಎಡದಂಡೆ, ನಾರಾಯಣಪುರ ಬಲದಂಡೆ, ರಾಂಪುರ್, ಮುಲ್ಲಾಬಾದ್, ಕೊಪ್ಪಳ, ಎರಕಲ್ಲು ಏತ ನೀರಾವರಿಗೆ ಸುಮಾರು 130 ಟಿ.ಎಂ.ಸಿ ನೀರನ್ನು ಬಳಕೆ ಮಾಡುವುದರ ಜೊತೆಗೆ.,

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಉಪ ಸಭಾಪತಿಯವರು:-** ನಿರಾಣಿಯವರೇ, ಒಂದು ನಿಮಿಷ. ದಯವಿಟ್ಟು ಎಲ್ಲರಲ್ಲಿಯೂ ಒಂದು ವಿನಂತಿ. ಎಲ್ಲರೂ ಮಾತನಾಡುವವರಿದ್ದೀರಿ. ಇನ್ನೂ ಸುಮಾರು ಸದಸ್ಯರು ಮಾತನಾಡುವವರಿದ್ದಾರೆ. ಮಾತನಾಡಿದಂತಹ ವಿಚಾರವನ್ನು ಮತ್ತೆ repeat ಮಾಡದೆ, ಹೊಸ ಹೊಸ ವಿಚಾರಗಳನ್ನು ಮಾತನಾಡುವುದು ಒಳ್ಳೆಯದು ಎಂದು ಕಾಣುತ್ತೆ. ದಯವಿಟ್ಟು, ಎಲ್ಲರೂ ಸಹಕಾರವನ್ನು ಮಾಡಬೇಕು.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವು agenda ಪ್ರಕಾರ ಹೋಗುತ್ತಿಲ್ಲವಲ್ಲ, ತಾವು agenda ವನ್ನು ಬಿಟ್ಟು ಮುಂದಕ್ಕೆ ಹೊರಟ್ಟಿದ್ದೀರಿ.

**ಉಪ ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ನಾನು agenda ವನ್ನು ಬಿಟ್ಟು ಹೋಗಿಲ್ಲವಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಹೌದು. Second ಯಾರದ್ದು ಇದೆ ಎಂದು ತಾವು agenda ವನ್ನು ನೋಡಿ.

**ಉಪ ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, second ನಲ್ಲಿ ಇಲ್ಲ. ಮೊದಲು ಮರಿತಿಬ್ಬೇಗೌಡರವರ ವಿಷಯ ಇದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮರಿತಿಬ್ಬೇಗೌಡರವರು ಮಾತನಾಡಿದ ನಂತರ agenda ವನ್ನು ತೆಗೆದುನೋಡಿ. ಮರಿತಿಬ್ಬೇಗೌಡರವರು ಮಾತನಾಡಿದ ನಂತರ ನಾನು ಮಾತನಾಡಬೇಕಾಗಿತ್ತು.

**ಉಪ ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ಮರಿತಿಬ್ಬೇಗೌಡ, ತಿಪ್ಪೇಸ್ವಾಮಿ,

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಬೇಡವೆಂದರೆ ಹೇಳಿಬಿಡಿ ನಾವು ಹೊರಟು ಹೋಗುತ್ತೇವೆ.

**ಉಪ ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ತಮಗೆ ಸಾಕಷ್ಟು ಕಾಲವಕಾಶ ಕೊಡಲಾಗುತ್ತದೆ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ರೀತಿಯಾದರೆ, agenda ವನ್ನು ಏಕೆ ಇಡಬೇಕು. ಹಾಗೆಯೇ ಮಾಡಿ.

**ಉಪ ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ತಮಗೆ ಸಾಕಷ್ಟು ಕಾಲವಕಾಶವನ್ನು ಖಂಡಿತವಾಗಿ ಕೊಡಲಾಗುತ್ತದೆ.

**Sri S.R. PATIL:** It is my right. ಅದು ನನ್ನ ಹಕ್ಕು.

**ಉಪ ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ತಾವು ದಯವಿಟ್ಟು ಸ್ವಲ್ಪ agenda ವನ್ನು ನೋಡಿ ಏನಿದೆ ಎಂದು ಹೇಳಿದರೆ, ಈಗ ಮೊದಲನೆ ವಿಷಯ ನಡೆಯುತ್ತಿದೆ. ತಮ್ಮದು ಎರಡನೆ ವಿಷಯದಲ್ಲಿ ಬರುತ್ತದೆ.,

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ಇಲ್ಲಿ ವಿಶೇಷ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಉತ್ತರ ಕರ್ನಾಟಕದ ಭಾಗದ ಅಭಿವೃದ್ಧಿ ವಿಚಾರವಾಗಿ ಚರ್ಚೆಯನ್ನು ಕೈಗೆತ್ತಿಕೊಳ್ಳಬೇಕು ಎನ್ನುವಂತಹ ಮಾತು ಇತ್ತು. ಅದನ್ನು ಅವರು ನಿಯಮ 68 ರಡಿ ಪ್ರಾರಂಭ ಮಾಡಿದ್ದಾರೆ. He has well begun. Well begun is well done ಎಂದು...

**ಉಪ ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ತಮ್ಮದ್ದು ಆಲಮಟ್ಟಿ ಜಲಾಶಯದ ವಿಷಯಗಳು ಬಂದಂತಹ ಸಂದರ್ಭದಲ್ಲಿ.,

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದು ಎರಡು ಕೊಡಿಯೇ ಇದೆ. ನನಗೆ ಆಶ್ಚರ್ಯವಾಗುತ್ತದೆ. ನನಗೆ ಇದೇ ಮೊದಲೇ ಸಲ ಸದನದಲ್ಲಿ ಈ ರೀತಿಯಾಗಿದ್ದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಿಯಮ 59 ರಲ್ಲಿ ಪ್ರಸ್ತಾಪ ಮಾಡಬೇಕಾದ ವಿಷಯವನ್ನು ನಿಯಮ 68 ರಲ್ಲಿ ಮಾತನಾಡಿ ಎಂದು ಸಭಾಪತಿಯವರು ಒಪ್ಪಿಕೊಂಡಿದ್ದರು. ತಾವು ಈ ಮಧ್ಯದಲ್ಲಿ ನಿಯಮ 68 ಪ್ರಕಾರ ಹಾಕಿಕೊಂಡಿದ್ದರಲ್ಲಿ ಎಲ್ಲರಿಗೂ ಚರ್ಚೆ ಮಾಡುವುದಕ್ಕೆ ಮೊದಲು ಕರೆದಿದ್ದೀರಿ. ತಾವು ಕರೆದ ಪಟ್ಟಿಯಲ್ಲಿ ಮೊದಲು ಎರಡು ಮೂರು ಹೆಸರುಗಳಿವೆ. ತಿಪ್ಪೇಸ್ವಾಮಿಯವರ ಹೆಸರು ಇದೆ. ಅವರನ್ನು ಕರೆದಿದ್ದಾರೆ. ಅದು ಏನೇ ಇರಲಿ. ವಿರೋಧ ಪಕ್ಷದ ನಾಯಕರಿಗೆ ಪ್ರಾಶ್ತ್ಯಸ್ಯ ಇರುತ್ತದೆ. ಇದಾದ ನಂತರ ಅವರಿಗ ಅವಕಾಶ ಮಾಡಿಕೊಡಬೇಕು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಉಪ ಸಭಾಪತಿಯವರು:-** ಸಭನಾಯಕರೇ, ಆಯಿತು. ಖಂಡಿತವಾಗಿ ಮಾಡಿಕೊಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇವತ್ತು ಬೇಡ. ನಾಳಿಗೆ ಮಾಡಿಕೊಡುತ್ತೀರಾ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಇವತ್ತೇ ಮಾತನಾಡಲಿ.

**ಉಪ ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ಆಯಿತು. ಅವಕಾಶ ಮಾಡಿಕೊಡೋಣ. ಈಗ ನಿರಾಣಿಯವರು ಮಾತನಾಡಿದ ಮೇಲೆ, ಮರಿತಿಬ್ಬೇಗೌಡರವರಿಗೆ ಆನಂತರ ತಮಗೆ ಅವಕಾಶ ಕೊಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್**:- ಮಾನ್ಯ ಸಭಾಪತಿಯವರೇ, ಇಲ್ಲ. ನಿರಾಣಿಯವರ ನಂತರ ತಾವು ನನಗೆ allow ಮಾಡಬೇಕು. There is no other go.

**ಉಪ ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ. ತಾವು ಅರ್ಥ ಮಾಡಿಕೊಂಡರೆ, ಆಯಿತು. ಇಲ್ಲಿರುವಂತಹ ವಿಷಯ ಏನಿದೆ,

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಿನ್ನೇ ದಿವಸ ತಾವು ಸದನದಲ್ಲಿ ಇದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ನಿನ್ನೆ ದಿವಸ ಸಭಾಪತಿಯವರು ಉತ್ತರ ಕರ್ನಾಟಕ ಭಾಗದ ಜಲ್ವಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ವಿಶೇಷವಾಗಿ ಒಂದು ದಿವಸ ಪೂರ್ತಿ ಸಮಯ ಕೊಡುತ್ತೇವೆಂದು ಹೇಳಿದ್ದರು. ನಿಯಮ 68 ಏನಿದೆ, it includes four irrigation projects. ತಾವು ಅದನ್ನು ಅರ್ಥ ಮಾಡಿಕೊಳ್ಳಲಿಲ್ಲವೆಂದರೆ, ನಾನು ಏನು ಹೇಳಬೇಕು? I am very sorry.

**ಉಪ ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ಖಂಡಿತವಾಗಿ ಅವಕಾಶವನ್ನು ಕೊಡುತ್ತೇವೆ. .

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ತಾವು allow ಮಾಡಲಿಲ್ಲವೆಂದರೆ ಹೇಳಿಬಿಡಿ. ಅದೊಂದು ಇತಿಹಾಸ ಆಗಿಹೋಗುತ್ತದೆ. ನಮ್ಮ ಉತ್ತರ ಕರ್ನಾಟಕದಲ್ಲಿ ಚರಿತ್ರೆಯಾಗುತ್ತದೆ.

**ಉಪ ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ವೈಯಕ್ತಿಕವಾಗಿ ತೆಗೆದುಕೊಳ್ಳಬೇಡಿ. ದಯವಿಟ್ಟು ತಮಗೆ ಅವಕಾಶವನ್ನು ಕೊಡುತ್ತೇನೆ. ತಾವು ಸಾಕಷ್ಟು ಕಾಲವಕಾಶವನ್ನು ತೆಗೆದುಕೊಂಡು ಮಾತನಾಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನನಗೆ ನಿಯಮ 68 ಆದ ಮೇಲೆ ತೆಗೆದುಕೊಳ್ಳೋಣವೆಂದು ಕೇಳಿದರು. ಅದಕ್ಕೆ ನಾನು ತೆಗೆದುಕೊಳ್ಳಿ ಎಂದು ಹೇಳಿದೆ. ಈಗ ನಿಯಮ 68 ಎಲ್ಲಾ ಮುಗಿದ ಮೇಲೆ ನಾನು ಏಕೆ ಇಲ್ಲಿ ಇರಬೇಕು. For what sanctity I have come here?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ತಮ್ಮ ಪ್ರಸ್ತಾಪನೆಗೆ ಪೂರಕವಾಗಿ ಮಾತನಾಡುತ್ತೇನೆಂದು ಹೇಳಿದ್ದಾರೆ. ಇದಾದ ಮೇಲೆ ಅವರಿಗೆ ಮಾನ್ಯ ಮಾಡಬೇಕೆಂದು ವಿನಂತಿ ಇದೆ. ನಮಗೆ ಏನು ತೊಂದರೆ ಇಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ತಾವು ನಿರಾಣಿಯವರು ಮಾತನಾಡಿದ ನಂತರ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

**ಉಪ ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ಆಯಿತು. ತಾವು ಹಿರಿಯರು ಇದ್ದೀರಿ. ಕೋಪ ಮಾಡಿಕೊಳ್ಳಬೇಡಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ ಮೇಲೆ ನನಗೆ ಅವಕಾಶ ಕೊಡಿ.

**ಉಪ ಸಭಾಪತಿಯವರು:-** ಇಲ್ಲಿಗೆ ಮುಗಿಯಿತು ಅಲ್ಲವೇ; ನಿರಾಣಿಯವರೇ, ತಾವು ಮಾತನಾಡಿ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕ ಭಾಗದ ಬಹಳ ಮಹತ್ವ ಪೂರ್ಣವಾದ ಯೋಜನೆಗಳ ಬಗ್ಗೆ ಸುಧೀರ್ಘವಾದ ಚರ್ಚೆಯನ್ನು ಮಾಡುತ್ತಿದ್ದೇವೆ. ಈ ಸಂದರ್ಭದಲ್ಲಿ 130 ಟಿ.ಎಂ.ಸಿ ನೀರನ್ನು ಬಳಸಿಕೊಳ್ಳಲು ಸಾಕಷ್ಟು ಯೋಜನೆಗಳನ್ನು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಚಾಲನೆಯಲ್ಲಿಟ್ಟಿದ್ದಾರೆ. ಆ ಎಲ್ಲಾ ಯೋಜನೆಗಳೂ ಸಮರ್ಪಕವಾಗಿ ಕಾರ್ಯರೂಪಕ್ಕೆ ಬರಬೇಕಾಗಿದೆ. ಈ ನಿಟ್ಟಿನಲ್ಲಿ ಸರ್ಕಾರಗಳು ಸಹ ಇಚ್ಛಾ ಶಕ್ತಿಯನ್ನು ತೋರಿಸಿ 130 ಟಿ.ಎಂ.ಸಿ ನೀರನ್ನು ಬಳಸಿಕೊಳ್ಳುವುದಕ್ಕೆ ಕಾರ್ಯಪ್ರವೃತ್ತರಾಗಬೇಕು. ಡ್ಯಾಂನ್ನು 524.25 ಮೀಟರ್ ಎತ್ತರಕ್ಕೆ ಏರಿಸಿದಾಗ ಸುಮಾರು 1.34 ಲಕ್ಷ ಎಕರೆಯಷ್ಟು ಭೂಮಿ ಮುಳುಗಡೆಗೆ ಬರುತ್ತದೆ. 1.34 ಲಕ್ಷ ಎಕರೆ ಭೂಮಿಯಲ್ಲಿ ಸುಮಾರು 20 ಗ್ರಾಮಗಳನ್ನು ಸಹ ಈ ಸಂದರ್ಭದಲ್ಲಿ ಪನರ್‌ವಸತಿ ಮತ್ತು ಪುನರ್‌ನಿರ್ಮಾಣ ಮಾಡಬೇಕಾಗಿದೆ. ಈ 20 ಗ್ರಾಮಗಳ ಸ್ಥಳಾಂತರದ ಸಲುವಾಗಿ 8 ಸಾವಿರ ಎಕರೆ ಜಮೀನನ್ನು ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಸಲುವಾಗಿ ಭೂಸ್ವಾಧೀನ ಪಡಿಸಿಕೊಂಡು ಆ 20 ಗ್ರಾಮಗಳನ್ನು ಪುನರ್‌ವಸತಿ ಕೇಂದ್ರಗಳನ್ನು ಮಾಡಬೇಕಾಗಿರುತ್ತದೆ. ಈ ಹಂತದಲ್ಲಿ ಸುಮಾರು 32,422 ಕುಟುಂಬಗಳನ್ನು ಸ್ಥಳಾಂತರ ಮಾಡಬೇಕೆಂಬ ಮಾಹಿತಿಯನ್ನು Upper Krishna project ದಿಂದ ಕೊಟ್ಟಿದ್ದಾರೆ.

ಮಾನ್ಯ ಸಭಾಪತಿಯವರೇ, 32,422 ಕುಟುಂಬಗಳು ಅಂದರೆ, ಒಂದು ಕುಟುಂಬಕ್ಕೆ ಸುಮಾರು 4 ರಿಂದ 5 ಜನರು ಎಂದು ಹೇಳಿದರೂ ಸಹ, ಸುಮಾರು 1.50 ಲಕ್ಷ ಜನರನ್ನು ಸ್ಥಳಾಂತರ ಮಾಡಬೇಕಾಗಿರುವ ಜವಬ್ದಾರಿ ಈ Upper Krishna project ಮೇಲಿದೆ ಎನ್ನುವುದನ್ನು ಗಮನಹರಿಸಬೇಕಾಗಿದೆ. ಆ ಸಂದರ್ಭದಲ್ಲಿ 20 ಗ್ರಾಮಗಳ ಪುನರ್‌ವಸತಿ ಕೇಂದ್ರಗಳಿಗೆ ಭೂ-ಸ್ವಾಧೀನ ಪಡಿಸಿಕೊಂಡು ಅಲ್ಲಿ ಬಡಾವಣೆಯನ್ನು ನಿರ್ಮಿಸಿ ಹಕ್ಕುಪತ್ರಗಳನ್ನು ವಿತರಣೆ ಮಾಡಿ ಆದಷ್ಟು ಬೇಗನೆ ಆ ಕಟ್ಟಡಗಳಿಗೆ ಪರಿಹಾರವನ್ನು ಒದಗಿಸುವಂತಹ ಕೆಲಸ ಶೀಘ್ರಗತಿಯಲ್ಲಿ ಆಗಬೇಕು. ಅದರ ಜೊತೆಯಲ್ಲಿ ಭೂ-ಸ್ವಾಧೀನಕ್ಕೆ ಒಳಪಡುವಂತಹ ಜಮೀನು ಸುಮಾರು 76,357 ಎಕರೆ ಜಮೀನಿನ್ನು ಭೂಸ್ವಾಧೀನಕ್ಕೆ ಹಿನ್ನೀರಿನಿಂದ ಮುಳುಗಡೆಯಾಗುತ್ತಿದೆ. 73,657 ಎಕರೆ ಜಮೀನನ್ನು ಈಗಾಗಲೇ ಭೂಸ್ವಾಧೀನಕ್ಕೆ ಒಳಪಡಿಸಲಾಗಿದೆ. ಕಳೆದ 4-5 ವರ್ಷಗಳ ಹಿಂದೆ ಅದು notification ಆಗಿ Award stage ಗೆ ಬಂದಾಗ ಆ ಎಲ್ಲಾ ಕ್ಷೇತ್ರಗಳು ಕೂಡ vitiate ಆಗಿಹೋಗಿರುತ್ತವೆ. ಕಾಲಮಿತಿಯಲ್ಲಿ Award ಆಗದಿರುವಂತಹ ಹಿನ್ನೆಲೆಯಲ್ಲಿ ಆ ಕ್ಷೇತ್ರ ಇವತ್ತು denotify ಆಗಿದಿರುವಂಥದ್ದು ಅಥವಾ vitiate ಆಗಿ ಹೋಗಿವೆ. ಮತ್ತೆ ಆ ಇಡೀ ಕ್ಷೇತ್ರವನ್ನು ಹೊಸ ಕಾನೂನಿನ ಪ್ರಕಾರ L-1 ಮುಖಾಂತರ 4(1) notification ಅನ್ನು ಮಾಡಿ Award stage ಗೆ ತರುವಂತಹದ್ದು ಬಹಳ ಮಹತ್ವದಾಗಿದೆ. ಆದಷ್ಟು ಬೇಗನೆ ಆ ಸಂತ್ರಸ್ಥರಿಗೆ ಪರಿಹಾರವನ್ನು ಕೊಡ್ಡುವಂತಹ ಕೆಲಸ ಆಗಬೇಕಾಗಿದೆ. ಅದರ ಜೊತೆಗೆ ಸುಮಾರು infrastructure development ಗೆ canal work ಗೂ ಸಹ ಸುಮಾರು 50 ಸಾವಿರದಷ್ಟು ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುವಂತಹ ಕೆಲಸ ನಡೆದಿದೆ. ಅಲ್ಲಿಯೂ ಸಹ notification ಆಗಿ vitiate ಆಗಿರುವಂತಹದ್ದನ್ನು ಗಮನಿಸಿದಾಗ, ಈ project ಅನ್ನು ಮಾಡಬೇಕಾದರೆ, ಇಚ್ಛಾಶಕ್ತಿ ಕೊರತೆ ಇದೆ ಎನ್ನುವುದು ಒಂದು ಕಡೆ ಸಂತ್ರಸ್ಥರು ನೋವಿನಿಂದ ಹೇಳಬೇಕಾಗಿದೆ ಎಂದು ನಾನು ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಈ ಎಲ್ಲಾ ಭೂಸ್ವಾಧೀನ ಮಾಡುವುದರ ಜೊತೆಗೆ ಭೂಮಿಗೆ ಒಳ್ಳೆಯ ಯೋಗ್ಯವಾದ ಬೆಲೆಯನ್ನು ಆ ಭಾಗದ ಜನರು ನಿರೀಕ್ಷೆ

ಮಾಡುತ್ತಿದ್ದಾರೆ. 2013 ರ ಹೊಸ ಕಾನೂನು ಬಂದ ಮೇಲೆ ಸಾಕಷ್ಟು ನ್ಯಾಯಯುತ ಬೆಲೆ ಕೊಡಬೇಕೆಂದು ಅದರಲ್ಲಿ ಅಳವಡಿಸಲಾಗಿದೆ. ಏಕ ಕಾಲದಲ್ಲಿ Consent Award ಮೂಲಕ ಪರಿಹಾರವನ್ನು ಒದಗಿಸಬೇಕು ಎಂಬುದು ಆ ಭಾಗದ ಜನರ ಆಸೆಯಾಗಿದೆ. ಇವತ್ತು ಆ ಭಾಗದಲ್ಲಿರುವಂತಹ ಮಾರುಕಟ್ಟೆ ಬೆಲೆಯನ್ನು ಆಧಾರವಾಗಿಟ್ಟುಕೊಂಡು ಒಣ ಬೇಸಾಯ ಜಮೀನಿಗೆ ಒಂದು ಎಕರೆಗೆ 30 ಲಕ್ಷ ರೂಪಾಯಿಗಳನ್ನು ಮತ್ತು ನೀರಾವರಿ ಜಮೀನಿಗೆ ಒಂದು ಎಕರೆಗೆ 40 ಲಕ್ಷ ರೂ;ಪಾಯಿಗಳನ್ನು ಕೊಡಬೇಕೆಂದು ಆ ಭಾಗದ ಹೋರಾಟ ಸಮಿತಿಯ ಅಥವಾ ಆ ಭಾಗದ ರೈತರ ಆಶಯವಾಗಿದೆ ಎನ್ನುವುದನ್ನು ಸರ್ಕಾರದ್ದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಆದಷ್ಟು ಬೇಗನೆ ಆ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಪರಿಹಾರ ಕೊಡುವಂತಹ ನಿಟ್ಟಿನಲ್ಲಿ ಯೋಚನೆ ಮಾಡಬೇಕಾಗಿದೆ ಎನ್ನುವಂತಹ ವಿಷಯವನ್ನು ಸಹ ಸರ್ಕಾರದ ಗಮನಕ್ಕೆ ತರುತ್ತೇನೆ. ಈ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಿರುವಂತಹ ಕ್ಷೇತ್ರದ ಮುಂದೆ ಇರುವಂಹ ಜಮೀನು, ಈಗ ಸ್ವಾಧೀನಪಡಿಕೊಂಡು ನೀರನ್ನು ನಿಲ್ಲಿಸುತ್ತೇವೆ., ಅದರ ನಂತರದ ಅರ್ಧ ಕೀಲೋಮೀಟರ್ ವ್ಯಾಪ್ತಿಯಲ್ಲಿ ಬರುವ ಸುಮಾರು ಜಮೀನು ಸಹ ಇತ್ತೀಚಿನ ದಿವಸಗಳಲ್ಲಿ ಹಾಳಾಗುತ್ತಿದೆ. ಆ ವ್ಯಾಪ್ತಿಯಲ್ಲಿ ಜಮೀನು ಸವಳು-ಜವಳು ಆಗಿ ಆ ಜಮೀನು ಬಿತ್ತನೆಗೆ ಯೋಗ್ಯವಾಗಿರುವುದಿಲ್ಲ. ನೀರಿನ ದಡದಿಂದ ಮುಂದೆ ಇರುವಂತಹ ಸುಮಾರು 500 ಮೀಟರ್ ದೂರದಲ್ಲಿರುವಂತಹ ಜಮೀನನ್ನು ಸಹ ಬರುವಂತಹ ದಿನಮಾನಗಳಲ್ಲಿ ಸ್ವಾಧೀನ ಪಡಿಸಿಕೊಂಡು ಅದಕ್ಕೂ ಸಹ ಪರಿಹಾರವನ್ನು ಕೊಡಬೇಕು ಎನ್ನುವಂತಹ ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಇದರ ಜೊತೆಗೆ ನಮ್ಮ ಬಾಗಲಕೋಟೆ ನಗರ ಕೂಡ ಬಹಳ ದೊಡ್ಡದಾಗಿರುವಂತಹ ಜಿಲ್ಲಾ ಕೇಂದ್ರವಾಗಿದೆ. ಅಲ್ಲಿಯೂ ಸಹ ಸರ್ಕಾರ ಈಗಾಗಲೇ ಒಂದು ಆದೇಶವನ್ನು ಹೊರಡಿಸಿದೆ. ಆ ಗ್ರಾಮದಲ್ಲಿ ಬಹುಪಾಲು ಮುಳುಗಡೆಯಾಗುವಂತಹ ಪ್ರದೇಶದಲ್ಲಿ 525 ಮೀಟರ್ ಎತ್ತರಿಸಿದಾಗ, ಎಲ್ಲಿಯವರೆಗೆ ನೀರು ನಿಲುಗಡೆಯಾಗುವರೆಗೂ ಸ್ವಾಧೀನಕ್ಕೆ ಬರುವಂತಹ ಕಟ್ಟಡಗಳಿಗೂ ಸಹ ಪರಿಹಾರವನ್ನು ಆದಷ್ಟು ಬೇಗನೆ ಕೊಡಬೇಕೆಂಬ ವಿಚಾರವನ್ನು ತಮ್ಮೆಲ್ಲರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಪುನರ್ ವಸತಿ ಮತ್ತು ಪುನರ್ ನಿರ್ಮಾಣದ ಬಗ್ಗೆ ಮಾತನಾಡಬೇಕಾದರೆ, ಅಲ್ಲಿನ ರೈತರ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ಸಂತ್ರಸ್ಥರ ಬದಕನ್ನು ಇವತ್ತು ಪುನರ್‌ವಸತಿಯಲ್ಲಿ ಕಟ್ಟಿಕೊಳ್ಳಬೇಕಾದರೆ, ಅವರಿಗೆ ಎಷ್ಟು ನೋವಿದೆ ಎಂದು ಹೇಳಿದರೆ, ಅದನ್ನು ಇವತ್ತು ಹೇಳಲಿಕ್ಕೆ ಸಾಲದಾಗಿದೆ. ಪುನರ್‌ವಸತಿ ಕೆಂದ್ರದ ಯಾವುದೇ ಮೂಲಭೂತ ಸೌಲಭ್ಯಗಳು ಕಳೆದ 20 ವರ್ಷಗಳಾದರೂ ಸಹ ಪೂರ್ತಿಯಾಗದಿರುವುದನ್ನು ನಾವೆಲ್ಲರೂ ಗಮನಿಸಿದರೆ, ರೈತರಿಗೆ ಹಳೆ ಗ್ರಾಮದಲ್ಲಿದ್ದಾಗ ಎಷ್ಟು ಚೆನ್ನಾಗಿದ್ದೆವು ಎಂದು ಅನಿಸುತ್ತದೆ.

(ಮುಂದು)

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(1212) 21-12-2021 (3.20) ಎಂವಿ-ಆರ್‌ಎನ್ (ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಮುಂದು):-**

ಅಲ್ಲಿರತಕ್ಕಂಥ ಚರಂಡಿ, ರಸ್ತೆ, ದೀಪಗಳ ವ್ಯವಸ್ಥೆ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಇವುಗಳಿಂದ ಪುನರ್ವಸತಿ ಕೇಂದ್ರಗಳು ವಂಚಿತವಾಗಿವೆ. ಇನ್ನು ನೋವಿನ ಸಂಗತಿ ಎಂದರೆ, ಇವತ್ತಿಗೂ ಕೂಡ ಸಾಕಷ್ಟು ಗ್ರಾಮಗಳಲ್ಲಿ ಸ್ಮಶಾನಕ್ಕೆ ಜಾಗ ಇಲ್ಲದೇ ಇರುವುದನ್ನು ಗಮನಿಸಬೇಕು. ಇದುವರೆಗೆ ಸರ್ಕಾರ ಸುಮಾರು ಇಪ್ಪತ್ತು ಗ್ರಾಮಗಳಿಗೆ ಸ್ಮಶಾನಕ್ಕೆ ಜಾಗವನ್ನು ಒದಗಿಸುವುದಕ್ಕೆ ಆಗಿರುವುದಿಲ್ಲ. ಒಟ್ಟು 176 ಮುಳುಗಡೆ ಗ್ರಾಮಗಳ ಪೈಕಿ, 136 ಪುನರ್ವಸತಿ ಕೇಂದ್ರಗಳನ್ನು ಸ್ಥಾಪನೆ ಮಾಡಿದ್ದಾರೆ. ಇದರಲ್ಲಿ ಕೇವಲ 120 ಗ್ರಾಮಗಳು ಮಾತ್ರ ಸ್ಥಳಾಂತರಗೊಂಡು ಇನ್ನು 14 ಗ್ರಾಮಗಳು ಸ್ಥಳಾಂತರವಾಗದೆ ಹಳೆಯ ಗ್ರಾಮದಲ್ಲಿ ಇರುವುದನ್ನು ನಾವು ಗಮನಿಸಿದರೆ, ಪುನರ್ವಸತಿ ಕೇಂದ್ರಕ್ಕೆ ಬೇಕಾಗಿರುವಂತಹ ಎಲ್ಲಾ ಮೂಲಭೂತ ಸೌಕರ್ಯಗಳನ್ನು ನೀಡಿದರೆ, ಆದಷ್ಟು ಬೇಗನೆ ಅಲ್ಲಿನ ಸಂತ್ರಸ್ಥರು ಶಿಫ್ಟ್ ಆಗುತ್ತಾರೆ ಎಂಬ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದು ಬಹಳ ಮಹತ್ವಪೂರ್ಣವಾಗಿರುವಂತಹ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವಂತಹ ಈ ನಿಟ್ಟಿನಲ್ಲಿ ಸರ್ಕಾರ ಮುಂದೆ ಬರಬೇಕು. ಆ ನಿಟ್ಟಿನಲ್ಲಿ ಸರ್ಕಾರ ಕೆಲಸ ಕಾರ್ಯಗಳನ್ನು ಮಾಡಬೇಕು ಎನ್ನುವಂತಹ ವಿಚಾರವನ್ನು ಹೇಳಿ, ಇವತ್ತು ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಇರತಕ್ಕಂಥ ಸಂತ್ರಸ್ತರು ಹೇಗೆ ಇದ್ದಾರೆಂದರೆ, ಅವರು ಈ ನಾಡಿಗೆ ತ್ಯಾಗವನ್ನು ಮಾಡಿರುವಂತಹವರು. ನಿಜಕ್ಕೂ ಈ ಭಾಗದಲ್ಲಿ ಯಾರಾದರೂ ತ್ಯಾಗ ಮಾಡಿದ್ದರೆ, ಅದು ಕೃಷ್ಣಾ ನದಿಯ ದಡದಲ್ಲಿ ಇರತಕ್ಕಂಥ 176 ಗ್ರಾಮಗಳ ಜನರು ಎಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಯಾವ ಸಂದರ್ಭದಲ್ಲಿಯೂ ಕೂಡ ಅವರು ಡ್ಯಾಂ ಕಟ್ಟಿ ನೀರು ನಿಲ್ಲಿಸಬೇಡಿ ಎಂಬ ಮಾತನ್ನು ಹೇಳಿಲ್ಲ. ನೀವು ಡ್ಯಾಂ ಕಟ್ಟಿ ನೀರನ್ನು ನಿಲ್ಲಿಸಿ, ನಮಗೆ ಯೋಗ್ಯ ದರ ಕೊಟ್ಟು, ನಮಗೆ ಪುನರ್ವಸತಿ ಕೇಂದ್ರದಲ್ಲಿ ವ್ಯವಸ್ಥೆಯನ್ನು ಕಲ್ಪಿಸಿ ಎನ್ನುವಂತಹ ತ್ಯಾಗಮಯಿ ರೈತರು ಯಾರಾದರೂ ಇದ್ದರೆ, ಅದು ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಇರತಕ್ಕಂಥ ರೈತರು ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಸಂತ್ರಸ್ತರು ಇಷ್ಟೆಲ್ಲಾ ಸಹಕಾರವನ್ನು ಕೊಟ್ಟರು ಸಹ ಇನ್ನು ಆಗಬೇಕಾಗುತ್ತಿರುವಂತಹ ಕಾರ್ಯಗಳು ಸರಿಯಾಗಿ ಆಗುತ್ತಿಲ್ಲ. ಕಳೆದ ಹತ್ತು ವರ್ಷಗಳಿಂದ ತಮ್ಮ ಬದುಕು ಕಟ್ಟಿಕೊಳ್ಳಲು ಸಂತ್ರಸ್ತರು ಪರದಾಡುವಂತಹ ಸ್ಥಿತಿ ಬಂದಿದೆ ಎಂಬ ಮಾತನ್ನು ನಾವೆಲ್ಲರೂ ಕೂಡ ಹೇಳುತ್ತಾ, ಇವತ್ತು ನೀರಿಗೆ ಹೆಚ್ಚು ಮಹತ್ವವನ್ನು ಕೊಡುವಂತಹ ದಿನಗಳಲ್ಲಿ ಆ 130 ಟಿಎಂಸಿ ನೀರನ್ನು ಸದ್ಬಳಕೆ ಮಾಡಿಕೊಳ್ಳುವಂತಹ ಕೆಲಸ ಆಗಬೇಕೆಂದು ಈ ಸಂದರ್ಭದಲ್ಲಿ ಹೇಳಿ, ಅದರ ಜೊತೆಗೆ ಇವತ್ತು ಉತ್ತರ ಕರ್ನಾಟಕದ ಪ್ರಮುಖ ನದಿಯಾಗಿರುವಂತಹ ಕಾಳಿ ನದಿ ಎಂಬುದನ್ನು ನಾವೆಲ್ಲರೂ ಕೂಡ ಗಮನಿಸುತ್ತಿದ್ದೇವೆ. ಆ ಕಾಳಿ ನದಿಯ ನೀರನ್ನು ಮಲಪ್ರಭಾ ಮತ್ತು ಘಟಪ್ರಭಾ ನದಿಗಳಿಗೆ, ನದಿ ಜೋಡಣೆಯ ಕಾರ್ಯದಲ್ಲಿ ತೆಗೆದುಕೊಂಡರೆ, ಮಲಪ್ರಭಾ ಮತ್ತು ಘಟಪ್ರಭಾ ನದಿಗಳಿಗೆ ಆ ಕಾಳಿ ನದಿಯ ನೀರನ್ನು ಲಿಫ್ಟ್ ಮಾಡುವುದರ ಮುಖಾಂತರ ಸುಮಾರು 25 ಟಿಎಂಸಿ ನೀರನ್ನು ಮಲಪ್ರಭಾ ಮತ್ತು ಘಟಪ್ರಭಾ ನದಿಗೆ ಹೈಡ್ರಾಲಿಕ್ ಲಿಫ್ಟ್ ಮುಖಾಂತರ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಆ ಎರಡು ನದಿಗಳಿಗೆ ಜೋಡಣೆ ಮಾಡಿದರೆ, ಸುಮಾರು 25 ಟಿಎಂಸಿ ನೀರನ್ನು ಕೇವಲ ಐದೂವರೆ ಸಾವಿರ ಕೋಟಿ ರೂಪಾಯಿಗಳಲ್ಲಿ ಈ ಯೋಜನೆಯನ್ನು ಜಾರಿಗೊಳಿಸಿದ್ದೇ ಆದರೆ ಶಾಶ್ವತವಾಗಿ ಮಲಪ್ರಭಾ ಮತ್ತು ಘಟಪ್ರಭಾ ನದಿ ದಂಡೆಯಲ್ಲಿ ಬರುವಂತಹ ಬೆಳಗಾವಿ, ಧಾರವಾಡ, ಗದಗ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ಶಾಶ್ವತವಾದ ಕುಡಿಯುವ ನೀರಿನ ವ್ಯವಸ್ಥೆ ಆಗುತ್ತದೆ. ಅದರ ಜೊತೆಗೆ ಆ ಭಾಗದಲ್ಲಿ ಇರತಕ್ಕಂಥ ಅಚ್ಚುಕಟ್ಟು ಪ್ರದೇಶಗಳಲ್ಲಿ ನೀರಾವರಿ ಯೋಜನೆಗಳನ್ನು ಜಾರಿಗೆ ತರುವುದಕ್ಕೆ ಸಾಧ್ಯವಾಗುತ್ತದೆ. ಈಗ ಮಲಪ್ರಭಾ ಅಣೆಕಟ್ಟನ್ನು ಕಟ್ಟಿ 30 ವರ್ಷವಾದರೂ, ಕೇವಲ ನಾಲ್ಕು ಬ್ಹಾರಿ ಮಾತ್ರ ಡ್ಯಾಂ ತುಂಬಿರುವುದನ್ನು ನಾವು ಗಮನಿಸುತ್ತಿದ್ದೇವೆ. ಆ ನದಿಗೆ ಸೂಫಾ ಡ್ಯಾಂನಲ್ಲಿ ಇರುವಂತಹ ಸುಮಾರು 200 ಟಿಎಂಸಿ ನೀರು ಬಳಕೆ ಆಗಲಾರದೆ, ಪಶ್ಚಿಮಾಭಿಮುಖವಾಗಿ ಹರಿಯುವಂತಹ ಸೂಫಾ ಡ್ಯಾಂನ ಕಾಳಿ ನದಿ ದಂಡೆಯಲ್ಲಿ ಇರತಕ್ಕಂತಹ ನೀರು ಕೇವಲ ವಿದ್ಯುಚ್ಛಕ್ತಿಗೆ ಬಳಕೆಯಾಗುತ್ತಿದೆ. ಈಗ ನೀರನ್ನು ವಿದ್ಯುಚ್ಛಕ್ತಿಗೆ ಬಳಸಿಕೊಂಡು ಅದರಿಂದ ಉಳಿಯುವಂತಹ ನೀರು ನೇರವಾಗಿ ಸಮುದ್ರವನ್ನು ಸೇರುತ್ತಿದೆ. ಆ ಸಮುದ್ರ ಸೇರುವಂತಹ ನೀರಿನಲ್ಲಿ ಶೇಕಡಾ 10ರಷ್ಟು ನೀರನ್ನಾದರೂ ಬಳಕೆ ಮಾಡಿ, ನಾವು ಮಲಪ್ರಭಾ ಮತ್ತು ಘಟಪ್ರಭಾ ನದಿಗಳಿಗೆ ಜೋಡಣೆ ಮಾಡುವಂತಹ ಕೆಲಸವನ್ನು ಮಾಡಿದರೆ, ಈ ಭಾಗದ ಜಿಲ್ಲೆಗಳಿಗೆ ನೀರಿನ ಕೊರತೆ ಆಗುವುದಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇದು ಬಹಳ ಮಹತ್ವವಾಗಿರುವಂತಹ ಯೋಜನೆ. ಇದರ ಬಗ್ಗೆ ಈಗಾಗಲೇ ನಾವು ನೀಲಿ ನಕ್ಷೆ ಮತ್ತು ಪ್ರಾಜೆಕ್ಟ್ ಅನ್ನು ಮಾಡಿ, ಕೇಂದ್ರ ಸರ್ಕಾರದ ಗಮನಕ್ಕೆ ತರಲಾಗಿದೆ. ಕೇಂದ್ರ ಸರ್ಕಾರದ ಜಲ ಸಂಪನ್ಮೂಲ ಇಲಾಖೆ ಮಂತ್ರಿಗಳಾದ ಸನ್ಮಾನ್ಯ ಶೇಖಾವತ್ ಸಾಹೇಬರಿಗೂ ಕೂಡ ಈ ಕಾಳಿ ನದಿಯನ್ನು ಈ ಮಲಪ್ರಭಾ ಮತ್ತು ಘಟಪ್ರಭಾ ನದಿಗಳಿಗೆ ಜೋಡಣೆ ಮಾಡುವಂತಹ ಯೋಜನೆಯ ಒಂದು DPR (Detailed Project Report) ಅನ್ನು ಸಹ ಸಲ್ಲಿಸಿದ್ದೇವೆ. ಆದಷ್ಟು ಬೇಗನೆ ಸರ್ಕಾರ ಆ ಕಡೆಗೆ ಗಮನ ಹರಿಸಿದರೆ, ಈಗ ನಾವು ಮಹದಾಯಿ ನದಿಯಿಂದ 5 ಟಿಎಂಸಿ ನೀರಿಗಾಗಿ ಕಳೆದ ಇಪ್ಪತ್ತು ವರ್ಷಗಳಿಂದ ಹೋರಾಡುತ್ತಿದ್ದೇವೆ. ನಮಗೆ ಗೋವಾ ರಾಜ್ಯದಿಂದ ನೀರು ಕೊಡುವುದಕ್ಕೆ ತೊಂದರೆಯಾಗುತ್ತಿದೆ. ಆದರೆ, ಕರ್ನಾಟಕ ರಾಜ್ಯದಲ್ಲೇ ಹುಟ್ಟಿ, ಕರ್ನಾಟಕ ರಾಜ್ಯದಲ್ಲೇ ಹರಿದು ಸಮುದ್ರವನ್ನು ಸೇರುವಂತಹ ಈ ನದಿಗಳನ್ನು ನಾವು ಮರುಬಳಕೆ ಮಾಡುವಂತಹ ಕೆಲಸವನ್ನು ಮಾಡಿದರೆ, ಕೇವಲ ಐದರಿಂದ ಆರು ಸಾವಿರ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸುಮಾರು 25 ಟಿಎಂಸಿ ನೀರನ್ನು ಮಲಪ್ರಭಾ ಮತ್ತು ಘಟಪ್ರಭಾ ನದಿಗಳಿಗೆ ತಂದು ಕೊಟ್ಟರೆ. ಈ ನದಿ ಭಾಗದಲ್ಲಿ ಇರುವಂತಹ ಸುಮಾರು 25 ತಾಲ್ಲೂಕುಗಳಿಗೆ ಇದರಿಂದ ಹೆಚ್ಚಿನ ಲಾಭ ಸಿಗುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದಕ್ಕೆ ಯಾವುದೇ ಅಂತರರಾಜ್ಯದ ಸಮಸ್ಯೆ ಬರುವುದಿಲ್ಲ. ಯಾವುದೇ ಕೋರ್ಟ್ ಕಚೇರಿ ಮತ್ತು ಟ್ರಿಬ್ಯೂನಲ್ ಮುಂದೆ ಕೂಡ ಯಾವುದೇ ಸಮಸ್ಯೆ ಆಗುವುದಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತಂದು, ಬಹಳ ಮಹತ್ವಪೂರ್ಣವಾಗಿರುವಂತಹ ಈ ಕಾಳಿ ನದಿ ಯೋಜನೆಗೆ ಸರ್ಕಾರ ಗಮನ ಹರಿಸಬೇಕು. ಇದು ಏನು ಆಗದೇ ಇರುವಂತಹ ವಿಚಾರವಲ್ಲ. ಆಂಧ್ರಪ್ರದೇಶ ರಾಜ್ಯಕ್ಕೆ ಹೋದಾಗ, ಅಲ್ಲಿ ಅನೇಕ ಯೋಜನೆಗಳನ್ನು

ಕೇವಲ ಎರಡರಿಂದ ನಾಲ್ಕು ವರ್ಷಗಳಲ್ಲಿ ಕರ್ನಾಟಕವನ್ನು ಮೀರಿಸಿ, ನೀರಾವರಿ ಮಾಡಿರುವುದನ್ನು ನಾವು ಗಮನಿಸಿದ್ದೇವೆ. ತೆಲಂಗಾಣ ರಾಜ್ಯದಲ್ಲಿ ನೀರಾವರಿ ಇಲಾಖೆಯವರು ನೀರಾವರಿ ಯೋಜನೆಗಳಿಗೆ 24/7 ಕೆಲಸ ಮಾಡುತ್ತಿದ್ದಾರೆ. ತಾವು ಇದನ್ನು ನಂಬುತ್ತೀರೋ ಇಲ್ಲವೋ ಗೊತ್ತಿಲ್ಲ. ಅಲ್ಲಿನ ನೀರಾವರಿ ಇಲಾಖೆ ಬೆಳಗ್ಗೆ ಮತ್ತು ಸಾಯಂಕಾಲದಲ್ಲಿ ಎರಡು ಶಿಫ್ಟ್‌ಗಳಲ್ಲಿ ಕೆಲಸ ಮಾಡುತ್ತಿದೆ. ನಮ್ಮ ಕಾರ್ಖಾನೆಗಳಲ್ಲಿ ಹೇಗೆ shift wise ಎಂಟರಿಂದ ಇಪ್ಪತ್ನಾಲ್ಕು ಗಂಟೆ ಕೆಲಸ ಮಾಡುತ್ತೇವೆಯೋ ಅದೇ ರೀತಿ ತೆಲಂಗಾಣ ರಾಜ್ಯದ ನೀರಾವರಿ ಇಲಾಖೆ ಎಂಟೆಂಟು ಗಂಟೆಗಳ ಎರಡು ಶಿಫ್ಟ್‌ನಲ್ಲಿ ಯುದ್ಧೋಪಾದಿಯಲ್ಲಿ ಕೆಲಸ ಮಾಡಿ, ನೀರಾವರಿಗೆ ನಮಗಿಂತ ಮುಂಚಿತವಾಗಿ ಬಂದಿರುವುದನ್ನು ಗಮನಿಸಿದರೆ, ಆ ನಿಟ್ಟಿನಲ್ಲಿ ಕರ್ನಾಟಕ ರಾಜ್ಯದಲ್ಲೂ ಕೂಡ ಈ ನೀರಾವರಿ ಯೋಜನೆಗಳನ್ನು ಮಾಡುವುದರ ಜೊತೆಗೆ ನದಿಗಳ ಜೋಡಣೆ ಮಾಡುವುದರ ಮುಖಾಂತರ ಶಾಶ್ವತವಾಗಿ ಈ ನೀರನ್ನು ಬಳಸಿಕೊಳ್ಳುವುದಕ್ಕೆ ಆಗುತ್ತದೆ. ಮುಂದೊಂದು ದಿನ ಈ ನದಿ ನೀರನ್ನು ಹೀಗೆ ಬಿಟ್ಟರೆ. ಮುಂದೆ ನೀರನ್ನು ಹಾಲು ಮತ್ತು ತುಪ್ಪದ ರೀತಿ ಬಳಸುವಂತಹ ಪ್ರಸಂಗ ಬರುತ್ತದೆ. ಅಷ್ಟು ನೀರಿನ ಪ್ರಮಾಣ ಕಡಿಮೆಯಾಗುತ್ತಿದೆ. ಆ ನೀರನ್ನು ಸಕಾಲದಲ್ಲಿ ಬಳಸುವುದರ ಜೊತೆಗೆ ಅದನ್ನು ಹಿಡಿದಿಟ್ಟುಕೊಂಡು ಬಂದಿರುವಂತಹ ನೀರನ್ನು ನೀರಾವರಿ ಮಾಡಿದರೆ, ನಮ್ಮ ರಾಷ್ಟ್ರೀಯ ವರಮಾನ ಕೂಡ ಹೆಚ್ಚಾಗುತ್ತದೆ ಮತ್ತು ಇಲ್ಲಿರತಕ್ಕಂಥ ಜನರ ಆರ್ಥಿಕ ವರಮಾನ ಕೂಡ ಹೆಚ್ಚಾಗುತ್ತದೆ ಎಂಬ ಮಾತನ್ನು ಹೇಳಿ ನೀರಿನ ಬಗ್ಗೆ ಇರುವಂತಹ ನನ್ನ ಮಾತನ್ನು ಮುಗಿಸುತ್ತೇನೆ. 'ಅನ್ನ ಮಾಪಂ, ಅಮೃತ ಮಾಪಂ, ಸ್ವರಾಡಾ ಮಾಪಂ, ವೀರಾಡ ಮಾಪಂ' ಎನ್ನುವುದು ಉಪನಿಷತ್ತಿನಲ್ಲಿ ಬರುವಂತಹ ಮಾತು. 'ನೀರು ಎಂದರೆ, ಅನ್ನ. ನೀರು ಎಂದರೆ, ಅಮೃತ. ನೀರು ಎಂದರೆ, ಅಂತಃಸ್ತೇಜ. ನೀರು ಎಂದರೆ, ವೀರಾಟಚೇತನ. ನೀರು ಎಂದರೆ, ಬೆಳಕು' ಎಂಬ ಉಪನಿಷತ್ತಿನ ಈ ಸಾಲುಗಳು ನಮ್ಮ ಧ್ಯೇಯ ಮಂತ್ರವಾಗಬೇಕು. ಈ ಮಂತ್ರವನ್ನು ಮುಂದಿನ ತಲೆಮಾರಿಗೆ ಸಮೃದ್ಧವಾಗಿ ಮತ್ತು ಶುದ್ಧವಾಗಿ ಉಳಿಸಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರ ಮೇಲೆ ಇದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಿ. ಇಂತಹ ಅನೇಕ ಯೋಜನೆಗಳನ್ನು ಜಾರಿ ಮಾಡುವುದಕ್ಕೆ ರಾಜ್ಯ ಸರ್ಕಾರಕ್ಕೆ ಕೃಷ್ಣಾ ಮೇಲ್ದಂಡೆ ಯೋಜನೆಗೆ ಸುಮಾರು ಎಂಬತ್ತು ಸಾವಿರ ಕೋಟಿ ರೂಪಾಯಿಗಳಷ್ಟು ಅನುದಾನ ಬೇಕಾಗುತ್ತದೆ. ನಾಲ್ಕು ವರ್ಷದ ಯೋಜನೆಯನ್ನು ಹಾಕಿಕೊಂಡು, ಪ್ರತಿ ವರ್ಷ ಇಪ್ಪತ್ತು ಸಾವಿರವನ್ನು ಖರ್ಚು ಮಾಡಿದರೆ, ನಾಲ್ಕು ವರ್ಷದಲ್ಲಿ 130 ಟಿಎಂಸಿ ನೀರನ್ನು ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಬಳಸಬಹುದು ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಹಿರಿಯ ಸದಸ್ಯರು ಹೇಳಿದ ಹಾಗೆ, ಈ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಣೆಯಾಗಬೇಕು. ಅದನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಣೆ ಮಾಡಿದಾಗ ಮಾತ್ರ ಸಕಾಲದಲ್ಲಿ ನೀರು ಬಳಸುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ಒಕ್ಕೊರಲಿನಿಂದ ನಾವೆಲ್ಲರೂ ಕೂಡ ಅದನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಮಾಡಿ, ಈ ಭಾಗದ ಸಂತ್ರಸ್ತರ ಬದುಕಿಗೆ ಆಸರೆಯಾಗಬೇಕು. ಸುಮಾರು ಹದಿನೈದು ಲಕ್ಷಕ್ಕಿಂತ ಹೆಚ್ಚು ಎಕರೆ ಪ್ರದೇಶವನ್ನು ನೀರಾವರಿ ಮಾಡುವುದಕ್ಕೆ ಈ ಯೋಜನೆ ಫಲಪ್ರದವಾಗಬೇಕು ಎನ್ನುವಂತಹ ಮಾತನ್ನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾತನಾಡುವುದಕ್ಕೆ ಅವಕಾಶ ನೀಡಿದಂತಹ ತಮ್ಮೆಗೆಲ್ಲರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ತಮ್ಮ ಸಿಟ್ಟು ಕಡಿಮೆ ಆಯಿತೆ?

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವ್ವರೇ, ತಾವು ನನ್ನನ್ನು ಕ್ಷಮಿಸಬೇಕು. ನಾನು ವಯಸ್ಸಿನಲ್ಲಿ ಹಿರಿಯನಾದರೂ, ಈ ಭಾಗದ ಚರ್ಚೆಗಳಿದ್ದಾಗ, ನನಗೆ ಏಕೆ ಅವಕಾಶ ಸಿಗುವುದಿಲ್ಲ ಎಂದು, ಸಾರ್ವಜನಿಕ concern ಸಲುವಾಗಿ ನಾನು ಏರು ಧ್ವನಿಯಲ್ಲಿ ತಮ್ಮ ಬಳಿ ಮಾತನಾಡಿದೆ. ಅದಕ್ಕೆ ತಮ್ಮಲ್ಲಿ ಕ್ಷಮೆ ಕೇಳುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ನಾನು ತಮಾಷೆಗೆ ಹೇಳಿದೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಸಹೋದರರಾದಂತಹ ಮಾನ್ಯ ಮರಿತಿಬ್ಬೇಗೌಡರು ನನಗೆ ಅವಕಾಶ ಕಲ್ಪಿಸಿ ಕೊಟ್ಟಿದ್ದಾರೆ. ಈಗ ನಿಯಮ 68ರಲ್ಲಿ ಅತಿವೃಷ್ಟಿಯ ಬಗ್ಗೆ ಮಾತನಾಡುವುದಕ್ಕೆ ಇತ್ತು. ಆದರೆ, ನಾನು ಒಬ್ಬನೇ ಮಾತನಾಡಿದೆ. ಅದು ಇನ್ನು ಪೂರ್ತಿಯಾಗಿಲ್ಲ. ಆ ದೃಷ್ಟಿಯಿಂದ ನಮ್ಮ ಸಹೋದರರಿಗೂ ವಿನಂತಿ ಮಾಡಿಕೊಳ್ಳುತ್ತೇನೆ. ನಿನ್ನೆಯ ದಿವಸ ಸನ್ಮಾನ್ಯ ಸಭಾಪತಿಯವರು ಉತ್ತರ ಕರ್ನಾಟಕದಲ್ಲಿ ಮೂರು ವರ್ಷದ ನಂತರ ರಾಜ್ಯದ ಎರಡನೇ ರಾಜಧಾನಿ ಎನಿಸಿಕೊಂಡಂತಹ ಬೆಳಗಾವಿ ಜಿಲ್ಲೆಯಲ್ಲಿ ಅಧಿವೇಶನ ನಡೆಯುವಂತಹ ಸಂದರ್ಭದಲ್ಲಿ ಈ ಭಾಗದ ಅನೇಕ ಜ್ವಲಂತ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುವಂತಹ ಚರ್ಚೆಗಳು ಆಗಿಲ್ಲವೆಂದು ನಮ್ಮ ಮಾಧ್ಯಮ ಮಿತ್ರರು ಮತ್ತು ಎಲ್ಲಿ ನೋಡಿದರು ಅಲ್ಲಿ ಈ ಭಾಗದ ಜನರು ಮಾತನಾಡುತ್ತಿದ್ದಾರೆ. ಏನಪ್ಪ ಈಗ ನಮ್ಮ ಜಿಲ್ಲೆಯಲ್ಲೇ ಅಧಿವೇಶನ ನಡೆಯುತ್ತಿದೆ. ಆದರೆ, ಇವರು ನಮ್ಮ ವಿಚಾರವನ್ನೆ ಮಾತನಾಡುವುದಿಲ್ಲ ಎಂಬ ಮಾತು ಜಗಜ್ಜಾಹೀರಾಗಿದೆ. ಈ ರೀತಿ ಪ್ರತಿಯೊಬ್ಬರು ಮಾತನಾಡುವಂತಹ ಈ ಸಂದರ್ಭದಲ್ಲಿ ಅವಕಾಶ ಕಲ್ಪಿಸಿ, ವಿಶೇಷವಾಗಿ ಉತ್ತರ ಕರ್ನಾಟಕದ ಜ್ವಲಂತ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವಂತಹ ಚರ್ಚೆ ಆಗಲಿ ಎನ್ನುವಂತಹ ಮಾತನ್ನು ಹೇಳಿದಾಗ, ತಾವು ನನಗೆ ಮಾತನಾಡಲು ಅವಕಾಶ ಕಲ್ಪಿಸಿದ್ದಕ್ಕಾಗಿ ತಮಗೆ ಹೃದಯಪೂರ್ವಕವಾದಂತಹ ಕೃತಜ್ಞತೆಗಳನ್ನು ಸಲ್ಲಿಸುವುದಕ್ಕೆ ಬಯಸುತ್ತಿದ್ದೇನೆ. ಉತ್ತರ ಕರ್ನಾಟಕದ ಅನೇಕ ಪ್ರಮುಖ ಸಮಸ್ಯೆಗಳಲ್ಲಿ ಮೊಟ್ಟ ಮೊದಲನೆಯದು ಎಂದರೆ, ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತ. ಅಂದರೆ, ಅದು ಹದಿನೈದು ಲಕ್ಷ ಎಕರೆಗೆ 130 ಟಿಎಂಸಿ ನೀರನ್ನು ಬಳಕೆ ಮಾಡಿಕೊಳ್ಳುವಂಥದ್ದು.

(ಮುಂದು)

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(1213) 21.12.2021 03.30 LL-RN **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್. ಪಾಟೀಲ್(ಮುಂದು)**

ಜೊತೆಗೆ, ಆಲಮಟ್ಟಿ ಜಲಾಶಯದ ಎತ್ತರವನ್ನು 519.6 ಮೀಟರ್‌ನಿಂದ 524.256 ಮೀಟರ್‌ವರೆಗೆ ಎತ್ತರಿಸುವಂತಹ ಪ್ರಥಮವಾದ ಯೋಜನೆಯಾಗಿದೆ. ಉತ್ತರ ಕರ್ನಾಟಕದ ಒಟ್ಟು 7 ಜಿಲ್ಲೆಗಳಿಗೆ ಉಪಯುಕ್ತವಾದ ಈ ಯೋಜನೆ ಬಹಳ ಪ್ರಮುಖವಾದುದು. ಅದರ ನಂತರ, 04 ಜಿಲ್ಲೆಗಳು ಅಂದರೆ, ಬೆಳಗಾವಿ ಜಿಲ್ಲೆ, ಬಾಗಲಕೋಟೆ ಜಿಲ್ಲೆ, ಧಾರವಾಡ ಜಿಲ್ಲೆ ಮತ್ತು ಗದಗ ಜಿಲ್ಲೆಗಳಿಗೆ ಫಲಪ್ರದವಾಗುವಂತಹ ಯೋಜನೆಯಾಗಿದೆ. **(ಗೊಂದಲ)** ತುಂಗಭದ್ರಾ ಜಲಾಶಯದಲ್ಲಿ 33 ಟಿ.ಎಂ.ಸಿ. ಹೂಳು ತುಂಬಿದ ಪರಿಣಾಮವಾಗಿ ಅಲ್ಲಿ ನವಲೀ ಹತ್ತಿರ balancing reservoir ಮಾಡುವಂಥದ್ದು, ಅಂದರೆ ಅಂದಾಜು 32 ಟಿ.ಎಂ.ಸಿ. ನೀರನ್ನು ಸಂಗ್ರಹ ಮಾಡುವಂಥದ್ದು, ಇವು ಮೂರು ಪ್ರಮುಖ ನೀರಾವರಿ ಯೋಜನೆಗಳಾಗಿವೆ.

ಅದರ ಜೊತೆಗೆ, ಕಲ್ಯಾಣ ಕರ್ನಾಟಕದ ಬಗ್ಗೆ ಡಾ: ನಂಜುಂಡಪ್ಪ ವರದಿ ಜಾರಿಯಾದಾಗಿನಿಂದ ಅದರ ಸ್ಥಿತಿಗತಿಗಳ ಬಗ್ಗೆ ಮಾತನಾಡಬೇಕೆಂದು ಅಂದುಕೊಂಡಿದ್ದೇನೆ. ಅದಾದ ಮೇಲೆ, ಎಲ್ಲಾ ಯೋಜನೆಗಳನ್ನು ಮಾಡುವಂತಹ ಕರ್ನಾಟಕ ನೀರಾವರಿ ನಿಗಮದಲ್ಲಿ ದೊಡ್ಡ ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆದಿದೆ. ಸದರಿ ನಿಗಮದಲ್ಲಿ ಹಣ ಇರುವುದಿಲ್ಲ. ಇದ್ದಂತಹ ಹಣದಲ್ಲಿ ಈ ರೀತಿ ಭ್ರಷ್ಟಾಚಾರ ಆಗಿರುತ್ತದೆ. ತದನಂತರ, ಸಂವಿಧಾನಕ ಪರಿಚ್ಛೇದ 371(ಜೆ) ಕಲಂ ತಿದ್ದುಪಡಿಯಾದ ನಂತರ ಕಲ್ಯಾಣ ಕರ್ನಾಟಕದಲ್ಲಿ ನಡೆಯತಕ್ಕಂತಹ ವಿಚಾರಗಳನ್ನು ಸಹ ನಾನು ನನ್ನ ಮಾತಿನಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಬಗ್ಗೆ ಈಗಾಗಲೇ ನಮ್ಮ ಅನೇಕ ಸ್ನೇಹಿತರು ಮಾತನಾಡಿದ್ದಾರೆ. ಅದರಂತೆ, ಸದರಿ ಯೋಜನೆ 1964ರಲ್ಲಿ ಅಂದಿನ ರೈಲ್ವೇ ಮಂತ್ರಿಗಳಾಗಿದ್ದಂತಹ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರ ಅಮೃತ ಹಸ್ತದಿಂದ ಶಂಕುಸ್ಥಾಪನೆಗೊಂಡಂತಹ ಒಂದು ಬೃಹತ್ ಯೋಜನೆಯಾಗಿದೆ. ಈ ಯೋಜನೆಯಿಂದ ಎಷ್ಟು ನೀರಾವರಿಯಾಗುತ್ತದೆಯೆಂದರೆ, ಕೃಷ್ಣಾ ಮೇಲ್ದಂಡೆ ಯೋಜನೆಯ 1ನೇ ಹಂತ, 2ನೇ ಹಂತ ಮತ್ತು 3ನೇ ಹಂತದ ಯೋಜನೆಯಿಂದ... ಬಹುತರವಾಗಿ ಇಡೀ ದೇಶದಲ್ಲಾಗಲಿ ಅಥವಾ ಪ್ರಪಂಚದಲ್ಲಿಯೇ ಆಗಲಿ ಒಂದು ನದಿಗೆ ಎರಡು ಜಲಾಶಯ ಕಟ್ಟಿರುವುದು ನನಗೆ ಗೊತ್ತಿರುವುದಿಲ್ಲ. ಆದರೆ, ಕೃಷ್ಣಾ ನದಿಗೆ ಆಲಮಟ್ಟಿಯಲ್ಲಿ ಜಲಾಶಯ ಕಟ್ಟಿದ್ದಾರೆ. ಅದು ಸ್ಟೋರೇಜ್ ಡ್ಯಾಮ್. ಮತ್ತೊಂದು ಕಡೆ ನಾರಾಯಣಪುರದಲ್ಲಿ ಕಟ್ಟಿದ್ದಾರೆ. ಅದು ಇರಿಗೇಷನ್ ಡ್ಯಾಮ್ ಎಂದು ಹೇಳುತ್ತಾರೆ. ಈ ರೀತಿ ಎರಡು ಜಲಾಶಯದ concept ಇಟ್ಟುಕೊಂಡು ಈ ಯೋಜನೆ ಬಂದಿರುತ್ತದೆ. ಈ ಯೋಜನೆ ಬೃಹತ್ ಯೋಜನೆಯಾಗಿದ್ದು, ಇಡೀ ರಾಜ್ಯದ ವರಮಾನವನ್ನಷ್ಟೇ ಹೆಚ್ಚು ಮಾಡದೇ ಇಡೀ ರಾಷ್ಟ್ರದ ವರಮಾನವನ್ನು ಹೆಚ್ಚು ಮಾಡುತ್ತದೆ. ಅಷ್ಟೇ ಅಲ್ಲದೇ, ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹಂತ ಮುಕ್ತಾಯವಾದ ನಂತರ, ಸುಮಾರು 30,32,613 ಎಕರೆ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಒದಗಿಸುವುದು ಅಂದರೆ, ಉತ್ತರ ಕರ್ನಾಟಕದ 7 ಜಿಲ್ಲೆಗಳ ರೈತರು ನೆಮ್ಮದಿಯಿಂದ ಬದುಕುವಂತಹ ಅವಕಾಶ ಕಲ್ಪಿಸುವಂತಹ ಒಂದು ಯೋಜನೆಯಾಗಿದೆ.

ಈ ಕೃಷ್ಣಾ ಮೇಲ್ದಂಡೆ ಯೋಜನೆ 1 ಮತ್ತು 2ನೇ ಹಂತದ ಯೋಜನೆ ಬಹುತೇಕ ಮುಕ್ತಾಯ ಹಂತಕ್ಕೆ ಬಂದಿರುತ್ತದೆ. ಅದರಲ್ಲಿ 1 ಮತ್ತು 2ನೇ ಹಂತ ಪೂರ್ಣ ಆಗುವುದಕ್ಕೆ ಸುಮಾರು 2,73,793 ಎಕರೆಯಷ್ಟು ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ. ಅಂದಾಜು 78,854 ಅಂದರೆ ಸುಮಾರು 80 ಸಾವಿರದಷ್ಟು ಕಟ್ಟಡಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ. ಇಡೀ ಏಷ್ಯಾ ಖಂಡದಲ್ಲಿ ಬೃಹತ್ ನಗರವಾದಂತಹ ಬಾಗಲಕೋಟೆ ಪಟ್ಟಣವು ಸುಮಾರು ಒಂದು ಲಕ್ಷ ಜನವಸತಿ ಇರುವಂತಹ ಪಟ್ಟಣ ಎಲ್ಲಿಯಾದರೂ ಮುಳುಗಿದೆ ಎಂದರೆ, ಅದೇ ಪ್ರಥಮ. ಬಾಗಲಕೋಟೆಯ 60 ಸಾವಿರ ಜನವಸತಿಯನ್ನು ನವನಗರಕ್ಕೆ ಸ್ಥಳಾಂತರ ಮಾಡಲಾಗಿರುತ್ತದೆ. ತಾವು ಆ ಕಡೆ ಬಂದಾಗ, ನವನಗರಕ್ಕೆ ಒಮ್ಮೆ ಭೇಟಿ ನೀಡಬೇಕು. ಇಡೀ ಭಾರತ ದೇಶದಲ್ಲಿ ಸೆಕ್ಟರ್ ಪ್ಲಾನ್ ಸಿಟಿ ಚಂಡೀಗಡ ರಾಜ್ಯದ ನಂತರ ನಮ್ಮ ಬಾಗಲಕೋಟೆ ಜಿಲ್ಲೆಯಲ್ಲಿ ಮಾಡಲಾಗಿರುತ್ತದೆ. ಅಷ್ಟು ಜನವಸತಿ ಅಲ್ಲಿ ಇರುತ್ತದೆ. ಇವೊತ್ತಿನ ದಿವಸ, ಸದರಿ ಯೋಜನೆಯಿಂದ ಸುಮಾರು 80 ಸಾವಿರ ಕಟ್ಟಡಗಳು ಮತ್ತು 2,73,793 ಎಕರೆ ಅತ್ಯಂತ ಫಲವತ್ತಾದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಅದು ಎಂತಹ ಫಲವತ್ತಾದ ಭೂಮಿ ಎಂದರೆ, Ganga Gangetic Belt ಇಡೀ ದೇಶದಲ್ಲಿ ಫಲವತ್ತಾದ ಭೂಮಿ ಎಲ್ಲಿದೆಯೆಂದರೆ, ಅದು Ganga Gangetic Belt ಎಂದು ಹೇಳುತ್ತಾರೆ. ಅದು ಅಷ್ಟೇ ಫಲವತ್ತತೆ ಹೊಂದಿದಂತಹ ಕೃಷ್ಣೆ ದಡದಲ್ಲಿರತಕ್ಕಂತಹ ಜಮೀನು ಎಂಬುದನ್ನು ನಾವು ನೆನಪಿಸಿಕೊಳ್ಳಬೇಕಾಗುತ್ತದೆ.

ಈಗಾಗಲೇ ನಮ್ಮ ಸಹೋದರರಾದ ಶ್ರೀ ಹಣಮಂತ್ ರುದ್ರಪ್ಪ ನಿರಾಣಿಯವರು ಹೇಳಿದ ಹಾಗೆ, 176 ಗ್ರಾಮಗಳನ್ನು ಕೃಷ್ಣಾ ಮೇಲ್ದಂಡೆ ಯೋಜನೆಯ 1 ಮತ್ತು 2ನೇ ಹಂತದಲ್ಲಿ ಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ. 136 ಪುನರ್ ವಸತಿ ಕೇಂದ್ರಗಳನ್ನು ಮಾಡಲಾಗಿರುತ್ತದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಬಹುತರ ಪುನರ್ ವಸತಿ ಆಗಿದ್ದರೆ, ಅದು ಬಾಗಲಕೋಟೆ ಜಿಲ್ಲೆಯಲ್ಲಿ. ಅಲ್ಲದೇ, ಇಡೀ ದೇಶದಲ್ಲಿ ಇಷ್ಟು ದೊಡ್ಡ ಪ್ರಮಾಣದ ಪುನರ್ ವಸತಿ ಎಲ್ಲಿಯೂ ಆಗಿರುವುದಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಈಗ ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದಲ್ಲಿ ಕೆಲಸ ಬಹಳ ಆಮೆಗತಿಯಲ್ಲಿ ನಡೆಯುತ್ತಿದೆ. ಇದರಲ್ಲಿ ಏನಾಗಿದೆಯೆಂದರೆ, ಕೃಷ್ಣಾ ಜಲವಿವಾದ ನ್ಯಾಯಾಧೀಕರಣದ Justice Brijesh Kumar ಅವರು ಕೃಷ್ಣಾ ಟ್ರಿಬ್ಯುನಲ್‌ದ 2ನೇ ನಿರ್ಣಯವನ್ನು ದಿನಾಂಕ: 30.12.2010ರಲ್ಲಿ ಮಾಡಿರುತ್ತದೆ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಇವೊತ್ತಿನ ದಿವಸ ನಾವು 2021ನೇ ಇಸವಿಯಲ್ಲಿ ಇದ್ದೇವೆ. ಆ ತೀರ್ಪು ಬಂದು ಇಲ್ಲಿಗೆ ಸುಮಾರು 11 ವರ್ಷ ಆಯಿತು. ಅಂದರೆ, ಕೃಷ್ಣಾ ಮೇಲ್ದಂಡೆ ಯೋಜನೆಯಿಂದ 130 ಟಿ.ಎಂ.ಸಿ. ನೀರು ಬಳಕೆ ಮಾಡಿಕೊಳ್ಳುವುದಕ್ಕೆ ನ್ಯಾಯಾಧೀಕರಣದಿಂದ ತೀರ್ಪು ನೀಡಿರುತ್ತಾರೆ. ಆ ನೀರನ್ನು ಬಳಕೆ ಮಾಡಿಕೊಂಡು ಸುಮಾರು 15 ಲಕ್ಷ ಎಕರೆ ಜಮೀನಿಗೆ ನೀರಾವರಿ ಮಾಡಿಕೊಳ್ಳುವುದಕ್ಕೆ ಜಲಾಶಯವನ್ನು ಎತ್ತರ ಮಾಡಿಕೊಳ್ಳಬಹುದೆಂದು ತೀರ್ಪು ನೀಡಿ 11 ವರ್ಷ ಕಳೆದರೂ ಇನ್ನೂ ಏನೂ ಕೆಲಸ ಆಗಿರುವುದಿಲ್ಲ. ಜನರ ತಾಳ್ಮೆ-ಸಹನೆಗೂ ಒಂದು ಇತಿ-ಮಿತಿ ಇರುತ್ತದೆ. ಅವರ ತಾಳ್ಮೆ, ಸಹನೆಯ ಕಟ್ಟೆ ಹೊಡೆದರೆ ಏನಾದರೂ ಅಹಿತಕರ ಘಟನೆ ನಡೆದರೂ ಆಶ್ಚರ್ಯವಾಗುವುದಿಲ್ಲ ಅನ್ನುವಷ್ಟರ ಮಟ್ಟಿಗೆ ಇದೆ. ಏಕೆಂದರೆ, ನ್ಯಾಯಾಧೀಕರಣದ ತೀರ್ಪು ಬಂದು ಸುಮಾರು 11 ವರ್ಷ ಕಳೆದರೂ, ಸುಮಾರು 15 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿಯಾಗಿ ಒಟ್ಟು 32,33,613 ಎಕರೆ ಪ್ರದೇಶಕ್ಕೆ ನೀರಾವರಿಯಾದರೆ.., ನಾನು ಹೇಳುವುದನ್ನು ಅತಿಶಯೋಕ್ತಿ ಮಾತನಾಡುತ್ತೇನೆಂದು ಯಾರೂ ಭಾವಿಸಬಾರದು. ಇಡೀ ಕರ್ನಾಟಕ ರಾಜ್ಯ ಅಷ್ಟೆ ಅಲ್ಲದೇ, ಇಡೀ ಭಾರತ ದೇಶದ ಯಾವುದೇ ಅಭಿವೃದ್ಧಿ ಹೊಂದಿದಂತಹ ಪ್ರದೇಶವನ್ನು ಮೆಟ್ಟಿ ನಿಲ್ಲುವಂತೆ ಇವೊತ್ತಿನ ದಿವಸ ಉತ್ತರ ಕರ್ನಾಟಕ ಅಭಿವೃದ್ಧಿ ಹೊಂದುತ್ತದೆ. ಅದಕ್ಕೆ ರಾಜಕೀಯ ಇಚ್ಛಾಶಕ್ತಿ ಬೇಕು. ಆ ರಾಜಕೀಯ ಇಚ್ಛಾಶಕ್ತಿಯಿಂದಲೇ ಈ ಯೋಜನೆ ಪೂರ್ಣಗೊಳ್ಳಬೇಕಾಗುತ್ತದೆ. ಏಕೆಂದರೆ, ಒಟ್ಟು 173 ಟಿ.ಎಂ.ಸಿ. ನೀರು ಕೃಷ್ಣಾ ಮೇಲ್ದಂಡೆ ಯೋಜನೆಯ 1 ಮತ್ತು 2ನೇ ಹಂತದಲ್ಲಿ ಬಳಕೆಯಾಗುತ್ತದೆ. ಅದೇ ರೀತಿ, 3ನೇ ಹಂತದಲ್ಲಿ 130 ಟಿ.ಎಂ.ಸಿ. ನೀರು ಸೇರಿ ಒಟ್ಟಾರೆಯಾಗಿ 330 ಟಿ.ಎಂ.ಸಿ. ನೀರು ಬಳಕೆಯಾಗುತ್ತದೆ. Only for Upper Krishna Project, not for entire Krishna Basin. ಟ್ರಿಬ್ಯುನಲ್ ನಂಬರ್-1 ಆದೇಶ ಮಾಡಿದ್ದು 173 ಟಿ.ಎಂ.ಸಿ.. ಕೃಷ್ಣಾ ನ್ಯಾಯಾಧೀಕರಣದ 2ನೇ ತೀರ್ಪಿನಲ್ಲಿ 170 ಟಿ.ಎಂ.ಸಿ. ನೀರು ಸೇರಿದಂತೆ ಒಟ್ಟಾರೆಯಾಗಿ 904 ಟಿ.ಎಂ.ಸಿ. ನೀರು ಕೃಷ್ಣಾ ಮೇಲ್ದಂಡೆ ಯೋಜನೆಗೆ ಹಂಚಿಕೆಯಾಗಿರುತ್ತದೆ. ಆದರೆ, ಕಾವೇರಿ ನ್ಯಾಯಾಧೀಕರಣದಲ್ಲಿ ಎಷ್ಟು ಹಂಚಿಕೆಯಾಗಿದೆಯೆಂದರೆ, 270 ಟಿ.ಎಂ.ಸಿ. ನೀರು ಹಂಚಿಕೆಯಾಗಿರುತ್ತದೆ. ಈ ಬಗ್ಗೆ ಮೊನ್ನೆಯ ದಿವಸ ಪುನಃ ನ್ಯಾಯಾಧೀಕರಣ ತೀರ್ಪು ಬಂದಿದ್ದು, ಪುನಃ 14 ಟಿ.ಎಂ.ಸಿ. ನೀರು ಹೆಚ್ಚುವರಿಯಾಗಿ ಹಂಚಿಕೆಯಾಗಿರುತ್ತದೆ. Subject to correction. ಅಂದರೆ, 284 ಟಿ.ಎಂ.ಸಿ. ನೀರು ಕಾವೇರಿ ನದಿ ಯೋಜನೆಯಿಂದ ಹಂಚಿಕೆಯಾಗಿರುತ್ತದೆ. ಈ ಎರಡೂ ನದಿಗಳು ಕನ್ನಡಾಂಬೆಯ ಎರಡು ಕಣ್ಣುಗಳಿದ್ದಂತೆ. ಕಾವೇರಿ ನದಿ ಒಂದು ಕಣ್ಣಾದರೆ, ಕೃಷ್ಣೆ ಇನ್ನೊಂದು ಕಣ್ಣು. ಹಾಗ್ಗಾಗಿ, ಒಂದು ಕಣ್ಣಿಗೆ ಬೆಣ್ಣೆ,ಮತ್ತೊಂದು ಕಣ್ಣಿಗೆ ಸುಣ್ಣ ಎಂದು ಆಗಬಾರದು. ಕಾವೇರಿ ಮತ್ತು ಕೃಷ್ಣೆ ಎರಡೂ ನದಿಗಳು ನಮ್ಮ ರಾಜ್ಯದ ನದಿಗಳೇ. ಆ ಎರಡು ನದಿಗಳಿಂದಲೇ ನಮ್ಮ ನಾಡು ಉದ್ಧಾರವಾಗುವಂಥದ್ದು. ಆದರೆ, ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಒಟ್ಟಾರೆಯಾಗಿ 904 ಟಿ.ಎಂ.ಸಿ. ನೀರು ಎಂದರೆ ಕಾವೇರಿ ನದಿ ಯೋಜನೆಗಿಂತಲೂ ಸುಮಾರು ಮೂರುವರೆ ಪಟ್ಟು ನೀರು ಬಳಕೆಯಾಗುತ್ತದೆ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಇವೊತ್ತಿನ ದಿವಸ ನಾವು ಮೈಸೂರು ಮಹಾರಾಜರನ್ನು ನೆನಪು ಮಾಡಿಕೊಳ್ಳಬೇಕು. ಏಕೆಂದರೆ, ಮೈಸೂರಿನ ಮಹಾರಾಜರು ತಮ್ಮ ಅರಮನೆಯಲ್ಲಿದ್ದಂತಹ ಬಂಗಾರ, ಬೆಳ್ಳಿ, ವಜ್ರ, ವೈಡೂರ್ಯವನ್ನು ಒತ್ತೆ ಇಟ್ಟು ಕನ್ನಂಬಾಡಿ ಅಣೆಕಟ್ಟನ್ನು ಕಟ್ಟಿಸಿದರು. ಇದರಿಂದಾಗಿ, ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಪೂರ್ವದಲ್ಲಿಯೇ ಕಾವೇರಿ ಭಾಗ ಅಭಿವೃದ್ಧಿ ಹೊಂದಿರುತ್ತದೆ. ಆದರೆ, ಕೃಷ್ಣಾ ಮೇಲ್ದಂಡೆ ಯೋಜನೆಗೆ 1964ರಲ್ಲಿ ಅಡಿಗಲ್ಲು ಹಾಕಿ, 2013ಕ್ಕೆ ಅಂತಿಮ ತೀರ್ಪು ಬಂದಿದ್ದು, 2021ರಲ್ಲಿಯೂ ಸಹ ನಾವು ಇದೇ ರೀತಿ ಇದ್ದೇವೆ ಎಂದರೆ, ಜನಸಾಮಾನ್ಯರು ಜನಪ್ರತಿನಿಧಿಗಳಾದಂತಹ ನಮ್ಮನ್ನು ಹೇಗೆ ಸುಮ್ಮನೆ ಬಿಟ್ಟಿದ್ದಾರೆಂದು ಗೊತ್ತಾಗುತ್ತಿಲ್ಲ. ಇಲ್ಲಿಯವರೆಗೂ ಅವರು ನಮ್ಮನ್ನು file ಮೇಲೆ ತೆಗೆದುಕೊಂಡಿರುವುದಿಲ್ಲ. ಒಂದು ವೇಳೆ ಅದನ್ನು ತೆಗೆದುಕೊಂಡಿದ್ದರೆ ನಮ್ಮ ಪರಿಸ್ಥಿತಿ ಏನಾಗುತ್ತಿತ್ತು?

(ಮುಂದು)

**(1214) 21.12.2021 3.40 YL-VK** **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್ (ಮುಂದು):-**

ನಾವು ಸಹ ಅಧಿಕಾರ ನಡೆಸಿಯೇ ಬಂದಿರುವುದು. ನಾನು ಪಕ್ಷ ಹಿಡಿದು ಮಾತನಾಡುವುದಕ್ಕೆ ಹೋಗುವುದಿಲ್ಲ, ಪಕ್ಷಾತೀತವಾಗಿಯೇ ಮಾತನಾಡಬೇಕಾಗುತ್ತದೆ. ನಾನು ಪಕ್ಷ ಹಿಡಿದು ಮಾತನಾಡಿದರೆ ಆಮೇಲೆ ಮಾನ್ಯ ಎನ್.ರವಿಕುಮಾರ್‌ರವರು ಮಾತನಾಡುತ್ತಾರೆ.

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರ ಧ್ವನಿಗೆ ನಾವು ಶಕ್ತಿ ಕೊಡಬೇಕಾಗುತ್ತದೆ.

**ಡಾ|| ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಡೀ ಸದನದಲ್ಲಿ ಮೊಟ್ಟಮೊದಲ ಬಾರಿಗೆ ಮಾನ್ಯ ವಿರೋಧ ಪಕ್ಷದ ನಾಯಕರು 'ನಮ್ಮ ನಡೆ, ಕೃಷ್ಣಾ ಕಡೆಗೆ' ಎಂದು ಘೋಷಣೆ ಮಾಡಿದವರಾಗಿದ್ದು, 50 ಸಾವಿರ ಕೋಟಿ ರೂಪಾಯಿ ಖರ್ಚು ಮಾಡುತ್ತೇವೆ ಎಂದು ಅವರೇ ವಾಗ್ದಾನ ಮಾಡಿದ್ದರು. ಒಂದು ವೇಳೆ ಮಾಡಲಿಲ್ಲವೆಂದರೆ, ಕೃಷ್ಣಾ ನಮ್ಮನ್ನು ಕ್ಷಮಿಸುವುದಿಲ್ಲ ಎಂದು ಅವರೇ ವಾಗ್ದಾನ ಮಾಡಿದ್ದರು. ಆದರೆ, ಇವತ್ತು ಯಾವುದೇ ಸರ್ಕಾರ ಅಧಿಕಾರದಲ್ಲಿ ಇರಲಿ ಎಂದು ಭಾಷಣ ಮಾಡಿದರೆ ನಮ್ಮ ಗತಿಯೇನು?

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾವು ನ್ಯಾಯ ಒದಗಿಸಿಕೊಡುತ್ತೇವೆ. ಯಾವುದೇ ಪಕ್ಷದ ಸರ್ಕಾರ ಅಧಿಕಾರದಲ್ಲಿರಲಿ ಆ ಭಾಗದ ಜನರಿಗೆ ನ್ಯಾಯ ಒದಗಿಸಿಕೊಡುತ್ತೇವೆ. ನಾವು ಜನರ ಆಶೀರ್ವಾದ ಪಡೆದು ಇಲ್ಲಿಗೆ ಬರುವ ಉದ್ದೇಶವೇನು? ಯಾರು ನಮಗೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆಶೀರ್ವಾದ ಮಾಡಿ ಕಳುಹಿಸಿಕೊಟ್ಟಿದ್ದಾರೆ, ಅವರ ಕಲ್ಯಾಣಕ್ಕಾಗಿಯೇ ಇಲ್ಲಿ ಬಂದು ನಿಂತಿರುವುದು. ಇವತ್ತು ಬೆಳಗಾಂ ಜಿಲ್ಲೆಯಲ್ಲಿದ್ದೇವೆ, ನಾಳೆ ಬೆಂಗಳೂರು ಜಿಲ್ಲೆಯಲ್ಲಿ ಇರುತ್ತೇವೆ.

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನೀರಾವರಿ ಸಚಿವರು, ಅಧಿಕಾರಿಗಳು ಸದನದಲ್ಲಿರುತ್ತಾರೆ ಎಂದು ಹೇಳಲಾಗಿತ್ತು. ಆದರೆ, ಯಾರೂ ಇಲ್ಲ.

**ಶ್ರೀ ಬಿ.ಸಿ.ಪಾಟೀಲ್:-** ನಾವು ಇದ್ದೇವೆ ಅಲ್ಲವೇ?

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಅವರನ್ನು ಕಟ್ಟಿಕೊಂಡು ನಾವು ಏನು ಮಾಡುವುದು? ನೀರಾವರಿ ಸಚಿವರು ಇರಬೇಕು ಅಲ್ಲವೇ?

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ ತಮ್ಮ ಮಾತನ್ನು ಮುಂದುವರೆಸಿ. ಮಾನ್ಯ ಸದಸ್ಯರೆ ತಮಗೆಲ್ಲಾ ಮಾತನಾಡಲು ಅವಕಾಶ ಬೇಕಾಗಿದ್ದರೆ ಸುಮ್ಮನೆ ಕುಳಿತುಕೊಳ್ಳಿ. ಇಲ್ಲದಿದ್ದರೆ ಹೀಗೆಯೇ ಸಮಯ ವ್ಯಯವಾಗಿ ಸಂಜೆಯಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತಕ್ಕೆ ಒಂದು ಲಕ್ಷ ಮೂವತ್ತೂರು ಸಾವಿರ ಎಕರೆ ಜಾಗವನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿದೆ. ಅದರ ಜೊತೆಗೆ 22 ಹಳ್ಳಿಗಳನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿದೆ. ಈ ಹಿಂದೆ ಎರಡು ಲಕ್ಷ ಎಪ್ಪತ್ತೂರು ಸಾವಿರ ಎಕರೆ ಜಾಗವನ್ನು ಸ್ವಾಧೀನಪಡಿಸಿಕೊಳ್ಳಲಾಗಿತ್ತು ಹಾಗೂ 1 ಮತ್ತು 2ನೇ ಹಂತಕ್ಕೆ 176 ಹಳ್ಳಿಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ನೀರಾವರಿ ಸಚಿವರಾಗಿದ್ದ ಸಂದರ್ಭದಲ್ಲಿ ದಿನಾಂಕ: 24.01.2012 ರಲ್ಲಿ 3ನೇ ಹಂತದ ಯೋಜನಾ ವೆಚ್ಚ ಎಷ್ಟೆಂದರೆ, ಹದಿನೇಳು ಸಾವಿರದ ಎರಡು ನೂರ ಏಳು ಕೋಟಿ ರೂಪಾಯಿಯಾಗಿತ್ತು. ನಂತರ ಅದನ್ನು ಪರಿಷ್ಕರಣೆ ಮಾಡಲಾಗುತ್ತದೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿರುವ ಕುರಿತು ನಾನು ಹೇಳಬಹುದೇ?

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಬೇಡ. ಅವರು ಮಾತನಾಡಲು ಮುಂದಿನ ಸಲ ವಿರೋಧ ಪಕ್ಷದ ಕಡೆಗೆ ಬರುತ್ತಾರೆ, ಆಗ ಮಾತನಾಡಲಿ.

**ಶ್ರೀ ಗೋವಿಂದ ಎಂ.ಕಾರಜೋಳ (ಬೃಹತ್ ಹಾಗೂ ಮಧ್ಯಮ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಜಾಗ ಅವರಿಗೆ ಫಿಕ್ಸ್ ಇರುತ್ತದೆ.

**(ಈ ಹಂತದಲ್ಲಿ ಸದನವು ನಗೆಗಡಲಿನಲ್ಲಿ ತೇಳಿತು)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು ಇಲ್ಲಿಯೇ ಖುಷಿಯಾಗಿದ್ದೇವೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಹೊರಗಿನ ಪರಿಸ್ಥಿತಿಯನ್ನು ನೋಡಿದರೆ ನಮಗೆ ಈ ಜಾಗವೇ ಚೆನ್ನಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಆಳುವ ಪಕ್ಷ ಮತ್ತು ಪ್ರತಿಪಕ್ಷ ಒಂದೇ ನಾಣ್ಯದ ಎರಡು ಮುಖಗಳು ಇದ್ದ ಹಾಗೆ ರಥದ ಎರಡು ಚಕ್ರ ಇದ್ದ ಹಾಗೆ. ಇಲ್ಲಿ ಇರುವುದರಿಂದ ನಮಗೆ ಹೆಚ್ಚು ಸವಲತ್ತು ಇದೆ. ಆದರೆ, ಅವರಿಗೆ ಅಷ್ಟು ಸವಲತ್ತು ಇಲ್ಲ.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅದೇ ಅವರಿಗೆ ಹೊಟ್ಟೆ ಕಿಚ್ಚು ಆಗಿರಬೇಕು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರಿಗೆ ಹೊಟ್ಟೆ ಕಿಚ್ಚು ಇರಬಹುದು. ವಿರೋಧ ಪಕ್ಷದ ಕಡೆಗೆ ಯಾವಾಗ ಹೋಗುತ್ತೇವೆ ಎಂದು ಯೋಚನೆಯಾಗಿರಬೇಕು.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರು ಆ ಕುರ್ಚಿಯಲ್ಲಿ ಇರುವುದನ್ನು ನೋಡಿ ಹೊಟ್ಟೆ ಕಿಚ್ಚು ಪಡುತ್ತಿದ್ದರಿಂದಲೇ ಇವತ್ತು ಆ ಕುರ್ಚಿಯಿಂದ ತೆಗೆದುಬಿಟ್ಟಿರಬೇಕು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸುಮ್ಮನೆ ಇರಿ. ಮತ್ತೆ ಗಮನವನ್ನು ಬೇರೆ ಕಡೆಗೆ ಸೆಳೆಯುವುದು ಬೇಡ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ ತಮ್ಮ ಮಾತನ್ನು ಮುಂದುವರೆಸಿ. ಬಹಳಷ್ಟು ಜನ ಈ ವಿಷಯದ ಮೇಲೆ ಮಾತನಾಡುವವರು ಇದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, 2012ನೇ ಸಾಲಿನಲ್ಲಿ ಪರಿಷ್ಕರಣೆ ಮಾಡಿದಾಗ ರೂ.51,148.94 ಕೋಟಿ ಆಗಿತ್ತು. ನಾನು ಕಳೆದ ಅಧಿವೇಶನದಲ್ಲಿ ಮಾತನ್ನಾಡಿದಾಗ ಜಲಸಂಪನ್ಮೂಲ ಸಚಿವರು ಮಾನ್ಯ ಶ್ರೀ ಗೋವಿಂದ ಎಂ.ಕಾರಜೋಳರವರು ಸುಮಾರು ರೂ.51.00 ಸಾವಿರ ಕೋಟಿ ಆಗುವುದಿಲ್ಲ, ಇವತ್ತು ಕೈಗೆತ್ತಿಕೊಂಡರು ಸುಮಾರು ರೂ.60.00 ಸಾವಿರ ಕೋಟಿ ಆಗುತ್ತದೆ ಎನ್ನುವಂಥ ಮಾತನ್ನು ಹೇಳಿದರು. 2012ನೇ ಸಾಲಿನಲ್ಲಿ ಸುಮಾರು ರೂ.51.00 ಸಾವಿರ ಕೋಟಿ ಆಗಿತ್ತು. 2021ನೇ ಸಾಲಿನಲ್ಲಿ ರೂ.60.00 ಸಾವಿರ ಕೋಟಿ ಆಗುತ್ತದೆ ಎಂದು ಹೇಳಿದ ಮಾತನ್ನು ಸ್ವೀಕಾರ ಮಾಡುತ್ತೇನೆ. ಇಷ್ಟು ಬೃಹತ್ ಯೋಜನೆ ಇದ್ದಾಗಿದ್ದು, ಮೊದಲನೆಯ ಹಾಗೂ ಎರಡನೆಯ ಹಂತದಲ್ಲಿ 15 ಲಕ್ಷದ 47 ಸಾವಿರ 500 ಎಕರೆ ನೀರಾವರಿಯಾಗಿತ್ತು. ಮೂರನೆಯ ಹಂತದಲ್ಲಿ 14 ಲಕ್ಷದ 85 ಸಾವಿರ 113 ಎಕರೆ ನೀರಾವರಿ ಆಗಬೇಕಾಗಿದ್ದು, ಒಟ್ಟು 30 ಲಕ್ಷದ 32 ಸಾವಿರದ 613 ಎಕರೆ ನೀರಾವರಿಯಾಗಬೇಕಾಗಿದೆ. ಮೊದಲನೆ ಮತ್ತು ಎರಡನೆಯ ಹಂತದಲ್ಲಿ ಎಷ್ಟು area irrigable ಇದೆ, ಅಷ್ಟೇ ರಸ್ತೆಗಳು ಮೂರನೆಯ ಹಂತದಲ್ಲಿ ಇದ್ದು, 22 ಹಳ್ಳಿಗಳನ್ನು ಹಾಗೂ ಒಂದು ಲಕ್ಷದ ಎಪ್ಪತ್ತೂರು ಸಾವಿರದ ಜಮೀನು ಸ್ವಾಧೀನಪಡಿಸಿಕೊಳ್ಳಬೇಕಾಗಿದೆ. ಸುಮಾರು 80 ಸಾವಿರ ಮನೆಗಳು ಮುಳುಗಡೆಯಾಗಿತ್ತು. ಆದರೆ, ಈಗ ಸುಮಾರು 10 ಸಾವಿರ ಮನೆಗಳು ಮುಳುಗಡೆಯಾಗಿರಬಹುದು. ಆದರೂ ಬಹಳ ಕಡಿಮೆ ಆಗಿದೆ. ಜೊತೆಗೆ ಈಗಾಗಲೇ ಅಣೆಕಟ್ಟನ್ನು ಕಟ್ಟಿ ಕೆಲಸವೂ ಪೂರ್ಣಗೊಂಡಿರುತ್ತವೆ. 524.256 meter ಎತ್ತರಕ್ಕೆ ಅಣೆಕಟ್ಟನ್ನು ನಿರ್ಮಿಸಲು ತಗಡು soldering ಮಾಡಿ foundation ಎಲ್ಲಾ ಕೆಲಸವೂ ಪೂರ್ಣಗೊಂಡಿದ್ದು, ಆಲಮಟ್ಟಿ ಜಲಾಶಯದ ಅಣೆಕಟ್ಟನ್ನು ಎತ್ತರಕ್ಕೆ ತರಲು ಬಾಕಿ ಉಳಿದಿರುವ ಮೊತ್ತ ಕೇವಲ ರೂ.5.00 ಕೋಟಿ ಮಾತ್ರ ಇದ್ದು, ಕೇವಲ 15 ದಿವಸಗಳೊಳಗೆ ಮುಗಿಯುವಂಥ ಬಾಕಿ ಕೆಲಸವಾಗಿದೆ. ನಾನು ಏನು ಇಂಜಿನಿಯರ್ ಅಲ್ಲ, ಅಂದಾಜು ಮೊತ್ತವನ್ನು ಹೇಳುತ್ತಿದ್ದೇನೆ ಅಷ್ಟೇ. ಈಗಾಗಲೇ ಕಟ್ಟು ಮಾಡಿ ಬಿಟ್ಟಿರುವ ತಗಡು ಅಲ್ಲಿಯೇ ಇದೆ, ಅದನ್ನು ತೆಗೆದು, ...

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಇನ್ನೂ ಸುಮಾರು 20.00 ಕೋಟಿಗಳು ಬೇಕಾಗುತ್ತದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ರೂ.50.00 ಕೋಟಿ ಆದರೂ ಏನು ತೊಂದರೆ ಇಲ್ಲ. ಆ ಕೆಲಸವನ್ನು ಪೂರ್ಣಗೊಳಿಸಬೇಕು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಅಣೆಕಟ್ಟನ್ನು ಎತ್ತರ ಮಾಡುವುದು ದೊಡ್ಡ ವಿಚಾರವಲ್ಲ. ಅದನ್ನು ಎತ್ತರ ಮಾಡಲು ಹೋದರೆ, ನೀರು ಹೊರಗೆ ಬಂದು ಅಲ್ಲಿ ವಾಸವಾಗಿರುವ ಜನರು ಮುಳುಗಡೆಯಾಗುತ್ತಾರೆ. ಹಾಗಾಗಿ ಮೊದಲು ಅಲ್ಲಿನ ಜನರನ್ನು ಸ್ಥಳಾಂತರಿಸಿ, ಆಮೇಲೆ ಅಣೆಕಟ್ಟನ್ನು ಎತ್ತರ ಮಾಡಬೇಕು. ಇಲ್ಲದಿದ್ದರೆ ಅಲ್ಲಿ ವಾಸವಾಗಿರುವ ಜನರನ್ನು ಸಾಯಿಸಿದ ಹಾಗೆ ಆಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಹೌದು. ಮಾನ್ಯ ಸದಸ್ಯರು ಏನಾಗುತ್ತದೆ ಎಂಬುದು ತಿಳಿದಿದೆ. ಸುಮಾರು 20.00 ಕೋಟಿ ಎಂದರೆ ಅಂತಹ ದೊಡ್ಡ ಮೊತ್ತವೇನು ಅನಿಸುವುದಿಲ್ಲ ಅಲ್ಲವೇ? ಅದಕ್ಕಾಗಿ ನನ್ನ ಅಭಿಪ್ರಾಯವೇನೆಂದರೆ, ಅಷ್ಟು ಕಡಿಮೆ ವೆಚ್ಚದಲ್ಲಿ ಅಣೆಕಟ್ಟನ್ನು ಎತ್ತರಕ್ಕೆ ನಿರ್ಮಿಸಲು ಸಾಧ್ಯ ಇದೆ. ಈಗಾಗಲೇ ಹೇಳಿದ ಹಾಗೆ ಮೂರನೆ ಹಂತದ ಯೋಜನೆಗೆ ಸಂಬಂಧಿಸಿದಂತೆ, ಅಂದಾಜು ರೂ.60.00 ಕೋಟಿಯಾಗಿದ್ದು, ಈಗಾಗಲೇ ಒಂದು ಮತ್ತು ಎರಡನೆಯ ಹಂತ ಮುಗಿದಿದೆ. ಹಾಗಾಗಿ ರೂ.60.00 ಸಾವಿರ ಕೋಟಿ ವೆಚ್ಚ ಮಾಡಿದರೆ ಹದಿನೈದು ಲಕ್ಷ ಎಕರೆ ನೀರಾವರಿಯಾಗುತ್ತದೆ. 07 ಜಿಲ್ಲೆಗಳ ಜನರು ಖುಷಿಪಡುತ್ತಾರೆ. ಇದನ್ನು ಮಾಡಲು ಏನು ತೊಂದರೆ ಎಂದು ನನಗೆ ಅರ್ಥವಾಗುತ್ತಿಲ್ಲ. ಸರ್ಕಾರದಲ್ಲಿರುವ ಅಧಿಕಾರಿಗಳು ಎಷ್ಟು ಮಂದಿ ಇದ್ದಾರೆ ಎಂಬುದನ್ನು ತಾವೇ ನೋಡಿ. ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಮೂರನೆ ಹಂತದ ಯೋಜನೆಯಲ್ಲಿ ಪ್ರಾರಂಭಿಸಿ ಕೆಲಸವನ್ನು ಮುಗಿಸಲು ಆಯುಕ್ತರಿಂದ ಹಿಡಿದು ಸಿಬ್ಬಂದಿಯವರೆಗೂ ಒಟ್ಟು ಮಂಜೂರಾದ ಹುದ್ದೆಗಳು 855, ಇದರಲ್ಲಿ ಭರ್ತಿಯಾದ ಹುದ್ದೆಗಳು 395, ಖಾಲಿ ಹುದ್ದೆಗಳು 460. ಅಂದರೆ ಶೇ.58 ರಷ್ಟು ಹುದ್ದೆಗಳು ಖಾಲಿ ಇವೆ. ಅದರ ಅಂಕಿಸಂಖ್ಯೆಗಳು ನನ್ನ ಹತ್ತಿರ ಇದೆ. ಒಂದೆರಡೂ ಮೂರು ಹುದ್ದೆಗಳು ಹೆಚ್ಚು-ಕಡಿಮೆ ಆಗಿರಬಹುದು.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಮೊನ್ನೆ ದಿವಸ ಸುಮಾರು 190 ಮಂದಿ ಅಸಿಸ್ಟೆಂಟ್ ಇಂಜಿನಿಯರ್, ಜೂನಿಯರ್ ಇಂಜಿನಿಯರ್ ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ಮೀಸಲಾತಿ ಸಿಗದ ಪ್ರಯುಕ್ತ ಲೆಕ್ಕಹಾಕಿ ನೇಮಕ ಮಾಡಲಾಗಿದೆ. ಅದು ಸಹ ಮಾನ್ಯ ಸದಸ್ಯರ ಲೆಕ್ಕಕ್ಕೆ ಸೇರ್ಪಡೆಗೊಳ್ಳಲು ಬರುತ್ತವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹುದ್ದೆಗಳನ್ನು ಭರ್ತಿ ಮಾಡಲಿ. ಆದರೆ, ನನ್ನ ಉದ್ದೇಶವೇನೆಂದರೆ, ಪ್ರತಿ ವರ್ಷ ಸುಮಾರು ಶೇ.58 ರಷ್ಟು ಹುದ್ದೆಗಳು ಖಾಲಿ ಇದ್ದಾಗ ಇಂತಹ ಬೃಹತ್ ಯೋಜನೆ, ಉತ್ತರ-ಕರ್ನಾಟಕಕ್ಕೆ ಫಲಪ್ರದವಾಗುವಂಥ ಯೋಜನೆ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಇದ್ದಾಗಿದ್ದು, ಸುಮಾರು 15 ಲಕ್ಷ ಎಕರೆ ನೀರಾವರಿಯಾಗುವಂಥ ಬೃಹತ್ ಯೋಜನೆಗೆ ಕುರ್ಚಿಯಲ್ಲಿ ಅಧಿಕಾರಿಗಳು ಇರಬೇಕು ಅಲ್ಲವೇ? ಮಂಜೂರಾದ 855 ಹುದ್ದೆಗಳಲ್ಲಿ, ಇದರಲ್ಲಿ ಭರ್ತಿಯಾದ ಹುದ್ದೆ 395. ಅದರಲ್ಲಿಯು ಆಯುಕ್ತರ ಹುದ್ದೆ ಏನಿದೆ, ಅದು ಖಾಯಂ ಆಗಿಲ್ಲವೆಂದು ಅನಿಸುತ್ತದೆ, ಪ್ರಭಾರ ಇರಬೇಕು.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಕೆ.ಪಿ.ಎಸ್.ಸಿ. ಮೂಲಕ ಆಯುಕ್ತರ ಹುದ್ದೆಯನ್ನು ಖಾಯಂ ನೇಮಕ ಮಾಡಲಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಕೃಷ್ಣಾ ಮೇಲ್ದಂಡೆ ಯೋಜನೆಯ ಅಧಿಕಾರಿಗಳು ಏನಿದ್ದಾರೆ, ಅವರು ಸಹ ಪ್ರಭಾರ ಇರಬೇಕು. ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್. ಆರ್.ಟಿ.ಸಿ. ನವರು ಇರಬೇಕೆಂದು ನನ್ನ ಭಾವನೆ.

(ಮುಂದು)

**(1215) 21-12-2021 / 3.50 / SK-VK** **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಗೋವಿಂದ ಎಂ ಕಾರಜೋಳ (ಬೃಹತ್ ಹಾಗೂ ಮಧ್ಯಮ ನೀರಾವರಿ, (ಜಲ ಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೇ, in-charge ಏನಾಗಿದೆ ಎಂದರೆ,

**ಶ್ರೀ ಎಸ್.ಆರ್. ಪಾಟೀಲ್:-** ಕೆ.ಎಸ್.ಆರ್.ಟಿ.ಸಿ ಎಂ.ಡಿ. ಯವರು ಅಲ್ಲಿ ಇದ್ದಾರೆ ಎಂಬುದು ನನ್ನ ಭಾವನೆ.

**ಶ್ರೀ ಗೋವಿಂದ ಎಂ ಕಾರಜೋಳ:-** ಆರು ವರ್ಷ ತಮ್ಮ ಕಾಲದಲ್ಲಿ, ಅಲ್ಲಿ ಏನೊಂದು ಚಟುವಟಿಕೆಗಳು ಆಗಲಿಲ್ಲ. ಹೀಗಾಗಿ ಹುದ್ದೆಗಳು ಖಾಲಿ ಉಳಿದಿವೆ. ಈಗ ಅದನ್ನು ಮಾಡುತ್ತೇವೆ. ತಾವು ನೋಡಿ.

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಮಗೆ ತಮ್ಮ ಮೇಲೆ ವಿಶ್ವಾಸವಿದೆ. ತಾವು ನಮ್ಮ ಜಿಲ್ಲೆಯ ಪಕ್ಕದ ತಾಲ್ಲೂಕಿನವರು. ತಾವು ಸಚಿವರಾಗಿರುವುದರಿಂದ ನಮಗೆ ಬಹಳ ಭರವಸೆ ಬಂದಿದೆ. ಈಗ ನೇಮಾತಿ ಮಾಡುತ್ತೀರಾ. ಈ ಸಂದರ್ಭದಲ್ಲಿ ಇದು ಕುತ್ತಿಗೆಗೆ ಬಂದಿದೆ. ಮಾನ್ಯ ಸಭಾಪತಿಯವರೇ, ನಾನು ಒಂದು ವಿಚಾರವನ್ನು ಸದನದ ಗಮನಕ್ಕೆ ತರುತ್ತೇನೆ. ತೆಲಾಂಗಣ ರಾಜ್ಯ ನಿನ್ನೆ ಹುಟ್ಟಿ, ಇವತ್ತು ಕಣ್ಣು ತೆರೆದಿದೆ. ಹೊಸ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ರಾಜ್ಯವಾದ ತೆಲಾಂಗಣ ರಾಜ್ಯದಲ್ಲಿ ಒಂದು Kaleshwaram Lift Irrigation Project, ಇದು ನೋಡಿ ಹೇಗಿದೆ ಎಂದರೆ, "The Kaleshwaram Lift Irrigation Project is a multi-purpose irrigation project on the Godavari River in Kaleshwaram, Bhupalpally, Telangana, India. Currently the world's largest multi-stage lift irrigation project." This is the World's biggest lift irrigation project. ಇದರ ಉದ್ದೇಶ ನೀರಾವರಿ ಮಾಡುವುದಷ್ಟೆ ಅಲ್ಲ. ವಿದ್ಯುತ್ ಉತ್ಪಾದನೆ ಮತ್ತು ಟ್ರಾನ್ಸ್‌ಪೋರ್ಟ್‌ಗೆ ಸಹಾಯವಾಗುವಂತಹ ಒಂದು ಬೃಹತ್ ಯೋಜನೆಯಾಗಿದೆ. ಈ ಯೋಜನೆಯ ವೆಚ್ಚ, ಮಾನ್ಯ ನಾರಾಯಣಸ್ವಾಮಿಯವರೇ, ತಾವು ಗಮನಿಸಬೇಕು. ಆರವತ್ತು ಸಾವಿರ ಕೋಟಿ ಎಂದ ಕೂಡಲೇ, ಇದು ರಾಷ್ಟ್ರೀಯ ಯೋಜನೆ ಮಾಡಬೇಕೆಂದು ನಮ್ಮ ಸಹೋದರರು ಮತ್ತು ನಮ್ಮ ತಾಲ್ಲೂಕಿನವರಾದ ಮಾನ್ಯ ನಿರಾಣಿಯವರು ಹೇಳಿದರು. ಆರವತ್ತು ಸಾವಿರ ಕೋಟಿಗೆ ಇವರೇನೂ ಮಾಡಿದ್ದಾರೆಂದರೆ, ಮಾನ್ಯ ನಾರಾಯಣಸ್ವಾಮಿಯವರೇ, ಯಾವ ಯೋಜನೆಯನ್ನು ಮಾಡಿಲ್ಲ. Kaleshwaram Lift Irrigation Project ಅನ್ನು ರಾಜ್ಯದ ಬೊಕ್ಕಸದಿಂದ ಮಾಡಿದ್ದಾರೆ. ಅದರ ವೆಚ್ಚ ಸುಮಾರು ಒಂದು ಲಕ್ಷ ಇಪ್ಪತ್ತು ಸಾವಿರ ಕೋಟಿ ರೂಪಾಯಿಗಳಾಗಿದೆ. ಇದು ಎಷ್ಟಿದೆ ಎಂದರೆ, ಸುಮಾರು ಆರವತ್ತು ಸಾವಿರ ಕೋಟಿ ರೂಪಾಯಿಗಳು. Is it not double? ಆಮೇಲೆ ಈ ಯೋಜನೆಯಿಂದ ಸುಮಾರು 14 ಲಕ್ಷ ಎಕರೆ ನೀರಾವರಿಯಾಗುವಂತಹ ಕ್ಷೇತ್ರವಾದರೆ, ಇದರ ಕಡೆ ತಾವು ಗಮನ ಕೊಡಿ. ನಮ್ಮ ರಾಜ್ಯದಲ್ಲಿ 14 ಲಕ್ಷ ಎಕರೆ ನೀರಾವರಿಯಾದರೆ, ಆ ರಾಜ್ಯದಲ್ಲಿ ಸುಮಾರು 28 ಲಕ್ಷ ಎಕರೆ ನೀರಾವರಿಯಾಗುತ್ತದೆ. ನಮ್ಮ ರಾಜ್ಯದಲ್ಲಿ ಏಳು ಜಿಲ್ಲೆಗಳಿಗೆ ಉಪಯೋಗವಾದರೆ, ತೆಲಾಂಗಣ ರಾಜ್ಯದ ಹದಿಮೂರು ಜಿಲ್ಲೆಗಳಿಗೆ ಈ ಯೋಜನೆ ಫಲಪ್ರದವಾಗಿದೆ. Kaleshwaram Lift Irrigation Project ಅನ್ನು ಯಾವಾಗ ಪ್ರಾರಂಭ ಮಾಡಿದರು? Construction began in the year 2016. ಈ ಯೋಜನೆ 2016ರಲ್ಲಿಯೇ ಪ್ರಾರಂಭವಾಗಿದೆ. ಮಾನ್ಯ ಬಿ.ಸಿ. ಪಾಟೀಲ್‌ರೇ, ನಮ್ಮ ರಾಜ್ಯ ಏಳು ಜಿಲ್ಲೆಗಳಿಗೆ ಈ ಯೋಜನೆ ಉಪಯೋಗವಾದರೆ, ತೆಲಾಂಗಣ ರಾಜ್ಯದ ಹದಿಮೂರು ಜಿಲ್ಲೆಗಳಿಗೆ ಯೋಜನೆಯೊಂದ ಫಲಪ್ರದವಾಗಿದೆ. ನಮ್ಮ ರಾಜ್ಯದ ಯೋಜನೆ ಸುಮಾರು ಆರವತ್ತು ಸಾವಿರ ಕೋಟಿ ರೂಪಾಯಿಗಳಾದರೆ, ತೆಲಾಂಗಣ ರಾಜ್ಯದ ಯೋಜನೆ ಸುಮಾರು ಒಂದು ಲಕ್ಷ ಇಪ್ಪತ್ತು ಸಾವಿರ ಕೋಟಿ ರೂಪಾಯಿಗಳು. ಇದು ಡಬಲ್.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಡಾ: ತೇಜಸ್ವಿನಿ ಗೌಡ ಅವರು ಸಭಾ ಪೀಠವನ್ನು ಅಲಂಕರಿಸಿದರು)**

ಈ ಯೋಜನೆ 2016ರಲ್ಲಿ ಪ್ರಾರಂಭವಾದರೆ, opening date 21-06-2019. It has been completed within a period of three years. Their project cost is double the Upper Krishna project third stage. ಇಲ್ಲಿ ಏಳು ಜಿಲ್ಲೆಗಳಿಗೆ ಫಲಪ್ರದವಾದರೆ, ಅಲ್ಲಿ ಹದಿಮೂರು ಜಿಲ್ಲೆಗಳಿಗೆ ಫಲಪ್ರದವಾಗುತ್ತದೆ. ನಮ್ಮ ರಾಜ್ಯ ಯಾವಾಗ ಹುಟ್ಟಿದೆ? ಆ ರಾಜ್ಯ ಯಾವಾಗ ಇದೆ ಎಂಬುದು ನೋಡಿ. ಸೀಮಾ ಆಂದ್ರ ಮತ್ತು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತೆಲಾಂಗಣ ರಾಜ್ಯವಾಗಿ ಮೊನ್ನೆ ತಾನೇ ಹುಟ್ಟಿವೆ. ಆರ್ಥಿಕವಾಗಿ ದುಸ್ಥಿತಿಯಲ್ಲಿವೆ ಎಂದು ನಾವು ಮಾತನಾಡುತ್ತೇವೆ. ಆಂಧ್ರಪ್ರದೇಶ ವಿಭಜನೆಯಾಯಿತು. ಆಂಧ್ರ ಮತ್ತು ತೆಲಾಂಗಣದ ಕಥೆ ಮುಗಿಯಿತು ಎಂದು ನಾನು ಬಹಳ ಜನರಿಂದ ಕೇಳಿದ್ದೇನೆ. Authenticated ಎಂದು ನಾನು ಹೇಳುವುದಿಲ್ಲ. ತೆಲಾಂಗಣ ರಾಜ್ಯವು ಈ ಯೋಜನೆಯನ್ನು 2016 ರಲ್ಲಿ ಪ್ರಾರಂಭ ಮಾಡಿ, 2019 ರೊಳಗೆ ಸುಮಾರು ಒಂದು ಲಕ್ಷ ಇಪ್ಪತ್ತು ಸಾವಿರ ಲಕ್ಷ ಕೋಟಿ ರೂಪಾಯಿಗಳ ಯೋಜನೆಯನ್ನು ಮೂರು ವರ್ಷಗಳಲ್ಲಿ ಮುಗಿಸಿದ್ದಾರೆ. ಹದಿಮೂರು ಜಿಲ್ಲೆಗಳಿಗೆ 28 ಲಕ್ಷ ಎಕರೆ ಜಾಗವನ್ನು ನೀರಾವರಿ ಮಾಡಿದ್ದಾರೆ. ಎಲ್ಲದರಲ್ಲಿ ನಮ್ಮ ರಾಜ್ಯ ಡಬಲ್ ಇದೆ. ಆ ರಾಜ್ಯದವರು ಮೂರು ವರ್ಷಗಳಲ್ಲಿ ಮುಗಿಸಿದ್ದಾರೆ. ಮಾನ್ಯ ಬಿ.ಸಿ. ಪಾಟೀಲ್‌ರವರೇ ತಮ್ಮ ಅವಧಿ ಎಷ್ಟು ಇದೆ? ಇನ್ನು ಒಂದೂವರೆ ವರ್ಷ ಇದೆ ಅಲ್ಲವೇ, ಈಗಿನ ಅವಧಿ.

**ಶ್ರೀ ಬಿ.ಸಿ.ಪಾಟೀಲ್ (ಕೃಷಿ ಸಚಿವರು):-** ಇನ್ನೂ ಒಂದೂವರೆ ವರ್ಷ ಅವಧಿ ಇದೆ.

**ಡಾ: ವೈ.ಎ.ನಾರಾಯಣಸ್ವಾಮಿ:-** ಇನ್ನು ಆರು ವರ್ಷ ಇದೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ನಾರಾಯಣಸ್ವಾಮಿಯವರೇ, ಸೂರ್ಯ-ಚಂದ್ರ ಎಲ್ಲಿಯ ತನಕ ಇರುತ್ತಾನೋ, ಅಲ್ಲಿಯ ತನಕ ತಾವು ಅಜರಾಮರಾಗಿರಿ. ಆದರೆ ಈ ಯೋಜನೆಯನ್ನು ಮುಗಿಸಿ ಎಂದು ನಾನು ಕೈಮುಗಿದು ಕೇಳಿಕೊಳ್ಳುತ್ತೇನೆ. ತೆಲಾಂಗಣ ರಾಜ್ಯದವರು ಸುಮಾರು ಒಂದು ಲಕ್ಷ ಇಪ್ಪತ್ತು ಸಾವಿರ ಕೋಟಿ ರೂಪಾಯಿಗಳ ಯೋಜನೆಯನ್ನು ಮುಗಿಸಿದರು. ಇನ್ನು ಒಂದೂವರೆ ವರ್ಷಗಳ ಕಾಲ ತಮ್ಮ ಸರ್ಕಾರ ಇದೆ. ಹಳೆ ರಾಜ್ಯ, well established State. Karnataka is number one in the Country ಎಂದು ಹೇಳುತ್ತೇವೆ. ತೆಲಾಂಗಣ ರಾಜ್ಯ ನಿನ್ನೆ ಹುಟ್ಟಿರುವಂತಹ ರಾಜ್ಯ. ಇನ್ನು ಅಂಬೆಗಾಲು ಇಟ್ಟಿರುವಂತಹ ಕೂಸು ಅದು. ಅವರು ಮೂರು ವರ್ಷಗಳಲ್ಲಿ ಯೋಜನೆ ಮುಗಿಸಿದರೆ, ತಾವು ಒಂದೂವರೆ ವರ್ಷದಲ್ಲಿ ಈ ಯೋಜನೆ ಮುಗಿಸುವುದಕ್ಕೆ ಏನು ತೊಂದರೆ ಇದೆ. ಮಾನ್ಯ ಸಭಾಪತಿಯವರೇ, ತಾವು ಹೇಳಿ, ತಾವು ಎಲ್ಲಾ ದೃಷ್ಟಿಯಿಂದ ಸಾಹಿತಿಕವಾಗಿ ತುಂಬಾ ಅಧ್ಯಯನ ಮಾಡಿದ್ದು, ತುಂಬಾ ಅನುಭವಸ್ಥರಿದ್ದೀರಿ. ಈ ಯೋಜನೆ ಆಗಬೇಕಲ್ಲ. ಇನ್ನು ಒಂದೂವರೆ ವರ್ಷ ಕಾಲ ಸರ್ಕಾರ ಇದೆ. ಈ ಯೋಜನೆಯನ್ನು ಮಾಡಬಹುದಲ್ಲ. What is the problem? ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ, ಬರೀ, this is a living example, 2016 ರಿಂದ 2019 ರಲ್ಲಿ ಮುಗಿಸಿರುವಂತಹ Kaleshwaram Lift Irrigation Project ಇದೆಯೆಲ್ಲಾ, ಅದು ಒಂದು ಲಕ್ಷ ಇಪ್ಪತ್ತು ಸಾವಿರ ಕೋಟಿ ರೂಪಾಯಿಗಳ ಯೋಜನೆಯಾಗಿದರೆ, ನಮ್ಮ ರಾಜ್ಯದ್ದು ಸುಮಾರು ಆರವತ್ತು ಸಾವಿರ ಕೋಟಿ ರೂಪಾಯಿಗಳ ಯೋಜನೆಯಾಗಿದೆ. ನಮ್ಮ ರಾಜ್ಯದ ಏಳು ಜಿಲ್ಲೆಗಳಿಗೆ ಈ ಯೋಜನೆಯಿಂದ ಫಲಪ್ರದವಾದರೆ, ತೆಲಾಂಗಣ ರಾಜ್ಯದ ಹದಿಮೂರು ಜಿಲ್ಲೆಗಳಿಗೆ ಯೋಜನೆ ಫಲಪ್ರದವಾಗುವಂತಹದ್ದು. ನಾವು ಹದಿನಾಲ್ಕು ಲಕ್ಷ ಎಕರೆಗೆ ನೀರಾವರಿ ಮಾಡಿದರೆ, ಅವರು ಇಪ್ಪತ್ತೆಂಟು ಲಕ್ಷ ಎಕರೆ ನೀರಾವರಿ

ಮಾಡುವಂತಹ ಯೋಜನೆಯನ್ನು ಮೂರು ವರ್ಷಗಳಲ್ಲಿ ಮುಗಿಸಿದ್ದಾರೆ. ಇನ್ನೂ ಒಂದೂವರೆ ವರ್ಷಗಳ ಕಾಲ ಈ ಯೋಜನೆ ಮುಗಿಸುವುದಕ್ಕೆ ಸರ್ಕಾರಕ್ಕೆ ಏನು ತೊಂದರೆ ಇದೆ? Karnataka is a well-established State. More than that, ಇವತ್ತು ಡಬಲ್ ಇಂಜಿನ್ ಸರ್ಕಾರವಿದು. ಕರ್ನಾಟಕ ರಾಜ್ಯದಲ್ಲಿ ಬಿ.ಜೆ.ಪಿ. ಸರ್ಕಾರ ಮತ್ತು ಕೇಂದ್ರದಲ್ಲಿ ಬಿ.ಜೆ.ಪಿ. ಸರ್ಕಾರವಿದೆ. Double Engine, most powerful Government.

**ಶ್ರೀ ಸಿ.ಎಂ. ಇಬ್ರಾಹಿಂ (ವಿಧಾನಸಭೆಯಿಂದ ಚುನಾಯಿತರಾದವರು):-** ಎರಡೂ ಇಂಜಿನ್‌ಗಳು ಒಂದೇ ಕಡೆ ಹೋಗುತ್ತಿಲ್ಲ. ಒಂದು ಇಂಜಿನ್ ಈ ಕಡೆ ಎಳೆದರೆ, ಆ ಇಂಜಿನ್ ಆ ಕಡೆ ಎಳೆಯುತ್ತಿದೆ. ಡಬ್ಬಿಗಳು ಮಧ್ಯೆದಲ್ಲಿ ಸಿಕ್ಕಿ ಹಾಕಿಕೊಂಡಿವೆ. ನಾಲ್ಕು ನಾಲ್ಕು ತಿಂಗಳಿಗೊಮ್ಮೆ ಇಂಜಿನ್ ಬದಲಾವಣೆ ಮಾಡಿದರೆ, ಹೇಗಿರುತ್ತದೆ?

**ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವರು):-** ಮಾನ್ಯ ಸಭಾಪತಿಯವರೇ, ಬರೀ ನಮ್ಮ ದೇಶದ . . .

**ಶ್ರೀ ಸಿ.ಎಂ. ಇಬ್ರಾಹಿಂ:-** ತಮ್ಮ ಇಂಜಿನ್ ಯಾವಾಗ ಬರುತ್ತದೆ ಎಂದು ನಾವು ಕಾಯುತ್ತಿದ್ದೇವೆ.

**ಶ್ರೀ ಎಸ್.ಆರ್. ಪಾಟೀಲ್:-**. ನಮಗೇಕೆ ಅದು ಬಿಡಿ.

**ವೈಸ್ ಛೇರ್ಮನ್:-** ಮಾನ್ಯ ಇಬ್ರಾಹಿಂ ಅವರೇ, ಇಂಜಿನ್ ಚಾಲನೆ ಮಾಡುವುದಕ್ಕೆ ಆಗುವುದಿಲ್ಲ. ಕೋಣಗಳ ಕಥೆ ಹೇಳಿದರೆ, ಚಾಲನೆ ಮಾಡಬಹುದು. ಇಂಜಿನ್ ಚಾಲನೆ ಮಾಡುವುದಕ್ಕಾಗುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು ಏನಾದರೂ ಹೇಳಿ, ಆ ಯೋಜನೆ ಮಾಡಿಸಬೇಕೆಂದಿದ್ದೇವೆ. ಸರ್ಕಾರ ಒಂದೂವರೆ ವರ್ಷದ ಅವಧಿ ಏನಿದೆ, ಆ ಒಂದೂವರೆ ವರ್ಷದ ಅವಧಿಯಲ್ಲಿ ಈ ಯೋಜನೆಯನ್ನು ಪೂರ್ತಿ ಮಾಡುವುದಕ್ಕೆ ಸಾಧ್ಯವಿದೆ. ಏಕೆಂದರೆ, Kaleshwaram Lift Irrigation Project ನಲ್ಲಿಯೂ ಅರ್ಧ, ಖರ್ಚಿನಲ್ಲಿಯೂ ಅರ್ಧ, ನೀರಾವರಿಯಲ್ಲಿಯೂ ಅರ್ಧ ಮತ್ತು ಜಿಲ್ಲೆಗಳು ಕಡಿಮೆ ಇದೆ. ನಾನು ಮಾನ್ಯ ಸಭಾಪತಿಯವರ ಮುಖಾಂತರ ಮನವಿ ಮಾಡುವುದೇನೆಂದರೆ, ನಾನು ಎರಡು ಕೈಜೋಡಿಸಿ ಪ್ರಾರ್ಥನೆ ಮಾಡುತ್ತೇನೆ. ನಾನು ಏನು ಮಾಡಬೇಕೆಂದು ಹೇಳಿ, ನಾನು ಸಾಷ್ಟಾಂಗ ನಮಸ್ಕಾರ ಮಾಡುತ್ತೇನೆ. ಆದರೆ ಈ ಯೋಜನೆಯನ್ನು ಮುಗಿಸಿ.

**ಶ್ರೀ ಮುರುಗೇಶ್ ಆರ್. ನಿರಾಣಿ:-** ಈ ಸದನಕ್ಕೆ ತಾವು ನಮಗಿಂತ ಹಿರಿಯವರಿದ್ದೀರಿ. ತಾವು ಒಳ್ಳೆಯ ಸಲಹೆಯನ್ನು ಕೊಡಿ ಮತ್ತು ತುಂಬಾ ಅನುಭವವುಳ್ಳವರಿದ್ದೀರಿ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಮುರುಗೇಶ್ ನಿರಾಣಿಯವರೇ, ಅದನ್ನೇ ಹೇಳುತ್ತಿದ್ದೇನೆ.

**ಶ್ರೀ ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, ತಾವು ಅಲಮಟ್ಟಿ ಡ್ಯಾಂ ಫೌಂಡೇಶನ್ ಹಾಕುವುದರಿಂದ ಹಿಡಿದು, ಅದರ ಉದ್ಘಾಟನೆಯಾಗುವವರೆಗೂ ಇದ್ದಂತಹವರು. ಎಲ್ಲಾ stage ನಲ್ಲಿಯೂ ಇದ್ದೀರಿ. ತಾವು ಕೂಡ ಸರ್ಕಾರದಲ್ಲಿ ಇದ್ದಂತಹವರು. ಅದರ ಡ್ಯಾಂ ಕಟ್ಟುವಾಗ, compensation ಕೊಡುವಂತಹ ಸಂದರ್ಭದಲ್ಲಿ...

**ಶ್ರೀ ಎಸ್.ಆರ್. ಪಾಟೀಲ್:-** ನಮ್ಮ ಸರ್ಕಾರ ಇದೆ ಎಂದು ಹೇಳಿದ್ದೇನೆ.

**ಶ್ರೀ ಮುರುಗೇಶ್ ಆರ್. ನಿರಾಣಿ:-** ಅವೊತ್ತಿನ ದಿವಸ ತಾವು ಇದ್ದಂತಹವರು. ಈ ರೀತಿ ಮಾಡಬೇಡಿ. ತಾವು ಸಲಹೆ ಮಾತ್ರ ಕೊಡಿ. ಎಲ್ಲರೂ ಸೇರಿಕೊಂಡು ಮಾಡೋಣ.

**ಶ್ರೀ ಎಸ್.ಆರ್. ಪಾಟೀಲ್:-** ನಾನು ಮನವಿ ಮಾಡಿಕೊಂಡರೆ, ತಪ್ಪು ಏನಿದೆ?

**ಶ್ರೀ ಮುರುಗೇಶ್ ಆರ್. ನಿರಾಣಿ:-** ತಾವು ಹಿರಿಯವರಿದ್ದೀರಿ. ಸಲಹೆ ಮಾತ್ರ ಕೊಡಿ.

**ವೈಸ್ ಛೇರ್ಮನ್:-** ಮಾನ್ಯ ಗೋವಿಂದ ಕಾರಜೋಳರವರು ಹಿರಿಯವರಿದ್ದಾಗ, ಮಾನ್ಯ ಎಸ್.ಆರ್. ಪಾಟೀಲ್‌ರವರು inspiring story ಅನ್ನು ತೆಲಾಂಗಣದ ಬಗ್ಗೆ ನಿದರ್ಶನ ಕೊಟ್ಟು ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುರುಗೇಶ್ ನಿರಾಣಿಯವರು ಬೃಹತ್ ಹಾಗೂ ಮಧ್ಯಮ ಕೈಗಾರಿಕೆಯ ಸಚಿವರಿದ್ದೀರಿ. ನಮಗೆ ಬಹಳ ಸಂತೋಷ. ಏಕೆಂದರೆ, ತಾವಿಬ್ಬರೂ ಸೇರಿ ಸುಮಾರು ನಲವತ್ತು ಲಕ್ಷ ಐವತ್ತು ಲಕ್ಷ ಎಕರೆ ಕೊಡುತ್ತೇನೆಂದರೆ, ತಮ್ಮ ಸಹೋದರರು ಈಗಾಗಲೇ ಮಾತನಾಡಿದರು. ನಲವತ್ತು-ಐವತ್ತು ಲಕ್ಷ ಎಕರೆ ನಿರೀಕ್ಷೆ ಮಾಡುತ್ತಾರೆ. ಏಕೆ ಮಾನ್ಯ ಮುರುಗೇಶ್ ನಿರಾಣಿಯವರೇ, ನಮ್ಮ ಕಡೆ ನೋಡುವುದಿಲ್ಲ ನೋಡಿ. ಮಾನ್ಯ ಮುರುಗೇಶ್ ನಿರಾಣಿಯವರೇ, ತಮ್ಮ ಬಗ್ಗೆ ಮಾತನಾಡುತ್ತಿದ್ದೇನೆ. ತಾವು ಹೇಳಿದ ಹಾಗೆ, ನಲವತ್ತು-ಐವತ್ತು ಲಕ್ಷ ಎಕರೆ ಎಂದು ಹೇಳಿದರಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಎಸ್.ಆರ್. ಪಾಟೀಲ್‌ರೇ, ಮಾನ್ಯ ಮುರುಗೇಶ್ ನಿರಾಣಿಯವರಿಗಿಂತ ಇವರ ಸಹೋದರರಾದ ಶ್ರೀ ಸಂಗಮೇಶ್ ಎನ್ನುವವರಿದ್ದಾರೆ. ಅವರು ನೀರಾವರಿಯ ಬಗ್ಗೆ ದೊಡ್ಡದಾಗಿ ಅಧ್ಯಯನ ಮಾಡಿ, ಒಂದು ವರದಿಯನ್ನೇ ಮಾಡಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಂಗಮೇಶ್‌ರವರ ಯೋಜನೆಯ ಬಗ್ಗೆ ಹೇಳಿದ್ದಾರೆ. ಕಾಳಿ ನದಿಯ ಜೋಡಣೆಯ ಬಗ್ಗೆ ನಾನು ಸ್ವಾಗತ ಮಾಡುತ್ತೇನೆ. ಆ ಯೋಜನೆಯಾಗಲಿ. ತಮ್ಮ ಜೊತ್ತೆಗೆ ನಾನು ಧ್ವನಿಗೂಡಿಸುತ್ತೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ತಾವು ಹೇಳಿರುವ ಪ್ರಾಜೆಕ್ಟ್ ಏನಾದರೂ ಅನುಷ್ಠಾನವಾಗಲಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಲಪ್ರಭಾ ಮತ್ತು ಘಟಪ್ರಭಾ ಅಣೆಕಟ್ಟುಗಳಿಗೆ ನೀರು ಬಂದರೆ, ನಮ್ಮ ಭಾಗ ಅಭಿವೃದ್ಧಿಯಾದರೆ, ಸಾಕು. ಅವರು ಒಳ್ಳೆಯ ಯೋಜನೆಯನ್ನು ಅಧ್ಯಯನ ಮಾಡಿ, ಒಳ್ಳೆಯ ಮಾಹಿತಿಯನ್ನು ಒಟ್ಟುಗೂಡಿಸಿದ್ದಾರೆ. ಮಾನ್ಯ ಇಬ್ರಾಹಿಂರವರು ನನಗೂ ಕೂಡ certificate ಕೊಟ್ಟರು.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರೇ ಒಂದು ನಿಮಿಷ yield ಆಗಿ. ಮಾನ್ಯ ಎಸ್.ಆರ್. ಪಾಟೀಲ್‌ರವರು ನಮ್ಮ ಜಿಲ್ಲೆಯವರು. ನಾವೆಲ್ಲರೂ ಅತ್ಯಂತ ಅತ್ಮೀಯರಿದ್ದೇವೆ.

**ಶ್ರೀ ಎಸ್.ಆರ್. ಪಾಟೀಲ್:-** ಅದರ ಬಗ್ಗೆ ಎರಡೂ ಮಾತಿಲ್ಲ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಹೆಚ್ಚು ಕಡಿಮೆ ಒಂದೇ ವಯಸ್ಸಿನ ಗುಂಪಿನವರು. ಮಾನ್ಯ ನಿರಾಣಿಯವರು ನಮಗಿಂತ ಕಿರಿಯವರಿದ್ದಾರೆ. ಆದರೆ ತಾವು ಒಂದು ಭರವಸೆಯನ್ನು ಇಟ್ಟುಕೊಳ್ಳಿ.

(ಮುಂದು)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(1216)21.12.2021/4.00/ಎಂ.ಎಂ-ಬಿ.ಎನ್.ಎಸ್ (ವೈಸ್ ಚೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಗೋವಿಂದ ಎಂ. ಕಾರಜೋಳ (ಮುಂದು):-**

ಕಾಂಗ್ರೆಸ್‌ನ 60 ವರ್ಷದ ಆಡಳಿತದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಪೂರ್ಣ ಮಾಡಿಲ್ಲ. ನಾವು ಪೂರ್ಣ ಮಾಡುತ್ತೇವೆಂದು ನಿಮಗೆ ಭರವಸೆ ಕೊಡುವುದಿಲ್ಲ. ಏಕೆಂದರೆ, ದೊಡ್ಡ ಪ್ರಾಜೆಕ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ಕೇಸ್ ಇದೆ. ಅದರ ಮಧ್ಯದಲ್ಲಿ ಹಿಂದೆ ನಾನು ನಿಮಗೊಂದು ಮಾತನ್ನು ಹೇಳಿದ್ದೆ. ಅದು ಜನವರಿ 10ನೇ ತಾರೀಖಿಗೆ ದಿನಾಂಕ ನಿಗದಿಯಾಗಿದೆ ಅದರ ವಿವರಕ್ಕೆ ಹೋಗುವುದು ಬೇಡ. ಒಂದು ಭರವಸೆಯನ್ನು ಕೊಡುತ್ತೇನೆ, ಖಂಡಿತವಾಗಿಯೂ ನಿಮಗಿಂತ ಹೆಚ್ಚು ಪ್ರೋಗ್ರೆಸ್ ಮಾಡುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಚಿವರೇ, ನೀವು ಹಾಗೆನ್ನಬೇಡಿ. ನೀವು ಮುಗಿಸುತ್ತೇವೆ ಎಂದು ಹೇಳಿದಿರಿ. Kaleshwaram project ಇದೆಯಲ್ಲಾ, ಅವರು 01 ಲಕ್ಷದ 20 ಸಾವಿರ ಕೋಟಿ ಪ್ರಾಜೆಕ್ಟನ್ನು ಮೂರು ವರ್ಷದಲ್ಲಿ ಮುಗಿಸಿದ್ದಾರಲ್ಲಾ, ನೀವು ಒಂದೂವರೆ ವರ್ಷದಲ್ಲಿ ಮುಗಿಸಿ, we are in no way inferior to Telangana, ಎಂದು ಸಾಬೀತು ಮಾಡಿ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ನಾನು ನಿಮಗೆ ಸೂಕ್ಷ್ಮವಾಗಿ ಹೇಳಿದೆ. ಜನವರಿ 10ನೇ ತಾರೀಖಿಗೆ ಪ್ರಕರಣವು ವಿಚಾರಣೆಗೆ ಬರುತ್ತಿದೆ. ನೋಡೋಣ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಕೆಲವು ವಿಚಾರಗಳನ್ನು ಮಾತನಾಡಬೇಕೋ, ಮಾತನಾಡಬಾರದೋ ಎಂದು ಯೋಚನೆ ಮಾಡುತ್ತಿದ್ದೇವೆ. ನಮ್ಮ ದಾಖಲೆಯಲ್ಲಿ ಏನೋ ಇರುತ್ತದೆ. ನಾಳೆ ಅದನ್ನು ನೀವು ಕೋರ್ಟ್‌ನಲ್ಲಿ ಸಾಕ್ಷಿಯಾಗಿ ಉಪಯೋಗ ಮಾಡಬಹುದು. ನಾವು ಬಹಳ ಜಾಗರೂಕತೆಯಿಂದ ಮಾತನಾಡಬೇಕಾಗಿದೆ.

**ಶ್ರೀ ಗೋವಿಂದ ಎಂ. ಕಾರಜೋಳ**:- ಮಾನ್ಯ ವಿರೋಧ ಪಕ್ಷದ ನಾಯಕರೇ, ಅದರ ಬಗ್ಗೆ ಚರ್ಚೆಗೆ ಹೋಗುವುದು ಬೇಡ.

**ಶ್ರೀ ಎಸ್.ಆರ್. ಪಾಟೀಲ್**:- ತೂಕ ಮಾಡಿ ಮಾತನಾಡುತ್ತಿದ್ದೇನೆ.

**ಶ್ರೀ ಗೋವಿಂದ ಎಂ. ಕಾರಜೋಳ**:- ನಾವು ಖಂಡಿತವಾಗಿಯೂ ಹೆಚ್ಚು ಪ್ರೋಗ್ರೆಸ್ ಮಾಡುತ್ತೇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ವೈಸ್ ಚೇರ್ಮನ್:-** ಮಾನ್ಯ ವಿರೋಧಪಕ್ಷದ ನಾಯಕರೇ, ನೀವು ಹೇಳದಿದ್ದರೂ ನಿಮ್ಮ ಭಾವನೆಗಳು, ಕೆಲವೆಲ್ಲಾ ಕಾಳಜಿಗಳು ನಮಗೆ ಅರ್ಥವಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್**:- ಮಾನ್ಯ ಸಭಾಪತಿಯವರೇ, ದೃಷ್ಟಾಂತ ಕೊಟ್ಟ ಮೇಲೆ ನಾನು ನಿಶ್ಚಿತವಾಗಿ ಹೇಳುತ್ತೇನೆ, ಶ್ರೀಮಾನ್ ಬಸವರಾಜ ಬೊಮ್ಮಾಯಿಯವರ ನೇತೃತ್ವದ ಸರ್ಕಾರ ತೆಲಂಗಾಣಕ್ಕಿಂತ ನಾವೇನೂ ಕಡಿಮೆಯಿಲ್ಲ, ಇನ್ನೂ ಒಂದು ಹೆಜ್ಜೆ ಮುಂದೆ ಹೋಗೋಣ ಎಂದು ಹೇಳಿ ಅವರು ಇದನ್ನು ನಿಗದಿತ ಅವಧಿಯೊಳಗೆ ಮುಗಿಸುತ್ತಾರೆ ಎಂಬ ವಿಶ್ವಾಸ, ನಂಬಿಕೆ ನನಗಿದೆ. ಏಕೆಂದರೆ, ಅವರೂ ನೀರಾವರಿ ಸಚಿವರಾಗಿದ್ದರು. ಅವರೂ ಉತ್ತರ ಕರ್ನಾಟಕ ಭಾಗದವರು. ಹಿಂದೆ ಮಹದಾಯಿ ಬಗ್ಗೆ ಸುಮಾರು 237 ಕಿ.ಮೀ., ಪಾದಯಾತ್ರೆ ಮಾಡಿದವರು. ಆ ಭಾಗದ ಬಗ್ಗೆ ಚಿಂತನೆ, ಕಾಳಜಿ, ಕಕ್ಕುಲಾತಿ ಮತ್ತು ಅಭಿಮಾನ ಹೊಂದಿದಂತಹವರು ಮತ್ತು ತೆಲಂಗಾಣ ರಾಜ್ಯಕ್ಕಿಂತ ಕರ್ನಾಟಕ ರಾಜ್ಯದಲ್ಲಿರುವ ನಾವೇನು ಕಡಿಮೆಯೇ? ಸೆಡ್ಡು ಹೊಡೆದು ಮಾಡುತ್ತೇವೆಂದು ಹೇಳುತ್ತಾರೆ ಎಂದು ನನಗೆ ವಿಶ್ವಾಸವಿದೆ. ಮಾನ್ಯ ನಿರಾಣಿಯವರ ಬಗ್ಗೆ ನನಗೆ ಭರವಸೆ, ನಂಬಿಕೆ ಇದೆ. ಅದರ ಜೊತೆಗೆ ಆ ಗೆಜೆಟ್ ನೋಟಿಫಿಕೇಷನ್‌ಗೊಂದು; ನಾನು ಕೇಳಿದ್ದೇನೆ. ಅವರು ಕೇಂದ್ರದ ಸಚಿವರಿಗೆ ಸ್ವತಃ ಭೇಟಿಯಾಗಿ ಪ್ರಯತ್ನ ಮಾಡುತ್ತಿದ್ದಾರೆ ಎಂಬುದನ್ನು ನಾನು ಸ್ವಾಗತ ಮಾಡುತ್ತೇನೆ. ಇದು ಗೆಜೆಟ್ ನೋಟಿಫಿಕೇಷನ್ ಆಗಬೇಕು. ಇಲ್ಲಿಯೂ ಬಿ.ಜೆ.ಪಿ ಸರ್ಕಾರವಿದೆ, ಅಲ್ಲಿಯೂ ಬಿ.ಜೆ.ಪಿ ಸರ್ಕಾರವಿದೆ. ಶ್ರೀಮಾನ್ ನರೇಂದ್ರ ಮೋದಿ ನೇತೃತ್ವದ ಸರ್ಕಾರವಿದೆ. ಇಲ್ಲಿಂದ 26 ಜನ ಎಂ.ಪಿ.ಗಳನ್ನು ಕೊಟ್ಟಿದ್ದೇವೆ. ಮಾನ್ಯ ನರೇಂದ್ರ ಮೋದಿಯವರು ಪ್ರಧಾನ ಮಂತ್ರಿಯಾಗುವುದಕ್ಕೆ ದೊಡ್ಡ ಕೊಡುಗೆ ಕೊಟ್ಟಂತಹ ರಾಜ್ಯ ದೇಶದಲ್ಲಿ ಯಾವುದಾದರೂ ಇದ್ದರೆ ಅದು ನಮ್ಮ ಕರ್ನಾಟಕ ರಾಜ್ಯವಾಗಿದೆ. ನೀವು ನೂರು ಜನರು ಶಾಸಕರಿದ್ದೀರಿ. ಇದಕ್ಕಿಂತ ಇನ್ನೇನು ಬೇಕು, ಇನ್ನೇನೂ ಇಲ್ಲ ಎನ್ನುವುದನ್ನು ನೀವು ನನಗೆ ಹೇಳಬೇಕು. Everything is ready and available. ಇಷ್ಟೆಲ್ಲಾ ಇದ್ದಾಗ ತಾವು ಅವರ ಮೇಲೆ ಸ್ವಲ್ಪ ವರ್ಚಸ್ಸು ಬೀರಬೇಕು. 26 ಜನ ಎಂ.ಪಿ.,ಗಳು, ನೀವು, ಮುಖ್ಯಮಂತ್ರಿಯವರು, ಜಲಸಂಪನ್ಮೂಲ ಸಚಿವರು, ಉದ್ದಿಮೆ ಸಚಿವರು, ಹಿರಿಯ ಸಚಿವರನ್ನು ಮತ್ತು ಆ ಭಾಗದ ಸಚಿವರನ್ನು ಕರೆದುಕೊಂಡು ಹೋಗಿ ಈ ದೇಶದ ಪ್ರಧಾನ ಮಂತ್ರಿಯವರಾದ ಶ್ರೀಮಾನ್ ನರೇಂದ್ರ ಮೋದಿಯವರಿಗೆ win over ಮಾಡಬೇಕು. ಅವರಿಗೆ ಹೇಳಬೇಕು, ಕನ್ವಿನ್ಸ್ ಮಾಡಬೇಕು. ಏನೂ ಹೇಳದಿದ್ದರೆ ಅವರಿಗೆ ಹೇಗೆ ಗೊತ್ತಾಗುತ್ತದೆ? ಮಗು ಅತ್ತರೆ ತಾಯಿ ಹಾಲು ಕೊಡುತ್ತಾಳಲ್ಲವೇ. ಆ ದಿಸೆಯಲ್ಲಿ ಇವರು ಹೋಗಿ ಪ್ರಯತ್ನ ಮಾಡಬೇಕು. ನೀವು ಪ್ರಧಾನ ಮಂತ್ರಿಯವರನ್ನೇ ಭೇಟಿಯಾಗಿ. ಕೇಂದ್ರದ ಜಲಸಂಪನ್ಮೂಲ ಸಚಿವರು, ಆ ಮಂತ್ರಿ, ಈ ಮಂತ್ರಿ ಬೇಡ. Let them go and meet Hon'ble Prime Minister of India.

**ಶ್ರೀ ಬಿ.ಕೆ.ಹರಿಪ್ರಸಾದ್:-** ಆಪರೇಷನ್ ಕೃಷ್ಣಾ . . .

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್:-** ಆಪರೇಷನ್ ಕೃಷ್ಣಾ. ಏನಾದರೂ ಹೆಸರಿಟ್ಟುಕೊಳ್ಳಲಿ. ಆ ನೋಟಿಫಿಕೇಷನ್ ಬರುವುದಕ್ಕಿಂತ ಮೊದಲು ಮಾಡುವ ಕೆಲಸ ಶೇ.90 ರಷ್ಟಿದೆ. Let them go ahead with all works without hesitation. 130 ಟಿ.ಎಂ.ಸಿ. ಆಂಧ್ರ, ತೆಲಂಗಾಣ ಅದು ಅವರ ವ್ಯಾಜ್ಯ. ಅವರು ಕೊಟ್ಟ ನೀರಿಗೆ ಅವರು ಒಂದು contempt petition ಹಾಕಿದ್ದಾರೆ ಎಂದು ಬೆಳಗ್ಗೆ ಮಾತನಾಡಿದರು. ಅವರಿಗೇನು ಹಂಚಿಕೆಯಾಗಿದೆ, ಅವರಿಗೆ 100 ಟಿ.ಎಂ.ಸಿ. ಕೊಟ್ಟರೆ ಅವರು ಅಣ್ಣ ತಮ್ಮಂದಿರು. ಎಷ್ಟೆಷ್ಟು ಬೇಕು ಅಷ್ಟನ್ನು ಹಂಚಿಕೊಳ್ಳಬೇಕು. ನಮಗೆ ಹಂಚಿಕೆಯಾದ ಪಾಲು ಏನಿದೆ ಅದು ನಮ್ಮ ಪಾಲು. ನಾನು ಅನೇಕ ನಾಯಕರ ಮುಖಾಂತರ ಕೇಳಿದ್ದೇನೆ. ಸುಪ್ರೀಂ ಕೋರ್ಟ್‌ನಲ್ಲಿ ವ್ಯಾಜ್ಯವಿದೆ, ನೋಟಿಫಿಕೇಷನ್ ಹೇಗೆ ಮಾಡುವುದು ಎಂದು ಹೇಳುತ್ತಾರೆ. ನಾವು ಮಾತನಾಡುತ್ತೇವೆ. ಕಾವೇರಿ ಬೇಸಿನ್‌ನಲ್ಲಿ ಇದೇ ರೀತಿ ಸುಪ್ರೀಂ ಕೋರ್ಟ್‌ನಲ್ಲಿ Special Leave Petition ಇದ್ದಾಗ subject to the decision of the Supreme Court, ನೋಟಿಫಿಕೇಷನ್ ಮಾಡಿದ್ದೇವೆ. ಇಲ್ಲಿ ಏತಕ್ಕೆ ಮಾಡಬಾರದು? Subject to the decision of the Apex Court of this land, ಈ ದೇಶದ ಸರ್ವೋಚ್ಚ ನ್ಯಾಯಾಲಯದ ನಿರ್ಣಯಕ್ಕನುಗುಣವಾಗಿ ನೋಟಿಫಿಕೇಷನ್; ನಾಳೆ ನಿರ್ಣಯ ಬಂದಾಗ ಆ ನೋಟಿಫಿಕೇಷನ್ ಅಮೆಂಡ್‌ಮೆಂಟ್ ಆಗುತ್ತದೆ. ನೀವು ಧೈರ್ಯ ಮಾಡಿ. Morally ಬಹಳ ಬಲವಾಗಿದ್ದೀರಿ. ಮೋದಿಯವರಿಗೆ ಹೇಳುವಷ್ಟು morality ನಿಮಗಿದೆ. ಯಾವುದರಲ್ಲಿ ನೀವು ಅವರಿಗೇನು ಕಡಿಮೆ ಮಾಡಿದ್ದೀರಿ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಆಂಧ್ರ ಮತ್ತು ತೆಲಂಗಾಣ ಎತ್ತಿರತಕ್ಕಂಥ ಆಕ್ಷೇಪಕ್ಕೆ ಟ್ರಿಬ್ಯುನಲ್ ನಿರಾಕರಣೆ ಮಾಡಿದೆ. ಆ ಟ್ರಿಬ್ಯುನಲ್ ನಿರಾಕರಣೆ ಮಾಡಿರುವ ವಿಚಾರದ ಬಗ್ಗೆ ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಒಂದು ಅಫಿಡವಿಟ್ ಹಾಕಬೇಕು ಅಷ್ಟೇ. ಅಫಿಡವಿಟ್ ಹಾಕಿದರೆ ಸ್ಟೇ ವೆಕೇಟ್ ಆಗುತ್ತದೆ. Very simple thing. ಟ್ರಿಬ್ಯುನಲ್ ಜಡ್ಜ್‌ಮೆಂಟ್ ಕೊಟ್ಟಾಯಿತಲ್ಲವೇ? ಅವರ claim ಏನಿತ್ತು ಅದನ್ನು ರಿಜೆಕ್ಟ್ ಮಾಡಿ ಆಯಿತಲ್ಲವೇ? ಆಂಧ್ರ ಮತ್ತು ತೆಲಂಗಾಣಕ್ಕೆ ಏನು ಹಂಚಿಕೆಯಾಗಿದೆ ಅದನ್ನು ನೀವಿಬ್ಬರೂ ಕುಳಿತುಕೊಂಡು ಹಂಚಿಕೊಳ್ಳಿ ಎಂದು ಟ್ರಿಬ್ಯುನಲ್ ಸ್ಪಷ್ಟವಾಗಿ ಹೇಳಿದೆ.

**Sri S.R.PATIL:-** It is their internal dispute.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ನೀವು ಹೇಳಿದ ಹಾಗೆ ಕಾವೇರಿ ವಿಚಾರದಲ್ಲಿಯೂ ಇವೆಲ್ಲವನ್ನೂ ಬಿಟ್ಟು ಅವರು ನೋಟಿಫಿಕೇಷನ್ ಮಾಡಬೇಕು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್.ಪಾಟೀಲ್:-** ಕಾವೇರಿಯಲ್ಲಿ ಇವೆಲ್ಲವನ್ನೂ ಬಿಟ್ಟು ನೋಟಿಫಿಕೇಷನ್ ಮಾಡಿದರು. ಇದು ಕೃಷ್ಣೆಯಲ್ಲಿ ಏತಕ್ಕೆ ಆಗಬಾರದು? ನಾವು ದಡ್ಡರು ಎಂದು ಅನಿಸುತ್ತಿದೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ವಿರೋಧಪಕ್ಷದ ನಾಯಕರೇ, ಇಲ್ಲ ನೀವು ತುಂಬಾ ಜಾಣರಿದ್ದೀರಿ. ತುಂಬಾ ಚೆನ್ನಾಗಿ ಮಾತನಾಡುತ್ತಿದ್ದೀರಿ.

**ಶ್ರೀ ಎಸ್.ಆರ್. ಪಾಟೀಲ್:-** ಒಟ್ಟಾರೆ ಈ ಪ್ರಾಜೆಕ್ಟ್‌ನ ಸ್ಥಿತಿಗತಿ ಬಗ್ಗೆ ಹೇಳುತ್ತೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಶ್ರೀಕಂಠೇಗೌಡರೂ ಶಾಣೆಯಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:-** ನೀವಂತೂ ಎಲ್ಲರಿಗಿಂತಲೂ ಶಾಣೆಯಾಗಿದ್ದೀರಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಮರಿತಿಬ್ಬೇಗೌಡರೇ, ಬಹಳ ಶಾಣೆಯಿದ್ದಾರೆ, ಆದರೂ ಹೇಗೆ ಮಾಡಿದರು ನೋಡಿ.

**ಶ್ರೀ ಮರಿತಿಬ್ಬೇಗೌಡ:-** ಈ ಸದನದಲ್ಲಿ ನಿಮ್ಮಷ್ಟು ಯಾರೂ ಇಲ್ಲ.

**ವೈಸ್ ಛೇರ್ಮನ್:-** ಮಾನ್ಯ ಎಸ್.ಆರ್. ಪಾಟೀಲರು ಬಹಳ ಗಂಭೀರವಾದ ವಿಚಾರದ ಬಗ್ಗೆ ಮಾತನಾಡುತ್ತಿದ್ದಾರೆ. ಮಾತನಾಡಲಿ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದು most viable project. ಇವತ್ತು ನಾವು 60 ಸಾವಿರ ಕೋಟಿ ರೂಪಾಯಿಗಳನ್ನು ಇನ್ವೆಸ್ಟ್ ಮಾಡಿ ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತವನ್ನು ಕಂಪ್ಲೀಟ್ ಮಾಡಿದರೆ ಇದರ ವರಮಾನ ಎಷ್ಟು ಬರುತ್ತದೆ ಎಂದರೆ, 03 ಲಕ್ಷದ 56 ಸಾವಿರ ಕೋಟಿ ರೂಪಾಯಿ ವರಮಾನ ರಾಜ್ಯಕ್ಕೆ ಬರುತ್ತದೆ. We are spending Rs.60,000 Crores and we are getting back Rs.3,56,000 Crores. ಇದು ನಮ್ಮದೇ ಆದಂತಹ ಒಂದು ಎಸ್ಟಿಮೇಟ್. ಮಾನ್ಯ ನಿರಾಣಿಯವರೇ, ನೀವು ಉದ್ಯಮಿಗಳು ನೋಡಿ. Cost-benefit ratio ತೆಗೆದುಕೊಳ್ಳುತ್ತೀರಲ್ಲಾ, how much you are investing and how much do you get back ಎಂದು ನೋಡುತ್ತೀರಲ್ಲ ಹಾಗೆ ಈ ಪ್ರಾಜೆಕ್ಟ್‌ಗೆ 60,000/- ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ 03 ಲಕ್ಷದ 56 ಸಾವಿರ ಕೋಟಿ ವರಮಾನ ಬರುತ್ತದೆ. It is the most beneficial project. ಉತ್ತರ ಕರ್ನಾಟಕದ ಅಸಂಖ್ಯಾತ ರೈತರು, ಲಕ್ಷಾಂತರ ರೈತರು ಖುಷಿ ಪಡುತ್ತಾರೆ. ಬರಗಾಲದ ಬವಣೆಯಲ್ಲಿ ಸಿಕ್ಕಿ ಒದ್ದಾಡಿ ನಮ್ಮ ಮಂದಿ ನರಳಿ ನರಳಿ ಸತ್ತಿದ್ದಾರೆ. ನಾವು ದುಡಿಯುವುದಕ್ಕೆ ಮಂಗಳೂರಿಗೆ ಹೋಗಬೇಕು. ಗೋವಾಕ್ಕೆ, ಮಹಾರಾಷ್ಟ್ರಕ್ಕೆ ಹೋಗಬೇಕು.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ತಾವೆಲ್ಲರೂ ಉತ್ತರ ಕನ್ನಡ, ದಕ್ಷಿಣ ಕರ್ನಾಟಕದ ಬಗ್ಗೆ ಮಾತನಾಡುತ್ತೀರಿ. ನಾವು ನಮ್ಮ ಕರಾವಳಿ ಪ್ರದೇಶದ ಬಗ್ಗೆ ಯಾವಾಗ ಮಾತನಾಡಬೇಕು? ಅದನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದ್ದೀರಿ. ಕರಾವಳಿ ಪ್ರದೇಶದ ಕುಂದುಕೊರತೆಗಳ ಬಗ್ಗೆ ಮಾತನಾಡುವುದಕ್ಕೆ ಒಂದು ಸದನವನ್ನು ಕರೆಯಬೇಕಾಗುತ್ತದೆ. ಈ ಕಡೆ ನಿರಾಣಿ ಸಾಹೇಬರು ಉತ್ತರ ಕರ್ನಾಟಕದವರನ್ನು ನಿರ್ಲಕ್ಷ್ಯ ಮಾಡಿದ್ದಾರೆ ಎನ್ನುತ್ತಾರೆ, ಮಾನ್ಯ ಮರಿತಿಬ್ಬೇಗೌಡರು ದಕ್ಷಿಣ ಕರ್ನಾಟಕದವರನ್ನು ನಿರ್ಲಕ್ಷ್ಯ ಮಾಡಿದ್ದಾರೆ ಎನ್ನುತ್ತಾರೆ, ನಾವು ಕರಾವಳಿಯಲ್ಲಿದ್ದವರು ನಮ್ಮನ್ನು ಬಾಂಬೆಯಿಂದ ಓಡಿಸಿಬಿಟ್ಟಿದ್ದಾರೆ. ತುಳು ಮಾತನಾಡುವ ನಮ್ಮನ್ನು ಓಡಿಸಿ ಬಿಟ್ಟಿದ್ದಾರೆ. ನಮ್ಮ ಕಥೆಯನ್ನು ಯಾರು ಕೇಳುತ್ತಾರೆ?

**ಶ್ರೀ ಅರೆಬೈಲು ಹೆಬ್ಬಾರ್ ಶಿವರಾಂ(ಕಾರ್ಮಿಕ ಸಚಿವರು):-** (ಗೊಂದಲ) ಈ ಕಡೆ ದಕ್ಷಿಣ ಕರ್ನಾಟಕಕ್ಕೂ ಉಳಿದಿಲ್ಲ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:-** ದಕ್ಷಿಣ ಕೆನರಾದವರು ಉತ್ತರ ಕರ್ನಾಟಕದವರ ಜೊತೆ ಸೇರಿದ್ದರೇ?

**ಶ್ರೀ ಬಿ.ಕೆ. ಹರಿಪ್ರಸಾದ್:-** ಕಾಸರಗೋಡಿನಿಂದ ಹಿಡಿದು ಕಾರವಾರದವರೆಗೆ . . .

**ಶ್ರೀ ಅರೆಬೈಲು ಹೆಬ್ಬಾರ್ ಶಿವರಾಂ:-** ಕಿತ್ತೂರು ಕರ್ನಾಟಕಕ್ಕೆ ನಮ್ಮನ್ನು ಸೇರಿಸಿದ್ದರು

(ಗೊಂದಲ)

**ಶ್ರೀ ಬಿ.ಸಿ. ಪಾಟೀಲ್:-** ಎಲ್ಲಾ ನದಿಗಳು, ಎಲ್ಲಾ ಹೊಳೆಗಳನ್ನು ಕರಾವಳಿಗೆ ಕಳುಹಿಸಿಬಿಟ್ಟಿದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಹರಿಪ್ರಸಾದ್‌ರವರು ತಮ್ಮನ್ನು ನಿರ್ಲಕ್ಷ್ಯ ಮಾಡಿದ್ದಾರೆ ಎಂದು ಒಂದು ಮಾತನ್ನು ಹೇಳಿದರು.

**ಡಾ: ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಹರಿಪ್ರಸಾದ್‌ರವರೇ, ನಿಮಗಿಂತ ಬಯಲುಸೀಮೆ ಜಿಲ್ಲೆಯವರಾದ ನಾವು ದೈನೇಸಿ ಪರಿಸ್ಥಿತಿಯಲ್ಲಿದ್ದೇವೆ. ನಮ್ಮನ್ಯಾರು ಕೇಳುತ್ತಾರೆ?

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ನಾರಾಯಣಸ್ವಾಮಿಯವರೇ, ನಾನು ಹೇಳುತ್ತೇನೆ . . .

**ಡಾ: ವೈ.ಎ.ನಾರಾಯಣಸ್ವಾಮಿ:-** ನಮ್ಮ ಗತಿ ಏನು? ನಮ್ಮನ್ಯಾರೂ ಕೇಳುವವರೇ ಗತಿಯಿಲ್ಲವೇ?

**ಶ್ರೀ ಬಿ.ಕೆ.ಹರಿಪ್ರಸಾದ್:-** ನೀವು ಚಿನ್ನವನ್ನು ಇಟ್ಟುಕೊಂಡಿರುವವರು.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಡಾ: ವೈ.ಎ.ನಾರಾಯಣಸ್ವಾಮಿ:-** ಚಿನ್ನವೆಲ್ಲಾ ಇಂಗ್ಲೆಂಡ್‌ಗೆ ಹೊರಟುಹೋಗಿದೆ. ನಮ್ಮ ಹತ್ತಿರ ಯಾವುದೂ ಇಲ್ಲ.

**ವೈಸ್ ಛೇರ್ಮನ್:-** 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎನ್ನುವುದನ್ನು ಮೊನ್ನೆ ತಾನೇ ಎಲ್ಲರೂ ನೆನಪು ಮಾಡಿಕೊಂಡಿರಿ. ಹಾಗಾಗಿ ಕರ್ನಾಟಕ ಒಂದೇ.

**ಶ್ರೀ ಎಸ್.ಆರ್.ಪಾಟೀಲ್:-** ನಾನು ಒಂದು ಮಾತನ್ನು ಹೇಳುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಬೆಳಗ್ಗೆಯಿಂದ ಆಗುತ್ತಿರುವ ಚರ್ಚೆ ನೋಡಿದರೆ ನಾವು ಎಲ್ಲಿದ್ದೇವೆಂದು ಅನಿಸುತ್ತಿದೆ.

**ವೈಸ್ ಛೇರ್ಮನ್:-** ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಯಾಗುವುದೇ ಎರಡು ಕಡೆ ಕುಳಿತವರ ಕಾಳಜಿಯಾಗಿದೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಹರಿಪ್ರಸಾದ್‌ರವರು;

**ವೈಸ್ ಛೇರ್ಮನ್:-** ಮಾನ್ಯ ಎಸ್.ಆರ್. ಪಾಟೀಲರೇ, ಇದು ತಮ್ಮ ಹೃದಯಕ್ಕೆ ಬಹಳ ಪ್ರಿಯವಾದ ವಿಚಾರ ಮತ್ತು ನೀವು ಯಾವಾಗಲೂ ಕೂಡಾ ತುಂಬಾ ಭಾವನಾತ್ಮಕವಾಗಿ ಬದ್ಧತೆಯಿಂದ ಮಾತನಾಡುತ್ತೀರಿ. ನಮಗೂ ಕೂಡ ಕೇಳಬೇಕು ಅಂತಿದೆ. ಸುಮಾರು 3.30 ಕ್ಕೆ ತಮ್ಮ ಸಮಯ ಪ್ರಾರಂಭವಾಯಿತು.

(ಮುಂದು)

**(1217) 21-12-2021 KH/BNS 4-10** **(ವೈಸ್ ಚೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾನು ಇವತ್ತು ಮಾತನಾಡುವುದನ್ನು ಮುಗಿಸುವುದಿಲ್ಲ. Today I am not going to complete.

**ವೈಸ್ ಛೇರ್ಮನ್:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಹಾಗೇನಿಲ್ಲ. ಉತ್ತರ ಇವತ್ತೇ ಆಗಬೇಕಾಗಿದೆ. ನಾನು ತಮ್ಮ ಸಹಕಾರವನ್ನು ಕೋರುತ್ತೇನೆ. ಸರ್ಕಾರ ಮತ್ತು ತಮ್ಮ ಸಹಕಾರದಿಂದಲೇ

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಅಜೆಂಡಾವನ್ನು ಪೂರ್ಣಗೊಳಿಸುವುದಕ್ಕೆ ಸಾಧ್ಯವಾಗುತ್ತದೆ. ತಮಗೆ ಇನ್ನು ಎಷ್ಟು ಸಮಯ ಬೇಕಾಗಬಹುದು?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು ಇವತ್ತು ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ಮಾಡಬೇಕು. ಇವತ್ತು ಆಗಲಿಲ್ಲವೆಂದರೆ, ನಾಳೆ ಮಾತನಾಡೋಣ.

**ಶ್ರೀ ನಸೀರ್ ಅಹ್ಮದ್ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು . . .

**ವೈಸ್ ಛೇರ್ಮನ್:-** ನಾನು ವಿರೋಧ ಪಕ್ಷದ ನಾಯಕರಲ್ಲಿ ಇನ್ನು ಎಷ್ಟು ಸಮಯ ಬೇಕಾಗುತ್ತದೆ ಎಂದು ಕೇಳಿದೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಪ್ರತಿ ಪಕ್ಷದ ನಾಯಕರಿಗೆ you cannot restrict me. It is my inherent right. I can take any amount of time.

**ವೈಸ್ ಛೇರ್ಮನ್:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ತಮ್ಮನ್ನು ನಿಯಂತ್ರಣ ಮಾಡುತ್ತಿಲ್ಲ. ತಮಗೆ ಇನ್ನು ಎಷ್ಟು ಸಮಯ ಬೇಕಾಗಿದೆ ಎಂದು ಕೇಳಿದೆ ಅಷ್ಟೆ. ಇನ್ನು ಮಾನ್ಯ ಸದಸ್ಯರುಗಳಾದ ಅಲ್ಲಂ ವೀರಭದ್ರಪ್ಪ, ಆರ್.ಬಿ.ತಿಮ್ಮಾಪೂರ, ನಾರಾಯಣಸ್ವಾಮಿ, ಮರಿತಿಬ್ಬೇಗೌಡರವರು ಮಾತನಾಡಬೇಕು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆ ನಾಳೆ ಫುಲ್ ಡೇ ಮಾತನಾಡೋಣ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕದವರಿಗೆ ಮಾತನಾಡುವುದಕ್ಕೆ ಹೆಚ್ಚಿನ ಅವಕಾಶ ಕೊಡಬೇಕು. ಅವರು ಮಾತನಾಡಲಿ.

**ವೈಸ್ ಛೇರ್ಮನ್:-** ಮಾನ್ಯ ನಸೀರ್ ಅಹ್ಮದ್‌ರವರೇ, ಪ್ರತಿ ಪಕ್ಷದ ನಾಯಕರನ್ನು ಇನ್ನು ಎಷ್ಟು ಸಮಯ ಬೇಕಾಗಬಹುದೆಂದು ಕೇಳಿದೆನಷ್ಟೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಹೇಳಿದೆನಲ್ಲವೇ, ಈ ಅಧಿವೇಶನ ಮುಕ್ತಾಯವಾಗುವವರೆಗೂ ನಾನು ಮಾತನಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ವೈಸ್ ಛೇರ್ಮನ್:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಈ ಕಡೆ ಕುಳಿತವರಿಂದ ಉತ್ತರ ಕೇಳುವುದರ ಬಗ್ಗೆ ಸಮಯ ಇಟ್ಟುಕೊಳ್ಳಬೇಕಲ್ಲವೇ? ತಮಗೆ ಸರ್ಕಾರದಿಂದ ಉತ್ತರವನ್ನು ಕೊಡಿಸಬೇಕಲ್ಲವೇ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾಳೆ ಅವರು ಮಾತನಾಡಲಿ. ಹಾಗೆಯೇ ನಮ್ಮವರು ಮಾತನಾಡಲಿ. ನಾಳೆ ಈ ವಿಷಯದ ಬಗ್ಗೆ ಫುಲ್ ಡೇ ಮಾತನಾಡೋಣ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನಮ್ಮ ವಿರೋಧ ಪಕ್ಷದ ನಾಯಕರು ಈ ಭಾಗವನ್ನು ಮತ್ತು ಈ ಜನರನ್ನು ಪ್ರತಿನಿಧಿಸುತ್ತಿರುವಂತಹವರು. ಅವರು ತುಂಬಾ ಪರಿಣಾಮಕಾರಿಯಾಗಿ ಮಾತನಾಡುತ್ತಿದ್ದಾರೆ. ದಯಮಾಡಿ, ವಿರೋಧ ಪಕ್ಷದ ನಾಯಕರಿಗೆ ಸಮಯವನ್ನು ನಿಗದಿ ಮಾಡುವುದಕ್ಕೆ ಹೋಗಬೇಡಿ. ಅವರು ಸ್ವಲ್ಪ ಮಾತನಾಡಲಿ.

**ವೈಸ್ ಛೇರ್ಮನ್:-** ಮಾನ್ಯ ಎಂ.ನಾರಾಯಣಸ್ವಾಮಿಯವರೇ, ನಾನು ಸಮಯವನ್ನು ನಿಗದಿ ಮಾಡಲಿಲ್ಲ. ಇನ್ನು ಎಷ್ಟು ಸಮಯ ಬೇಕಾಗುತ್ತದೆ ಎಂದು ಅವರನ್ನು ಕೇಳಿದೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಇವತ್ತೆಲ್ಲಾ ಅವರದೇ, ಬೇರೆ ಯಾರದು ಇಲ್ಲ. ನಾಳೆ ನಮ್ಮದು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ತಾವು ಮುಗಿಸಿ ಎಂದು ಹೇಳಿದರೆ ಮಾತನಾಡುವುದನ್ನು ಮುಗಿಸುತ್ತೇನೆ.

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಸಾಧಾರಣವಾಗಿ ಸದನದ ಎರಡು ನಾಯಕರು ಮಾತನಾಡಬೇಕಾದರೆ ಯಾವುದೇ ಸಮಯ ನಿಗದಿ ಮಾಡುವುದಿಲ್ಲ. ಫ್ರೀ ಅದು, opening batsman ಗಳು. ಎರಡು ನಾಯಕರಿಗೆ ಅದೊಂದು ವಿಶೇಷವಾದಂತಹ status ಇದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಿ.ಎಂ.ಇಬ್ರಾಹಿಂರವರು ನಮಗೆ ಸಾಥ್ ಕೊಡುತ್ತಿದ್ದಾರೆ. ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಮಾತನಾಡಿರುವ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ನಾವು coastal line ಎಂದು ಹೇಳಿದರಲ್ಲವೇ? ದಕ್ಷಿಣ ಕನ್ನಡ ಜಿಲ್ಲೆ ಕರ್ನಾಟಕ ರಾಜ್ಯದಲ್ಲಿ ಅಷ್ಟೇ ಅಲ್ಲ. ಇಡೀ ಭಾರತ ದೇಶದಲ್ಲಿ ಅತ್ಯಂತ ಮುಂದುವರೆದಂತಹ ಜಿಲ್ಲೆ. For example, ಬ್ಯಾಂಕಿಂಗ್ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ದಕ್ಷಿಣ ಕನ್ನಡ ನೆಲದಲ್ಲಿಯೇ 4 ರಾಷ್ಟ್ರೀಕೃತ ಬ್ಯಾಂಕ್ ಹುಟ್ಟಿದ್ದು, ನಂತರ ಕರ್ನಾಟಕ ಬ್ಯಾಂಕ್ ಕೂಡ ಅಲ್ಲಿಯೇ ಹುಟ್ಟಿದೆ. ಶಿಕ್ಷಣ ಕ್ಷೇತ್ರದಲ್ಲಿ they are No.1. ಹಾಗೆಯೇ, ಹೋಟೆಲ್

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಉದ್ಯಮ. Neil Armstrong ಚಂದ್ರಲೋಕಕ್ಕೆ ಹೋಗಿ ಕಾಲಿಟ್ಟ ಕೂಡಲೇ ಅಲ್ಲಿ ಉಡುಪಿ ಹೋಟೆಲ್ ಇತ್ತಂತೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಯಾವುದೇ ಸರ್ಕಾರದ ಸಹಾಯ ಇಲ್ಲದೇ ಕಷ್ಟ ಬಿದ್ದು ಕಷ್ಟ ಜೀವಿಗಳು ಸ್ವಂತವಾಗಿ ಮುಂದೆ ಬಂದಿದ್ದಾರೆ. ಸರ್ಕಾರದ ಆಶೀರ್ವಾದ ಇದ್ದಿದರೆ ಇನ್ನು ಮೇಲೆ ಬರುತ್ತಿದ್ದೆವು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ತಾವು ಇದನ್ನು ಹೇಳಬೇಕಲ್ಲವೇ? ತಮ್ಮ ಸ್ನೇಹಿತರಿಗೂ ಯಾರಿಗೂ ಕಾಣುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಹೇಳಿದ್ದೇನೆಂದರೆ, ದಕ್ಷಿಣ ಕನ್ನಡ ಜಿಲ್ಲೆ ಮುಂದುವರೆದಿದೆ. ಆದರೆ, ಯಾವುದೇ ಸರ್ಕಾರದ ನೆರವಿನಿಂದ ಎನ್ನುವುದಕ್ಕಿಂತ ಹೆಚ್ಚಾಗಿ ನಮ್ಮ ಹಿಂದಿನ ತಲೆಮಾರಿನವರು ಹಾಕಿಕೊಟ್ಟಿರುವಂತಹ ಶಿಕ್ಷಣ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ನಾವು ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಬಹಳ ಮುಂದುವರೆದಿದ್ದೇವೆ ಎನ್ನುವುದು ಅವರ ವಾದ. ಅದರ ಜೊತೆಗೆ ಅವರು ಏನು ಸೇರಿಸುತ್ತಾರೆಂದರೆ, ಯಾವುದೇ ಕಾರಣಕ್ಕೂ ಇತರೇ ಜಿಲ್ಲೆಗಳಿಗೆ ಕೊಟ್ಟಂತೆ ಸಾವಿರಾರು ಕೋಟಿ ರೂಪಾಯಿಗಳ ನೀರಾವರಿಯನ್ನು, ರೈಲ್ವೆ ಯೋಜನೆಯನ್ನು ಮತ್ತು ಇನ್ನು ಬೇರೆ ಬೇರೆ ಯೋಜನೆಗಳನ್ನು ನಮಗೂ ಕೊಟ್ಟಿದ್ದರೆ ನಾವು ಇನ್ನು ಮುಂದುವರೆಯುತ್ತಿದ್ದೆವು. ಅದಕ್ಕೋಸ್ಕರ ನಮ್ಮನ್ನು ಗಮನದಲ್ಲಿಟ್ಟುಕೊಳ್ಳಿ ಎನ್ನುವುದು ಅವರ ವಿನಂತಿ ಅಷ್ಟೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು ಶ್ರಮಪಟ್ಟು, ಕಷ್ಟಪಟ್ಟು ಬ್ಯಾಂಕಿಂಗ್ ಕ್ಷೇತ್ರದೊಳಗೆ

**ವೈಸ್ ಛೇರ್ಮನ್:-** ಮಾನ್ಯ ಸದಸ್ಯರೇ, ಸರ್ಕಾರವೇ ತಮ್ಮದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಕೆ.ಹರಿಪ್ರಸಾದ್ ಹೇಳುತ್ತಿರುವುದೇನೆಂದರೆ, ಈ ಸದನ ಒಂದಷ್ಟು ನಮ್ಮ ಕಡೆಗೂ ಗಮನ ಕೊಡಬೇಕೆನ್ನುವುದು ಅವರ ವಿನಂತಿ ಅಷ್ಟೆ.

**ವೈಸ್ ಛೇರ್ಮನ್:-** ಮಾನ್ಯ ಸಭಾನಾಯಕರೇ, ಸರ್ಕಾರವೇ ಅವರದು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಅವರ ಮಾತಿಗೂ ಹೇಳಬೇಕಾಗುತ್ತದೆ. ಉಳಿದ ಜಿಲ್ಲೆಗಳಿಗೆ ಬಾರಿ ಹಣವನ್ನು ಕೊಟ್ಟಿದ್ದಾರೆ ಎಂದು ಹೇಳುತ್ತಾರೆಯಲ್ಲವೇ,

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ನಮ್ಮ ಅವಿಭಾಜ್ಯ ಬಿಜಾಪುರ ಜಿಲ್ಲೆಗೆ ನಾವು ಕೊಟ್ಟಿದ್ದೆ ಹೆಚ್ಚು ಇದೆ. ನಮಗೆ ಕೊಟ್ಟಿದ್ದು ಏನು ಇಲ್ಲವೇ ಇಲ್ಲ. ನಮಗೆ ಕೊಟ್ಟಿದ್ದು ಶೂನ್ಯ. ಚೈನಾ ದೇಶದವರು ನಮ್ಮ ಮೇಲೆ ದಂಡೆತ್ತಿ ಬಂದಾಗ . . .

**ವೈಸ್ ಛೇರ್ಮನ್:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಮಾತನಾಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಕೂಡ ಅದನ್ನೇ ಮಾತನಾಡುತ್ತೇನೆ. ಇದು ಕೂಡ ಅದಕ್ಕೆ ಸಂಬಂಧಿಸಿರುವುದೇ ಆಗಿದೆ. ನಾನು ನಮ್ಮ ಜಿಲ್ಲೆಯ ಬಗ್ಗೆಯೇ ಮಾತನಾಡುತ್ತಿದ್ದೇನೆ.

**ವೈಸ್ ಛೇರ್ಮನ್:-** ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ತಾವು ಮಾನ್ಯ ವಿರೋಧ ಪಕ್ಷದ ನಾಯಕರ ದಾರಿಯನ್ನು ತಪ್ಪಿಸಿದಿರಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ದಿವಂಗತ ಪಂಡಿತ್ ಜವಹರಲಾಲ್ ನೆಹರುರವರು ಪ್ರಧಾನಮಂತ್ರಿ ಇದ್ದಾಗ 1962ರಲ್ಲಿ ಚೈನಾದವರು ನಮ್ಮ ಮೇಲೆ ದಂಡೆತ್ತಿ ಬಂದರು. ಆ ಸಂದರ್ಭದಲ್ಲಿ ಇವರು ಎಲ್ಲಾ ರಾಜ್ಯದ ಮುಖ್ಯಮಂತ್ರಿಗಳಿಗೆ ಏನು ಸಾಧ್ಯ ಇದೆಯೋ ಅದನ್ನು ರಾಷ್ಟ್ರೀಯ ರಕ್ಷಣಾ ನಿಧಿಗೆ ಕೊಡಿ ಎಂದು ಮನವಿ ಮಾಡಿಕೊಂಡರು. ನಮ್ಮ ಅವಿಭಾಜ್ಯ ಬಿಜಾಪುರ ಜಿಲ್ಲೆಯ ಹೆಣ್ಣು ಮಕ್ಕಳು, ಹೆಣ್ಣು ಮಕ್ಕಳಿಗೆ ಬಂಗಾರದ ಮೇಲೆ ಬಹಳ ಪ್ರೀತಿ ಇರುತ್ತದೆ. ಮಹಿಳೆಯರು ಬಂಗಾರ ಎಂದರೆ ಬಂಗಾರಕ್ಕೆ ಜೀವ ಕೊಡುವಷ್ಟು ಪ್ರೀತಿ ಇರುತ್ತದೆ. ಆದರೆ, ನಮ್ಮ ಜಿಲ್ಲೆಯ ಮಹಿಳೆಯರು ಕೈಯಲ್ಲಿನ ಪಾಟ್ಲಿ, ಬಿಲ್ವಾರ ಎಂದು ನಮ್ಮ ಕಡೆ ಹೇಳುತ್ತಾರೆ. ಕೊರಳಿನಲ್ಲಿ ತಾಳಿ ಸರ ಬಿಟ್ಟು, ಎಲ್ಲವನ್ನೂ ಶ್ರೀಮತಿ ಇಂದಿರಾ ಗಾಂಧಿಯವರ ತೂಕದಷ್ಟು, ಶ್ರೀಮಾನ್ ನಿಜಲಿಂಗಪ್ಪನವರ ತೂಕದಷ್ಟು ಬಂಗಾರ ತೂಗಿ ರಾಷ್ಟ್ರೀಯ ರಕ್ಷಣಾ ನಿಧಿಗೆ ಕೊಟ್ಟಂತಹ ಜಿಲ್ಲೆ ನಮ್ಮದು. ನಮ್ಮ ಕಡೆ ಯಾವುದೇ ಯೋಜನೆ ಆಗುತ್ತಿಲ್ಲ ಎನ್ನುವುದರ ಬಗ್ಗೆ ನನಗೆ ನೋವು ಇದೆ. ನಾವು 4 ಲಕ್ಷ ಎಕರೆ ಅತ್ಯಂತ ಫಲವತ್ತಾತ ಭೂಮಿಯನ್ನು ಕಳೆದುಕೊಳ್ಳುತ್ತೇವೆ. ನಾವು ನಿರ್ಗತಿಕರಾಗುತ್ತೇವೆ. ನಮಗೆ ತಲೆಯ ಮೇಲೆ ಮಸಿ ಗಡಿಗೆ ಹೊತ್ತುಕೊಂಡು ಬೀದಿಗೆ ಬರುವಂತಹ ಸ್ಥಿತಿ ಬಂದಿದೆ. ಕೊನೆಯ ಪಕ್ಷ ಮನೆ-ಮಠ, ಆಸ್ತಿ-ಪಾಸ್ತಿ ಕಳೆದುಕೊಳ್ಳುವಂತಹವರಿಗೆ ಯೋಗ್ಯವಾದಂತಹ ಮತ್ತು ನ್ಯಾಯೋಚಿತವಾದಂತಹ ಪರಿಹಾರ ಧನ ಕೊಡಬೇಕಲ್ಲವೇ? ನಾವು ರಾಷ್ಟ್ರಕ್ಕೆ ಕೊಟ್ಟಿದ್ದು, ಕೊಟ್ಟಿದ್ದೇವೆ ಎಂದು ಹೇಳಬಾರದು. ನಮ್ಮ ಹಿರಿಯರು ಪಾಟೀಲರೇ, ಈ ರೀತಿ ಮಾತನಾಡಬಾರದಿತ್ತು ಎಂದು ನನಗೆ ಬೈಯುತ್ತಾರೆ. ನಿಶ್ಚಿತವಾಗಿ ಆ ರೀತಿ ಹೇಳುತ್ತಾರೆ. ಆದರೆ, ಅನಿವಾರ್ಯವಾಗಿ ಇವರು ಹೇಳಿದರು ಎಂದು ನಾನು ಹೇಳಬೇಕಾಗಿತ್ತು.

**ವೈಸ್ ಛೇರ್ಮನ್:-** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ರಾಷ್ಟ್ರಕ್ಕೋಸ್ಕರ ಮತ್ತು ರಾಜ್ಯಕ್ಕೋಸ್ಕರ ಮಾಡಿರುವಂತಹ ಒಳ್ಳೆಯ ಉದಾಹರಣೆಗಳನ್ನು ಸ್ಮರಿಸುವುದು ತಪ್ಪೇನಿಲ್ಲ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇವತ್ತು ಆ ಭಾಗದ ಜನರು ಅವರ ಅಜ್ಜ-ಮುತ್ತಜ್ಜನ ಕಾಲದಲ್ಲಿ ಗಳಿಸಿರುವಂತಹ ಜಮೀನನ್ನು ಕಳೆದುಕೊಳ್ಳುತ್ತಾರೆ. ಆ ಜಮೀನನ್ನು ಬಿಟ್ಟರೆ ಅವರಿಗೆ ಗತಿಯೇ ಇಲ್ಲ. ಅವರು ಎಲ್ಲಿಗೆ ಹೋಗಬೇಕು. ಏನಾದರೂ ಒಂದು ವ್ಯಾಪಾರ ವಹಿವಾಟು ಮಾಡುವುದಕ್ಕೆ ಹೋದರೆ ಕೈಸುಟ್ಟುಕೊಳ್ಳುತ್ತಾರೆ. ನಿಶ್ಚಿತವಾಗಿ ಅಷ್ಟು ದುಡ್ಡು ಹೋಗಿಬಿಡುತ್ತದೆ. ಬಸ್ ಸ್ಟ್ಯಾಂಡ್‌ಗೆ ಹೋಗಿ ಹಮಾಲಿ ಮಾಡುವಂತಹ ಪರಿಸ್ಥಿತಿ ಬರುತ್ತದೆ. ಸಂತಸ್ತ್ರರನ್ನು, project affected people, ನೂರಾರು ಎಕರೆ ಜಮೀನು ಇದ್ದವರು ಇವತ್ತು ಬಸ್ ಸ್ಟ್ಯಾಂಡ್‌ನಲ್ಲೋ, ಎಲ್ಲಿಯೋ ಕ್ಕೂಲಿ ನಾಲಿ ಮಾಡಿಕೊಂಡು ಬದುಕುತ್ತಿದ್ದಾರೆ. Gangetic belt ಗೆ ಸರಿ ಸಮಾನವಾದಂತಹ ಅತ್ಯಂತ ಫಲವತ್ತತೆಯನ್ನು ಹೊಂದಿದಂತಹ ಜಮೀನನ್ನು ಕಳೆದುಕೊಂಡಾಗ ಯಾವುದೇ ಪಕ್ಷದ ಸರ್ಕಾರ ಇರಲಿ, ನಾವು ನ್ಯಾಯಸಮ್ಮತವಾದಂತಹ, ನ್ಯಾಯೋಚಿತವಾದಂತಹ ಬೆಲೆ ಅವರಿಗೆ ಕೊಡಲೇಬೇಕು. ನಾವು ಅವರಿಗೆ ಆ ಭೂಮಿಯಂತೂ ಕೊಡುವುದಕ್ಕಾಗುವುದಿಲ್ಲ. ನಾಳೆ ಅವರು ಬದುಕು ಕಟ್ಟಿಕೊಳ್ಳಬೇಕಲ್ಲವೇ? ಅವರ ಪರಿಸ್ಥಿತಿ ಹಾಗಿರುತ್ತದೆ. ಅವರು ಬೀದಿಗೆ ಬರುತ್ತಾರೆ. ಇಲ್ಲಿಯತನಕ ಪಕ್ಕದ ಗೋವಾಗೆ ಹೋದೆವು. ಮಂಗಳೂರಿಗೆ ಹೋದೆವು. ಮಾನ್ಯ ಸದಸ್ಯರಾದ ಬಿ.ಕೆ.ಹರಿಪ್ರಸಾದ್ ಮತ್ತು ನಮ್ಮ ಸಭಾನಾಯಕರ ಜಿಲ್ಲೆಗೆ ಹೋದೆವು. ಮಹಾರಾಷ್ಟ್ರಕ್ಕೆ ಹೋದೆವು. ಇಲ್ಲಿಗೆಲ್ಲಾ ಹೋಗಿ ಜೀವನ ನಿರ್ವಹಣೆ ಮಾಡುತ್ತಿದ್ದೆವು. ಈ ಯೋಜನೆಯಾದರೆ ನಾವು ಸ್ವಂತ ಸಮೃದ್ಧಿಯಿಂದ ಮತ್ತೊಂದು ಕಡೆ ವಲಸೆ ಹೋಗಲಾರದಂತೆ ನಮ್ಮ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಸಹಾಯವಾಗುತ್ತದೆ. ಯಾರು ಆಸ್ತಿ ಕಳೆದುಕೊಳ್ಳುತ್ತಾರೆ, ಯಾರು ಮನೆ ಕಳೆದುಕೊಳ್ಳುತ್ತಾರೆ, ಯಾರು ಜಮೀನು ಕಳೆದುಕೊಳ್ಳುತ್ತಾರೆ, ಅವರಿಗೆ ಯೋಗ್ಯವಾದಂತಹ ಪರಿಹಾರ ಧನ ಕೊಡಬೇಕಲ್ಲವೇ?

**ಶ್ರೀ ಬಿ.ಸಿ.ಪಾಟೀಲ್ (ಕೃಷಿ ಸಚಿವರು):-** ಮಾನ್ಯ ವಿರೋಧ ಪಕ್ಷದ ನಾಯಕರೇ, ಪರಿಹಾರ ಧನ ಕೊಡಬೇಕು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನೋಡಿ. ನನ್ನ ದೃಷ್ಟಿಯಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಹಿರಿತನದಲ್ಲಿ ಸ್ವಾತಂತ್ರ ಸಂಗ್ರಾಮದಲ್ಲಿ ಭಾಗಿಯಾದಂತಹ ಸ್ವಾತಂತ್ರ ಯೋಧರು ಏನು ತ್ಯಾಗ, ಬಲಿದಾನ ಮಾಡಿದರು, ಅದಕ್ಕಿಂತ ದೊಡ್ಡ ತ್ಯಾಗ, ಬಲಿದಾನ ಈ ಮುಳುಗಡೆ ಸಂತಸ್ತ್ರರದ್ದು ಎಂದು ಹೇಳುವುದಕ್ಕೆ ಬಯಸುತ್ತೇನೆ. ಸ್ವಾತಂತ್ರ ಯೋಧರ ಸರಿಸಮಾನ ಅವರ ತ್ಯಾಗ. ಅವರ ತ್ಯಾಗದ ಫಲವಾಗಿ, ಅವರ ಮನೆ-ಮಠ, ಆಸ್ತಿ-ಪಾಸ್ತಿ ಕಳೆದುಕೊಂಡಿರುವುದರ ಫಲವಾಗಿ ಇವತ್ತು ರಾಜ್ಯದ ವರಮಾನ ಹೆಚ್ಚಾಗಿದೆ. ರಾಷ್ಟ್ರದ ವರಮಾನ ಹೆಚ್ಚಾಗಿದೆ. ಇವತ್ತು 30 ಲಕ್ಷ 32 ಸಾವಿರ ಎಕರೆ ಜಮೀನು ನೀರಾವರಿ ಆಗುತ್ತದೆ. ಇದರಿಂದ, ಎಲ್ಲರ ಬದುಕು ಬಂಗಾರವಾಗಿದೆ. ಅಂತಹ ಸಂದರ್ಭದಲ್ಲಿ ಕಳೆದುಕೊಳ್ಳುವವರ ಬಗ್ಗೆಯೂ ಕಾಳಜಿ ಇರಬೇಕಲ್ಲವೇ? ನನಗೆ ಬಹಳ ಖುಷಿ ಇದೆ. ಇವತ್ತು ಇಬ್ಬರು ಸಚಿವರು ಎದುರಿಗೆ ಕುಳಿತಿದ್ದಾರೆ. ಅವರು ಹೇಳಿದ ಹಾಗೆ ಇಬ್ಬರು ಸಚಿವರು ನನ್ನ ಆತ್ಮೀಯರೇ, ಬಹಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕ್ಲೋಸ್. ನಮ್ಮ ಸರ್ಕಾರ ಇದ್ದಾಗ ಅವರು 40 ಲಕ್ಷ ಎಕರೆಗೆ ಪರಿಹಾರ ಕೊಡಬೇಕು. 50 ಲಕ್ಷ ಎಕರೆಗೆ ಪರಿಹಾರ ಕೊಡಬೇಕೆಂದು ಹೇಳುತ್ತಿದ್ದರು. ಇವತ್ತು ನಮಗೆ ಬಹಳ ಖುಷಿಯಾಗಿದೆ. ಬಹಳ ಸಂತೋಷವೇನೆಂದರೆ, ನಮ್ಮವರು ಇಷ್ಟು ಹೇಳುವವರು ಒಬ್ಬರು ಜಲಸಂಪನ್ಮೂಲ ಸಚಿವರು ಇದ್ದಾರೆ. ಇನ್ನೊಬ್ಬರು ನಮ್ಮ ಜಿಲ್ಲೆಯ ಪ್ರಭಾವಿ ಮಂತ್ರಿಗಳಿದ್ದಾರೆ. ತಾವು ಏನು ಹೇಳಿದ್ದೀರಿ. ನಾನು ತಮ್ಮಲ್ಲಿ ದಯಮಾಡಿ ಕೈಮುಗಿಯುತ್ತೇವೆ. ಅದನ್ನು ಕೊಡಿಸಿಬಿಡಿ ಸಾಕು. ನಮ್ಮ ಭಾಗದ ಜನರು ನೆಮ್ಮದಿ ನಿಟ್ಟುಸಿರನ್ನು ಬಿಡುತ್ತಾರೆ. ಅವರು ಬದುಕನ್ನು ಕಟ್ಟಿಕೊಳ್ಳುತ್ತಾರೆ. ಮುಂದಿನ ದಿನಮಾನಗಳಲ್ಲಿ ಅವರಿಗೆ ಅನುಕೂಲವಾಗುತ್ತದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ನಾನು ವ್ಯಕ್ತಪಡಿಸುತ್ತೇನೆ. ಅವರ ತ್ಯಾಗ ಅಷ್ಟೇ ಅಲ್ಲ, ನಮ್ಮ ಜಿಲ್ಲೆಯ ತ್ಯಾಗ. ಅದಕ್ಕೆ ತಾವು ಬೇಗನೆ ಒಂದು ನಿರ್ಣಯವನ್ನು ಕೈಗೊಳ್ಳಿ. ಇನ್ನು ಒಂದೆರಡು ಸಣ್ಣ ಸಣ್ಣ ವಿಷಯಗಳನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ನೋಟಿಫಿಕೇಷನ್ ಮಾಡುವ ವಿಚಾರವಾಗಿ quick ಆಗಿ using their influence, ಪ್ರಧಾನಮಂತ್ರಿಯವರನ್ನು ಭೇಟಿಯಾಗಿ, ತಾವು ಏನು ಮಾಡುತ್ತೀರೋ ಮಾಡಿ ಮತ್ತು 60,000 ಕೋಟಿ ರೂಪಾಯಿಗಳ ಬಗ್ಗೆ ಬಹಳ ಮಂದಿ ನಮ್ಮ ಸ್ನೇಹಿತರು ಏನು ತಿಳಿದಿದ್ದಾರೆ ಎಂದರೆ, 60,000 ಕೋಟಿ ರೂಪಾಯಿಗಳನ್ನು ಹೇಗೆ ತರುವುದು ಎಂದು ಅಂದುಕೊಂಡಿದ್ದಾರೆ. ನಮ್ಮ ರಾಜ್ಯದಲ್ಲಿ ಈ ಯೋಜನೆ ಪ್ರಾರಂಭವಾದಾಗ ನಮ್ಮ ರಾಜ್ಯದ ಬಜೆಟ್ 10 ಸಾವಿರ ಕೋಟಿ ರೂಪಾಯಿಗಳಿತ್ತು. ನಾನು ಸುಮಾರು 20-25 ವರ್ಷಗಳ ಬಜೆಟ್ ಪುಸ್ತಕಗಳನ್ನು for my academic interest ತರಿಸಿದ್ದೆ. 10 ಸಾವಿರ ಕೋಟಿ ರೂಪಾಯಿಗಳು ಇದ್ದಾಗ ಯುಕೆಪಿಗೆ ಶೇಕಡಾ 10 ರಷ್ಟು ಕೊಟ್ಟಿದ್ದಾರೆ. ಶೇಕಡಾ 10 ರಷ್ಟು ಎಂದರೆ ಒಂದು ಸಾವಿರ ಕೋಟಿ ರೂಪಾಯಿಗಳಾಯಿತು. 10 ಸಾವಿರ ಕೋಟಿ ರೂಪಾಯಿಗಳ ಬಜೆಟ್ ಇದ್ದಾಗ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇವತ್ತಿನ ಬಜೆಟ್ ಗಾತ್ರ ಎರಡೂವರೆ ಲಕ್ಷ ಕೋಟಿ ರೂಪಾಯಿಗಳಾಗುತ್ತದೆ. ಮುಂದಿನ ವರ್ಷ ಮೂರು ಲಕ್ಷ ಕೋಟಿ ರೂಪಾಯಿಗಳಾಗುತ್ತದೆ.

(ಮುಂದು)

**(1218) ಎಸ್‌ಪಿಆರ್/ಜಿಆರ್ 4:20 21/12/2021 (ವೈಸ್ ಛೇರ್ಮನ್ ರವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್(ಮುಂದು):-**

ನಮ್ಮ ಆಯವ್ಯಯದ ಗಾತ್ರ 3 ಲಕ್ಷ ಕೋಟಿ ರೂಪಾಯಿಗಳಷ್ಟು ಆದಾಗ ಅದರ ಶೇಕಡಾ 10 ರಷ್ಟು ಎಂದು ಹೇಳಿದಾಗ ಅದು 30 ಸಾವಿರ ಕೋಟಿ ರೂಪಾಯಿಗಳಷ್ಟಾಗುತ್ತದೆ. ಆದರೆ ಈ ಯೋಜನೆಗೆ 60 ಸಾವಿರ ಕೋಟಿ ರೂಪಾಯಿಗಳಷ್ಟು ಅವಶ್ಯಕತೆ ಇದೆ. ಅಂದರೆ ಇದು ಎರಡು ವರ್ಷಗಳ ಆಯವ್ಯಯದ ಮೊತ್ತವಾಗಿದೆ. It is very easy. ವರ್ಷಕ್ಕೆ 30 ಸಾವಿರ ಕೋಟಿ ರೂಪಾಯಿಗಳಂತೆ ಎರಡು ವರ್ಷಗಳಲ್ಲಿ ಕ್ರೋಢೀಕರಿಸಬಹುದು. ಕೃಷ್ಣಾ ಮೇಲ್ದಂಡೆ ಯೋಜನೆಗೆ ಪ್ರತಿ ವರ್ಷ ತಲಾ 30 ಸಾವಿರ ಕೋಟಿ ರೂಪಾಯಿಗಳಂತೆ ಅನುದಾನ ಮೀಸಲಿಟ್ಟರೆ, ಎರಡು ವರ್ಷದಲ್ಲಿ ಯೋಜನೆಯು ಪೂರ್ಣಗೊಳ್ಳುತ್ತದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆದರೆ, ಈ ವಿಚಾರದಲ್ಲಿ ಸರ್ಕಾರವು ಹೆಚ್ಚಿನ ಆಸಕ್ತಿಯನ್ನು ವಹಿಸಿ, ತೆಲಂಗಾಣ ರಾಜ್ಯಕ್ಕಿಂತ ನಾವು ಒಂದು ಹೆಜ್ಜೆಯನ್ನು ಹಿಂದಕ್ಕೆ ಸರಿಯುವುದಿಲ್ಲ ಎಂಬುದಾಗಿ ಯೋಚಿಸಿ..., ತೆಲಂಗಾಣ ರಾಜ್ಯದವರು ಇತ್ತೀಚೆಗೆ ಉದಯಿಸಿ, ಈಗಷ್ಟೇ ಕಣ್ಣು ತೆರೆದಿದೆ, ಆದರೆ, ನಾವು well established State ಆಗಿದ್ದು, ಆರ್ಥಿಕವಾಗಿ ಮತ್ತು ಎಲ್ಲಾ ದೃಷ್ಟಿಯಿಂದಲೂ ಸಹ ಸದೃಢರಾಗಿದ್ದೇವೆ. ದೇಶದಲ್ಲಿಯೇ ನಮ್ಮದು ಮೊದಲನೆ ಸ್ಥಾನದ ರಾಜ್ಯವಾಗಿದೆ. ಅವರು ಕೇವಲ ಒಂದೂವರೆ ವರ್ಷದಲ್ಲಿ ಮಾಡಿದ್ದಾರೆ ; ಹೀಗಾಗೀ ನೀವೂ ಸಹ ಎರಡು ವರ್ಷದ ಬದಲಿಗೆ, ಎರಡೂವರೆ ವರ್ಷದಲ್ಲಿಯೇ ಮಾಡಿ. ಈ ಯೋಜನೆಗ್ಗೆ ಎರಡು ವರ್ಷಗಳ ಆಯವ್ಯಯದ ಶೇಕಡಾ 10 ರಷ್ಟು ಮೊತ್ತವನ್ನು ಮೀಸಲಿಟ್ಟಲ್ಲಿ ಇದು ಯೋಜನೆ ಪೂರ್ಣಗೊಳ್ಳುವುದಕ್ಕೆ ಸಾಕಾಗುತ್ತದೆ. ಅಂದರೆ 3 ಲಕ್ಷ ಕೋಟಿ ರೂಪಾಯಿಗಳ ಆಯವ್ಯಯದಲ್ಲಿ ಅದರ ಶೇಕಡಾ 10 ರಷ್ಟನ್ನು ಮೀಸಲಿಟ್ಟರೆ ಆಗುತ್ತದೆ. ಇದನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಏಕೆ ಮಾಡಬೇಕು? ಯೋಜನೆಯ 1 ಮತ್ತು 2 ಹಂತಗಳನ್ನು ಪೂರ್ಣಗೊಳಿಸಲು ರಾಜ್ಯದ ಬೊಕ್ಕಸದಿಂದ ಹಣ ಖರ್ಚಾಗಿದೆ. ಶ್ರೀ ಹರಿಪ್ರಸಾದ್ ರವರೇ, ಈ ಯೋಜನೆಗೆ ಎಲ್ಲಿಂದಲೂ ಹಣವನ್ನು ತಂದಿರುವುದಿಲ್ಲ. ನಮ್ಮ ರಾಜ್ಯದ ಆಯವ್ಯಯದ ಗಾತ್ರ 10 ಸಾವಿರ ಕೋಟಿ ರೂಪಾಯಿಗಳಷ್ಟು ಇದ್ದಾಗ ಈ ಯೋಜನೆಯನ್ನು ಪ್ರಾರಂಭಿಸಲಾಯಿತು; ನಮ್ಮ ರಾಜ್ಯದ ಬೊಕ್ಕಸದಿಂದಲೇ ಹಣವನ್ನು ಖರ್ಚು ಮಾಡಿ ಯೋಜನೆಯ 1 ಮತ್ತು 2 ಹಂತಗಳನ್ನು ಪೂರ್ಣಗೊಳಿಸಲಾಗಿದೆ. ಇದಕ್ಕಾಗಿ 2,73,000 ಎಕರೆಗಳಷ್ಟು ಭೂಮಿಯನ್ನು ಮತ್ತು 176 ಗ್ರಾಮಗಳನ್ನು ಸ್ವಾಧೀನಪಡಿಸಿಕೊಂಡು ಯೋಜನೆಯನ್ನು ಪೂರ್ಣಗೊಳಿಸಲಾಗಿದೆ. ಈಗ ಕೇವಲ 20 ಗ್ರಾಮಗಳನ್ನಷ್ಟೇ ಸ್ವಾಧೀನ ಪಡಿಸಿಕೊಳ್ಳಬೇಕಾಗಿದೆ. ಆಗ ಬಾಗಲಕೋಟೆ ನಗರವನ್ನೊಳಗೊಂಡಂತೆ ಅಲ್ಲಿನ ಗ್ರಾಮೀಣ ಭಾಗದಲ್ಲಿರುವ 80 ಸಾವಿರ ಮನೆಗಳನ್ನು ಸ್ವಾಧೀನಪಡಿಸಿಕೊಳ್ಳಲಾಯಿತು. ಆದರೆ ಈಗ ಕೇವಲ 10 ಸಾವಿರ ಮನೆಗಳನ್ನಷ್ಟೇ ಸ್ವಾಧೀನಪಡಿಸಿಕೊಳ್ಳಬೇಕಾಗಿದೆ. ಆಗ ಒಟ್ಟು 176 ಗ್ರಾಮಗಳನ್ನು ಸ್ವಾಧೀನಪಡಿಸಿಕೊಂಡು, 136 ವಸತಿ ಕೇಂದ್ರಗಳನ್ನು ಕಲ್ಪಿಸಿಕೊಡಲಾಗಿತ್ತು. ಹೀಗಾಗಿ ಇವತ್ತಿನ ದಿವಸ ಅಲ್ಲಿ ಜನರು ನೆಲೆಸಿದ್ದಾರೆ. ಶ್ರೀ ನಿರಾಣಿ ರವರು ಪ್ರಸ್ತಾಪಿಸಿದಂತೆ ಕೆಲವು ಗ್ರಾಮದವರು ಅಲ್ಲಿಗೆ ಬಂದಿಲ್ಲ. 2,73,000 ಎಕರೆಗಳಷ್ಟು ಭೂಮಿಯನ್ನು ಯೋಜನೆಗಾಗಿ ಸ್ವಾಧೀನಪಡಿಸಿಕೊಳ್ಳಲಾಗಿದೆ. ಆದರೆ ಈಗ ಕೇವಲ 1,30,000 ಎಕರೆಗಳಷ್ಟು ಭೂಮಿಯ ಅವಶ್ಯಕತೆ ಇದೆ. ಹೀಗಾಗಿ ಈ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಏಕೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಲಿಚ್ಛಿಸುತ್ತೇನೆ. ಯೋಜನೆಗೆ ಅವಶ್ಯಕವಾದ ಅನುದಾನವನ್ನು ಕೇಂದ್ರ ಸರ್ಕಾರದವರು ನೀಡುತ್ತಾರೆಂದರೆ, ನೀವು ಮಾಡಿ. You go ahead, I don't mind. ಆದರೆ ಈ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಮಾಡುವುದರ ಹಿಂದೆ ಇರುವ ಕಾರಣವೇನು? ಈ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಮಾಡಲು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿರುವುದಾಗಿ ತಿಳಿಸಿದ್ದಾರೆ. ಆದರೆ ಈ ವಿಚಾರದಲ್ಲಿ ಇವರು ಕೇಂದ್ರ ಸರ್ಕಾರವನ್ನು ಹೋಗಿ ಭೇಟಿ ಮಾಡುವುದಿಲ್ಲ. ಒಂದು ವೇಳೆ ಕೇಂದ್ರ ಸರ್ಕಾರವು ಇದನ್ನು ಅನುಮೋದಿಸದಿದ್ದರೆ, ರಾಜ್ಯ ಸರ್ಕಾರದ ಯೋಜನೆಯು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪೂರ್ಣಗೊಳ್ಳುವುದಿಲ್ಲ. ಆಗ ಇದಕ್ಕೆ ಯಾರು ಹೊಣೆಗಾರರಾಗುತ್ತಾರೆ? ನಮ್ಮ ರಾಜ್ಯದ ಬೊಕ್ಕಸದಿಂದ ಯೋಜನೆಯ ಅನುಷ್ಠಾನಕ್ಕಾಗಿ 176 ಗ್ರಾಮಗಳನ್ನು, 80 ಮನೆಗಳನ್ನು ಮತ್ತು 2,73,000 ಎಕರೆಗಳಷ್ಟು ಭೂಮಿಯನ್ನು ಈಗಾಗಲೇ ಸ್ವಾಧೀನಪಡಿಸಿಕೊಳ್ಳಲಾಗಿದೆ. ಆದರೆ ಈಗ ಕೇವಲ 20 ಗ್ರಾಮಗಳಷ್ಟೇ ಅವಶ್ಯಕವಾಗಿದೆ. ಅಂದರೆ, 176 ಗ್ರಾಮಗಳ ಬದಲಿಗೆ 20 ಗ್ರಾಮಗಳಷ್ಟೇ.

**ಶ್ರೀ ಗೋವಿಂದ ಎಂ.ಕಾರಜೋಳ(ಜಲಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರೇ, ಸ್ವಲ್ಪ yield ಆಗಿ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಗೋವಿಂದ ಕಾರಜೋಳ ರವರೇ, ನೀವು ಮಧ್ಯದಲ್ಲಿ interrupt ಮಾಡಬೇಡಿ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಈಗ ನೀವು ಬಹಳ ಹಿಂದಿನ ಸಂಗತಿಗಳನ್ನು ಹೇಳುತ್ತಿದ್ದೀರಿ. ಈಗ ನಾವು 2013 ರ ನಂತರದ ವಿಚಾರಗಳ ಬಗ್ಗೆ ಮಾತನಾಡಬೇಕಾಗಿದೆ. ಯೋಜನೆಗಾಗಿ ಈ ಹಿಂದೆ ಸ್ವಾಧೀನಪಡಿಸಿಕೊಂಡಾಗ ಶ್ರೀ ಜೆ.ಹೆಚ್.ಪಟೇಲ್ ಮತ್ತು ಶ್ರೀ ಹೆಚ್.ಡಿ.ದೇವೇಗೌಡರವರುಗಳ ಸರ್ಕಾರಗಳು ಅಸ್ತಿತ್ವದಲ್ಲಿದ್ದವು. ರೈತರಿಗೆ ....

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನನಗೂ ಸಹ ಆ ಹೋರಾಟಗಳು ಗೊತ್ತಿದೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರೂ ಸಹ ಆ ಹೋರಾಟದಲ್ಲಿದ್ದರು. ಹೀಗಾಗಿ ಇದರ ಕೀರ್ತಿಯನ್ನು ನಿಮ್ಮ ಕಡೆಗೆ ತೆಗೆದುಕೊಳ್ಳುವ ಪ್ರಯತ್ನವನ್ನು ಮಾಡಬೇಡಿ. ಅವತ್ತಿನ ದಿವಸ ನಾವುಗಳು ಆಡಳಿತ ಪಕ್ಷದ ಸದಸ್ಯನಾಗಿದ್ದೆನು ಮತ್ತು ಆ ಸಮಿತಿಯ ಸದಸ್ಯನೂ ಸಹ ಆಗಿದ್ದೆನು. ಅದಕ್ಕೆ ವಿರೋಧ ಪಕ್ಷದ ನಾಯಕರೂ ಸಹ ಬಂದಿದ್ದರು. ಈ ಕಾರಣಕ್ಕಾಗಿ ಇದರ ಕೀರ್ತಿಯನ್ನು ಅವರು ತೆಗೆದುಕೊಳ್ಳಲು ಹೋಗುವುದು ಬೇಡವೆಂದು ನಾನು ಹೇಳುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದರ ಕೀರ್ತಿಯನ್ನು ನಾನು ತೆಗೆದುಕೊಳ್ಳುವುದಕ್ಕೆ ಹೋಗುವುದೇ ಇಲ್ಲ. ಇದರ ಎಲ್ಲಾ ಕೀರ್ತಿಯನ್ನು ನೀವೇ ತೆಗೆದುಕೊಳ್ಳಿ; ಆದರೆ ನಮಗೆ ಯೋಜನೆಯನ್ನು ಪೂರ್ಣಗೊಳಿಸಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** 2014 ನೇ ಸಾಲಿನಿಂದ ಎಲ್ಲಾ ಕೀರ್ತಿಯನ್ನೂ ನಿಮಗೇ ನೀಡಿದ್ದೇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, 2013 ನೇ ಸಾಲಿನಿಂದ ಈ ಕಡೆಗೆ ಬನ್ನಿ ಎಂದು ನಾನು ವಿರೋಧ ಪಕ್ಷದ ನಾಯಕರಿಗೆ ಹೇಳುತ್ತಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಎಲ್ಲ credit ವನ್ನೂ ನೀವೇ ತೆಗೆದುಕೊಳ್ಳುತ್ತಿದ್ದೀರಿ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ನಾನು ಆ ರೀತಿಯಾಗಿ ಹೇಳುತ್ತಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಗೋವಿಂದ ಕಾರಜೋಳ ರವರೇ, ನಿಮಗೆ ನನ್ನ ಸ್ವಭಾವ ತಿಳಿದಿದೆ. ಈ ವಿಚಾರದಲ್ಲಿ ನಾನು ರಾಜಕೀಯವಾಗಿ ಮಾತನಾಡುತ್ತಿಲ್ಲ. ನಾನು ಇದರಲ್ಲಿ ಒಂದು ಶಬ್ದವನ್ನೂ ಸಹ ರಾಜಕೀಯವಾಗಿ ಬಳಕೆ ಮಾಡುವುದಿಲ್ಲ. ನಾನು ಇಲ್ಲಿ ರಾಜಕೀಯವಾಗಿ ಮಾತನಾಡಲು ಬಂದರೆ, ನನ್ನ ಕ್ಷೇತ್ರದ ಜನರು ಮತ್ತು ಯಾರೂ ಸಹ ನನ್ನನ್ನು ಕ್ಷಮಿಸುವುದಿಲ್ಲ. ಇಷ್ಟು ಪ್ರಮಾಣದಲ್ಲಿ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದು ನಾನು ಹೇಳಿದೆ. ಈ ಯೋಜನೆಯ ಅನುಷ್ಠಾನಕ್ಕಾಗಿ 176 ಗ್ರಾಮಗಳನ್ನು ನೀವೇ ಸ್ವಾಧೀನಪಡಿಸಿಕೊಂಡಿದ್ದೀರಿ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಈ ಯೋಜನೆಯ ಅನುಷ್ಠಾನಕ್ಕಾಗಿ ವಿಶ್ವ ಬ್ಯಾಂಕಿನಿಂದ ಸಾಲವನ್ನು ಪಡೆಯಲಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರು ಯಾವುದೇ ಸಾಲವನ್ನು ಪಡೆದುಕೊಳ್ಳಲಿ. ಈ ಯೋಜನೆಯನ್ನು ಪೂರ್ಣಗೊಳಿಸಲು, "Beg, borrow or steal. But, you complete this project." ಎಂಬುದಾಗಿ ನಾನು ಹೇಳಿದ್ದೇನೆ. It is my say. You can beg, borrow or steal. ಏನೇ ಮಾಡಿದರೂ ಸಹ ಈ ಯೋಜನೆಯನ್ನು ಪೂರ್ಣಗೊಳಿಸಬೇಕು. ಆ ಭಾಗದ ಜನರ ಭಾವನೆಗಳನ್ನು ನಾವು ತಿಳಿದುಕೊಳ್ಳಬೇಕು. You know the pulse of the people of that area. ಶ್ರೀ ಗೋವಿಂದ ಕಾರಜೋಳರವರು ಆ ಭಾಗದಲ್ಲಿಯೇ ಹುಟ್ಟಿ, ಬೆಳೆದಿರುವುದರಿಂದ ಅವರಿಗೆ ಇದು ತಿಳಿದಿದೆ. ಪ್ರಶ್ನಿತ ಯೋಜನೆಗಾಗಿ ನಾವು ಅಂದು ಹೋರಾಟಗಳನ್ನು ಪ್ರಾರಂಭಿಸಿದಾಗ ಹೃದಯ ಶ್ರೀಮಂತಿಕೆಯುಳ್ಳ ಶ್ರೀ ಜೆ.ಹೆಚ್.ಪಟೇಲ್‌ರವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು; ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆಗ ಶ್ರೀ ಜಗ ಜೀವನ್ ರಾಂ ರವರು ಕಂದಾಯ ಮಂತ್ರಿಗಳಾಗಿದ್ದರು ಮತ್ತು ಶ್ರೀ ಅಜಯ್ ಕುಮಾರ್ ಸರ್‌ನಾಯಕ್‌ರವರು ನಮ್ಮ ಜಿಲ್ಲೆಯ ಉಸುವಾರಿ ಮಂತ್ರಿಗಳಾಗಿದ್ದರು. ಆ ಸಂದರ್ಭದಲ್ಲಿ ನಾವು ಅವರುಗಳನ್ನು ಭೇಟಿ ಮಾಡಲು ಹೋದಾಗ, ಎಷ್ಟೊಂದು ರೈತರು ತಮ್ಮ ಭೂಮಿಯನ್ನು ಕಳೆದುಕೊಳ್ಳುತ್ತಾರೆ ಹೀಗಾಗಿ ನೀವು ಏನು ಕೇಳುತ್ತೀರೋ ಅದನ್ನು ನೀಡುತ್ತೇವೆಂದು ಹೇಳಿ; ಅದನ್ನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನೀಡಿದ್ದಾರೆ. ಅವರುಗಳು ನಿಮ್ಮವರಲ್ಲವೇ? You continue that tradition. ಹೀಗಾಗಿ ನೀವು ಇಂತಹದ್ದನ್ನು ಮುಂದುವರೆಸುವಂತೆ ನಾನು ಹೇಳುತ್ತೇನೆ. ಅವರುಗಳನ್ನು ನೆನಪಿಸಿಕೊಳ್ಳದೇ ನಾನು ತಪ್ಪು ಮಾಡುವುದಕ್ಕೆ ಹೋಗುವುದಿಲ್ಲ. ಈ ಸಂದರ್ಭದಲ್ಲಿ ಯಾರು ಇದ್ದರು ಎಂದು ನಾನು ಜ್ಞಾಪಿಸಿಕೊಳ್ಳುತೇನೆ. 24 ವರ್ಷಗಳ ಹಿಂದೆ ನಾನು ಈ ಸದನವನ್ನು ಪ್ರವೇಶಿಸಿದಾಗ, ಕೃಷ್ಣಾ ಮೇಲ್ದಂಡೆ ಯೋಜನೆಯ ಸಂತ್ರಸ್ತರ ಬಗ್ಗೆ ನನ್ನ ಮೊಟ್ಟ ಮೊದಲನೆಯ ಭಾಷಣ, maiden speech ಅನ್ನು ಮಾಡಿದ್ದೆನು. ಆಗ ಶ್ರೀ ಹೆಚ್.ಕೆ.ಪಾಟೀಲ್ ರವರು ವಿರೋಧ ಪಕ್ಷದ ನಾಯಕರ ಸ್ಥಾನದಲ್ಲಿದ್ದರು. ಆಗ ನಾನು ಮೂರನೇ ಸಾಲಿನಲ್ಲಿದ್ದೆನು. ಅಷ್ಟು ದೂರದಿಂದ ನಾನು ಅಂದು ಮಾತನಾಡಿದ್ದೆನು. ಅದು ನನ್ನ ಮೊಟ್ಟಮೊದಲನೆಯ ಭಾಷಣವಾಗಿತ್ತು. 24 ವರ್ಷಗಳ ಹಿಂದೆ ನಾನು ಈ ಸದನವನ್ನು ಪ್ರವೇಶಿಸಿದ ಸಂದರ್ಭವೆಲ್ಲವೂ ಸಹ ನನಗೆ ನೆನಪಿನಲ್ಲಿದೆ. ನಾವು ಶ್ರೀ ಜೆ.ಹೆಚ್.ಪಟೇಲ್, ಜಗಜೀವನ ರಾಂ ರವರುಗಳನ್ನು ನೆನೆಸುತ್ತೇವೆ. ಜಗಜೀವನ್ ರಾಂರವರು ಶ್ರೀ ಗೋವಿಂದ ಕಾರಜೋಳರವರ ಬೀಗರಾಗಿದ್ದಾರೆ. ಅಂದು ನಾವು ಒಟ್ಟಾರೆಯಾಗಿ 12,000 ಜನರು 1,000 ವಾಹನಗಳಲ್ಲಿ ಬಂದಿದ್ದೆವು; ಆಗ ಶ್ರೀ ಅಜಯ್ ಕುಮಾರ್ ಸರ್‌ನಾಯಕ್‌ರವರು ನಮ್ಮನ್ನು ಬಹಳಷ್ಟಾಗಿ ಸ್ವಾಗತಿಸಿ, ಊರಿನ ಹೊರಗಡೆ ನಮಗೆ ವ್ಯವಸ್ಥೆಯನ್ನು ಮಾಡಿ, ನಮ್ಮೊಂದಿಗೆ ಮಾತನಾಡಿ, ನಮ್ಮ ಬೇಡಿಕೆಗಳೇನು ಎಂಬುದರ ಬಗ್ಗೆ ವಿಚಾರಿಸಿದ್ದರು. We will fulfil all your demands ಎಂಬುದಾಗಿಯೂ ಸಹ ಹೇಳಿದರು. ನೀವೂ ಸಹ ಅದೇ ಸಂಪ್ರದಾಯದಲ್ಲಿಯೇ ಬಂದವರು. ಈಗ ನಾನು ಏನು ಹೇಳುತ್ತೇನೆ, ಅದಕ್ಕೆ ನೀವು ‘Yes, ತಥಾಸ್ತು’ ಎಂದು ಹೇಳಿದರೆ, ಅದು ಮುಗಿದು ಹೋಗುತ್ತದೆ. ಯಾರು ಕೆಲಸಗಳನ್ನು ಮಾಡುತ್ತಾರೆಯೋ, ನಾನು ನನ್ನ ಜೀವನದ ಕೊನೆಯ ಉಸಿರಿನವರೆಗೂ ಸಹ ಅವರನ್ನು ನೆನಪಿಸಿಕೊಳ್ಳುತ್ತೇನೆ. ಯಾವುದನ್ನೂ ಮರೆಯುವ ಸ್ವಭಾವವು ನನಗಿಲ್ಲ. ನಾವು ಕೆಲಸವನ್ನು ಮಾಡಿದ್ದೇವೆಂದು ಕೀರ್ತಿಯನ್ನು ಪಡೆಯಲು ನಾನು ಆ ಮಾತನ್ನು ಹೇಳಿಲ್ಲ.

**ವೈಸ್ ಛೇರ್ಮನ್:-** ವಿರೋಧ ಪಕ್ಷದ ನಾಯಕರೇ, ನೀವು ನೆನಪು ಮಾಡಿ ........

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ಯೋಜನೆಗಾಗಿ 176 ಗ್ರಾಮ, 80 ಸಾವಿರ ಮನೆಗಳು ಮತ್ತು 2,73,000 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕಾಗಿ ರಾಜ್ಯದ ಬೊಕ್ಕಸದಿಂದ ಹಣ ಖರ್ಚು ಮಾಡಲಾಗಿದೆ. ಆದರೆ, ಈ ಯೋಜನೆಯನ್ನು ಪೂರ್ಣಗೊಳಿಸಲು 176 ಗ್ರಾಮಗಳ ಬದಲಾಗಿ ಕೇವಲ 20 ಗ್ರಾಮಗಳನ್ನು ಮತ್ತು 1,30,000 ಎಕರೆ ಭೂಮಿಯನ್ನು ಮತ್ತು ಕೇವಲ 10 ಸಾವಿರ ಮನೆಗಳನ್ನು ಸ್ವಾಧೀನಪಡಿಸಿಕೊಳ್ಳುವ ಅವಶ್ಯಕತೆ ಇದೆ. ಹೀಗಾಗಿ ಈಗ ಇದನ್ನು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಯೋಜನೆಯನ್ನಾಗಿ ಮಾಡಲು ಸರ್ಕಾರವು ಏಕೆ ಗುದ್ದಾಡುತ್ತಿದೆ? ಗುದ್ದಾಡಲೀ; ಆದರೆ ಸರ್ಕಾರವು ಎಲ್ಲಿಂದಾದರೂ ಸರಿ ಯೋಜನೆಗೆ ಅವಶ್ಯಕವಾದ ಅನುದಾನವನ್ನು ಪಡೆದುಕೊಳ್ಳಲಿ. You can float Bonds also. ಏನಾದರೂ ಸರಿ, ಎಲ್ಲಿಂದಾದರೂ ಸರಿ, ಸರ್ಕಾರವು ಹಣವನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತೆಗೆದುಕೊಂಡು ಬರಲಿ. ಒಂದು ವೇಳೆ, ನಾಳೆಯ ದಿನ ಇದು ರಾಷ್ಟ್ರೀಯ ಯೋಜನೆಯಾಗಿ ಆಗಲಿಲ್ಲವೆಂದಾದರೆ ಮತ್ತು ಈ ಯೋಜನೆಯು ಹೀಗೆಯೇ ಉಳಿಯಿತು ಎಂದು ಹೇಳಿದರೆ..., Elasticity ಇರುವುದರಿಂದ ರಬ್ಬರ್ ಹಿಗ್ಗುತ್ತದೆ. ಆದರೆ, ಇದು ಎಲ್ಲಿಯವರೆಗೆ ಹಿಗ್ಗುತ್ತದೆ? ಇದು ಒಂದು ಹಂತದವರೆಗೆ ಮಾತ್ರವೇ ಹಿಗ್ಗುತ್ತದೆ? ಒಂದು breaking point ಮುಟ್ಟಿದಾಗ, ಅದು cut ಆಗುತ್ತದೆ. ನಮ್ಮ ತಾಳ್ಮೆಯೂ ಸಹ ಆ ರೀತಿಯಾಗಿ ಆಗಬಾರದು. ನಮಗೂ ಸಹ ತಾಳ್ಮೆ, ಸಹನೆಗಳಿವೆ. ಆಡಳಿತ ಪಕ್ಷದವರ ಮೇಲೆ ಅಪಾರವಾದ ಗೌರವ, ನಂಬಿಕೆ, ವಿಶ್ವಾಸಗಳಿವೆ. ಇಂತಹ ಅವಕಾಶವು ನಿಮಗೆ ಮತ್ತೊಮ್ಮೆ ದೊರೆಯುವುದಿಲ್ಲ. ಒಂದು ವೇಳೆ, ಅದು ಸಿಕ್ಕಿದರೆ ಒಳ್ಳೆಯದಾಗುತ್ತದೆ. ನಿಮಗೆ ಅವಕಾಶ ಸಿಗುವುದಿಲ್ಲವೆಂದು ನಾನು ರಾಜಕೀಯವಾಗಿ ಹೇಳುತ್ತಿದ್ದೇನೆಂದು ತಿಳಿಯಬೇಡಿ. Opportunity knocks once at your door. Make maximum use of it. ಅವಕಾಶಗಳು ಮೇಲಿಂದ ಮೇಲೆ ಮನೆಗೆ ಬರುವುದಿಲ್ಲ. ಆದರೆ, ಒಮ್ಮೆ ಮಾತ್ರವೇ ಅವಕಾಶ ದೊರೆಯುತ್ತದೆ. ಹೀಗಾಗಿ ಅದರ ಸದ್ಬಳಕೆಯನ್ನು ಮಾಡಿಕೊಳ್ಳಬೇಕು. 'You explore all possibilities, you will come up in the life' ಎಂಬುದಾಗಿ ಹಿರಿಯರು ಹೇಳುತ್ತಾರೆ. ಈಗ ನಿಮಗೆ ಅವಕಾಶ ಮತ್ತು ಒಳ್ಳೆಯ ವಾತಾವರಣ ದೊರೆತಿದೆ. ಬಹಳಷ್ಟು ಅನುಕೂಲವಾಗುವ ಪರಿಸ್ಥಿತಿಗಳು ನಿರ್ಮಾಣವಾಗಿವೆ. ಬಿ.ಜೆ.ಪಿ., ಪಕ್ಷದ ಸರ್ಕಾರವು ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿ ಶ್ರೀ ನರೇಂದ್ರ ಮೋದಿ ರವರ ಸರ್ಕಾರವು ಅಸ್ತಿತ್ವದಲ್ಲಿವೆ. ರಾಜ್ಯದಿಂದ ಕೇಂದ್ರ ಸರ್ಕಾರಕ್ಕೆ ಅಪಾರವಾದ ಕೊಡುಗೆಯನ್ನು ನೀಡಲಾಗಿದೆ. ಇಷ್ಟೆಲ್ಲಾ ರೀತಿಯ ಅನುಕೂಲಗಳಿದ್ದಾಗ, ಯೋಜನೆಯನ್ನು ಪೂರ್ಣಗೊಳಿಸಿಲ್ಲವೆಂದಾದರೆ..., ನಾನೊಂದು ಮಾತನ್ನು ಹೇಳುತ್ತೇನೆ, ತಪ್ಪು ತಿಳಿಯಬೇಡಿ. ಯಾವುದೇ ಪರಿಸ್ಥಿತಿಯಲ್ಲಿ ಜನ ನಿಮ್ಮನು ಕ್ಷಮಿಸುವುದಿಲ್ಲ. ನೀವು ಕೆಲಸಗಳನ್ನು ಮಾಡಿ. ನಿಮ್ಮ ಹೆಸರು ಇತಿಹಾಸದ ಪುಟದಲ್ಲಿ ಅಜರಾಮರವಾಗಿ ಉಳಿಯುತ್ತದೆ. ಜನರು ನಿಮ್ಮನ್ನು ಪೂಜಿಸುತ್ತಾರೆ. ಮನೆ ಮನೆಗಳಲ್ಲಿ ನಿಮ್ಮ ಫೋಟೋಗಳನ್ನು ಜನರು ಹಾಕಿಕೊಳ್ಳುತ್ತಾರೆ. ಪ್ರತಿ ದಿನ ಬೆಳಗ್ಗೆ ಜನರು ಹನುಮ, ಬಸವ, ದುರ್ಗಮ್ಮ, ದ್ಯಾಮಮ್ಮ ಇತ್ಯಾದಿ ದೇವಸ್ಥಾನಗಳಿಗೆ ಹೋಗುವ ಬದಲಾಗಿ, ನಿಮ್ಮ ಫೋಟೋಗಳಿಗೇ ನಮಸ್ಕರಿಸುತ್ತಾರೆ. ಇಂತಹ ಕೆಲಸಗಳನ್ನು ಸರ್ಕಾರವು ಮಾಡಬೇಕು. This is a golden opportunity for you. You make use of it and complete it. I hope, you will definitely do the matter.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಮ್ಮ ಗೋವಿಂದ ಕಾರಜೋಳ ರವರಿಗೆ ಆ ಧೈರ್ಯವಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಶ್ರೀ ರವಿಕುಮಾರ್ ರವರು ಇಲ್ಲಿ ರಾಜಕೀಯವಾಗಿ ಮಾತನಾಡುವುದು ಬೇಡ.

**ವೈಸ್ ಛೇರ್ಮನ್:-** ಮಾನ್ಯ ಎಸ್.ಆರ್.ಪಾಟೀಲ್ ರವರೇ, ನೀವು ನಿಮ್ಮ ನೆನಪಿನ ಆಳದಿಂದ ಆ ಸಂಗತಿಯನ್ನು ನೆನಪು ಮಾಡಿದ್ದಕ್ಕೋಸ್ಕರ ಅನೇಕ ಮಂದಿಗೆ ...., ನೋಡಿ, ಇದು ಅವರ ಸೌಭಾಗ್ಯವಾಗಿದೆ. ರಾಮಕೃಷ್ಣ ಹೆಗ್ಡೆಯವರಂತಹ ಮುತ್ಸದ್ದಿಯ ಕೈಕೆಳಗೆ ಈ ಯೋಜನೆಯನ್ನು ಪ್ರಾರಂಭಿಸುವ ಅವಕಾಶವು ಅವರಿಗೆ ದೊರಕಿತ್ತು. ಇವತ್ತಿನ ದಿವಸ ಅವರ ಕಷ್ಟಗಳೇನು ಇದೆಯೋ ಗೊತ್ತಿಲ್ಲ. ಆದರೆ, ನೀರಾವರಿ ಸಚಿವರಾಗುವ ಮತ್ತೊಂದು ದೊಡ್ಡ ರಾಜಕೀಯ ಯಾನದಲ್ಲಿ ಅವರಿಗೆ ಅವಕಾಶವಿದೆ. ಅವರಿಗೂ ಸಹ ಬದ್ಧತೆ ಇದೆ. ಅದೇ ರೀತಿಯಾಗಿ ತಾವೂ ಸಹ ಅದರ ಬಗ್ಗೆ ನೆನಪು ಮಾಡಿಕೊಡುತ್ತಿದ್ದೀರಿ. ಇದರಲ್ಲಿ ಯಾವುದೇ ತಪ್ಪಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರು ಎತ್ತರದ ಸ್ಥಾನಕ್ಕೆ ಬೆಳೆದರೆ, ಬಹುತರವಾಗಿ ಅವರಿಗಿಂತಲೂ ಹೆಚ್ಚಾಗಿ ನಾನು ಖುಷಿ ಪಡುತ್ತೇನೆ. ಇಲ್ಲಿ ಪಕ್ಕದಲ್ಲಿರುವವರೂ ಸಹ ಎತ್ತರದ ಸ್ಥಾನಕ್ಕೆ ಬೆಳೆದರೂ ಸಹ ನಾನು ಖುಷಿ ಪಡುತ್ತೇನೆ. ಒಟ್ಟಾರೆಯಾಗಿ ಇದರಿಂದ ಉಪಯೋಗವಾಗಬೇಕು.

(ಮುಂದು)

**(1219) 04.30 21-12-2021 CS.GR** **(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಎಸ್. ಆರ್. ಪಾಟೀಲ್ (ಮುಂದು):-**

ನಮ್ಮ ಸಮೀಪದವರು ಎತ್ತರಕ್ಕೆ ಬೆಳೆದರೆ ನಮ್ಮ ಭಾಗದ ಜನರ ಕೆಲಸ ಆಗುತ್ತದೆ. ನನ್ನ ಜೀವನದಲ್ಲಿ ಏನಿದೆ? ನನಗೆ ಯಾವುದೇ liability ಇಲ್ಲ. ಏನೋ ಜನರು ನನ್ನನ್ನು ಆಯ್ಕೆ ಮಾಡಿ ಇಲ್ಲಿಗೆ ಕಳುಹಿಸಿದ್ದರು, ನಾನು ಬಂದಿದ್ದೇನೆ. ಆರಿಸಿದಂತಹ ಜನರಿಗೆ ನ್ಯಾಯ ದೊರಕಿಸಬೇಕೆನ್ನುವುದು ನನ್ನ ಉದ್ದೇಶ. I have no other ambition. ಅದನ್ನು ಬಿಟ್ಟರೆ ಬೇರೆ ಏನೂ ಇಲ್ಲವೇ ಇಲ್ಲ. ಈ ಸದನ ಮುಗಿಸಿ ಬಹಳ ಸಂತೋಷದಿಂದ ನಾನು ಹೊರಹೋಗುತ್ತೇನೆ. This is my last Session. ನಮ್ಮ ಪಕ್ಷ ನನಗೆ ವಿಶ್ರಾಂತಿಯನ್ನು ನೀಡಿದೆ. ಅದರ ಬಗ್ಗೆ ನನಗೆ ಖುಷಿ ಇದೆ.

**ವೈಸ್ ಛೇರ್ಮನ್:-** ಇನ್ನು ಮಹೋನ್ನತವಾದ ಅವಕಾಶ ತಮಗೆ ಸಿಗಬಹುದು.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೇ, ನನಗೆ ಅಭಿಮಾನ ಇದೆ. ನಾವು ಎಲ್ಲಿ ತನಕ ಇರುತ್ತೇವೆ, ಅಲ್ಲಿ ತನಕ ನ್ಯಾಯ ಸಮ್ಮತವಾಗಿ, ಪ್ರಾಮಾಣಿಕವಾಗಿ ಬದ್ಧತೆಯಿಂದ ನಿಷ್ಠೆಯಿಂದ ಕೆಲಸವನ್ನು ಮಾಡಿಕೊಂಡು ಹೋಗುತ್ತೇನೆ. ಇನ್ನಷ್ಟು ದಿವಸ ಇರಲಿ ಎನ್ನುವಾಗ ನಾವು ನಿವೃತ್ತಿ ಪಡೆದು ಹೋಗುತ್ತೇವೆ. ಕ್ರಿಕೆಟ್ ಆಟದಲ್ಲಿ full form ನಲ್ಲಿರುವಾಗಲೇ ಆಟಗಾರರು ನಿವೃತ್ತಿಯನ್ನು ಹೊಂದುತ್ತಾರೆ. ಇನ್ನೂ ಸೆಂಚುರಿ ಹೊಡೆಯುವ ಮೊದಲೇ ನಿವೃತ್ತಿಯನ್ನು ಪಡೆಯುತ್ತಾರೆ. ಹಾಗೆ ನಮಗೂ ಸಹ, ಇದು ಬಹಳ ಸಂತೋಷವಾದ ಮಾತು.

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ತಾವೆಲ್ಲರೂ ಹೇಳಿದ ಹಾಗೆ ಈ ಯೋಜನೆ ರಾಷ್ಟ್ರೀಯ ಯೋಜನೆ ಆದಲ್ಲಿ ಬಹಳ ಒಳ್ಳೆಯದು. ಇದರಿಂದ ನಮ್ಮ ಕರ್ನಾಟಕ ರಾಜ್ಯದ ಬೊಕ್ಕಸಕ್ಕೆ ಹಣ ಬಂದರೆ ಎಲ್ಲರಿಗಿಂತ ಹೆಚ್ಚಾಗಿ ನಾನು ಕೂಡ ಖುಷಿ ಪಡುತ್ತೇನೆ.

ಮಾನ್ಯ ಸಭಾಪತಿಗಳೇ, ಈ ನೀರಾವರಿ ಯೋಜನೆಗಳಲ್ಲಿ ಜಮೀನು ಮುಳುಗಡೆಯ್ಯಾಗುತ್ತಿರುವ ರೈತರ ಬಗ್ಗೆ ನಾನು ಆತಂಕವನ್ನು ವ್ಯಕ್ತಪಡಿಸಿದೆ. ಈ ವಿಚಾರವನ್ನು ನಾನು ನಿಯಮ 330ರಡಿ ಪ್ರಸ್ತಾಪಿಸಿದ್ದೆನು. ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದಲ್ಲಿ ಆಲಮಟ್ಟಿ ಜಲಾಶಯದಲ್ಲಿ 519.6 ಮೀಟರ್ ಮತ್ತು 524.256 ಮೀಟರ್ ಎತ್ತರಿಸಿದಾಗ ಮುಳುಗಡೆ ಆಗತಕ್ಕ ಜಮೀನುಗಳ ಭೂಸ್ವಾಧೀನತೆಯನ್ನು ಹಂತ ಹಂತವಾಗಿ ಕೈಗೊಳ್ಳಲು ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಕೈಗೊಂಡ ಸಭೆಯಲ್ಲಿ ನಿರ್ದೇಶನ ನೀಡಲಾಗಿದೆ. ಈ ರೀತಿಯಲ್ಲಿ ನಿರ್ದೇಶನ ಮಾಡಿದ್ದರಿಂದ ಆಲಮಟ್ಟಿ ಜಲಾಶಯದ ಬಳಿ 519.6 ರಿಂದ 524.256 ಮೀಟರ್ ಅಡಿಯಲ್ಲಿ ಬರತಕ್ಕ ಮುಳುಗಡೆ ಜಮೀನುಗಳ ಮಾಲೀಕರು, ಸಂತ್ರಸ್ತರ ಬದುಕು ಮೂರಾಬಟ್ಟೆ ಆಗುತ್ತದೆ. ಅವರಿಗಾಗುವ ಭಾರಿ ಪ್ರಮಾಣದ ಅನ್ಯಾಯವನ್ನು ಸರಿಪಡಿಸುವ ನಿಟ್ಟಿನಲ್ಲಿ ಚರ್ಚಿಸಲು ನನಗೆ ನಿಯಮ 330ರ ಅಡಿಯಲ್ಲಿ ಅವಕಾಶ ಸಿಗಲಿಲ್ಲ. ಈಗ ಅನಾಯಾಸವಾಗಿ ನನಗೆ ಈ ವಿಚಾರವಾಗಿ ಮಾತನಾಡಲು ಅವಕಾಶ ದೊರೆತಿದೆ.

ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ 519.6 ರಿಂದ 524.256 ಮೀಟರ್ ವರೆಗೆ ಸ್ವಾಧೀನ ಪಡಿಸಿಕೊಳ್ಳುವಾಗ ಮೊದಲ ಹಂತದಲ್ಲಿ 519.6ರಿಂದ 521 ಮೀಟರ್‌ವರೆಗೆ ಮಾತ್ರ ಭೂಸ್ವಾಧೀನ ಮಾಡಿಕೊಳ್ಳುವುದು, ನಂತರ 521 ರಿಂದ 522 ಮೀಟರ್‌ವರೆಗೆ ಸ್ವಾಧೀನಪಡಿಸಿಕೊಳ್ಳುವುದು, ಆನಂತರ 522 ರಿಂದ 523 ಮೀಟರ್ ಭೂಸ್ವಾಧೀನ ಪಡಿಸಿಕೊಳ್ಳಲಾಗುವುದು, ಆನಂತರದಲ್ಲಿ 523 ನಿಂದ 524 ಮೀಟರ್ ತನಕ ಹೀಗೆ 4 ಹಂತಗಳಲ್ಲಿ ಭೂಸ್ವಾಧೀನ ಪಡಿಸಿಕೊಳ್ಳುವ ನಿರ್ಧಾರ ಕೈಗೊಳ್ಳಲಾಗಿದೆ. ಉದಾಹರಣೆಗೆ ಈಗ ನನ್ನದೊಂದು 10 ಎಕರೆ ಜಮೀನು ಇದ್ದಲ್ಲಿ, 519.6 ಮೀಟರ್ ಭೂಸ್ವಾಧೀನ ಮಾಡಿಕೊಳ್ಳುವಾಗ ಒಂದು ಜಮೀನಿನಲ್ಲಿ ಅರ್ಧ ನೀರು ಬಂದರೆ ಅದು ಅಷ್ಟಕ್ಕೆ ಮುಗಿಯಿತು. ಅಷ್ಟೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಅಷ್ಟಕ್ಕೆ ಮಾತ್ರ ಹಣವನ್ನು ನೀಡುತ್ತಾರೆ. ಆನಂತರ 522 ರಿಂದ 523 ಮೀಟರ್ ಭೂಸ್ವಾಧೀನ ಪಡಿಸಿಕೊಳ್ಳಲಾಗುವುದು, ಆನಂತರದಲ್ಲಿ 523 ನಿಂದ 524 ಮೀಟರ್ ತನಕ ಹೀಗೆ 4 ಹಂತಗಳಲ್ಲಿ ಭೂಸ್ವಾಧೀನ ಪಡಿಸಿಕೊಳ್ಳುತ್ತಾರೆ. ಮೊದಲ ಹಂತದಲ್ಲಿ ನನ್ನ ಜಮೀನು ಎರಡೂವರೆ ಎಕರೆ ಮುಳುಗಡೆಯಾಗುತ್ತದೆ, 2ನೇ ಹಂತದಲ್ಲಿ ಎರಡೂವರೆ ಎಕರೆ, 3ನೇ ಹಂತದಲ್ಲಿ ಎರಡೂವರೆ ಎಕರೆ, 4ನೇ ಹಂತದಲ್ಲಿ ಉಳಿದ ಎರಡೂವರೆ ಎಕರೆ ಭೂಮಿ ಮುಳುಗಡೆಯಾಗುತ್ತದೆ. ನಮಗೆ ನಮ್ಮ ಭೂಮಿಯನ್ನು ಕಳೆದುಕೊಳ್ಳುವುದು ಎಂದರೆ ನಮ್ಮ ಜೀವವನ್ನು ಕಳೆದುಕೊಂಡ ಹಾಗೆ, ನಮ್ಮ

ಅನುಭವದಲ್ಲಿ ನಮ್ಮ ಸುತ್ತಮುತ್ತಲಿನ ಜನರನ್ನು ನೋಡಿ ನಾವು ಇದನ್ನು ಕಂಡುಕೊಂಡಿದ್ದೇವೆ. ನಮ್ಮ ಜನರಿಗೆ ಭೂಮಿ ಕಳೆದುಕೊಳ್ಳುವುದು ಎಂದರೆ ಪ್ರಾಣ ಕಳೆದುಕೊಳ್ಳುವ ಹಾಗಾಗುತ್ತದೆ. ಭೂಮಿ ಕಳೆದುಕೊಳ್ಳುವವರು ನಮ್ಮ ಸರ್ವಸ್ವವೇ ಹೋಯಿತು ಇನ್ನೇನು ಸಾಧನೆಗೆ ನಾವು ಬದುಕುಬೇಕೆಂದು ಹೇಳುತ್ತಾರೆ? ಇದು ಅನಿವಾರ್ಯ. It is a compulsory acquisition. ಅವರಿಗೆ ಇಲ್ಲ ಎನ್ನುವುದಕ್ಕೆ ಆಗುವುದಿಲ್ಲ. ಅವರು ತ್ಯಾಗ ಮಾಡಿದ ಫಲದಿಂದ 30 ಲಕ್ಷ ಎಕರೆ ಭೂಮಿಗೆ ನೀರಾವರಿಯ ಅನುಕೂಲ ಸಿಗುತ್ತದೆ. ನಾವು ಕಳೆದುಕೊಳ್ಳುವವರಾದರೆ, ಉಳಿದ 6 ಜಿಲ್ಲೆಯವರು, including Vijayapur ಅದರಿಂದ ಲಾಭವನ್ನು ಪಡೆಯುತ್ತಾರೆ. ವಿಜಯಪುರ, ಕಲ್ಬುರ್ಗಿ, ಯಾದಿಗಿರಿ, ರಾಯಚೂರು, ಕೊಪ್ಪಳ ಮತ್ತು ಗದಗ ಜಿಲ್ಲೆಯವರು ಇದರ ಫಲಾನುಭವಿಗಳು. ನಾವು ತ್ಯಾಗ ಮಾಡುವವರು. ತ್ಯಾಗ ಮಾಡುವವರ ಬಗ್ಗೆ ಸರ್ಕಾರಕ್ಕೆ ಕಾಳಜಿ, ಕಕ್ಕುಲಾತಿ ಇಲ್ಲ. ನಮ್ಮ ಜಮೀನುಗಳನ್ನು 4 ಹಂತಗಳಲ್ಲಿ ಸ್ವಾಧೀನ ಪಡಿಸಿಕೊಂಡಲ್ಲಿ, ಒಬ್ಬ ಮನುಷ್ಯನನ್ನು ಒಮ್ಮೆ ಕಾಲು ತೆಗೆಯುವುದು, ಮತ್ತೊಮ್ಮೆ ಕೈ, ಕೊನೆಗೆ ರುಂಡವನ್ನು ತೆಗೆದ ಹಾಗಾಗುತ್ತದೆ. ಇದು ಒಂದು ರೀತಿಯಲ್ಲಿ ಚಿತ್ರ ಹಿಂಸೆಯನ್ನು ಮಾಡಿ ಕೊಂದ ಹಾಗೆ ಆಗುವುದಿಲ್ಲವೇ? ನಮ್ಮ ಕಡೆಯವರು ಅದಕ್ಕೆ ಹೇಗೂ ಕೊಲ್ಲುತ್ತೀರಾ, ಒಂದೇ ಸಲಕ್ಕೆ ಗುಂಡು ಹಾರಿಸಿ ಕೊಂದು ಬಿಡಿ ಎಂದು ಹೇಳುತ್ತಾರೆ. ಹಿಂದೆ ಪೊಲೀಸ್ ಇಲಾಖೆಯಲ್ಲಿ ಆರೋಪಿಗಳಿಂದ ಸತ್ಯ ಹೊರತೆಗೆಯಲು third degree method adopt ಮಾಡುತ್ತಿದ್ದರು. ಈಗ 21ನೇ ಶತಮಾನದ ಹೊಸ್ತಿನಲ್ಲಿದ್ದೇವೆ. ಈಗ intelligent questions ಮಾಡುತ್ತಾರೆ, ಒಂದು ಕಾಲದಲ್ಲಿ ಆರೋಪಿಗಳು ಏಕೆ ನಮಗೆ ಹೀಗೆ ಹಿಂಸೆ ಮಾಡುತ್ತೀರಾ? ನಮ್ಮನ್ನು ಗುಂಡು ಹಾಕಿ ಕೊಂದು ಬಿಡಿ, ನಾವು ಸಂತೋಷದಿಂದ ಸಾಯುತ್ತೇವೆ ಎಂದು ಹೇಳುತ್ತಿದ್ದರು. ಅದನ್ನು ನಾನು ಕೇಳಿದ್ದೇನು. ಮೂಲತಃ ನಾನು ಕೂಡ ಒಬ್ಬ ಕ್ರಿಮಿನಲ್ ಲಾಯರ್. I have conducted cases under Sectin 304, IPC. 15 ವರ್ಷಗಳ ಕಾಲ ಪ್ರಾಕ್ಟಿಸ್ ಮಾಡಿದ್ದೇನೆ. ಆರೋಪಿಗಳು ನನ್ನ ಮುಂದೆ confess ಮಾಡಿದ್ದನ್ನು ನಾನು ಹೇಳುತ್ತಿದ್ದೇನೆ.

ಹಾಗೆಯೇ ನನ್ನ ದೃಷ್ಟಿಯಲ್ಲಿ ತಮ್ಮ ಜಮೀನುಗಳನ್ನು ಕಳೆದುಕೊಳ್ಳುವವರು ಜೀವನೇ ಕಳೆದುಕೊಳ್ಳುತ್ತಾರೆ. 521 ರಿಂದ 522ಮೀಟರ್ 522 ರಿಂದ 523 ಮೀಟರ್ ,ಆನಂತರದಲ್ಲಿ 523 ನಿಂದ 524 ಮೀಟರ್‌ವರೆಗೆ ಹೀಗೆ 4 ಹಂತಗಳಲ್ಲಿ ಭೂಸ್ವಾಧೀನ ಪಡಿಸಿಕೊಳ್ಳುತ್ತಾರೆ. ಆಗ ಮುಳಗಡೆ ಆಗುವವರಿಗೆ rehabilitatation ಹೇಗೆ ಮಾಡಲಾಗುವುದು? ಮನುಷ್ಯನ ಕೈಯಲ್ಲಿ ಹಣ ಬಂದರೆ ಅದು ಉಳಿಯುವುದಿಲ್ಲ. ಅದು ಮಾನವ ಸಹಜ ಗುಣ. ಈಗ ನನ್ನ ಜೇಬಿನಲ್ಲಿ ಹಣ ಇದ್ದರೂ ಸಹ ಅದನ್ನು ಮನಸ್ಸೋ ಇಚ್ಛಾ ಖರ್ಚು ಮಾಡುವ ಸ್ವಭಾವ ನನಗೂ ಸಹ ಇದೆ. It is human tendency. ಇದರಿಂದ ಯಾರು ಹೊರತಾಗಿಲ್ಲ. ಕಿಸೆಯಲ್ಲಿ ಸಾಕಷ್ಟು ದುಡ್ಡು ಇಲ್ಲ ಅಂದರೆ ಸುಮ್ಮನೆ ಇರುತ್ತೇವೆ, ಇತ್ತು ಎಂದರೆ “ನಡೆಯಪ್ಪಾ ಐತಿ” ಎನ್ನುತ್ತೇವೆ. ಹಾಗೆಯೇ ನಮ್ಮ ಸಂತ್ರಸ್ತರು ಬಡವರು, ಅಶಿಕ್ಷಿತರು, ನಿರಕ್ಷರ ಕುಕ್ಷಿಗಳು, ಅವರ ತಂದೆಯೋ, ಅಜ್ಜಂದಿರೋ ಅಥವಾ ಮುತ್ತಜ್ಜಂದಿರೋ ಗಳಿಸಿರುವುದನ್ನು ಉಳಿಮೆ ಮಾಡಿ,

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ತಾನು ತನ್ನ ಹೆಂಡತಿ ಮಕ್ಕಳನ್ನು ಸಾಕಿಕೊಂಡು ತನ್ನ ಬದುಕಿನ ನಿರ್ವಹಣೆಯನ್ನು ಮಾಡುತ್ತಿರುತ್ತಾನೆ. ಆತನ ಜಮೀನನ್ನು ನಾಲ್ಕು ಹಂತಗಳಲ್ಲಿ ಭೂ ಸ್ವಾಧೀನ ಮಾಡಿಕೊಂಡರೆ ಆ ಜೀವನ ಹೇಗೆ ನಡೆಯುತ್ತೆ? ಇದು ಸರಿಯಾ? ಇದು ಮಾನವೀಯತೆ ಅನಿಸುತ್ತದೆಯೇ? ಇದರ ಬಗ್ಗೆ ನನ್ನ ಹತ್ತಿರ ಸರ್ಕಾರದ ಆದೇಶವೇ ಇದೆ, ಅದನ್ನು ಓದುತ್ತೇನೆ.

ಮಾನ್ಯ ಸಭಾಪತಿಗಳೇ, ಬಾಗಲಕೋಟೆ ತಾಲ್ಲೂಕಿನ ಬೆನ್ನೂರು ಮುಗಳಹಳ್ಳಿ, ಮಲ್ಲಪುರ, ಇಳಿಯಾಲ್ ಗ್ರಾಮಗಳ ಜಮೀನುಗಳು ಕೃಷ್ಣಾ ಮೇಲ್ದಂಡೆ ಯೋಜನೆಯ ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ 519.6 ಮೀಟರ್‌ನಿಂದ 524.256 ಮೀಟರ್ ಎತ್ತರಿಸುವ ಸಲುವಾಗಿ ಭೂ ಸ್ವಾಧೀನ ಪಡಿಸಿಕೊಳ್ಳಲು ಕಲಂ 11(1) ರಡಿ ಅಧಿಸೂಚನೆಯನ್ನು ಅನುಮೋದನೆಗಾಗಿ ಸಲ್ಲಿಸಲಾಗಿದೆ. ಬೆನ್ನೂರು ಮುಗಳಹಳ್ಳಿ, ಮಲ್ಲಪುರ, ಇಳಿಯಾಲದವರು 11(1) ನೋಟಿಫಿಕೇಷನ್ ಆಗುವ ಮೊದಲು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆದಿದೆ, ಇದನ್ನು ನಾನು ಹಂತ ಹಂತವಾಗಿ ಸ್ವಾಧೀನ ಪಡಿಸಿಕೊಳ್ಳಬೇಕೆಂದು ಹೇಳುತ್ತಾರೆ. ಈ ಜಮೀನು ಯಾವ ಹಂತದಲ್ಲಿ ಬರುತ್ತವೆ ನೋಡಿ, ಎಂದು ಪ್ರಸ್ತಾವನೆಯನ್ನು ವಾಪಸ್ಸು ಕಳುಹಿಸಿದ್ದಾರೆ. ಆ ಆದೇಶದಲ್ಲಿ, ಈ ರೀತಿಯಾಗಿ ಮೇಲ್ಕಾಣಿಸಿದ ಗ್ರಾಮಗಳ ಜಮೀನನ್ನು ಕಲಂ 11(1) ರ ಪ್ರಸ್ತಾವನೆಗಳಲ್ಲಿ ಉಲ್ಲೇಖಿಸಿದ್ದರ ಅನ್ವಯ ದಿನಾಂಕ 28-9-2021ರ ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದಂತೆ ನಡೆದ ಸಭೆಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ 3ರಲ್ಲಿ ಭೂ ಸ್ವಾಧೀನಕ್ಕೆ ಒಳಪಡುವ ಮುಳುಗಡೆ ಜಮೀನುಗಳ ಭೂಸ್ವಾಧೀನತೆಯನ್ನು ಹಂತ ಹಂತವಾಗಿ ಕೈಗೆತ್ತಿಕೊಳ್ಳಲು ನಿರ್ದೇಶನ ನೀಡಿದ್ದು, ಅದರ ಅನ್ವಯ ದಿನಾಂಕ 19-11-2021ರಂದು ಮಾನ್ಯ ಆಯುಕ್ತರು ಪುನರ್ ವಸತಿ ಪುನರ್ ನಿರ್ಮಾಣ, ಭೂಸ್ವಾಧೀನ ಕೃಷ್ಣಾ ಮೇಲ್ದಂಡೆ ಯೋಜನೆ , ಬಾಗಲಕೋಟೆ ಇವರ ಅಧ್ಯಕ್ಷತೆಯಲ್ಲಿ ನಡೆದ ಭೂ ಸ್ವಾಧೀನತೆಯನ್ನು ಹಂತ ಹಂತವಾಗಿ ಕೈಗೊಳ್ಳಲು ನಿರ್ದೇಶನ ಮಾಡಿರುತ್ತಾರೆ. ಅದರ ಪ್ರಯುಕ್ತ ಮುಳುಗಡೆ ಪ್ರದೇಶಗಳ ಭೂ ಸ್ವಾಧೀನ ಪ್ರಕ್ರಿಯೆಯನ್ನು ಹಂತ ಹಂತವಾಗಿ ಪ್ರಸ್ತಾವನೆ ತಯಾರಿಸಿ, ಬೇಡಿಕೆಯನ್ನು ಇಲಾಖೆಯಿಂದ ಪಡೆದು, ಅನುಮೋದನೆ ಸಲ್ಲಿಸಲು ತಿಳಿಸಿ, ಮೇಲಿನ 4 ಪ್ರಕರಣಗಳನ್ನು ಸಂಪೂರ್ಣ ಪ್ರಸ್ತಾವನೆಯೊಂದಿಗೆ ಒದಗಿಸಲಾಗಿದೆ.

It does not look nice. ನಿಮಗೆ ಎಲ್ಲಾ ದಾಖಲೆಗಳನ್ನು ನಾನು ಕಳುಹಿಸಿ ಕೊಡುತ್ತೇನೆ.

**ಶ್ರೀ ಗೋವಿಂದ ಎಂ. ಕಾರಜೋಳ(ಜಲ ಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಗಳೇ, ನನಗೇನೂ ದಾಖಲಾತಿ ಬೇಡ. ಈ ಯೋಜನೆಯಲ್ಲಿ ಸಂಪೂರ್ಣವಾಗಿ 20 ಗ್ರಾಮಗಳು ಮುಳುಗಡೆ ಆಗುತ್ತವೆ. 178 ಗ್ರಾಮಗಳಲ್ಲಿ ಭಾಗಶಃ ಜಮೀನುಗಳು ಮುಳುಗಡೆ ಆಗುತ್ತವೆ.

(ಮುಂದು)

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**(1220)/4-40/21-12-2021/ಎಲ್‌ಎಂ/ಎಂಡಿ**

**ಶ್ರೀ ಗೋವಿಂದ ಕಾರಜೋಳ**(ಮುಂದು):-

178 ಗ್ರಾಮಗಳಲ್ಲಿ ಮುಳುಗಡೆಯಾಗುತ್ತಿರುವಂತಹ ಭೂಮಿ 75,000 ಎಕರೆ ಮಾತ್ರ. ಉಳಿದ ಹಾಗೆ ಈಗ ತೆಗೆದುಕೊಳ್ಳುತ್ತಿರುವ 1.32,000 ಎಕರೆಯಲ್ಲಿ ಉಳಿದಿರುವುದನ್ನು canal network, head works and Rehabilitation Centre ಗಾಗಿ ತೆಗೆದುಕೊಳ್ಳುತ್ತೇವೆ. ಒಂದು ವಿಚಾರವನ್ನು ತಮಗೆ ಸ್ಪಷ್ಟಪಡಿಸುತ್ತೇನೆ, ತಾವು meeting proceedings ಓದುತ್ತಿದ್ದೀರಿ... ಈಗಾಗಲೆ ನಾವು 521 meter ಗೆ ಜಲಾಶಯವನ್ನು ಎತ್ತರಿಸಿದಾಗ ಮುಳುಗುವಂಥ ಜಮೀನುಗಳಿಗೆ payment ಮಾಡಿದ್ದೇವೆ. ಈಗ ಉಳಿದಿರುವುದು ಕೇವಲ 75,000 ಎಕರೆಗೆ ಮಾತ್ರ. 20 ಗ್ರಾಮಗಳು ಏನು ಶೇ. ನೂರರಷ್ಟು ಮುಳುಗಡೆಯಾಗುತ್ತಿವೆ, ಮೊದಲು ಉಟ್ಟ ಬಟ್ಟೆಯಲ್ಲಿ ಯಾರು ಜಮೀನು ಬಿಟ್ಟು ಹೊರಗಡೆ ಹೋಗುತ್ತಾರೆ ಅವರಿಗೆ ಮೊದಲ ಆದ್ಯತೆಯನ್ನು ಕೊಡುತ್ತೇವೆ. Resettlement and Rehabilitation works ಗೆ first priority ಕೊಡುತ್ತೇವೆ. Rehabilitation Centre ಗೆ 6.400 ಎಕರೆ ಬೇಕು ಅದಕ್ಕೆ first priority ಕೊಡುತ್ತೇವೆ. ಉತ್ತರ ಕೊಡುವಾಗ ಎಲ್ಲವನ್ನು ವಿವರವಾಗಿ ಹೇಳುತ್ತೇನೆ. ನಿಮಗೆ obstruction ಮಾಡುವುದು ಬೇಡ. Records correct ಆಗಿ ಇರಲಿ ಎಂದು ಹೇಳುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್**:- ಮಾನ್ಯ ಸಭಾಪತಿಗಳೆ, ನಾನು ಹುಟ್ಟಿದ ಊರು ಬೀಳಗಿ ಇರಬಹುದು. ಆದರೆ ನನ್ನ ಕರ್ಮ ಭೂಮಿ ಬಾಗಲಕೋಟೆ. ಬಾಗಲಕೋಟಿ ನಗರದಲ್ಲಿಯೇ ನಾನು ಸಾರ್ವಜನಿಕ ಜೀವನಕ್ಕೆ ಪ್ರವೇಶ ಮಾಡಿರುವುದು, ವಕಾಲತ್ತು ಕೂಡಾ ಅಲ್ಲಿಯೇ ಮಾಡಿರುವುದು. ಈ ಜಿಲ್ಲೆಯ ಗ್ರಾಮಗಳಿಗೆ ನಾನೇನು ಹೊಸಬನಲ್ಲ. ಬೆಣ್ಣೂರು, ಮುಗಳಳ್ಳಿ ಮತ್ತು ಮಲ್ಲಾಪೂರ ಇವು ಮುಳಗಡೆಯಾಗುವಂತಹ ಗ್ರಾಮಗಳು. ಇವರಿಗೆ ಹಂತ-ಹಂತವಾಗಿ ಈ ರೀತಿ ಮಾಡಿದರೆ ನ್ಯಾಯ ಒದಗಿಸಿದ ಹಾಗೆ ಆಗುತ್ತದೆಯೇ? ನಾವು ಅವರ ಬಗ್ಗೆ ದೊಡ್ಡ-ದೊಡ್ಡ ಮಾತುಗಳನ್ನು ಹೇಳುತ್ತೇವೆ, ಸ್ವಾತಂತ್ರ್ಯ ಯೋಧರಿಗೆ ಸರಿಸಮಾನರು. ಇವರು ತ್ಯಾಗ ಮಾಡಿದ್ದರಿಂದ ರಾಜ್ಯದ 32,000 ಎಕರೆ ನೀರಾವರಿಯಾಗಿ ರಾಜ್ಯದ ರಾಷ್ಟ್ರದ ವರಮಾನ ಹೆಚ್ಚು ಮಾಡಿದ ತ್ಯಾಗಿಗಳು ಎಂದು ಹೇಳುತ್ತೇವೆ. Acquisition ಮಾಡುವುದನ್ನು ಇನ್ನು 6 ತಿಂಗಳು ತಡಮಾಡಿ. ಜಲಾಶಯದ ಎತ್ತರ 519.6 ರಿಂದ 524.256 ಮೀಟರ್ ಎತ್ತರಿಸಿದಾಗ ನಡುವೆ ಮುಳುಗಡೆಯಾಗುವಂಥ ಜಮೀನುಗಳನ್ನು, you acquire at a time. ನಿಮ್ಮ ಹತ್ತಿರ ಹಣ ಇಲ್ಲ ಎಂದರೆ ತಡೆಯಿರಿ. ಆದರೆ ಒಮ್ಮೆಗೆ 11(1) notification ವಾಪಸ್ ಕಳುಹಿಸುವುದು ಅವು vitiate ಆಗುವುದು ಆಗುತ್ತದೆ. ನಮ್ಮ ಕಡೆ ರೈತರು ಜಮೀನು ಮುಳುಗುತ್ತದೆ ಎಂದರೆ ಅದರ ಮೇಲೆ ಸಾಲ ಮಾಡುತ್ತಾರೆ, ಮನೆ ಮುಳುಗುತ್ತದೆ ಎಂದರೆ ಮನೆ ಮೇಲೆ ಸಾಲ ಮಾಡುತ್ತಾರೆ. ಹೇಗಾದರೂ ಬರುತ್ತದೆ ಎಂದು ಅನಿಸಿಕೆ. ಅಲ್ಲಿಯ ರೈತನ ಜಮೀನು ಪೂರ್ತಿ ಮುಳುಗುವುದಿಲ್ಲ. ಕೆಲವು ರೈತರ ಜಮೀನು ನಾಲ್ಕು ಹಂತದಲ್ಲಿ ಮುಳಗುವಷ್ಟು ಜಮೀನು ಇರುತ್ತದೆ. ಅವರಿಗೆ ಈ ವರ್ಷ ಚಹಾಕ್ಕೆ ಹಣ ಕೊಡುವಂತೆ ಕೊಡುವುದು, ಮುಂದಿನ ಸಲ breakfast ಗೆ, ನಂತರ lunch ಗೆ ಕೊಡುವುದು ಕೊನೆಗೆ dinner ಗೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೊಡುವುದು. ನಾವು ರಾಜಕಾಣಿಗಳಿಗೆ ಮತ್ತು ಅಧಿಕಾರಿಗಳಿಗೆ ತಾಯಿ ಕರುಳು ಇರಬೇಕು, ಮಾತೃ ಹೃದಯ ಇರಬೇಕು ಎಂದು ಹೇಳಲಾಗುತ್ತದೆ. ಅಪಾರ ತ್ಯಾಗ ಮಾಡುವವರಿಗೆ ಈ ರೀತಿ ಮಾಡುವುದು ಸರಿಯಲ್ಲ. You withdraw it. ನಿಮ್ಮ ಹತ್ತಿರ ಹಣ ಇಲ್ಲ ಎಂದು ಈ ರೀತಿ ಮಾಡುವುದು ಸರಿಯಲ್ಲ. 6 ತಿಂಗಳು ತಡಮಾಡಿ. Acquisition late ಮಾಡಿ. ಆದರೆ ಹಂತ-ಹಂತವಾಗಿ ಒಂದು ಸಾರಿ ಕಾಲು ತೆಗೆಯುವುದು, ಒಂದು ಸಾರಿ ಕೈ ತೆಗೆಯುವುದು ಇನ್ನೊಂದು ಸಾರಿ ರುಂಡ ತೆಗೆಯುವಂತಹ ಕೆಲಸ ಮಾಡಬೇಡಿ. ನಾನು ನೇರವಾಗಿ ಹೇಳುತ್ತಿರುವುದರಿಂದ ನಿಮಗೆ ನನ್ನ ಶಬ್ದಗಳು ಬಿರುಸು ಅನ್ನಿಸಿರಬಹುದು. ನ್ನಾನು ತಮ್ಮ ಮುಖಾಂತರ ಖಂಡಾಖಂಡಿತವಾಗಿ ಹೇಳುತ್ತೇನೆ, ಈ ಆದೇಶವನ್ನು ಹಿಂದಕ್ಕೆ ಪಡೆದು, ಮುಖ್ಯಮಂತ್ರಿಗಳಿಗೆ ಹೋಗಿ convince ಮಾಡಿ ಇದನ್ನು at a time acquire ಮಾಡುವ ಹಾಗೆ ಕ್ರಮ ಜರುಗಿಸಬೇಕು. ಈ ರೀತಿ ಹಂತ-ಹಂತವಾಗಿ ಮಾಡುವಂತಹ ಕೆಲಸ ಮಾಡಬೇಡಿ. ಇದರಿಂದ ದೊಡ್ಡ ಪ್ರಮಾಣದಲ್ಲಿ ಅನ್ಯಾಯವಾಗುತ್ತದೆ. ಇಷ್ಟರಲ್ಲಿಯೇ ಸಂತ್ರಸ್ತರು ಎದರು ಬೀಳುವಂತೆ ಪರಿಸ್ಥಿತಿ ಆಗುತ್ತದೆ ಎಂದು ಹೇಳಬಯಸುತ್ತೇನೆ. ಬಿಜಾಪೂರ ಜಿಲ್ಲೆಯ ಬಬಲೇಶ್ವರ ತಾಲ್ಲೂಕಿನ ೧೪ ಗ್ರಾಮಗಳಿಗೆ guidance value increase ಮಾಡಿರುವುದಿಲ್ಲ. ಒಂದು ಎಕರೆಗೆ guidance value ಒಂದು ಲಕ್ಷ ಇದ್ದರೆ ಅದರ ಮೂರು ಪಟ್ಟು ಅಂದರೆ 3 ಲಕ್ಷ ರೂಪಾಯಿಗಳಾಗುತ್ತದೆ. ಇನ್ನು ಕೆಲವು add ಆಗುತ್ತವೆ. ಅವುಗಳ ಬಗ್ಗೆ ನಾನು ವಿವರವಾಗಿ ಹೇಳಲು ಹೋಗುವುದಿಲ್ಲ. ಬಿಜಾಪೂರ ಜಿಲ್ಲೆ ಬಬಲೇಶ್ವರ ತಾಲ್ಲೂಕು ಮಾನ್ಯ ಎಂ.ಬಿ.ಪಾಟೀಲ್‌ರವರ ಕ್ಷೇತ್ರ ಇದು. ಇಲ್ಲಿಯ 14 ಜಿಲ್ಲೆಗಳಾದ, ಹಗ್ಗರಗಿ, ಜೈನಾಪೂರ, ಬೆಳೂಬ್ಬಿ. ಮಂಗಳೂರು, ಸುತ್ತಗುಡಿ , ತಾಜಪೂರ, ದೇವರಗಿ, ಲಿಂಗದಳ್ಳಿ, ಹೊಸೂರು, ಚಿಕ್ಕಗಲಗಲಿ, ಜಂಬಗಿ, ಬಬಲಾದ, ಸಿರಗುರು, ಕಣಗೂರು. ಈ 14 ಗ್ರಾಮಗಳಲ್ಲಿ 12 ವರ್ಷಗಳಿಂದ guidance value increase ಮಾಡೇ ಇಲ್ಲ. Acquisition ಗೆ ಬಂದು 11(1) notification ಮಾಡಿದರೆ, ಹಳೆಯ guidance value ನಿಂದ ಅವರಿಗೆ ಅನ್ಯಾಯವಾಗುತ್ತದೆ. ಪಕ್ಕದ ಊರಾದ ಬೀಳಗಿಯಲ್ಲಿ ಪ್ರತಿ ಒಂದು ಎಕರೆಗೆ 6 ಲಕ್ಷ ರೂಪಾಯಿಗಳ guidance value ಇದೆ. ನಮ್ಮ ಬೀಳಗಿ ತಾಲ್ಲೂಕು ಮತ್ತು ಬಬಲೇಶ್ವರ ತಾಲ್ಲೂಕುಗಳ ಮಧ್ಯೆ ಕೃಷ್ಣಾ ನದಿ ಇದೆ. ಒಂದು ದಂಡೆಗೆ ನಾವು, ಇನ್ನೊಂದು ದಂಡೆಗೆ ಅವರು ಇದ್ದಾರೆ. ಒಂದು ನದಿ ದಾಟಲು ೧೦೦೦ ಮೀಟರ್ ಅಂತರ ಅಷ್ಟೆ,. ಜಮೀನಿನ ಫಲವತ್ತೆ ಒಂದೇ, soil structure, fertility, yield capacity, climatical condition ಎಲ್ಲಾ ಒಂದೇ. ಆದರೆ ಬಬಲೇಶ್ವರ ತಾಲ್ಲೂಕಿನಲ್ಲಿ ಒಂದುವರೆ ಲಕ್ಷ guidance value ಇದ್ದರೆ, ಬೀಳಗಿ ತಾಲ್ಲೂಕಿನಲ್ಲಿ 6 ಲಕ್ಷ ರೂಪಾಯಿಗಳ guidance value ಇದೆ. ನಮಗೆ 18 ಲಕ್ಷ ರೂಪಾಯಿಗಳು ಪರಿಹಾರ ಬರುತ್ತದೆ. ಅವರಿಗೆ 6 ಲಕ್ಷ ರೂಪಾಯಿಗಳ ಪರಿಹಾರ ಬರುತ್ತದೆ. ಇದು ಅನ್ಯಾಯವಲ್ಲವೆ? ಅದಕ್ಕಾಗಿ ತಮ್ಮ ಮುಖಾಂತರ ಈ guidance value ನ್ನು increase ಮಾಡಲು ಪ್ರಯತ್ನ ಮಾಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನ. Guidance value review ಮಾಡಲು ಒಂದು Central Valuation Committee ಇರುತ್ತದೆ. ತಾಲ್ಲೂಕಿನಲ್ಲಿ ದಂಡಾಧಿಕಾರಿಗಳು, ತಹಸೀಲ್ದಾರರ ಅಧ್ಯಕ್ಷತೆ ಮತ್ತು Sub-Registrar Member Secretary ಇರುತ್ತಾರೆ. ಅವರು valuation ಮಾಡಿ ಕಳುಹಿಸಿದರೆ Central Valuation Committee ಅದನ್ನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಒಪ್ಪುತ್ತಾರೆ. ಅಲ್ಲಿ IGR (Inspector General of Registration) ಇರುತ್ತಾರೆ. ಈ ಕೆಲಸವನ್ನು ಸರ್ಕಾರ ಮಾಡಬೇಕು. ಮಾನ್ಯ ಕಾರಜೋಳರವರೆ ನಿಮ್ಮ ವಿಜಯಪೂರ ಜಿಲ್ಲೆಯ ಬಗ್ಗೆ ಹೇಳಿದೆ. ಬಬಲೇಶ್ವರ ತಾಲ್ಲೂಕಿನಲ್ಲಿ guidance values ಒಂದುವರೆ ಲಕ್ಷ ಇದೆ. ನಿಮ್ಮ ಪಕ್ಕದ ತಾಲ್ಲೂಕಾದ ಬೀಳಗಿಯಲ್ಲಿ ಆರು ಲಕ್ಷ ರೂಪಾಯಿ ಇದೆ. It is our adjacent land. ನಾವು 18 ಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳುತ್ತೇವೆ, ಅವರು 6 ಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ. ಇದು ಅನ್ಯಾಯವಲ್ಲವೆ? ನಮ್ಮಲ್ಲಿ ನಾವು valuation ನ್ನು ಪರಿಷ್ಕರಣೆ ಮಾಡಿಕೊಂಡಿದ್ದೇವೆ. ಈಗ land acquire ಆದರೂ we are happy. ಆದರೆ ಈ ಸದ್ಯಕೆ 11(1), 19(1) notification ಆಯಿತು. ಅವಾರ್ಡ್ ಆದರೆ ಮುಗಿದು, they will be put into great trouble. ಯಾರೂ ಅವರಿಗೆ ಸಹಾಯ ಮಾಡಲು ಆಗುವುದಿಲ್ಲ. ಅದಕ್ಕಾಗಿ ಅದನ್ನು ಪರಿಷ್ಕರಣೆ ಮಾಡುವಂತಹ ಕೆಲಸವನ್ನು ಸರ್ಕಾರ ಮಾಡಬೇಕು. ಬಿಜಾಪೂರ ಜಿಲ್ಲೆ ಬಬಲೇಶ್ವರ ತಾಲ್ಲೂಕಿನ ಆ 14 ಗ್ರಾಮಗಳ ಜನರು ಏನು ಪಾಪ ಮಾಡಿದ್ದಾರೆ? What sin they have committed? - ನಾವು ಹೇಗೆ ಜಮೀನು ಕಳೆದುಕೊಳ್ಳುತ್ತೇವೆ, ಹಾಗೆ ಅವರು ಜಮೀನು ಕಳೆದುಕೊಳ್ಳುತ್ತಾರೆ. ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ನಾವು ಮುಳಗಿದ ಹಾಗೆ ಅವರು ಮುಳುಗುತ್ತಾರೆ. ಆ 14 ಗ್ರಾಮಗಳಲ್ಲಿ guidance value ಪರಿಷ್ಕರಣೆ ಮಾಡಿಲ್ಲ ಎಂದರೆ ಹೇಗೆ? ಅದನ್ನು ಯಾರು ಮಾಡಿದ್ದಾರೆ ಎನ್ನುವ ವಿಚಾರಕ್ಕೆ ನಾನು ಹೋಗುವುದಿಲ್ಲ. ಆ ಭಾಗದ ಜನಪ್ರತಿನಿಧಿ, ಜನವರಿ ೫ನೇ ತಾರೀಖಿನವರೆಗೆ ನಾನು ಮೇಲ್ಮನೆ ಸದಸ್ಯರ ಅಂದರೆ ಆ ಭಾಗದ ಶಾಸಕ. ಸದನದಿಂದ ಹೊರಗೆ ಹೋದರೂ ಕೂಡಾ ಆ ಜನರ ಕೈಯನ್ನು ನಾನು ಬಿಡುವುದಿಲ್ಲ. ಸದನದ ಒಳಗೆ ಇದ್ದಾಗ ಎಷ್ಟು ಕೆಲಸ ಮಾಡುತ್ತಿದ್ದೆ, ಅದರ ದುಪ್ಪಟ್ಟು ಕೆಲಸವನ್ನು ಸದನದ ಹೊರಗೆ ಇದ್ದು ಶಕ್ತಿಯಿಂದ ಮಾಡುತ್ತೇನೆ. ಈ ಯೋಜನೆ ಪೂರ್ಣಗೊಳ್ಳಲು ಪಕ್ಷಾತೀತವಾಗಿ ಕೆಲಸ ಮಾಡುತ್ತೇನೆ. ಹೋದ ಸದನದಲ್ಲಿ ಪಾದಯಾತ್ರೆ ಬಗ್ಗೆ ನಾನು ಹೇಳಿದ್ದೆ. ಘಟಪ್ರಭಾದಿಂದ ಕೃಷ್ಣಾದವರೆಗೆ 17 ಕಿ.ಮೀ ' ಗಾಂಧೀ ನಡೆಗೆ ಕೃಷ್ಣೆ ಕಡೆಗೆ' ಎಂದು ಒಂದು ದಿನ ಬೆಳಗ್ಗೆ ಪ್ರಾರಂಭ ಮಾಡಿ ಸಂಜೆ ಮುಗಿಸಿ ಒಂದು ಪಾದಯಾತ್ರೆ ಕಾರ್ಯಕ್ರಮವನ್ನು ಮಾಡಿ ಮುಗಿಸಿದ್ದೇವೆ. ನಮ್ಮ ಪಾದಯಾತ್ರೆಯಲ್ಲಿ ಯಾವ ಪಕ್ಷ ಇಲ್ಲ, ಜಾತಿ ಇಲ್ಲ, ಧರ್ಮ ಇಲ್ಲ, ಮತ ಇಲ್ಲ, ಪಂಥ ಇಲ್ಲ. ಎಲ್ಲರೂ ಸೇರಿ ಪಕ್ಷಾತೀತವಾಗಿ, ಧರ್ಮಾತೀತವಾಗಿ, ಜಾತ್ಯಾತೀತವಾಗಿ ಒಂದು ದಿವಸದ ಮಟ್ಟಿಗೆ ಪಾದಯಾತ್ರೆಯನ್ನು ಮಾಡಿದ್ದೇವೆ.

**ಶ್ರೀ ಎನ್.ರವಿಕುಮಾರ್**:- ಮಾನ್ಯ ಸಭಾಪತಿಗಳೆ, ಮಾನ್ಯ ವಿರೋಧ ಪಕ್ಷದ ನಾಯಕರು ಬಬಲೇಶ್ವರದ 14 ಗ್ರಾಮಗಳ ಬಗ್ಗೆ ಹೇಳಿದರು. 14 ಗ್ರಾಮಗಳಿಗೆ ಸಂಬಂಧಪಟ್ಟಂತೆ ಹಿನ್ನೀರಿಂದ ಮುಳುಗುವ ಗ್ರಾಮಗಳ guidance value fix ಮಾಡಿದವರು ನಿಮ್ಮ ಸರ್ಕಾರದವರೇ. ಆಗ ಏಕೆ ಪರಿಷ್ಕರಣೆ ಮಾಡಲಿಲ್ಲ? ಆಗ ಮಾನ್ಯ ಎಂ.ಬಿ.ಪಾಟೀಲ್‌ರವರೆ ಮಂತ್ರಿಗಳಾಗಿದ್ದರು. ನಾನು ಅಲ್ಲಿಯ ಶಾಸಕ ಅವರ ಪರವಾಗಿ ನಾನು ಧ್ವನಿ ಎತ್ತುತ್ತೇನೆ. ಶಾಸಕನಾಗಿ ಇರದೆ ಇದ್ದರೂ ಅವರ ಪರವಾಗಿ ಧ್ವನಿ ಎತುತ್ತೇನೆ ಎಂದು ತಾವು ಹೇಳಿದ್ದೀರಿ. ಅದನ್ನು ನಾನು ಒಪ್ಪುತ್ತೇನೆ. ತಾವು ಧ್ವನಿ ಎತ್ತುತ್ತೀರಿ ನಿಮ್ಮ ಬಗ್ಗೆ ನನಗೆ ಸ್ವಲ್ಪವು

ಅನುಮಾನವಿಲ್ಲ. ಆದರೆ ನಿಮ್ಮ ಸರ್ಕಾರ ಇದ್ದಾಗ ಮಾತ್ರ ಈ ಕೆಲಸ ಮಾಡುವುದಿಲ್ಲ ತಾವು. ನಿಮ್ಮ ಸರ್ಕಾರವಿದ್ದಾಗ ರೈತರ ವಿರುದ್ಧ ಕೆಲಸ ಮಾಡುತ್ತೀರಿ, ನಿಮ್ಮ ಸರ್ಕಾರವಿಲ್ಲದಿರುವಾಗ ರೈತರ ಪರ ಧ್ವನಿ ಎತ್ತುತೀರಿ. ಈ ದ್ವಂದವೇ ನನಗೆ ಅರ್ಥವಾಗುತ್ತಿಲ್ಲ.

(ಮುಂದು)

(1221) 21.12.2021 4.50 ಪಿಕೆ:ಎಂಡಿ

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸದಸ್ಯರು ಒಳ್ಳೆಯ ಪ್ರಶ್ನೆ ಕೇಳಿದರು. ಅವರು ನಮ್ಮ ಸ್ನೇಹಿತರು, ನಮ್ಮ ಅಭಿಮಾನಿಗಳು.

**ಶ್ರೀ ಎನ್.ರವಿಕುಮಾರ್:-** ನಮ್ಮ ಪೂರ್ತಿ ಬೆಂಬಲ ನಿಮಗಿದೆ. ನಿಮ್ಮ ಕಡೆಯವರ ಬೆಂಬಲ ನಿಮಗಿಲ್ಲ.

**ವೈಸ್ ಛೇರ್ಮನ್:-** ಅಜೆಂಡಾ ಜಾಸ್ತಿ ಇದೆ. ದಯವಿಟ್ಟು ಕುಳಿತುಕೊಳ್ಳಿ. ಎರಡೂ ಕಡೆಯವರು ಸಹಕರಿಸಬೇಕು. ಇಲ್ಲದಿದ್ದರೆ ಇವತ್ತಿನ ಅಜೆಂಡಾ ಮುಗಿಸುವುದಕ್ಕೆ ಆಗುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ನಾನು ಹಿಂದೆ ಯೋಜನಾ ಇಲಾಖೆಯ ಮಂತ್ರಿಯಾಗಿದ್ದೆ. ಆಗ ನಾನು ಈ ಕುರಿತು ಸಭೆ ಕರೆಸಿ, ಸಂಬಂಧಪಟ್ಟ ಅಧಿಕಾರಿಗಳಿಗೆ, 12 ವರ್ಷದಿಂದ ಬೀಳಗಿ ತಾಲ್ಲೂಕಿನಲ್ಲಿ ಪರಿಷ್ಕರಣೆ ಏಕೆ ಆಗಲಿಲ್ಲ ಎಂದು ತರಾಟೆಗೆ ತೆಗೆದುಕೊಂಡೆ. ಅದೇ ಸಂದರ್ಭದಲ್ಲಿ ವಿಜಯಪುರ ಜಿಲ್ಲೆಯ ಬಬಲೇಶ್ವರ ತಾಲ್ಲೂಕಿನ 14 ಹಳ್ಳಿಗಳ ಬಗ್ಗೆ ಮಾತನಾಡಿದೆವು. ಆ ಕುರಿತು ಮಾತನಾಡಿದ ನಂತರ ಅದರ ಕಡತ ಮುಖ್ಯಮಂತ್ರಿಯವರಿಗೆ ಬಂತು. ಅವರು approve ಮಾಡಿ ಅದನ್ನು ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಕಳುಹಿಸಿದರು. ನಾನು ಐಟಿ-ಬಿಟಿ ಮಂತ್ರಿಯಾಗಿದ್ದಾಗ ಅವರು ನನಗೆ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದರು. ಆ ಕಡತವನ್ನು ಮುಖ್ಯಮಂತ್ರಿಗಳು approve ಮಾಡಲಿಲ್ಲ ಎಂದಾದರೆ, ನಾನು ಸಾಯುವ ತನಕ, ಕೊನೆಯ ನಿಮಿಷದ ತನಕ . . . ನಿಮಗೆ ಆ ಕಡತವನ್ನು ಕಳುಹಿಸುತ್ತೇನೆ. You go through the file. ದಯವಿಟ್ಟು ನೋಡಿ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಮುಖ್ಯಮಂತ್ರಿ ಕಡತವನ್ನು approve ಮಾಡಿದರೋ ಅಥವಾ ಇಲ್ಲವೋ ಎನ್ನುವುದು ಮುಖ್ಯವಲ್ಲ. ಸರ್ಕಾರಿ ಆದೇಶ ಜಾರಿ ಆಗುವುದು ಮುಖ್ಯ. ಸರ್ಕಾರಿ ಆದೇಶ ಆಗಿದ್ದರೆ ಅದರ ಪ್ರತಿಯನ್ನು ಕೊಡಿ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ವೈಸ್ ಛೇರ್ಮನ್:-** ತಾವು ತಮ್ಮ ಬೇಡಿಕೆಯನ್ನು ಮಂಡಿಸಿ. ಸರ್ಕಾರ ಉತ್ತರ ಕೊಡುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, ನೀವು ದಯವಿಟ್ಟು ಕಡತವನ್ನು ನೋಡಿ. ಆವತ್ತು ಏನಾಯಿತು ಎಂದರೆ, ನಮ್ಮ ಬೀಳಗಿ ತಾಲ್ಲೂಕಿನಲ್ಲಿ ಪರಿಷ್ಕರಣೆ ಆಗಿ, valuation ಹೆಚ್ಚಾಗಬೇಕಾಗಿತ್ತು. ಬೆಂಗಳೂರಿನಲ್ಲಿ guidance value ಪರಿಷ್ಕರಣೆ ಮಾಡಿದಾಗ ಅದರ ಮೊತ್ತ ಹೇಗೆ ಜಾಸ್ತಿ ಆಗುತ್ತದೆಯೋ, ಅದೇರೀತಿ ಬೀಳಗಿಯಲ್ಲಿ ಪರಿಷ್ಕರಣೆ ಮಾಡಿದಾಗ ಅಧಿಕಾರಿಗಳು ಮುಖ್ಯಮಂತ್ರಿಗಳಿಗೆ ದೂರು ಕೊಟ್ಟರು. ಶ್ರೀ ಎಸ್.ಆರ್.ಪಾಟೀಲರು ಮತ್ತು ಆ ಕ್ಷೇತ್ರದ ಶಾಸಕರಾದ ಶ್ರೀ ಜೆ.ಟಿ.ಪಾಟೀಲರು ಬಹಳ ಜಾಸ್ತಿ valuation ಮಾಡಿದ್ದಾರೆ; ರಾಜ್ಯದ ಬೊಕ್ಕಸದಿಂದ ಬಹಳ ದೊಡ್ಡ ಪ್ರಮಾಣದ ಹಣ ಹೋಗುತ್ತದೆ ಎಂದು ಹೇಳಿದ್ದರು. ನಾನು ಮುಖ್ಯಮಂತ್ರಿಗಳನ್ನು ಭೇಟಿ ಮಾಡಲು ಹೋದಾಗ ಅವರು ಬಹಳ ಸಿಟ್ಟಿನಲ್ಲಿದ್ದರು. ಅವರು, ಪಾಟೀಲರೇ ನೀವು ಬೊಕ್ಕಸದ ಹಣ ಖಾಲಿ ಮಾಡುತ್ತೀದ್ದೀರಿ ಎಂದು ಕೇಳಿದರು. ನಾನೂ ಕೂಡ ಸಡಿಲ ಬಿಟ್ಟಿಲ್ಲ. ಇದು ನಮ್ಮ ತಪ್ಪಲ್ಲ; 12 ವರ್ಷ ಪರಿಷ್ಕರಣೆ ಮಾಡದ ನಿಮ್ಮ ತಪ್ಪು ಮತ್ತು ನಿಮ್ಮ ಅಧಿಕಾರಿಗಳ ತಪ್ಪು ಎಂದು ನೇರವಾಗಿ ಹೇಳಿದೆ. ನಮ್ಮ ತಾಲ್ಲೂಕಿನ ಜನರ ತಪ್ಪಲ್ಲಎಂದು ಹೇಳಿ ವಿಷಯದ ಬಗ್ಗೆ ವಿವರಣೆ ಕೊಟ್ಟೆ. ಇಲ್ಲ, ನನಗೆ ಅಧಿಕಾರಿಗಳು ಬೇರೆ ರೀತಿ ಹೇಳಿದರಲ್ಲ ಎನ್ನುವ ಮಾತನ್ನು ಹೇಳಿದರು. Let it go on record, I don't hesitate. ಆಮೇಲೆ ಅಧಿಕಾರಿಗಳನ್ನು ಕರೆದು, ನೀವು 12 ವರ್ಷಗಳಿಂದ ಪರಿಷ್ಕರಣೆ ಮಾಡಿಲ್ಲವೇ ಎಂದು ಕೇಳಿದಾಗ ಅವರು, ಹೌದು ಮಾಡಿಲ್ಲ ಎಂದು ಒಪ್ಪಿಕೊಂಡರು. ನಂತರ ನ್ಯಾಯ ಸಮ್ಮತವಾಗಿ ದರ ಪರಿಷ್ಕರಣೆ ಮಾಡಿಕೊಂಡಿದ್ದಾರೆ. It was right, he approved it. ಅದೇರೀತಿ ಅಲ್ಲೂಕೂಡ ಮುಖ್ಯಮಂತ್ರಿಗಳು ಹಂತ ಹಂತವಾಗಿ approve ಮಾಡಿದ್ದಾರೆ. You go through the file. ಮುಖ್ಯಮಂತ್ರಿಗಳು approve ಮಾಡಿ ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಕಳುಹಿಸಿದರು. ಆನಂತರ ಚುನಾವಣೆ ಡಿಕ್ಲೇರ್ ಆಯಿತು. ಈ ಕುರಿತು ಅಧಿಕಾರಿಗಳನ್ನು ಕೇಳಿದಾಗ ಅವರು, ಈಗ ನೀತಿ ಸಂಹಿತೆ ಇದೆ; ಈಗ ದರವನ್ನು ಹೆಚ್ಚು ಮಾಡಿದರೆ influence ಆಗುತ್ತದೆ ಎಂದು ಹೇಳಿದರು. ಆ ಫೈಲ್ ಇವತ್ತೂ ಕೂಡ ಹಾಗೆಯೇ ಉಳಿದಿದೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಗಳೆ, sub-registrar guidance value ಪ್ರತಿವರ್ಷ ಪರಿಷ್ಕರಣೆ ಆಗಬೇಕು; ರಾಜ್ಯದ ಪ್ರತಿಯೊಂದು ತಾಲ್ಲೂಕುಗಳಲ್ಲೂ ಆಗಬೇಕು. ಬೀಳಗಿ ತಾಲ್ಲೂಕಿನದು ಆಗಿರಲಿಲ್ಲ. ಆಗ ಮಾನ್ಯ ಜೆ.ಟಿ.ಪಾಟೀಲರು ಮತ್ತು ಮಾನ್ಯ ಎಸ್.ಆರ್.ಪಾಟೀಲರು ಒತ್ತಡ ಹಾಕಿ ಒಂದು ಮೀಟಿಂಗ್ ಕರೆಸಿದರು, ಆ ಮೀಟಿಂಗ್‌ಗೆ ನನ್ನನ್ನು ಕರೆದುಕೊಂಡು ಹೋಗಿದ್ದರು. ಆಗ ನಾನು ಶಾಸಕನಾಗಿದ್ದೆ. ನಿಮಗೆ proceedings copy ಕೊಡುತ್ತೇನೆ. ಮೀಟಿಂಗ್ ಆದಾಗ ಇವರು ಜೋರು ಮಾಡಿ ಬೀಳಗಿ ತಾಲ್ಲೂಕಿನದ್ದು ಕ್ಲಿಯರ್ ಮಾಡಿಸಿಕೊಂಡರು. ಆದರೆ ಬಿಜಾಪುರದ ಬಬಲೇಶ್ವರ ತಾಲ್ಲೂಕಿನದು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕ್ಲಿಯರ್ ಆಗಲಿಲ್ಲ; ಹಾಗೆಯೇ ಉಳಿಯಿತು. ನಂತರ file move ಮಾಡಲಾಯಿತು, ಮುಖ್ಯಂತ್ರಿಗಳು approval ಕೊಟ್ಟರು ಎಂದು ಹೇಳಿದ್ದು ಸರಿ. ಆದರೆ, ಮುಖ್ಯಮಂತ್ರಿಗಳು ಸಹಿ ಮಾಡಲಿ ಅಥವಾ ಯಾರೇ ಸಹಿ ಮಾಡಲಿ, ಅದು ಸರ್ಕಾರಿ ಆದೇಶ ಆಗದ ಹೊರತು ಆ ಕಾಗದಕ್ಕೆ ಯಾವುದೇ ಬೆಲೆ ಇರುವುದಿಲ್ಲ. ಸರ್ಕಾರಿ ಆದೇಶ ಆಗಿ ಹೊರಗಡೆ ಬರಬೇಕು. ಅದು ಸರ್ಕಾರಿ ಆದೇಶ ಆಗಿಲ್ಲ. ನಂತರ ಆ ಸರ್ಕಾರ ಹೋಯಿತು ಮತ್ತು ಸಮ್ಮಿಶ್ರ ಸರ್ಕಾರ ಬಂತು. ಮಾನ್ಯ ಸಿದ್ದರಾಮಾಯ್ಯನವರು ಸಹಿ ಮಾಡಿದ ನೋಟನ್ನು ನೋಡಿದ್ದೇನೆ. ನೀವು ಈಗ ಅದನ್ನೇ ತೋರಿಸುತ್ತೀರಿ. ಅದಾದ ಮೇಲೆ ಸಮ್ಮಿಶ್ರ ಸರ್ಕಾರ ಬಂದಾಗ ಅದನ್ನು ಮಾಡಬಹುದಾಗಿತ್ತು. ಆದರೆ ಮಾಡಲಿಲ್ಲ, ಹಾಗೆಯೇ ಉಳಿಯಿತು. 14 ಹಳ್ಳಿಯ ಜನರಿಗೆ ಈಗ ತೊಂದರೆಯಾಗಿರುವುದು ನಿಜ. Sub-Registrar guidance value ಪರಿಷ್ಕರಣೆ ಆಗದ ಹೊರತು ಹೊಸ Land Acquisition Act 2013 ಏನಿದೆ, ಅದರ ಪ್ರಕಾರ 4 times ಕೊಡಬೇಕು. ಈಗ Sub-Registrar guidance value ಸುಮಾರು ಒಂದೂವರೆ ಲಕ್ಷ ಇದೆ. ಗರಿಷ್ಠ ಎಂದರೆ ರೂ. 6 ಲಕ್ಷ ಸಿಗುತ್ತದೆ; ಅದಕ್ಕಿಂತ ಹೆಚ್ಚು ಸಿಗುವುದಿಲ್ಲ. ಈ ಸಮಸ್ಯೆ ನನಗೂ ಗೊತ್ತಿದೆ. ನಾವು ಹೊಳೆಯ ಆಕಡೆ ಇದ್ದೀರಿ; ನಾವು ಈ ಕಡೆ ಇದ್ದೇವೆ. ನಾನೂ ಕೂಡ ಆ ತಾಲ್ಲೂಕಿನವನೇ ಆಗಿದ್ದೇನೆ. ನಮ್ಮ ಮಧ್ಯೆ ಕೃಷ್ಣಾ ನದಿ ಮಾತ್ರ ಅಡ್ಡ ಇದೆ ಅಷ್ಟೆ. ಮೂಲತಃ ನಾನು ಅದೇ ತಾಲ್ಲೂಕಿನವನು. ಸಮಸ್ಯೆ ಆಗಿರುವುದನ್ನು ನಾನು ಅಲ್ಲಗಳೆಯುವುದಿಲ್ಲ. ಆದರೆ ಲ್ಯಾಪ್ಸ್ ಮಾಡಿದವರು ಯಾರು, ಏಕೆ ಮಾಡಿದರು, ಏಕೆ ಆಗಲಿಲ್ಲ ಎನ್ನುವುದು ಬಹಳ ಮುಖ್ಯ.

**ವೈಸ್ ಛೇರ್ಮನ್:-** ನಿಮ್ಮ ಇಬ್ಬರ ಮಧ್ಯೆ ಬಹಳ ಒಳ್ಳೆಯ ಸಮನ್ವಯತೆ ಇದೆ; ಸಮಾನವಾದ ಕಾಳಜಿ ಇದೆ. ಇನ್ನೂ ತುಂಬಾ ಸದಸ್ಯರು ಮಾತನಾಡುವವರಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಗಳೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮಾನ್ಯ ಸಚಿವರು ಈಗಾಗಲೇ ಉತ್ತರ ಕೊಟ್ಟುಬಿಟ್ಟಿದ್ದಾರೆ. ಇದು ಒಂದು ತರಹ ಜುಗಲ್ ಬಂದಿ ನಡೆದ ಹಾಗೆ ನಡೆಯುತ್ತಿದೆ.

**ವೈಸ್ ಛೇರ್ಮನ್:-** ಬೇರೆ ಸದಸ್ಯರು ಕೂಡ ಮಾತನಾಡಬೇಕಾಗಿರುವುದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಸಹಕರಿಸಬೇಕು.

**ಶ್ರೀ ಬಿ.ಕೆ.ಹರಿಪ್ರಸಾದ್:-**ಮಾನ್ಯ ವಿರೋಧ ಪಕ್ಷದ ನಾಯಕರು ಭಾವನಾತ್ಮಕವಾಗಿ ಮಾತನಾಡುತ್ತಿದ್ದಾರೆ; ಅವರ ಜಿಲ್ಲೆಯ ಸಮಸ್ಯೆಗಳ ಬಗ್ಗೆ ಮಾತನಾಡುತ್ತಿದ್ದಾರೆ. ಮಧ್ಯದಲ್ಲಿ ಎದ್ದು ನಿಂತು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೇರೆಯವರು ಮಾತನಾಡಿದರೆ ಸುಮ್ಮನೆ ಸಮಯ ಮುಂದಕ್ಕೆ ಹೋಗುತ್ತದೆ. ಹಾಗಾಗಿ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಫ್ರೀಯಾಗಿ ಮಾತನಾಡುವುದಕ್ಕೆ ಬಿಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

**ವೈಸ್ ಛೇರ್ಮನ್:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನೀವು ಮಾತನಾಡಲು ಪ್ರಾರಂಭಿಸಿ ಒಂದೂವರೆ ತಾಸುಗಳಾಯಿತು. ಬೇರೆಯವರೂ ಮಾತನಾಡುವುದಕ್ಕೆ ಅಪೇಕ್ಷೆ ವ್ಯಕ್ತಪಡಿಸಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್**:- ನಾಳೆ ಅವರಿಗೆ ಪೂರ್ತಿ ಅವಕಾಶ ಕೊಡಿ.

**ವೈಸ್ ಛೇರ್ಮನ್:-** ಪೀಠ ಯಾವತ್ತೂ ಕೂಡ ವಿರೋಧ ಪಕ್ಷದ ಸದಸ್ಯರಿಗೆ ಹೆಚ್ಚು ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಡುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-**ಮಾನ್ಯ ಸಭಾಪತಿಗಳೆ, ನನಗಿಂತಲೂ ಹೆಚ್ಚು ಪ್ರಭಾವಿತವಾಗಿ ಮಾತನಾಡುವಂತಹ ಸದಸ್ಯರು ನಮ್ಮ ಕಡೆ ಇದ್ದಾರೆ. ಅವರು ಎಷ್ಟು ಸಮಯ ಕೇಳುತ್ತಾರೋ ಕೊಡಿ. 24 ವರ್ಷದ ನನ್ನ ಶಾಸಕ ಜೀವನದಲ್ಲಿ ಪ್ರತಿ ಪಕ್ಷದ ನಾಯಕನಾಗಿ ಇದು ನನ್ನದು ಕೊನೆಯ ಅಧಿವೇಶನವಾಗಿದೆ.

**ವೈಸ್ ಛೇರ್ಮನ್:-** ಹಾಗೇಕೆ ಹೇಳುತ್ತಿದ್ದೀರಿ? ನೀವು ಮತ್ತೆ ಬರುತ್ತೀರಿ. ನೀವು ಮತ್ತೆ ಬರಬೇಕು ಎಂದು ಎರಡೂ ಕಡೆಯ ಸದಸ್ಯರು ಬಯಸುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್**:- ನಾನು ನ್ಯಾಯ ಒದಗಿಸುವ ಸಲುವಾಗಿ ಮಾತನಾಡುತ್ತೇನೆಯೇ ಹೊರತು ಬಾಯಿ ಚಪಲಕ್ಕೆ ಮಾತನಾಡುವುದಿಲ್ಲ.

**ಶ್ರೀ ಎನ್.ರವಿಕುಮಾರ್**:- ನೀವು, ಇದು ನನ್ನ ಕೊನೆಯ ಅಧಿವೇಶನ ಎಂದು ಹೇಳುವುದನ್ನು ನೋಡಿದರೆ ನನಗೆ ಬಹಳ ಬೇಜಾರಾಗುತ್ತದೆ.

**ವೈಸ್ ಛೇರ್ಮನ್:-** ಮಾನ್ಯ ವಿರೋಧ ಪಕ್ಷದ ನಾಯಕರೇ ನೀವು ಮಾತನಾಡಿ.

**ಶ್ರೀ ಎಸ್.ಆರ್.ಪಾಟೀಲ್**:- ಮಾನ್ಯ ಸಭಾಪತಿಗಳೆ, ಮಾನ್ಯ ಜಲ ಸಂಪನ್ಮೂಲ ಮಂತ್ರಿಗಳು lapses ಬಗ್ಗೆ ಹೇಳಿದರು. What sin they have committed? You do justice to the people of that 14 villages.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಅವರಿಗೆ ಏನೂ ಗೊತ್ತಿಲ್ಲ; ಮುಂದಿನ ಊರೂ ಗೊತ್ತಿಲ್ಲ. Guidance value ಎನ್ನುವುದು ಅವರಿಗೆ ಗೊತ್ತಿಲ್ಲ. ಜನಪ್ರತಿನಿಧಿಗಳು ಏನೋ ಒಂದು ಲ್ಯಾಪ್ಸ್ ಮಾಡಿದಕ್ಕೆ ಅವರಿಗೆ ಅನ್ಯಾಯವಾಯಿತು. They should not be penalized; they should be given justice. ಮಾನ್ಯ ಗೋವಿಂದ ಕಾರಜೋಳರವರು ನಮ್ಮ ಜಿಲ್ಲೆಯಿಂದ ಶಾಸಕರಾಗಿ, ಮಂತ್ರಿಯಾಗಿದ್ದಾರೆ. ಆ ಹಳ್ಳಿಗಳು ಅವರ ಪ್ರದೇಶದ ಪಕ್ಕದ ಹಳ್ಳಿಗಳು. ಅವರ ಊರು ಬಿಜಾಪುರ ಜಿಲ್ಲೆಯ ಕಾರಜೋಳ. ಆ 14 ಹಳ್ಳಿಯವರನ್ನು ಇವರು ಎತ್ತಿ ಹಿಡಿಯುತ್ತಾರೆ ಎನ್ನುವ ವಿಶ್ವಾಸ ನನಗೆ ಇದೆ. ಇವರಿಂದ ಆ ಜನ ಉದ್ಧಾರ ಆಗಬೇಕು. ನೀವು decision ತೆಗೆದುಕೊಂಡರೆ, they will be happier, those people will worship you. 14 ಹಳ್ಳಿಯವರಿಗೆ ನೀವು ನ್ಯಾಯ ಕೊಡುತ್ತೀರಿ ಎನ್ನುವ ವಿಶ್ವಾಸ ಇದೆ. ಯಾರಿಂದ lapses ಆಯಿತೋ, ಯಾರದು ತಪ್ಪೋ ಅದೇನೇ ಆಗಲಿ, ಅದನ್ನು post-mortem ಮಾಡುವುದು ಬೇಡ. ಅದು ಮುಗಿದು ಹೋದ ಅಧ್ಯಾಯ. Patient is dead. ಆದರೆ ಅವರಿಗೆ ನ್ಯಾಯ ಒದಗಿಸುವ ಕೆಲಸವನ್ನು ತಾವು ಮಾಡಬೇಕೆಂದು ಸಭಾಪತಿಯವರ ಮುಖಾಂತರ ಕೇಳುತ್ತೇನೆ. ಅದಕ್ಕೆ ಅವರು ಒಪ್ಪಿದ್ದಾರೆ.

ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ಬಹಳಷ್ಟು ಸಲ ಹೇಳಿದ್ದೇನೆ. ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತ, 130 ಟಿಎಂಸಿ ನೀರು ಬಳಕೆ ಮಾಡಿ, ಆಲಮಟ್ಟಿ ಜಲಾಶಯವನ್ನು 519 ಮೀಟರ್‌ನಿಂದ 524 ಮೀಟರ್‌ವರೆಗೆ ಎತ್ತರಿಸಿ, 15 ಲಕ್ಷ ಎಕರೆ ನೀರಾವರಿ ಮಾಡಿ, ಕಲ್ಬುರ್ಗಿ, ಯಾದಗಿರಿ, ರಾಯಚೂರು, ಕೊಪ್ಪಳ, ವಿಜಯಪುರ, ಬಾಗಲಕೋಟೆ ಮತ್ತು ಗದಗ ಜಿಲ್ಲೆಯ ಜನತೆಗೆ ನ್ಯಾಯ ಒದಗಿಸಬೇಕು.

(ಮುಂದು)

**(1222) 21-12-2021 5.00 DS-AK** **(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್(ಮುಂದು):-**

ನಿಗದಿತ ಅವಧಿಯಲ್ಲಿ ಈ ಸಲ ಅವರ ಅವಧಿ ಮುಗಿಯುವುದಕ್ಕಿಂತ ಪೂರ್ವದಲ್ಲಿ ಅವರು ಮನಸ್ಸು ಮಾಡಿದರೆ ತೆಲಂಗಾಣದವರಿಗಿಂತ ಅವರೇನು ಹಿಂದಿಲ್ಲ. ಅವರು ನಿಶ್ಚಿತವಾಗಿ ಮಾಡುತ್ತಾರೆನ್ನುವ ವಿಶ್ವಾಸವಿದ್ದು, ದಯಮಾಡಿ ಆ ದಿಸೆಯಲ್ಲಿ ಕಾರ್ಯ ಪ್ರವೃತ್ತರಾಗಬೇಕು. ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿ. ಹಣದ ಬಗ್ಗೆ ಏನೇನು bond float ಮಾಡುತ್ತಾರೋ ಮಾಡಲಿ ಮತ್ತು 'beg, borrow or steal' ಎನ್ನುವ ರೀತಿ ಅವರೇನು ಮಾಡುತ್ತಾರೆಯೋ ಮಾಡಲಿ. ಈ ಯೋಜನೆಯನ್ನು ಪೂರ್ತಿ ಮಾಡಿ. ಆದರೆ ನಾವು ಹಿಂದೆ ಸದನದಿಂದ ಹೊರಗೆ ಹೋಗಿ ಪಾದಯಾತ್ರೆ ಮಾಡುತ್ತೇವೆಂದು ಹೇಳಿದ್ದೆವು, ಈಗ ಪಾದಯಾತ್ರೆ ಮಾಡಿ ಬಂದಿದ್ದೇವೆ. ಇನ್ನು ಉಪವಾಸ ಸತ್ಯಾಗ್ರಹ ಮಾಡಬೇಕಾಗಿದೆ. ಇನ್ನೊಂದು ಯಾತ್ರೆ ಮಾಡುತ್ತೇವೆ. 7 ಜಿಲ್ಲೆ, 31 ತಾಲ್ಲೂಕುಗಳು ಸೇರಿ ಪಕ್ಷಾತೀತವಾಗಿ ಯಾತ್ರೆ ಮಾಡಬೇಕೆನ್ನುವ ಇಚ್ಛೆ ಇದೆ. ಅವರಿಗೆ ನೆನಪು ಮಾಡುವುದೇನೆಂದರೆ, ಜನರೆಲ್ಲಾ ಆ ಬಗ್ಗೆ ಭಾಗಿಯಾಗಲಿ ಎನ್ನುವ ದೃಷ್ಟಿಯಿಂದ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡುತ್ತಿದ್ದೇವೆ. 7 ಜಿಲ್ಲೆಯ ಉದ್ದಗಲಕ್ಕೂ ನಾವು ಟ್ರಾಕ್ಟರ್ ಯಾತ್ರೆ ಅಥವಾ ಇನ್ನಿತರ ಯಾವುದಾದರೂ ಯಾತ್ರೆಯನ್ನು ಮಾಡುತ್ತೇವೆ. ಏಕೆಂದರೆ, ಇದನ್ನು ಜೀವಂತವಾಗಿ ಇಡಬೇಕು. ನಮ್ಮ ಅವಧಿ ಮುಗಿಯಿತು, ನಾವು ಹೊರಗೆ ಹೋದೆವು, ಯುಕೆಪಿ ಹಾಗೆ ಉಳಿಯುತ್ತದೆ. ಆದರೆ ನಾವು ಬಿಟ್ಟರು ಅವರು ಬಿಡುವುದಿಲ್ಲ ಎನ್ನುವ ವಿಶ್ವಾಸ ನನಗಿದೆ. ಅವರ ಮೇಲೆ ನನಗೆ ನಂಬಿಕೆ, ಶ್ರದ್ಧೆ ಇದೆ. ಅದು ಆಗದಿದ್ದರೆ ನಾವು ಸರದಿ ಉಪವಾಸ ಸತ್ಯಾಗ್ರಹ ಮಾಡಬೇಕಾಗುತ್ತದೆ. ಅದು ಆಗದಿದ್ದರೆ ಕೊನೆಗೆ ನಾವು ಅಮರಣಾಂತ ಉಪವಾಸಕ್ಕೂ ಹಿಂದೇಟು ಹಾಕುವುದಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಯಾವುದೇ ಪರಿಸ್ಥಿತಿಯಲ್ಲಿ let the government beg, borrow or steal and complete the UKP-III Stage project and give justice to the farmers of seven districts. ಈ ಮುಳುಗಡೆಯಾಗುವಂತಹ ಸಂತ್ರಸ್ತರಿಗೆ ಅವರು ಪ್ರತಿಪಕ್ಷದಲ್ಲಿದ್ದಾಗ ಮಾತನಾಡುತ್ತಿದ್ದರು, 40 ಲಕ್ಷ, 50 ಲಕ್ಷ ಹಣ, ಅವರು ಅಧಿಕಾರಕ್ಕೆ ಬಂದಿದ್ದಾರೆ, ಆ ಹಣ ಒದಗಿಸಿ ಇವರ ಬದುಕನ್ನು ಬಂಗಾರ ಮಾಡಿ. ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಆದಂತಹ ಕೆಲವು ನಿರ್ಣಯಗಳನ್ನು ಹಿಂತೆಗೆದುಕೊಳ್ಳಲಿ. ವಿಜಯಪುರ ಜಿಲ್ಲೆಯ ಬಬಲೇಶ್ವರ ತಾಲ್ಲೂಕಿನ 14 ಹಳ್ಳಿಗಳ ಜನತೆಗೆ Guidance Value ಪರಿಷ್ಕರಣೆ ಮಾಡಿ ಇವರಿಗೆ ನ್ಯಾಯ ಒದಗಿಸಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ವ್ಯಕ್ತ ಮಾಡುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ನಾನು ಮಹದಾಯಿ ಯೋಜನೆ ಬಗ್ಗೆ ಮಾತನಾಡುವುದಕ್ಕೆ ಬಯಸುತ್ತಿದ್ದೇನೆ. ಮಹದಾಯಿ ಯೋಜನೆ ಬಗ್ಗೆ ಈಗಾಗಲೇ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಅವರು ಬಹುತೇಕವಾಗಿ ನನಗೆ ಮಾತನಾಡುವುದಕ್ಕೆ ಏನು ಉಳಿಸಿಲ್ಲ. ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪನವರು ಕೂಡ ಮಾತನಾಡಿದ್ದಾರೆ. ನಾನು ಮಹದಾಯಿ ಯೋಜನೆಯ ಬಗ್ಗೆ ಮಾತನಾಡುವುದಕ್ಕಿಂತ ಮೊದಲು ಬಿ.ಎಂ.ಹೊರಕೇರಿ ಎನ್ನುವವರು ಇದ್ದರು. ಅವರು ಬಾದಾಮಿ ತಾಲ್ಲೂಕಿನವರು. ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್ ಅಧ್ಯಕ್ಷರಾಗಿದ್ದರು. ಗುಳೇದಗುಡ್ಡ ವಿಧಾನಸಭಾ ಕ್ಷೇತ್ರದ ಶಾಸಕರಾಗಿದ್ದರು. Agriculture Assistant ನಿಂದ ಶಾಸಕರಾಗುವವರೆಗೂ ಅವರು ಕೆಲಸ ಮಾಡಿದ್ದರು. ಅವರು ಮಹದಾಯಿ ಯೋಜನೆಯ ಪಿತಾಮಹ. ಅವರನ್ನು ಇವತ್ತು ನೆನಪಿಸಿಕೊಂಡು ಈ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. 1978 ರಲ್ಲಿ ಮಹದಾಯಿ ಯೋಜನೆ ಸಿದ್ಧವಿದ್ದರೂ ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ನಮ್ಮ ಸರ್ಕಾರ 2002 ರಲ್ಲಿ ಒಪ್ಪಿಗೆ ಪಡೆದು ಮಹದಾಯಿ ಯೋಜನೆ 2032 ಚದರ ಕಿಲೋ ಮೀಟರ್ ಜಲಾನಯನ ಪ್ರದೇಶ ಹೊಂದಿದೆ. ಅದರಲ್ಲಿ ಕರ್ನಾಟಕದ ಪಾಲು 412 ಚದರ ಕಿಲೋ ಮೀಟರ್ ಇದೆ. ಕೇಂದ್ರ ಜಲ ಆಯೋಗದ ಸಮೀಕ್ಷೆಯಂತೆ ನದಿಯಲ್ಲಿ ಒಟ್ಟು 210 ಟಿ.ಎಂ.ಸಿ. ನೀರು ಲಭ್ಯವಿದೆ. ನಮ್ಮ ಕರ್ನಾಟಕ ರಾಜ್ಯದಲ್ಲೇನು ಮಹದಾಯಿ ನದಿ ಹರಿಯುತ್ತಿದೆ, ಅದು 45 ಟಿ.ಎಂ.ಸಿ. ಇದೆ. ಕರ್ನಾಟಕ ತನ್ನ ಪಾಲಿನ ನೀರನ್ನು ಪಡೆಯುವ ಸಲುವಾಗಿ ಯೋಜನೆ ರೂಪಿಸಿದ್ದರೂ ಕೂಡ ಗೋವಾ ಸರ್ಕಾರದವರು ಖ್ಯಾತೆ ತೆಗೆದರು. ಶ್ರೀ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪರಿಕ್ಕರ್ ರವರು ಮುಖ್ಯಮಂತ್ರಿಯಾಗಿದ್ದಾಗ ಇದರ ಬಗ್ಗೆ ಕರ್ನಾಟಕಕ್ಕೆ ನಮ್ಮ ಜಲ, ಸಸ್ಯ ಸಂಪತ್ತಿಗೆ, ಜೀವ ಸಂಕುಲಕ್ಕೆ ತೊಂದರೆಯಾಗುತ್ತಿದೆ, ಅಂದರೆ ನೀರು ಹೋಗಿ ಅರಬ್ಬಿ ಸಮುದ್ರಕ್ಕೆ ಸೇರುತ್ತಿದೆ. ಅಲ್ಲಿ ಜಲಚರ ಪ್ರಾಣಿಗಳಿಗೆ ನೀರು ಉಪಯೋಗ ಮಾಡಿದರೆ ನಮಗೆ ಅನ್ಯಾಯವಾಗುತ್ತಿದೆ ಎಂದು ನಮ್ಮ ವಿರುದ್ಧ ಮಾತನಾಡುತ್ತಾ ಬಂದರು. ಸಮುದ್ರ ಸೇರುವ ನೀರಿಗೆ ಈ ರೀತಿ ಹೇಳುತ್ತಿದ್ದಾರೆ. ಇದು 30 ವರ್ಷಗಳ ಯೋಜನೆ. ಈ 30 ವರ್ಷದ ಯೋಜನೆಯಲ್ಲಿ ಸತತವಾಗಿ 7 ವರ್ಷಗಳಿಂದ ಸತ್ಯಾಗ್ರಹ ನಡೆಯುತ್ತಿದೆ. ನವಲಗುಂದದಲ್ಲಿ ಖಾಯಂ ಆಗಿ ಸತ್ಯಾಗ್ರಹ ನಡೆಯುತ್ತಿದೆ. ಬೆಳಗಾವಿ ಜಿಲ್ಲೆಯ ಪಶ್ಚಿಮ ಘಟ್ಟದ ಸಾಲಿನಲ್ಲಿ ಹುಟ್ಟುವ ಮಹದಾಯಿ ನದಿ ನಮ್ಮ ರಾಜ್ಯದಲ್ಲಿ 35 ಕಿಲೋ ಮೀಟರ್, ಮುಂದೆ ಗೋವಾದಲ್ಲಿ 45 ಕಿಲೋ ಮೀಟರ್ ಹರಿಯುವ ಮಹದಾಯಿ ನದಿಗೆ ಮಾಂಡೋವಿ ನದಿ ಎಂದು ಕರೆಯುತ್ತಾರೆ. ಒಟ್ಟು ಮಹದಾಯಿ ನದಿಯ 52.60 ಅಡಿ ಟಿಎಂಸಿ ನೀರು ನಮ್ಮ ರಾಜ್ಯಕ್ಕೆ ಸೇರಿದರೆ 159.47 ಟಿಎಂಸಿ ಗೋವಾ ರಾಜ್ಯಕ್ಕೆ ಸೇರಿ ಅರಬ್ಬಿ ಸಮುದ್ರಕ್ಕೆ ಸೇರುತ್ತದೆ. ಇದು ವ್ಯರ್ಥವಾಗಿ ಸಮುದ್ರಕ್ಕೆ ನೀರು ಸೇರಬಾರದೆನ್ನುವ ಉದ್ದೇಶದಿಂದ ಅಂದಿನ ಮುಖ್ಯಮಂತ್ರಿಗಳಾದಂತಹ ಶ್ರೀ ಎಸ್.ಆರ್.ಬೊಮ್ಮಾಯಿಯವರ ನೇತೃತ್ವದಲ್ಲಿ ಈ ಯೋಜನೆ ಪ್ರಾರಂಭವಾಯಿತು ಎಂದು ಹೇಳುವುದಕ್ಕೆ ಬಯಸುತ್ತಿದ್ದೇನೆ. ಈ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರ ತಂದೆಯವರು ಪ್ರಾರಂಭ ಮಾಡಿದಂಥ ಯೋಜನೆ ಇದಾಗಿದೆ. ಅವರ ತಂದೆಯವರು ಮುಖ್ಯಮಂತ್ರಿಗಳಾಗಿದ್ದಾಗ ಆ ಯೋಜನೆಯನ್ನು ಪ್ರಾರಂಭ ಮಾಡಿದರು, ಅವರು ಕಾಲವಾದರು. ನಂತರ ಈಗ ಅವರ ಮಗನೇ ಮುಖ್ಯಮಂತ್ರಿಗಳಾಗಿದ್ದಾರೆ. ಮಹದಾಯಿ ಯೋಜನೆ ತ್ವರಿತವಾಗಿ ಕಾರ್ಯರೂಪಕ್ಕೆ ಬರಬೇಕೆಂದು ಅವರು 232 ಕಿ.ಮೀ. ಪಾದಯಾತ್ರೆಯನ್ನು ಮಾಡಿದ್ದರು. Central Water Commission (C.W.C) ನವರು ಡಿಸೆಂಬರ್ 2020 ರಲ್ಲಿ ಒಂದೂವರೆ ಟಿಎಂಸಿಗೆ ಡ್ಯಾಮ್ ಕಟ್ಟುವುದಕ್ಕೆ ಪರವಾನಗಿಯನ್ನು ಕೊಟ್ಟು ಸೆಪ್ಟೆಂಬರ್ 2021ರಲ್ಲಿ C.W.C ನವರು ಪರವಾನಗಿಯನ್ನು ರದ್ದು ಮಾಡಿದ್ದಾರೆ. ಇದನ್ನು ಏಕೆ ರದ್ದು ಮಾಡಿದರು ಎನ್ನುವ ಕಾರಣವೇ ಗೊತ್ತಾಗುತ್ತಿಲ್ಲ. C.W.C ನವರು 1.5 ಟಿಎಂಸಿ ಯದ್ದು ಡ್ಯಾಮ್ ಕಟ್ಟುವುದಕ್ಕೆ ಪರವಾನಗಿಯನ್ನು ಕೊಟ್ಟು ಮತ್ತೆ ಅದನ್ನು ಸೆಪ್ಟೆಂಬರ್ 2021 ರಲ್ಲಿ ರದ್ದು ಮಾಡಿದ್ದಾರೆ. ಅಧಿಕಾರಿಗಳ ಆ ಕಡೆಗೆ ಸರಿಯಾಗಿ ಆ ಕಡೆ ಗಮನ ಕೊಟ್ಟಿದ್ದಾರೋ ಇಲ್ಲವೋ, ಸರಿಯಾದ ಮಾಹಿತಿಯನ್ನು ಒದಗಿಸಿದ್ದಾರೋ ಇಲ್ಲವೋ ಗೊತ್ತಿಲ್ಲ. ಇನ್ನೊಮ್ಮೆ ತಾವು ಒಂದು delegation ತೆಗೆದುಕೊಂಡು ಹೋಗಿ C.W.C ಕಡೆಯವರಿಂದ ಅನುಮತಿ ಪಡೆಯಲು ಪ್ರಯತ್ನ ಮಾಡಬೇಕು. ಬಂಡೂರಿ ಯೋಜನೆ 8 ಕಿ.ಮೀ. ಸುರಂಗ ಮಾರ್ಗದಿಂದ ನೀರು ಖಾನಾಪುರ ಹತ್ತಿರ ಮಲಪ್ರಭ ನದಿಗೆ ಜೋಡಣೆಯಾಗುತ್ತದೆ. Tribunal decision ಪ್ರಕಾರ ಒಟ್ಟು ನಮ್ಮ ರಾಜ್ಯದಲ್ಲಿ 42 ಟಿಎಂಸಿ ಉತ್ಪಾದನೆಯಾದರೆ ಅದರಲ್ಲಿ 13.5 ಟಿಎಂಸಿ ಹಂಚಿಕೆಯಾಗಿದೆ. ಅದರಲ್ಲಿ 8 ಟಿಎಂಸಿ ನೀರು ವಿದ್ಯುತ್‌ಗೆ ಬಳಕೆ ಮಾಡಬೇಕು. ವಿದ್ಯುತ್‌ಗೆ ನೀರನ್ನು ಬಳಕೆ ಮಾಡಿದ ಕೂಡಲೇ ಆ ನೀರು ಗೋವಾಕ್ಕೆ ಹೋಗಿ ಮತ್ತೆ ಅರಬ್ಬಿ ಸಮುದ್ರವನ್ನು ಸೇರುತ್ತದೆ. ನಮ್ಮ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ನಮ್ಮ ನೀರನ್ನು ನಾವು circulate ಮಾಡಬಹುದು. ಆದರೆ ವಿದ್ಯುತ್

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಉತ್ಪಾದನೆ ಮಾಡಿದ ನಂತರ ಆ ನೀರು ವ್ಯರ್ಥವಾಗುವುದಿಲ್ಲ. ಅದು ನೇರವಾಗಿ ಮಾಂಡೋವಿ ನದಿಗೆ ಹೋಗಿ ಮತ್ತೆ ಅರಬ್ಬಿ ಸಮುದ್ರಕ್ಕೆ ಸೇರುತ್ತದೆ. ನಮಗೆ ಕೇವಲ 5.5 ಟಿಎಂಸಿ ನೀರು ಅಷ್ಟೇ ಸಿಗುತ್ತದೆ. 5.5 ಟಿಎಂಸಿಯಲ್ಲಿ 1.5 ಟಿಎಂಸಿ ನೀರು ಕಳಸ ಮತ್ತು ಹಲಸಾರ್ ಎರಡು ನಾಲೆಗೆ ಮತ್ತು 4 ಟಿಎಂಸಿ ಬಂಡೂರಿ ನಾಲಾಗೆ ಬರುತ್ತದೆ. ಇವೆರಡರಿಂದ 5.5 ಟಿಎಂಸಿ ನೀರನ್ನು ನಾವು ಉಪಯೋಗ ಮಾಡಬೇಕು. 2007ರಲ್ಲಿ ಜೆಡಿ(ಎಸ್)-ಬಿಜೆಪಿ ಸಮ್ಮಿಶ್ರ ಸರ್ಕಾರದಲ್ಲಿ ಶ್ರೀಮಾನ್ ಈಶ್ವರಪ್ಪನವರು ನೀರಾವರಿ ಸಚಿವರಿದ್ದಾಗ ಗುದ್ದಲಿ ಪೂಜೆಯಾಗಿದೆ. 2018ರ ಆಗಸ್ಟನಲ್ಲಿ tribunal decision ಆಗಿದೆ. ಆದರೆ ಅದು ಪ್ರಗತಿಯಲ್ಲಿ ಇಲ್ಲ. ಇದು ಏಕೆ ಪ್ರಗತಿಯಲ್ಲಿಲ್ಲ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇವತ್ತು ಇದು ಕುಡಿಯುವ ನೀರಿನ ಬೆಳಗಾವಿ, ಬಾಗಲಕೋಟೆ, ಧಾರವಾಡ ಮತ್ತು ಗದಗ 4 ಜಿಲ್ಲೆಗಳಿಗೆ ಫಲಪ್ರದವಾಗುವಂಥ, ಉಪಯೋಗವಾಗುವಂತ ಯೋಜನೆಯಾಗಿದೆ. ಮಾನ್ಯ ಈಶ್ವರಪ್ಪನವರು ಸದನಕ್ಕೆ ಬಂದರು. ಅವರು ಜಲಸಂಪನ್ಮೂಲ ಸಚಿವರಾಗಿದ್ದಾಗ 2007ರಲ್ಲಿ ಶಂಕುಸ್ಥಾಪನೆ ಮಾಡಿದರು. ಬಹಳ ಸಂತೋಷದ ಸುದ್ದಿ ಎಂದರೆ ಇದಕ್ಕೆ ನೋಟಿಫಿಕೇಶನ್ ಆಗಿದೆ. ಯುಕೆಪಿ ಯೋಜನೆಯದ್ದು ನೋಟಿಫಿಕೇಶನ್ ಆಗಿಲ್ಲ, ನೋಟಿಫಿಕೇಶನ್ ಮಾಡುವುದಕ್ಕೆ ಒತ್ತಾಯ ಮಾಡಿದ್ದೇವೆ.

**(ಈ ಹಂತದಲ್ಲಿ ಉಪ ಸಭಾಪತಿಯವರು ಪೀಠವನ್ನಲಂಕರಿಸಿದರು)**

ಆದರೆ ಇಲ್ಲಿ ಸುದೈವದಿಂದ ಮಹದಾಯಿ ಯೋಜನೆಗೆ ನೋಟಿಫಿಕೇಶನ್ ಆಗಿದೆ. ಮಹದಾಯಿ ನೀರನ್ನು ಮಲಪ್ರಭಾ ಗೆ ತಂದು, ಆ ನೀರಿನಿಂದ ಬೆಳಗಾವಿ, ಹುಬ್ಬಳ್ಳಿ-ಧಾರವಾಡ, ಗದಗ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನವರಿಗೆ, ನಮ್ಮ ಜಿಲ್ಲೆಯ ಹುನಗುಂದ ತಾಲ್ಲೂಕಿನವರಿಗೆ ಒಟ್ಟು ನಾಲ್ಕು ಜಿಲ್ಲೆಗಳ 14 ತಾಲ್ಲೂಕುಗಳಿಗೆ ಕುಡಿಯುವ ನೀರನ್ನು ಒದಗಿಸುವ ಲಾಭವಾಗತಕ್ಕಂಥ, ಪ್ರಯೋಜನವಾಗುವಂಥ ಅತ್ಯಂತ ಮಹತ್ತರವಾದ ಯೋಜನೆಯಾಗಿದೆ. ಈ 30 ವರ್ಷದ ಯೋಜನೆಗೆ 7 ವರ್ಷಗಳಿಂದ ಸತತವಾಗಿ ಪ್ರಯತ್ನ ಮಾಡಲಾಗುತ್ತಿದೆ. ಹಗಲು-ರಾತ್ರಿ, ನಿದ್ರೆ-ನೀರಡಿಕೆ ಇಲ್ಲದೇ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಹೋರಾಟ ನಡೆಯಿತು. ಪೊಲೀಸರ ಲಾಠಿ ಪ್ರಹಾರ, ಪೊಲೀಸ್ ಕೇಸ್ ಏನೇ ಆದರೂ ಜನ ಪಟ್ಟು ಬಿಡಲಾರದೆ ಈ ಹೋರಾಟವನ್ನು ಮಾಡಿದ್ದಾರೆ. ಈಗ forest clearance ಒಂದು ಮಾತ್ರ ಉಳಿದಿದೆ. ಈ forest clearance, environmental clearance ಆದರೆ ಮುಗಿಯಿತು. ಇನ್ನು D.P.R. (Detailed Project Report) ಕೂಡ ತಯಾರಾಗಿಲ್ಲವೆಂಬುದು ನನ್ನ ಭಾವನೆಯಾಗಿದೆ.

(ಮುಂದು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

1223/21-12-2021/5-10/bkp-ak **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್. ಆರ್. ಪಾಟೀಲ್(ಮುಂದು)**

ನೀವು D.P.R (Detailed Project Report) ಅನ್ನು ತಯಾರು ಮಾಡಿ, ಟೆಂಡರ್ ಕರೆದರೆ, ಆಗ ಜನರಲ್ಲಿ ವಿಶ್ವಾಸ ಬರುತ್ತದೆ. ಇದಕ್ಕೆ ಬಜೆಟ್‌ನಲ್ಲಿ 500 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದಾರೆ. ಈ ರಾಜ್ಯದ ಮುಖ್ಯಮಂತ್ರಿಗಳಾಗಿರುವ ಮಾನ್ಯ ಬೊಮ್ಮಾಯಿಯವರು ಮಹದಾಯಿ ಯೋಜನೆಯನ್ನು ಅನುಷ್ಠಾನಗೊಳಿಸಬೇಕೆಂದು 235 ಕಿಲೋಮೀಟರ್‌ಗಳಷ್ಟು ದೂರ ಪಾದಯಾತ್ರೆಯನ್ನು ಮಾಡಿದ್ದರು. ಸಮಯ ಎಷ್ಟು ಚೆನ್ನಾಗಿದೆಯೆಂದರೆ, ಇವತ್ತು ಅವರೇ ಮುಖ್ಯಮಂತ್ರಿಗಳಾಗಿದ್ದಾರೆ. ಅವರ ತಂದೆಯವರು ಪ್ರಾರಂಭ ಮಾಡಿದಂತಹ ಯೋಜನೆ ಇದು. ಈಗ ಮಗ ಮುಖ್ಯಮಂತ್ರಿಯಾಗಿದ್ದಾರೆ. ತಂದೆ ಪ್ರಾರಂಭ ಮಾಡಿರುವ ಯೋಜನೆಯನ್ನು ಅವರ ಮಗ ಮುಕ್ತಾಯಗೊಳಿಸಲಿ ಎನ್ನುವುದು ನಮ್ಮ ಆಶಯವಾಗಿದೆ. ಎಲ್ಲವೂ ಸಿದ್ಧವಾಗಿದೆ. ಆಯವ್ಯಯದಲ್ಲಿ ಅನುದಾನವನ್ನು ನೀಡಲಾಗಿದೆ. ಸಣ್ಣ ಪುಟ್ಟ ತಾಂತ್ರಿಕ ಸಮಸ್ಯೆಗಳಿದ್ದರೆ, ಅವುಗಳನ್ನು ಸರಿಪಡಿಸಬಹುದಾಗಿದೆ.

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಇನ್ನೂ ಎಷ್ಟು ಹೊತ್ತು ತಾವು ಮಾತನಾಡುತ್ತೀರಿ? ತಾವು ತಮ್ಮ ಮಾತುಗಳನ್ನು 3.30 ಗಂಟೆಗಳಿಗೆ ಪ್ರಾರಂಭ ಮಾಡಿದ್ದೀರಿ. ಆಗ ನನಗೆ ಮಾತನಾಡಲು ಒಂದೂವರೆ ಗಂಟೆಗಳ ಕಾಲಾವಕಾಶ ಬೇಕೆಂದು ಹೇಳಿದ್ದೀರಿ. ಈಗ ಸಮಯ 5.30 ಆಗುತ್ತಿದೆ. ಹಿರಿಯರು ತಾವು ಹೇಳಿದಂತೆ ನಡೆದುಕೊಳ್ಳುತ್ತೀರೆಂದು ನಾನು ಭಾವಿಸಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ನನಗೆ ಎರಡು ಗಂಟೆಗಳ ಕಾಲಾವಕಾಶ ಬೇಕೆಂದು ಕೇಳಿಕೊಂಡಿದ್ದೆ.

**ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರ ಮಾರ್ಗದರ್ಶನ ಈ ಸದನಕ್ಕೆ ಬೇಕಾಗಿದೆ. ಇನ್ನು ಮೂರು ದಿನಗಳ ಕಾಲ ಅವರು ಮಾತನಾಡುವುದಕ್ಕೆ ಎಷ್ಟು ಸಮಯವನ್ನು ಕೇಳುತ್ತಾರೆ. ಎಷ್ಟು ಸಮಯವನ್ನು ಕೊಟ್ಟುಬಿಡಿ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಇಡೀ ಸದನ ನನ್ನ ಪರವಾಗಿದೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಈಶ್ವರಪ್ಪನವರು ಈ ಸದನಕ್ಕೆ ಅವರ ಅಗತ್ಯವಿದೆ ಎನ್ನುವ ರೀತಿಯಲ್ಲಿ ಮಾತನಾಡುತ್ತಾರೆ. ಈಗ ನೋಡಿದರೆ ಅವರು ಬರುವುದು ಬೇಡ ಎನ್ನುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ನಾನು ಆ ರೀತಿ ಮಾತನಾಡಿದ್ದೇನೆಂದು ಒಮ್ಮೆ ಅವರ ಬಾಯಿಯಿಂದ ಹೇಳಿಸಿಬಿಡಿ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ನಾನು ಆ ರೀತಿ ಹೇಳುವುದಿಲ್ಲ. ಅವರ ಹೇಳಿಕೆಯನ್ನು ನಾನು ನೋಡಿದ್ದೇನೆ. ಆ ವಿಚಾರಕ್ಕೆ ನಾನು ಹೋಗುವುದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಹೋಗಬೇಕು ಎನ್ನುವ ಕಾರಣಕ್ಕಾಗಿಯೇ ನಾನು ಈ ರೀತಿ ಹೇಳಿದ್ದೇನೆ. ನಾವು ಎಷ್ಟೇ ಜಗಳಗಳನ್ನು ಆಡಿದರೂ ಯಾವಯಾವ ವ್ಯಕ್ತಿಯಲ್ಲಿ ಏನೇನು ಪ್ರತಿಭೆಗಳು ಇವೆ. ಆ ಪ್ರತಿಭೆಗಳು ಅಗತ್ಯ ಈ ರಾಜ್ಯಕ್ಕೆ ಮತ್ತು ದೇಶಕ್ಕೆ ಬೇಕಾಗುತ್ತದೆ. ಜಗಳವೇ ಆಡಲಿಲ್ಲವೆಂದರೇ, ಅವರು ಆ ಪಕ್ಷದಲ್ಲಿ ಇರುವುದಕ್ಕೆ ತಕ್ಕವರಲ್ಲ, ನಾನು ಈ ಪಕ್ಷದಲ್ಲಿ ಇರುವುದಕ್ಕೆ ತಕ್ಕವನಲ್ಲ. ಜಗಳ ಎನ್ನುವುದು ನಡೆಯುತ್ತಿರಬೇಕು. ಇಬ್ಬರ ಉದ್ದೇಶ ರಾಜ್ಯದ ಅಭಿವೃದ್ಧಿಯೇ ಆಗಿದೆ. ಅವರ ಇಷ್ಟು ವರ್ಷಗಳ ಅನುಭವದ ಸಾರ ನಮ್ಮ ರಾಜ್ಯಕ್ಕೆ  ಅಗತ್ಯವಿದೆ ಎನ್ನುವ ಉದ್ದೇಶದಿಂದ ನಾನು ಆ ಮಾತುಗಳನ್ನು ಹೇಳಿದ್ದೇನೆಯೋ ಹೊರತು ಬೇರೆ ಅರ್ಥದಲ್ಲಿ ಅಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ನನ್ನ ಬಗ್ಗೆ ಅವರಿಗೆ ಇರುವಂತಹ ಕಳಕಳಿ ಮತ್ತು ವೈಯಕ್ತಿಕ ಅಭಿಪ್ರಾಯಕ್ಕೆ ನಾನು ಅನಂತ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಪುನಃ ಅವರು ಈ ಸದನಕ್ಕೆ ಬರಬೇಕೆನ್ನುವುದು ನಮ್ಮ ಆಸೆಯಾಗಿತ್ತು ಆದರೆ, ಕೆಲವರು ಅದಕ್ಕೆ ಅವಕಾಶವನ್ನು ನೀಡಲಿಲ್ಲ. ನಾವೇನು ಮಾಡುವುದಕ್ಕೆ ಸಾಧ್ಯವಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಸಮಯವೇ ಇದಕ್ಕೆ ಉತ್ತರವನ್ನು ಹೇಳುತ್ತದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಬಿ.ಕೆ.ಹರಿಪ್ರಸಾದ್:-** ಸನ್ಮಾನ್ಯ ಸಭಾಪತಿಯವರೇ, ಪ್ರತಿಭೆ ಇರುವವರು ಈ ಸದನಕ್ಕೆ ಬರಬೇಕೆಂದು ಮಾನ್ಯ ಈಶ್ವರಪ್ಪನವರು ಹೇಳುತ್ತಿದ್ದಾರೆ. ಆದರೆ, ಇವರೇ ಜಗಳ ಮಾಡಿ ಮಾಡಿ ಕಳುಹಿಸಿಬಿಟ್ಟಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಅವರು ಎಷ್ಟು ಜನರನ್ನು ಕಳುಹಿಸಿಕೊಟ್ಟಿದ್ದಾರೆಂದು ನಾನು ಹೇಳಲೇ?

**ಶ್ರೀ ಬಿ.ಕೆ.ಹರಿಪ್ರಸಾದ್:-** ಸನ್ಮಾನ್ಯ ಸಭಾಪತಿಯವರೇ, ಅವರು ಬಂದಿರುವುದೇ ಕಳುಹಿಸುವುದಕ್ಕೆ ಎಂದು ಅವರು ಒಪ್ಪಿಕೊಳ್ಳುತ್ತಿದ್ದಾರೆ.

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ತಮ್ಮ ಮಾತುಗಳನ್ನು ಮಧ್ಯಾಹ್ನ 3.30 ಗಂಟೆಗೆ ಪ್ರಾರಂಭ ಮಾಡಿದ್ದೀರಿ, ಈಗ ಸಮಯ 5 ಗಂಟೆ 30 ನಿಮಿಷಗಳಾಗಿದೆ. ತಾವು ತಮ್ಮ ಮಾತುಗಳನ್ನು ಪ್ರಾರಂಭಿಸಿ ಸರಿಯಾಗಿ 2 ಗಂಟೆಗಳ ಕಾಲವಾಗಿದೆ. ತಮ್ಮ ಮಾತುಗಳನ್ನು ಇನ್ನೂ 15 ನಿಮಿಷಗಳಲ್ಲಿ ಮುಕ್ತಾಯಗೊಳಿಸಬೇಕಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ನಾವಿಬ್ಬರು ಅಕ್ಕಪಕ್ಕ ಕುಳಿತುಕೊಳ್ಳುವವರು ತಮ್ಮ ಮಾತಿಗೆ ಗೌರವ ಕೊಡುತ್ತೇನೆ. ನಾನು ಕೋಪವನ್ನೂ ಮಾಡಿಕೊಳ್ಳುತ್ತೇನೆ, ಅಷ್ಟೇ, ಪ್ರೀತಿಯೂ ಇದೆ. ಸಮಯದ ಮಿತಿಯನ್ನು ನನ್ನ ಮೇಲೆ ಹೇರುವುದಿಲ್ಲ ಎನ್ನುವ ವಿಶ್ವಾಸವೂ ನನಗಿದೆ.

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, 2 ಗಂಟೆಗಳಿಗಿಂತ ಹೆಚ್ಚು ಸಮಯ ತಾವು ಮಾತನಾಡಿದರೆ, ಮಾತಿಗೆ ತಪ್ಪಿದಂತಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ನಾನು ಹೆಚ್ಚು ಸಮಯ ತೆಗೆದುಕೊಳ್ಳದೇ ನನ್ನ ಮಾತುಗಳನ್ನು ಆದಷ್ಟು ಬೇಗ ಮುಕ್ತಾಯಗೊಳಿಸುತ್ತೇನೆ. ಮಹದಾಯಿ ಯೋಜನೆಯಡಿಯಲ್ಲಿ ಅಣೆಕಟ್ಟನ್ನು ಕಟ್ಟುವುದಕ್ಕೆ ಕೂಡಲೇ ಡಿ.ಪಿ.ಆರ್. ಅನ್ನು ಸಿದ್ಧಗೊಳಿಸಿ ಟೆಂಡರ್ ಕರೆಯಬೇಕಾಗಿದೆ. ಏನಾದರೂ ತಾಂತ್ರಿಕ ಸಮಸ್ಯೆಗಳಿದ್ದರೆ ಅದನ್ನು ಬಗೆಹರಿಸಿಕೊಳ್ಳಲಿ. ಮಹದಾಯಿ ಯೋಜನೆ ಸುಮಾರು 30 ವರ್ಷಗಳ ಹಿಂದೆ ಮಾನ್ಯ ಎಸ್.ಆರ್.ಬೊಮ್ಮಾಯಿಯವರು ಪ್ರಾರಂಭಿಸಿದಂತಹ ಯೋಜನೆಯಾಗಿದೆ. ಪುಣ್ಯವಶಾತ್ ಇವತ್ತು ಅವರ ಮಗನೇ ಮುಖ್ಯಮಂತ್ರಿಗಳಾಗಿದ್ದಾರೆ. ಅಪ್ಪ ಪ್ರಾರಂಭ ಮಾಡಿದಂತಹ ಯೋಜನೆಯನ್ನು ಮಗ ಮುಕ್ತಾಯಗೊಳಿಸಲಿ ಎನ್ನುವುದು ನಮ್ಮ ಆಶಯವಾಗಿದೆ. ನಮ್ಮ ಭಾಗದಲ್ಲಿ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

''ಅಪ್ಪ ಗುಡಿ ಕಟ್ಟಿದರೆ, ಮಗ ಕಳಸ ಇಟ್ಟ'' ಎನ್ನುವ ಗಾದೆ ಮಾತಿದೆ. ಅಂದರೆ, ದೇವಸ್ಥಾನದ ನಿರ್ಮಾಣ ಕಾರ್ಯವನ್ನು ಅಪ್ಪ ಪ್ರಾರಂಭಿಸಿದರೆ, ಅದು ಮುಕ್ತಾಯಗೊಳುವಷ್ಟರಲ್ಲಿ ಆತ ಮೃತಪಡುತ್ತಾನೆ. ಕೊನೆಗೆ ಆ ದೇವಸ್ಥಾನವನ್ನು ಪೂರ್ಣಗೊಳಿಸಿ, ಗೋಪುರದ ಮೇಲೆ ಕಳಸವನ್ನು ಸ್ಥಾಪಿಸುವುದು ಆತನ ಮಗ ಎನ್ನುವುದು ಈ ಗಾದೆ ಮಾತಿನ ಅರ್ಥವಾಗಿದೆ. ಈಗ ಮಾನ್ಯ ಬಸವರಾಜ ಬೊಮ್ಮಾಯಿಯವರು ಈ ಯೋಜನೆಯನ್ನು ಮುಕ್ತಾಯಗೊಳಿಸಬೇಕಾಗಿದೆ. ಇದರಲ್ಲಿ ಯಾವುದೇ ಸಮಸ್ಯೆ ಇಲ್ಲ. ಬಹಳ ಮುಖ್ಯವಾಗಿ ನೋಟಿಫಿಕೇಶನ್ ಆಗಿದೆ. ನ್ಯಾಯಾಧಿಕರಣದ ಮಧ್ಯಂತರ ತೀರ್ಪು ಅಲ್ಲ, ಅಂತಿಮ ತೀರ್ಪು ಹೊರಬಿದ್ದಿದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ನಿಟ್ಟಿನಲ್ಲಿ ವಿಶೇಷ ಆಸಕ್ತಿಯನ್ನು ವಹಿಸಿ ಈ ಯೋಜನೆಯನ್ನು ನಿಗದಿತ ಅವಧಿಯಲ್ಲಿ ಅತ್ಯಂತ ತ್ವರಿತವಾಗಿ ಅವರ ಅಧಿಕಾರಾವಧಿ ಮುಗಿಯುವುದರೊಳಗಾಗಿ ಈ ಯೋಜನೆಯನ್ನು ಪೂರ್ಣಗೊಳಸಬೇಕೆಂದು ತಮ್ಮ ಮುಖಾಂತರ ಈ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಇನ್ನೂ ಮೂರನೆಯದಾಗಿ, ತುಂಗಭದ್ರುನದಿಯಲ್ಲಿ ಸುಮಾರು 33 ಟಿ.ಎಂ.ಸಿ.ಯಷ್ಟು ಹೂಳು ತುಂಬಿಕೊಂಡಿದೆ. ಹೂಳು ತುಂಬಾ ತುಂಬಿಕೊಂಡರೇ ಆ ಡ್ಯಾಂನ ಆಯುಷ್ಯ ಮುಕ್ತಾಯಗೊಂಡಾಗುತ್ತದೆ. ಡ್ಯಾಂನ ನಿಕಾಯ, ಅದರ ಕಾಲುವೆಗಳು ಏನು ಆಗುವುದಿಲ್ಲ ಅವು ಹೇಗೆ ಇವೆಯೋ ಅದೇ ರೀತಿಯಲ್ಲಿ ಇರುತ್ತವೆ, ಆದರೆ, ಕ್ಯಾಚ್‌ಮೆಂಟ್ ಏರಿಯಾದಲ್ಲಿ ಹೂಳು ತುಂಬಿದರೆ ಡ್ಯಾಂನ ಆಯುಷ್ಯ ಮುಗಿದಂತೆ ಲೆಕ್ಕ. ಈಗ ತುಂಗಭದ್ರು ನದಿಯಲ್ಲಿ ಸುಮಾರು 33 ಟಿ.ಎಂ.ಸಿ. ಹೂಳು ತುಂಬಿದೆ. 33 ಟಿ.ಎಂ.ಸಿ. ಎಂದರೆ, ಸುಮಾರು 3 ಲಕ್ಷ 30 ಸಾವಿರ ಎಕರೆಯಾಗಿದೆ. Thumb rule ಏನೆಂದರೆ, 1 ಟಿ.ಎಂ.ಸಿ. 10 ಸಾವಿರ ಎಕರೆಗೆ ಸಮನಾಗಿದೆ. ಇದು flood irrigation ನಿಂದ surface irrigation. ತೆಲಂಗಾಣ ಕರ್ನಾಟಕ ಮತ್ತು ಆಂಧ್ರುಪ್ರದೇಶಗಳೊಂದಿಗೆ ಸಮಾಲೋಚನೆ ಮಾಡಬೇಕಾಗಿದೆ. ಇದರಲ್ಲಿ ಕರ್ನಾಟಕಕ್ಕೆ ಸುಮಾರು ಶೇಕಡಾ 65ರಷ್ಟು ಪಾಲಿದೆ, ಆಂಧ್ರುಪ್ರದೇಶ ಮತ್ತು ತೆಲಂಗಾಣಕ್ಕೆ ಶೇಕಡಾ 35ರಷ್ಟು ನೀರಿನ ಪಾಲಿದೆ. ತುಂಗಭದ್ರು ನೀರಾವರಿ ಮಂಡಳಿ ಎಂದು ಇದೆ. ಇದಕ್ಕೆ ಆಂಧ್ರುಪ್ರದೇಶದವರೇ ಅಧ್ಯಕ್ಷರಾಗಿರುತ್ತಾರೆ. ಈ ಯೋಜನೆ ಪೂರ್ಣಗೊಂಡರೇ, ತುಂಗಭದ್ರು ಎಡದಂಡೆ ಕಾಲುವೆಯಿಂದ ಗಂಗಾವತಿ ತಾಲ್ಲೂಕಿನಲ್ಲಿರುವ ನವಲೆ ಎನ್ನುವ ಪ್ರದೇಶದವರೆಗೆ ಕಾಲುವೆಗಳನ್ನು ನಿರ್ಮಾಣ ಮಾಡಿ ನವಲೆಯಲ್ಲಿ ನೀರನ್ನು ಸಂಗ್ರಹ ಮಾಡುವಂತಹ ಯೋಜನೆಯಾಗಿದೆ. ತುಂಗಭದ್ರುದಲ್ಲಿ ಎಷ್ಟು ಹೂಳು ತುಂಬಿದೆ ಅಷ್ಟು ಅಂದರೆ, ಅಂದಾಜು 33 ಟಿ.ಎಂ.ಸಿ ಸಂಗ್ರಹ ಸಾಮರ್ಥ್ಯದ ಸಮಾನಾಂತರ ಜಲಾಶಯವನ್ನು ನಿರ್ಮಾಣ ಮಾಡಿದರೆ, ಅದು ರಾಯಚೂರು ಜಿಲ್ಲೆಯ ಮಾನ್ವಿ ಮತ್ತು ಸಿಂಧಗಿ ತಾಲ್ಲೂಕಿನ ಜಮೀನುಗಳಿಗೆ ನೀರು ಹರಿಸುವುದಕ್ಕೆ ಅನುಕೂಲವಾಗುತ್ತದೆ. ನಮ್ಮ ಉತ್ತರ ಕರ್ನಾಟಕದಲ್ಲಿ Navali Balancing Reservoir ಏನಿದೆ ಇದು ಸಹ ನೆನೆಗುಂದಿಗೆ ಬಿದ್ದಿದೆ. ಡಿ.ಪಿ.ಆರ್. ತಯಾರು ಮಾಡಿ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆಂಧ್ರಪ್ರದೇಶದವರ ಜೊತೆಗೆ ಚರ್ಚೆ ಮಾಡಿ ಈ ಯೋಜನೆಯನ್ನು ಆದಷ್ಟು ಬೇಗನೇ ಕೈಗೆತ್ತಿಕೊಳ್ಳಬೇಕೆಂದು ತಮ್ಮ ಮೂಲಕ ಈ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, Navali Balancing Reservoir ಯಾವಾಗ ಆಗುತ್ತದೆ ಎನ್ನುವುದನ್ನು ಕಾತುರದಿಂದ ಕಾಯುತ್ತಿದ್ದೇವೆ. ಆದರೆ, ಅದು ಮರಿಚಿಕೆಯಾಗಿದೆ. ಅದಕ್ಕೆ ನಾನು ತಮ್ಮ ಮುಖಾಂತರ ಈ ಸರ್ಕಾರಕ್ಕೆ .......

ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ನನ್ನ ಮಾತುಗಳನ್ನು ಕೇಳಿಕೊಳ್ಳುತ್ತಿಲ್ಲ.

**ಉಪ ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಮಾನ್ಯ ವಿರೋಧ ಪಕ್ಷದ ನಾಯಕರು, ಅವರ ಮಾತುಗಳನ್ನು ತಾವು ಕೇಳಿಕೊಳ್ಳುತ್ತಿಲ್ಲವೆಂದು ಹೇಳುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಅವರು ಮಾತನಾಡುತ್ತಿರುವುದನ್ನು ಅಧಿಕಾರಿಗಳು ನೋಟ್ ಮಾಡಿಕೊಳ್ಳುತ್ತಿದ್ದಾರೆ.

**ಉಪ ಸಭಾಪತಿಯವರು:-** ಮಾನ್ಯ ಸಭಾ ನಾಯಕರೇ, ಅವರ ಮಾತುಗಳನ್ನು ತಾವೇ ಕೇಳಿಸಿಕೊಳ್ಳಬೇಕೆನ್ನುವಷ್ಟು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ತಮ್ಮ ಮೇಲೆ ಪ್ರೀತಿ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಬೆಳಗ್ಗೆ ಕಾರ್ಯದರ್ಶಿಗಳಾದರು ಇದ್ದರು. ಈಗ ಯಾವ ಅಧಿಕಾರಿಗಳು ಇಲ್ಲ, ಸಂಬಂಧಪಟ್ಟ ಮಂತ್ರಿಗಳು ಇಲ್ಲ. ಮಾನ್ಯ ಈಶ್ವರಪ್ಪನವರು ಕುಳಿತುಕೊಂಡಿ ಕೇಳಿಸಿಕೊಳ್ಳುತ್ತಿರುವುದು ನನಗೆ ಇನ್ನೂ ಖುಷಿಯಾಗುತ್ತಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿರುವುದನ್ನು ಕೇಳುವುದಕ್ಕೆ ನನಗೂ ಸಂತೋಷವಾಗುತ್ತಿದೆ. ಅವರು ಹೀಗೇ ವಿರೋಧ ಪಕ್ಷದಲ್ಲಿ ಕುಳಿತೇ ಮಾತನಾಡುತ್ತಿರಲಿ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದಲ್ಲಿರುವುದು ನನಗೆ ನೋವಿನ ಸಂಗತಿಯಲ್ಲ. ಅದು ನಮ್ಮ ವಿಶೇಷ ಹಕ್ಕು ಎಂದು ನಾನು ಭಾವಿಸುತ್ತೇನೆ. ವಿರೋಧ ಪಕ್ಷದಲ್ಲಿದ್ದರೆ, ಅವರಿಗೆ ಎಲ್ಲ ರೀತಿಯಲ್ಲಿಯೂ ಸಲಹೆ ಎಚ್ಚರಿಗೆ ನೀಡುವಂತಹ ಹಕ್ಕು ನಮಗಿರುತ್ತದೆ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(1224) 21.12.2021 05.20 ಎಸ್‌ವಿ-ಆರ್‌ಎನ್ (ಉಪ ಸಭಾಪತಿಯವರ ಉಪಸ್ಥಿತಿ)**

**ಎಸ್.ಆರ್.ಪಾಟೀಲ್ (ಮುಂದು):-**

ಇದು ಮೂರು ತಾಲ್ಲೂಕುಗಳಿಗೆ ಉಪಯುಕ್ತವಾಗಿರುವ ಯೋಜನೆಯಾಗಿದ್ದು, ಈ ಯೋಜನೆಯಿಂದ ಬಹಳಷ್ಟು ಲಾಭವಿದೆ. ರಾಯಚೂರು, ಮಾನ್ವಿ ಮುಂತಾದ ಭಾಗಗಳಿಗೆ ಪ್ರಯೋಜನವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನವಲೀ balancing reservoir ಅನ್ನು ತಡ ಮಾಡದೆ ತ್ವರಿತವಾಗಿ ಕೈಗೆತ್ತಿಕೊಳ್ಳಬೇಕು.

ಡಾ:ಡಿ.ಎಂ.ನಂಜುಂಡಪ್ಪ ವರದಿಯ ಬಗ್ಗೆ ಒಂದೆರಡು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಮ್ಮ ಸರ್ಕಾರ ಇದ್ದಾಗ ಖ್ಯಾತ ಆರ್ಥಿಕ ತಜ್ಞರಾದ ಡಾ:ಡಿ.ಎಂ.ನಂಜುಂಡಪ್ಪ ಅವರನ್ನು ನೇಮಕ ಮಾಡಿದ್ದೆವು. ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಭಾಗವನ್ನು ತುಲನಾತ್ಮಕವಾಗಿ ನೋಡಿದಾಗ ಉತ್ತರ ಕರ್ನಾಟಕ ಭಾಗವು ಹಿಂದುಳಿದಿದೆ ಎನ್ನುವ ವಿಷಯ ಅವರ ವರದಿಯಿಂದ ವ್ಯಕ್ತವಾಗಿತ್ತು. ಇದರ ಬಗ್ಗೆ ಅಧ್ಯಯನ ಮಾಡಿ ಶಿಫಾರಸ್ಸುಗಳನ್ನು ಮಾಡುವಂತೆ ಶ್ರೀ ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಡಾ:ಡಿ.ಎಂ. ನಂಜುಂಡಪ್ಪ ಅವರನ್ನು ನೇಮಕ ಮಾಡಿದ್ದರು. ಸಮಿತಿಯು ಉತ್ತರ ಕರ್ನಾಟಕದ ಅಭಿವೃದ್ಧಿ ಮಾಡಲು ಏನೇನು ಕ್ರಮ ಕೈಗೊಳ್ಳಬೇಕು, ಯಾವ ಯಾವ ಯೋಜನೆಗಳನ್ನು ಜಾರಿಗೆ ತರಬೇಕು ಎನ್ನುವುದನ್ನು ಶಿಫಾರಸ್ಸು ಮಾಡಿದ್ದಾರೆ. ಅವು ಇನ್ನೂ ಜಾರಿಗೆ ಬಂದಿರುವುದಿಲ್ಲ. ಇದು ಎಂತಹ ದುರ್ದೈವದ ಸಂಗತಿ.

ವರದಿಯಲ್ಲಿ ಹೇಳಿರುವ ಅಂಶಗಳು ಹೀಗಿವೆ. ಮೊದಲನೆಯದಾಗಿ, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇದು ಜಲಸಂಪನ್ಮೂಲ ಇಲಾಖೆಯ ಅಡಿಯಲ್ಲಿ ಬರುವ ಒಂದು ಸಂಸ್ಥೆ. ಇದನ್ನು ಆಲಮಟ್ಟಿಗೆ ಸ್ಥಳಾಂತರ ಮಾಡಬೇಕು. ಇದು ಅವರು ಮಾಡಿರುವ ಶಿಫಾರಸ್ಸು, ನಾನು ಹೇಳುತ್ತಿರುವುದಲ್ಲ ಅಥವಾ ಮತ್ತಿನ್ಯಾರೋ ಹೇಳಿರುವುದಲ್ಲ. ಡಾ:ಡಿ.ಎಂ.ನಂಜುಂಡಪ್ಪ, ಖ್ಯಾತ ಆರ್ಥಿಕ ತಜ್ಞರು ಬಹಳಷ್ಟು ಆಳವಾಗಿ ಅಧ್ಯಯನ ಮಾಡಿ ಈ ಶಿಫಾರಸ್ಸನ್ನು ಮಾಡಿದ್ದಾರೆ.

ಎರಡನೆಯದಾಗಿ, ಕರ್ನಾಟಕ ನೀರಾವರಿ ನಿಗಮ. ಇದು ಸಹ ಜಲಸಂಪನ್ಮೂಲ ಇಲಾಖೆಯ ಅಡಿಯಲ್ಲಿಯೇ ಬರುತ್ತದೆ. ಇದನ್ನು ದಾವಣಗೆರೆಗೆ ಸ್ಥಳಾಂತರಿಸಬೇಕೆಂದು ಹೇಳಿದ್ದಾರೆ. ಈ ಭಾಗದವರು ಯಾರಾದರೂ ಹೇಳಿ ಶಿಫಾರಸ್ಸು ಮಾಡಿರುವುದಿಲ್ಲ. ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇದನ್ನು ದಾವಣಗೆರೆಗೆ ಸ್ಥಳಾಂತರಗೊಳಿಸಬೇಕು.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮೂರನೆಯದಾಗಿ, ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಅಂದರೆ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮ. ಇದು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಡಿಯಲ್ಲಿ ಬರುತ್ತದೆ. ಇದು ಬೆಳಗಾವಿಗೆ ಸ್ಥಳಾಂತರಗೊಳ್ಳಬೇಕಾಗಿದೆ.

ನಾಲ್ಕನೆಯದಾಗಿ, ಸಕ್ಕರೆ ನಿರ್ದೇಶಕರು ಮತ್ತು ಕಬ್ಬು ಅಭಿವೃದ್ಧಿ ಆಯುಕ್ತರು ಇವರು ಬೆಂಗಳೂರಿನಲ್ಲಿಯೇ ಠಿಕಾಣಿ ಹೂಡಿದ್ದಾರೆ. ಇದು ಸಹ ಬೆಳಗಾವಿಗೆ ಸ್ಥಳಾಂತರಗೊಳ್ಳಬೇಕು. ಇವಿಷ್ಟೂ ಆದೇಶಗಳಾಗಿದೆ. ಆದರೆ ಸ್ಥಳಾಂತರಗೊಂಡಿರುವುದಿಲ್ಲ. ಇದರ ಹಿಂದಿನ ಉದ್ದೇಶವೆಂದರೆ ಉತ್ತರ ಕರ್ನಾಟಕ ಭಾಗದಲ್ಲಿ ಅಭಿವೃದ್ಧಿ ಹಾಗೂ ಆಡಳಿತ ಚುರುಕುಗೊಳಿಸಲು ಎಲ್ಲಾ ಇಲಾಖೆಗಳನ್ನು ವಿವಿಧ ಸ್ಥಳಗಳಿಗೆ ವರ್ಗಾವಣೆ ಮಾಡಲು ಆದೇಶವಾಗಿದೆ. ಆದರೆ ಇಲ್ಲಿಯವರೆವಿಗೆ ಅದು implement ಆಗಿರುವುದಿಲ್ಲ.

ಐದನೆಯದಾಗಿ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು ಇದನ್ನು ವಿಭಜಿಸಿ ಉತ್ತರ ಕರ್ನಾಟಕಕ್ಕೆ ಒಂದು ಪ್ರತ್ಯೇಕ ಮಂಡಳಿಯನ್ನು ರಚನೆ ಮಾಡಬೇಕು. ಅದು ಹುಬ್ಬಳ್ಳಿಗೆ ಸ್ಥಳಾಂತರಗೊಳ್ಳಬೇಕು.

ಆರನೆಯದಾಗಿ, ನಿರ್ದೇಶಕರು, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಇದು ಪ್ರವಾಸೋದ್ಯಮ ಇಲಾಖೆಯಡಿಯಲ್ಲಿ ಬರುತ್ತದೆ. ಇದನ್ನು ಹಂಪಿಗೆ ಸ್ಥಳಾಂತರ ಮಾಡಬೇಕೆಂದು ಕೇಳಿದ್ದಾರೆ. Hampi is the World Heritage Centre. ಅಲ್ಲಿ ಮಾಡಿದರೆ ಇದರಿಂದ ಹೆಚ್ಚು ಉಪಯೋಗವಾಗುತ್ತದೆ ಎಂದು ಶಿಫಾರಸ್ಸು ಮಾಡಿದ್ದಾರೆ.

ಏಳನೆಯದಾಗಿ, ಬೆಂಗಳೂರಿನಲ್ಲಿರುವ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಸದಸ್ಯರ ಪೈಕಿ ಒಬ್ಬ ಸದಸ್ಯರನ್ನು ಧಾರವಾಡಕ್ಕೆ ವರ್ಗಾಯಿಸಬೇಕು. ಇದು ಕಾನೂನಿನ ಇಲಾಖೆಯಡಿಯಲ್ಲಿ ಬರುತ್ತದೆ. ಇಬ್ಬರು ಸದಸ್ಯರು ಇರುತ್ತಾರೆ. ಅವರಲ್ಲಿ ಒಬ್ಬರನ್ನು ಧಾರವಾಡಕ್ಕೆ ವರ್ಗಾಯಿಸಬೇಕು.

ಎಂಟನೆಯದಾಗಿ, ಬೆಂಗಳೂರಿನಲ್ಲಿರುವ ಕರ್ನಾಟಕ ರಾಜ್ಯ ಮಾಹಿತಿ ಆಯೋಗದ ಆಯುಕ್ತರು ಇವರ ಪೈಕಿ ಎರಡು ಮಾಹಿತಿ ಆಯುಕ್ತರ ಕಛೇರಿಯಲ್ಲಿ ಒಂದು ಪೀಠ ಕಲಬುರಗಿಗೆ, ಒಂದು ಪೀಠ ಬೆಳಗಾವಿಗೆ ಸ್ಥಳಾಂತರಗೊಳ್ಳಬೇಕು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಒಂಬತ್ತನೆಯದಾಗಿ, ಕರ್ನಾಟಕ ಲೋಕಾಯುಕ್ತದಲ್ಲಿರುವ ಇಬ್ಬರು ಉಪ ಲೋಕಾಯುಕ್ತರ ಪೈಕಿ ಒಬ್ಬ ಲೋಕಾಯುಕ್ತರನ್ನು ಧಾರವಾಡಕ್ಕೆ ಸ್ಥಳಾಂತರಗೊಳಿಸಬೇಕು.

ಈ ಒಂಬತ್ತು ಶಿಫಾರಸ್ಸುಗಳ ಪೈಕಿ ಯಾರು ಬೆಂಗಳೂರು ಬಿಟ್ಟು ಬರಲು ತಯಾರಿಲ್ಲ. ಅದೇನು ಬೆಂಗಳೂರು ಹವಾಮಾನವೇ ಅಥವಾ ಬೆಂಗಳೂರಿನ ನೀರೇ ಏನೆಂದು ನನಗೆ ಅರ್ಥವಾಗುತ್ತಿಲ್ಲ. ಬೆಂಗಳೂರಿನಲ್ಲಿರುವವರು ಆ ಕಡೆಗೆ ಬರಲು ತಯಾರಿಲ್ಲ. ಸರ್ಕಾರದವರು ಆದೇಶ ಮಾಡಲು ಹೋದರೆ ನಾವು ಮನೆ ಮಾಡಿದ್ದೇವೆ, ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ, ಆಸ್ತಿ ಮಾಡಿದ್ದೇವೆ ಎಂದು ಯಾವುದೋ ಒಂದು ರೀತಿಯಲ್ಲಿ ಒತ್ತಡವನ್ನು ತರುತ್ತಾರೆ. ನಾವು ಅಧಿಕಾರದಲ್ಲಿದ್ದರೆ ನಮಗೂ ಮಾಡುತ್ತಾರೆ, ನಿಮಗೂ ಮಾಡುತ್ತಾರೆ. ಈ ಒಂಬತ್ತು ಶಿಫಾರಸ್ಸುಗಳನ್ನು ಮಾಡಿ ಇಷ್ಟು ವರ್ಷಗಳು ಕಳೆದರೂ ಇನ್ನೂ ಕಾರ್ಯಗತವಾಗಿರುವುದಿಲ್ಲ. You should take care and interest regarding this. ಇದು ನಮ್ಮ ಸರ್ಕಾರ ಅಥವಾ ನಿಮ್ಮ ಸರ್ಕಾರ ಮಾಡಿದ್ದಲ್ಲ. ಡಾ:ಡಿ.ಎಂ.ನಂಜುಂಡಪ್ಪ ಅವರು ವರದಿ ನೀಡಿದ್ದಾರೆ. ಆ ಪ್ರಕಾರ ಮಾಡಬೇಕೆಂದು ಸರ್ಕಾರ ನಿರ್ಣಯ ತೆಗೆದುಕೊಂಡಿದೆ. ಮೂರು ವರ್ಷಗಳಾದರೂ ಇನ್ನೂ ಅದು ನನೆಗುದಿಗೆ ಬಿದ್ದಿದೆ.

ಶ್ರೀ ಸೊಬರದಮಠ ಎನ್ನುವವರು ಒಬ್ಬರು ಉಚ್ಚ ನ್ಯಾಯಾಲಯದಲ್ಲಿ WP No.37374/2019 ಅನ್ನು ಹೂಡಿದ್ದಾರೆ. ಮೇಲೆ ಹೇಳಲಾಗಿರುವ ಇಲಾಖೆಗಳನ್ನು ಸ್ಥಳಾಂತರಗೊಳಿಸುವುದನ್ನು ಕಾರ್ಯ ರೂಪಕ್ಕೆ ತರಲಿಕ್ಕೆ Public Interest Litigation ಮಾಡಿದ್ದಾರೆ. Writ Petition move ಆಗಿದೆ.

ನನ್ನ ಒಂದು ಅಭಿಪ್ರಾಯವನ್ನು ಇದೇ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಾವು ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ, ಅಲ್ಲಿರುವ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ದಕ್ಷಿಣ ಕರ್ನಾಟಕ ಮತ್ತು ಉತ್ತರ ಕರ್ನಾಟಕ ಎನ್ನುವಲ್ಲಿ ಸಾಕಷ್ಟು regional imbalance ಇದೆ. ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಲು ಇಲ್ಲಿ ಸ್ಥಳೀಯವಾಗಿ ಸಕ್ಕರೆ ಉದ್ಯಮಗಳಿವೆ. ಬೆಳಗಾವಿಯಲ್ಲಿ, ಬಾಗಲಕೋಟೆಯಲ್ಲಿ ಮತ್ತು ವಿಜಯಪುರದಲ್ಲಿ ಉದ್ಯಮಗಳಿವೆ. ಸಕ್ಕರೆ ಮಂತ್ರಿಗಳೊಂದಿಗೆ ಸಂಪೂರ್ಣ ಇಲಾಖೆಯನ್ನು ಸುವರ್ಣಸೌಧಕ್ಕೆ ಏಕೆ ಸ್ಥಳಾಂತರಗೊಳಿಸಬಾರದು? There is lot of difference between literacy percentage of South Karnataka and North Karnataka. ಸಾಕ್ಷರತೆಯಲ್ಲಿ ದಕ್ಷಿಣ ಕರ್ನಾಟಕದೊಂದಿಗೆ ನೋಡಿದಾಗ ಈ ಭಾಗ ಬಹಳಷ್ಟು ಹಿಂದುಳಿದಿದೆ. You shift Education Department to Suvarna Soudha. ಸಮಾಜ ಕಲ್ಯಾಣ ಇಲಾಖೆಯನ್ನೂ ವರ್ಗಾವಣೆ ಮಾಡಬೇಕು.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**Sri SHASHIL G.NAMOSHI:** Literacy rate is very least in Kalyana Karnataka. ತಪ್ಪು ತಿಳಿಯಬೇಡಿ. ವಿಶೇಷವಾಗಿ ಹುಬ್ಬಳ್ಳಿ-ಧಾರವಾಡದ ಕಡೆಯವರು ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಎಂದು ನೂರಾರು ಬಾರಿ ಹೇಳಿಕೊಳ್ಳುತ್ತಾ ನಮ್ಮನ್ನು ಕಡೆಗಣಿಸಿದ್ದಾರೆ ಎಂದು ಹೇಳುತ್ತಾ ಉದಾಹರಣೆಗೆ ನಮ್ಮನ್ನು ತೆಗೆದುಕೊಳ್ಳುತ್ತಾರೆ. ಈಗ ಉದಾಹರಣೆಗೆ literacy rate ಕಡಿಮೆ ಇದೆ ಎಂದು ತಾವು ಹೇಳಿದಿರಿ. ಅದು ಕಡಿಮೆ ಯಾವಾಗ ಎಂದರೆ when they take we are the least. ಅವರು average ತೋರಿಸಲು ನಮ್ಮ ಭಾಗದ ಉದಾಹರಣೆಯನ್ನು ಹೇಳುತ್ತಾರೆ.

(ಮುಂದು)

**(1225) 21-12-2021 (5.30) ಕೆಜಿ – ಆರ್‌ಎನ್ (ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಶಶೀಲ್ ಜಿ.** ನಮೋಷಿ **(ಮುಂದು):-**
ದಯವಿಟ್ಟು, ಅವರು ತಪ್ಪಿಯೂ ಸಹ, ವಿರೋಧ ಪಕ್ಷದ ನಾಯಕರು ದಕ್ಷಿಣ ಕರ್ನಾಟಕ ಮತ್ತು ಉತ್ತರ ಕರ್ನಾಟಕ ಎಂದು ಹೇಳಬಾರದು. I am happy with Kalyana Karnataka ಎಂದು ಬರೆದಿದ್ದಾರೆ. There is a lot of difference.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನನಗೆ ಗೊತ್ತಿದೆ. ನಾನು ಈ ಭಾಗದವನು. ಕಲ್ಯಾಣ ಕರ್ನಾಟಕದ ಜೊತೆಗೆ ನಮಗೆ ನಿಕಟವಾದ ಸಂಬಂಧವಿದೆ. ನಾನು ಸಾಕಷ್ಟು ಪ್ರವಾಸ ಮಾಡಿದ್ದೇನೆ. ಈಗ ಅಲ್ಲಿ ಏನಿದೆ ಎಂಬ lacuna ವನ್ನು ಹೇಳುತ್ತೇನೆ. ಅಲ್ಲಿ ಏನು comparatively, ಇದು ಕಿತ್ತೂರು ಕರ್ನಾಟಕ. It is better than Kalyana Karnataka. I don't want to dispute with you. ನಾನು dispute ಮಾಡುತ್ತಿಲ್ಲ. ಆದರೆ, ಇವರೆಡು together average ಅನ್ನು ತೆಗೆದರೆ, ದಕ್ಷಿಣ ಕರ್ನಾಟಕಕ್ಕೆ ಮುಂದೆ ಹೋಗಿದೆ,

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, conclude ಮಾಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದು regional imbalance ಆಗಿದೆ. ಈ regional imbalance ಅನ್ನು ಸರಿ ಮಾಡಬೇಕಲ್ಲವೇ; ಡಾ||ನಂಜುಂಡಪ್ಪರವರ ನೇತೃತ್ವದಲ್ಲಿ ಸಮಿತಿಯನ್ನು ನೇಮಕ ಮಾಡಿದ್ದಾರೆ. ಅವರು ಸಾಕಷ್ಟು ಅಧ್ಯಯನ ಮಾಡಿದ್ದಾರೆ. ಅವರು ಎಲ್ಲಾ ಕಡೆಗೂ ಪ್ರವಾಸ ಮಾಡಿದರು. ಅತ್ಯಂತ ಹಿಂದುಳಿದ, ಅತಿ ಹಿಂದುಳಿದ ಮತ್ತು ಹಿಂದುಳಿದ ತಾಲ್ಲೂಕುಗಳನ್ನಾಗಿ ವಿಂಗಡನೆ ಮಾಡಿದರು. ಅದಕ್ಕೆ ಶಿಫಾರಸ್ಸು ಮಾಡಿದರು. ಅವರು ಹೇಳಿದಂತೆ, ಕಲ್ಯಾಣ ಕರ್ನಾಟಕದಲ್ಲಿ ಅತಿ ಹಿಂದುಳಿದ 114 ತಾಲ್ಲೂಕುಗಳಿಗೆ 22 ಸಾವಿರ ಕೋಟಿ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡಿದೆ. ಅದರಲ್ಲಿ 4 ಸಾವಿರ ಕೋಟಿ ರೂಪಾಯಿಗಳನ್ನು ಅವರ ಭಾಗಕ್ಕೆ ಬಿಡುಗಡೆ ಮಾಡಿದ್ದಾರೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾನವ ಸೂಚ್ಯಂಕ ಏನಾಗಿದೆ, ಅದನ್ನು ಅವರು ಅಧ್ಯಯನ ಮಾಡಿದ್ದಾರೆಯೇ? Human Index is very below. ಮಾನವ ಸೂಚ್ಯಂಕ ಏನು ಸುಧಾರಣೆಯಾಗಿಲ್ಲ. 4 ಸಾವಿರ ಕೋಟಿ ರೂಪಾಯಿಗಳು ಆ ಭಾಗಕ್ಕೆ ಬಂದಿದೆ. Kalyana Karnataka Regional Development Board ಸ್ಥಾಪನೆ ಆಯಿತು. ನಮ್ಮ ಸರ್ಕಾರ ಇದ್ದಾಗ, ಆ ಮಂಡಳಿಗೆ ಒಬ್ಬ ಉಸ್ತುವಾರಿ ಮಂತ್ರಿಯವರು ಅದರ ಅಧ್ಯಕ್ಷರಾಗಿರಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವು. ಈಗ ಅದಕ್ಕೆ ಶಾಸಕರನ್ನು ಮಾಡಬೇಕೆಂದು ತಿದ್ದುಪಡಿ ಮಾಡಿ ಈಗ ಅದಕ್ಕೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಈಗ ಆ ನಿಗಮ ಏನು ಬೆಳವಣಿಗೆ ಇಲ್ಲ. ನಾವು ಉಸ್ತುವಾರಿ ಸಚಿವರನ್ನು ಏಕೆ ಮಾಡಿದ್ದೇವು ಎಂದರೆ, ಕಲ್ಯಾಣ ಕರ್ನಾಟಕದಲ್ಲಿ 6 ಜನ ಮಂತ್ರಿಗಳು ಇದ್ದಾರೆ. ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡುವುದಕ್ಕಿಂತ ಉಸ್ತುವಾರಿ ಸಚಿವರು ಅಧ್ಯಕ್ಷರಾಗಿ ಇದ್ದರೆ, ನಮಗೆ development is important. ಯಾರು X, Y, or Z ಆಗುತ್ತಾರೋ ಅದು ನಮಗೆ ಸಂಬಂಧವಿಲ್ಲ. ಅದು ಕಲ್ಯಾಣ ಕರ್ನಾಟಕ Regional Development Board ನಿಂದ ನಮಗೆ ಕೆಲಸವಾಗ ಬೇಕು. ಆದರೆ, ಕೆಲಸ ಆಗುತ್ತಿಲ್ಲ ಇನ್ನೂ Article 371(J) ಕೋಶ ಬೆಂಗಳೂರಿನಲ್ಲಿದೆ, ಅದು ಇನ್ನೂ ಗುಲ್ಬರ್ಗಾಕ್ಕೆ shift ಆಗಿಲ್ಲ.

ಮಾನ್ಯ ಸಭಾಪತಿಯವರೇ, Kalyana Karnataka Regional Development Board ಅದರ ಆಡಳಿತ ಮಂಡಳಿ ತಯಾರು ಆಗಿಲ್ಲ. ಪರಿಣಿತರನ್ನುಇಟ್ಟುಕೊಂಡು ಒಂದು ಆಡಳಿತ ಮಂಡಳಿಯನ್ನು ಮಾಡಬೇಕು. ಅದಕ್ಕೆ ಅನುದಾನ ಕೊಡುವುದು ಇರಲಿ. ಆ Board constitute ಆಗಿಲ್ಲ. These are all lacunas. ಅವರು ಇದರ ಬಗ್ಗೆ ಹೇಳಬೇಕಲ್ಲವೇ;

**ಉಪ ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ಆಯಿತು. Conclude ಮಾಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ ಆಯಿತು. ನಮೋಶಿಯವರು ನಮ್ಮನ್ನು ಕಲ್ಯಾಣ ಕರ್ನಾಟಕ್ಕೆ ಕರೆದುಕೊಂಡು ಹೋಗುತ್ತಿದ್ದಾರೆ.

**ಉಪ ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ತಾವು ಅದನ್ನು ಬಿಡಿ. ಅದಕ್ಕೆ conclude ಮಾಡಿದ್ದೀರಿ ಅಲ್ಲವೇ;

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಮೋಶಿಯವರು ಶಿಕ್ಷಕರ ಕ್ಷೇತ್ರದಿಂದ ಬಂದವರು. ಕಲ್ಯಾಣ ಕರ್ನಾಟಕದಲ್ಲಿ 20 ಸಾವಿರ ಶಿಕ್ಷಕರ ಕೊರತೆ ಇದೆ. ಅದಕ್ಕೆ ಅವರೇ ಹೊಣೆ. ನಾನು ಅವರು ಹೇಳಿದ್ದಕ್ಕೆ ಇದನ್ನು ಹೇಳುತ್ತಿದ್ದೇನೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಉಪ ಸಭಾಪತಿಯವರು:-** ಆಯನೂರು ಮಂಜಣ್ಣನವರೇ, ದಯವಿಟ್ಟು ಸುಮ್ಮನಿರಿ. ಅವರು ಬೇಗ ಮಾತನಾಡಿ ಮುಗಿಸಲಿ. ಅವರು ಮುಗಿಸುತ್ತೇನೆಂದು ಹೇಳುತ್ತಿದ್ದಾರೆ. ತಾವು ಬಿಡುತ್ತಿಲ್ಲ. ಇನ್ನೂ ಮಾತನಾಡುವವರು ಸುಮಾರು ಜನರಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರೇ conclude ಮಾಡಿ.

**ಶ್ರೀ ಎಸ್.ಆರ್.ಪಾಟೀಲ್.:-** ಮಾನ್ಯ ಸಭಾಪತಿಯವರೇ, ನಾನು ಕೊನೆಯದಾಗಿ ಹೇಳಿಬಿಡುತ್ತೇನೆ. ಡಾ|| ನಂಜುಂಡಪ್ಪನವರ ವರದಿಯಲ್ಲಿ ಮಾಡಿರುವಂತಹ 9 ಶಿಫಾರಸ್ಸುಗಳನ್ನು, ಮೂರು ವರ್ಷಗಳಾದರೂ ಸಹ ಜಾರಿಗೆ ಬಂದಿಲ್ಲ. ಇವುಗಳನ್ನು ಬೇಗನೆ implement ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಕೇಳಬಯಸುತ್ತೇನೆ. Kalayana Karnataka Regional Development Board ಗೆ ಉಸ್ತುವರಿ ಮಂತ್ರಿ ಇದ್ದರೆ, ಒಳ್ಳೆಯದು ಎಂದು ಒಳ್ಳೆಯ concept ಅನ್ನು ಇಟ್ಟುಕೊಂಡು ಮಾಡಿದ್ದೇವು, ಅದು ಇದ್ದರೆ, ಒಳ್ಳೆಯದು ಅದು ಅಭಿವೃದ್ಧಿಯಾಗುತ್ತದೆ ಎನ್ನುವ ಮಾತನ್ನು ಹೇಳುವುದರ ಜೊತೆಗೆ, Kalayana Karnataka Regional Development Board committee formation ಮಾಡಲಿ. With experts and representatives ಅದು ಬೇಗನೆ ಕಾರ್ಯರೂಪಕ್ಕೆ ಬರಲಿ. Article 371(J) ಏನಿದೆ, ಅದು ಸಂವಿಧಾನದ, ಮಹಾರಾಷ್ಟ್ರದ ವಿದರ್ಭ ಮಾದರಿಯಲ್ಲಿ ಕಲ್ಯಾಣ ಕರ್ನಾಟಕದ ಭಾಗ ಅಭಿವೃದ್ಧಿಯಾಗಲಿ. ಮೊದಲು ಹೈದರಾಬಾದ್ ಕರ್ನಾಟಕ ಎಂದು ಇತ್ತು. ಹೈದರಾಬಾದ್ ಎನ್ನುವುದು ದಾಸ್ಯದ ಸಂಕೇತ ಎಂದು ಅದನ್ನು ಕಲ್ಯಾಣ ಕರ್ನಾಟಕ ಶಬ್ದವನ್ನು ಬಳಕೆ ಮಾಡಿದೆ. ಕೇವಲ ಶಬ್ದ ಬಳಕೆ ಅಷ್ಟೇ ಆಯಿತು. ಇದಕ್ಕೆ ಸುಂದರವಾದಂತಹ ಕಲ್ಯಾಣ ಕರ್ನಾಟಕ ಎಂಬ ಶಬ್ದವನ್ನು ಕೊಟ್ಟಿದ್ದೇವೆ. ಕಲ್ಯಾಣ ಬಹುತರವಾಗಿ ಬಸವ ಕಲ್ಯಾಣವನ್ನು ಇಟ್ಟುಕೊಂಡು ಮಾಡಿದ್ದಾರೆಯೋ ಏನೋ, ಅಂದರೆ, ಬಸವಣ್ಣನವರು ನಮ್ಮ ಜಿಲ್ಲೆಯಲ್ಲಿ ಹುಟ್ಟಿ ನಮ್ಮ ಜಿಲ್ಲೆಯಲ್ಲಿ ಐಕ್ಯರಾದರೆ ಅವರ ಕರ್ಮ ಭೂಮಿ ಬಸವ ಕಲ್ಯಾಣ. ಅವರು ಅಲ್ಲಿ ಅನುಭವ ಮಂಟಪವನ್ನು ಮಾಡಿದ್ದರು. ಜಗತ್ತಿನ ಮೊಟ್ಟ ಮೊದಲನೆಯ Parliament ಅನ್ನು ಮಾಡಿ, ಎಲ್ಲಾ ಜಾತ್ಯತೀತವಾದಂತಹ ಒಂದು ವಾತಾವರಣವನ್ನು ನಿರ್ಮಾಣ ಮಾಡಿ ಸಮಾನತೆಯ ಸಮಾಜವನ್ನು ಸ್ಥಾಪನೆ ಮಾಡುವುದಕ್ಕೆ ಬಹು ದೊಡ್ಡ ಕೆಲಸ ಇವತ್ತು ಬಸವ ಕಲ್ಯಾಣದಲ್ಲಿ ಆದಂತಹ ಆ ಕಲ್ಯಾಣ ಕರ್ನಾಟಕ್ಕೆ ಆದಂತಹ lacunas ಇವೆ, Article 371(J) implement ಮಾಡುವಂತಹ ತೊಂದರೆಗಳನ್ನು ನಿಭಾಯಿಸುವುದಕ್ಕೆ ಸರ್ಕಾರ, ಮಾನ್ಯ ಸಭಾಪತಿಯವರೇ, ಸದಸ್ಯರಾದ ಆಯನೂರು ಮಂಜಣ್ಣನವರು ಅಲ್ಲಿ ಮಾತನಾಡುತ್ತಿದ್ದಾರೆ. ಮಾನ್ಯ ಸಚಿವರಾದ ಈಶ್ವರಪ್ಪನವರು ಇಲ್ಲಿ ಮಾತನಾಡುತ್ತಿದ್ದಾರೆ. ಬಿ.ಸಿ.ಪಾಟೀಲ್‌ರವರು ಮತ್ತು ಮುನಿರತ್ನರವರು ಅಲ್ಲಿ ಮಾತನಾಡುತ್ತಿದ್ದಾರೆ.

**ಉಪ ಸಭಾಪತಿಯವರು:-** ನಾರಾಯಣಸ್ವಾಮಿಯವರೇ, ನಿಮ್ಮ ವಿರೋಧ ಪಕ್ಷದ ನಾಯಕರೇ, ಮಾತನಾಡುತ್ತಿದ್ದಾರೆ ಕುಳಿತುಕೊಳ್ಳಿ ಎಂದು ಹೇಳುತ್ತಿದ್ದಾರೆ. ದಯವಿಟ್ಟು, ನಿಮ್ಮ ಜಾಗಕ್ಕೆ ಬಂದು ಕುಳಿತುಕೊಳ್ಳಿ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರು ಕುಳಿತುಕೊಳ್ಳುವುದಕ್ಕೆ ನಾನು ಬೇಡವೆಂದು ಹೇಳಲಿಲ್ಲ. ಆಯನೂರು ಮಂಜಣ್ಣನವರು ಅಲ್ಲಿ ಕುಳಿತುಕೊಂಡು ಮಂತ್ರಿಯಾದರೂ ಆಗಲಿ.

**ಉಪ ಸಭಾಪತಿಯವರು**:- ತಾವು conclude ಮಾಡಿ

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ಇಷ್ಟು ವಿಚಾರಗಳನ್ನು ವ್ಯಕ್ತ ಮಾಡುತ್ತೇನೆ. ಕೊನೆಯದಾಗಿ, ಕರ್ನಾಟಕ ನೀರಾವರಿ ನಿಗಮ ಇದೆ. ಅದನ್ನು ನಮ್ಮ ಕಡೆಗೆ shift ಮಾಡಿ ಎಂದು ಹೇಳುತ್ತಾರೆ. ಆ ನಿಗಮದಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಒಂದು ದೊಡ್ಡ ಪ್ರಮಾಣದಲ್ಲಿ ಭ್ರಷ್ಟಾಚಾರವಾಗಿದೆ. ಕೆಲಸವಿಲ್ಲದೇ, bogus MB ಅನ್ನು ಬರೆದಿದ್ದಾರೆ. bogus MB ಬರೆದು ಸಾವಿರಾರು ಕೋಟಿ ರೂಪಾಯಿಗಳನ್ನು ಲೂಟಿ ಮಾಡಿದ್ದಾರೆ. ನಾವು ಮೊದಲೇ ಹಣ ಇಲ್ಲವೆಂದು ಒದ್ದಾಡುತ್ತಿದ್ದೇವೆ. ಕಲ್ಯಾಣ ಕರ್ನಾಟಕವಾಗಲಿ ಕಿತ್ತೂರು ಕರ್ನಾಟಕವಾಗಲಿ ಈ ಭಾಗದ ಅಭಿವೃದ್ಧಿ ಕೆಲಸಕ್ಕೆ ಬಂದಂತಹ ಹಣದಲ್ಲಿ ದೊಡ್ಡ ಪ್ರಮಾಣದಲ್ಲಿ ಭ್ರಷ್ಟಚಾರ ಆಗಿದೆ. Bogus MB ಬರೆದಿದ್ದಾರೆ, ಅದರಲ್ಲಿ ಬೇಕಾದಷ್ಟು ಅಧಿಕಾರಿಗಳು ಭಾಗಿಯಾಗಿದ್ದಾರೆ. ಎಷ್ಟೋ ಮಂದಿಯನ್ನು suspend ಮಾಡಿದ್ದಾರೆ. ಕರ್ನಾಟಕ ನೀರಾವರಿ ನಿಗಮದ ಭ್ರಷ್ಟಾಚಾರದ ಬಗ್ಗೆ ಕಠಿಣವಾದಂತಹ ಕ್ರಮವನ್ನು ಕೈಗೊಳ್ಳಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. You go deep into the matter. You enquire and find out the culprit and book them and punish them. ಈ ನೀರಾವರಿ ನಿಗಮವನ್ನು ಇದೇ ರೀತಿ ಬಿಟ್ಟರೆ, ಇದು ಬಿಳಿ ಆನೆ ಆಗಿದೆ. ಆದ್ದರಿಂದ, ಇಷ್ಟು ವಿಚಾರಗಳನ್ನು ನಾನು ವ್ಯಕ್ತ ಮಾಡಿದ್ದೇನೆ. ಒಂದು ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತ, ಮಹಾದಾಯಿ ಯೋಜನೆ ಮತ್ತು ನವಿಲೆ ಡ್ಯಾಂ balancing reservoir ಇವೆಲ್ಲವೂ ನಿಗದಿತ ಅವಧಿಯಲ್ಲಿ ಕಾರ್ಯರೂಪಕ್ಕೆ ಬರಬೇಕು ಅದಕ್ಕೆ ಈ ಸರ್ಕಾರ ಹೆಚ್ಚು ಮುತವರ್ಜಿವಹಿಸಬೇಕು ಎನ್ನುವಂತಹ ಮಾತನ್ನು ಹೇಳುವುದರ ಜೊತೆಗೆ, Article 371(J) ಅಡಿಯಲ್ಲಿ ಸರಿಯಾದಂತಹ ಮತ್ತು ದಿಟ್ಟವಾದಂತಹ ಕ್ರಮಗಳನ್ನು ಕೈಗೊಳ್ಳಬೇಕು. ಈಗ 6 ಜಿಲ್ಲೆಗಳಲ್ಲ, 7 ಜಿಲ್ಲೆಗಳು ಆಗಿವೆ. ಹೊಸಪೇಟೆ ಒಂದು ಹೊಸ ಜಿಲ್ಲೆಯಾಗಿದೆ. ಈ 7 ಜಿಲ್ಲೆಗಳಿಗೆ ಫಲಪ್ರದವಾದತಂಹ ಕ್ರಮಗಳನ್ನು ಜರುಗಿಸಲಿ ಎಂದು ಹೇಳುವುದರ ಜೊತೆಗೆ, ಡಾ|| ನಂಜುಂಡಪ್ಪನವರ ವರದಿಯಲ್ಲಿ ಮಾಡಿರುವಂತಹ ಶಿಫಾರಸ್ಸುಗಳನ್ನು ಚಾಚು ತಪ್ಪದೇ ಈ ಸರ್ಕಾರ ಪಾಲನೆ ಮಾಡಲಿ ಎಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ನನಗೆ ಹೆಚ್ಚು ಸಮಯ ಮಾತನಾಡವುದಕ್ಕೆ ಅವಕಾಶವನ್ನು ಕಲ್ಪಿಸಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**8.ಪ್ರಕಟಣೆ**

**ಉಪ ಸಭಾಪತಿಯವರು:-** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾಸ ಸಭೆಯು ದಿನಾಂಕ 21.12.2021 ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿರುತ್ತದೆ ಎಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿಯನ್ನು ನೀಡಬೇಕೆಂದು ಕೋರಿರುತ್ತಾರೆ.

1) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (2ನೇ ತಿದ್ದುಪಡಿ) ವಿಧೇಯಕ 2021
2) ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 2021
3) ಕರ್ನಾಟಕ ನಗರಪಾಲಿಕೆಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2021
4) ಕರ್ನಾಟಕ ರಾಜ್ಯ ಆಯುಷ್ ವಿಶ್ವವಿದ್ಯಾಲಯ ವಿಧೇಯಕ, 2021

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅಥಣಿ ತಾಲ್ಲೂಕಿನ ಕೆಲವು ಸ್ವಾಮಿಜೀಯವರು ಬಂದಿದ್ದರು. ಅವರ ಕೆಲವು ಬೇಡಿಕೆಗಳಿವೆ. ಅದನ್ನು ಮಾನ್ಯ ಮುಖ್ಯ ಮಂತ್ರಿಯವರ ಬಳಿಕೊಟ್ಟಿದ್ದಾರೆ. ಆ ಬೇಡಿಕೆಯನ್ನು ಈಡೇರಿಸುವುದರ ಜೊತೆಗೆ, ಇಂದು ಸುಮಾರು 2000 ಮಂದಿ ನೇಕಾರರು ಬಂದಿದ್ದರು. ಇಡೀ ಉತ್ತರ ಕರ್ನಾಟಕದಲ್ಲಿ maximum ನೇಕಾರರು ಇದ್ದಾರೆ. ಅವರ ಕೆಲವು ಬೇಡಿಕೆಗಳಿವೆ. ಅಥಣಿ ತಾಲ್ಲೂಕಿನ ಜಲ್ವಂತ ಸಮಸ್ಯೆಗಳ ಬಗ್ಗೆ ಸರ್ಕಾರ ಕಣ್ಣು ಆಯಿಸಲಿ, ಅದಕ್ಕೆ ಪರಿಹಾರ ನೀಡಲಿ. ಅದರ ಜೊತೆಗೆ ನೇಕಾರರ ಬಂಧುಗಳಿಗೆ ಏನು ಒಟ್ಟು most regional genuine demands ಇವೆ. ಅವು ಬೇಗನೆ ಬಲಪ್ರದವಾಗಲಿ ಎಂದು ನಾನು ತಮ್ಮ ಮುಖಾಂತರ ಈ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

**ಉಪ ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ಅದನ್ನು ಮಾನ್ಯಮುಖ್ಯ ಮಂತ್ರಿಯವರಿಗೆ ತಲುಪಿಸಿ.

(ಮುಂದು)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(1226) 21-12-2021 (5.40) ಎಂವಿ-ವಿಕೆ** **(ಉಪ ಸಭಾಪತಿಯವರ ಉಪಸ್ಥಿತಿ)**

**9.ನಿಯಮ 68ರ ಮೇರೆಗೆ ಮುಂದುವರೆದ ಚರ್ಚೆ**

**"ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ."**

\- - - - - -

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು.

**ಉಪ ಸಭಾಪತಿಯವರು-** ಮಾನ್ಯ ಮರಿತಿಬ್ಬೇಗೌಡರೆ, ಮತ್ತೊಮ್ಮೆ ತಮ್ಮಲ್ಲಿ ಒಂದು ವಿನಂತಿ ಮಾಡಿಕೊಳ್ಳುವುದೇನೆಂದರೆ, ಈಗ ಮಾತನಾಡಿರುವಂಥದ್ದನ್ನು ಮತ್ತೆ ಅದನ್ನೇ ಪುನರಾವರ್ತನೆ ಮಾಡದೆ, ತಾವು ಹೊಸ ವಿಚಾರಗಳ ಬಗ್ಗೆ ಮಾತನಾಡಿ ಎಂದು ತಮಗೆ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಏಕೆಂದರೆ, ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ. ಮತ್ತೆ ಅದೇ ಪುನರಾವರ್ತನೆಯಾಗುವುದು ಬೇಡ ಅಷ್ಟೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಈಗ ಅಭಿವೃದ್ಧಿ ದೃಷ್ಟಿಯಿಂದ ಈ ಭಾಗ ಹಿಂದುಳಿದಿರುವಂತಹ ವಿಚಾರದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು, ಸದಸ್ಯರಾದ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು, ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರು ಮತ್ತು ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪನವರು ನೀರಾವರಿಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಾಕಷ್ಟು ವಿಚಾರಗಳನ್ನು ಮಾತನಾಡಿದ್ದಾರೆ. ಆ ಎಲ್ಲಾ ವಿಚಾರಕ್ಕೂ ಕೂಡ ಅವರುಗಳು ಬೆಳಕು ಚೆಲ್ಲಿದ್ದಾರೆ ಮತ್ತು ಆಡಳಿತ ಪಕ್ಷದ ಗಮನ ಸೆಳೆದಿದ್ದಾರೆ. ಆ ಎಲ್ಲದಕ್ಕೂ ಕೂಡ ನನ್ನ ಸಹಮತ ಇದೆ. ಅದರ ಬಗ್ಗೆ ಚುಟುಕಾಗಿ ಕೊನೆಯಲ್ಲಿ ಮಾತನಾಡುತ್ತೇನೆ. ನಾನು ಅವರು ಮಾತನಾಡಿರುವ ವಿಷಯಗಳನ್ನು ಮತ್ತೆ ಪುನರಾವರ್ತನೆ ಮಾಡುವುದಕ್ಕೆ ಹೋಗುವುದಿಲ್ಲ. ನನಗೆ ಈ ಸದನದಲ್ಲಿ ಒಂದು ವಿಶೇಷ ಏನೆಂದರೆ, ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕ, ದಕ್ಷಿಣ ಕರ್ನಾಟಕ, ಉತ್ತರ ಕರ್ನಾಟಕ ಮತ್ತು ಕರಾವಳಿ ಕರ್ನಾಟಕ ಎಂದು ಇದೆ. ಇದು ನನಗೆ ತುಂಬಾ ಬೇಸರ ತಂದುಬಿಟ್ಟಿದೆ. ದಯಮಾಡಿ ನಾನು ತಮ್ಮ ಮೂಲಕ ಈ ನಾಡಿನ ಜನ ಮತ್ತು ಜನಪ್ರತಿನಿಧಿಗಳಲ್ಲಿ ವಿನಂತಿಯನ್ನು ಮಾಡುತ್ತೇನೆ. ನಾವು ಸಮಗ್ರ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ಚಿಂತನೆ ಮಾಡಬೇಕು. ಇವತ್ತು ಈ ಬೆಳಗಾವಿಯ ಸುವರ್ಣ ವಿಧಾನ ಸೌಧದಲ್ಲಿ ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ಗೋವಾ ರಾಜ್ಯಗಳ ಗಡಿ ಭಾಗದ ಜಿಲ್ಲೆಗಳು ಬಹಳ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದೆ ಉಳಿದಿದೆ ಎನ್ನುವಂಥದ್ದು ಚರಿತ್ರೆಯಲ್ಲಿ ಇನ್ನೂ ಕೂಡ ಹಾಗೆಯೇ ಇದೆ. ಆದುದರಿಂದ, ವಿಶೇಷವಾಗಿ ಈ ಭಾಗದ ಜಿಲ್ಲೆಗಳ ಅಭಿವೃದ್ಧಿಯ ಬಗ್ಗೆ ಒಂದು ಚಿಂತನೆ ನಡೆಯಬೇಕು.

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಆಡಳಿತ ಪಕ್ಷದಿಂದ ಇದಕ್ಕೆ ಒಂದು ಕಾಯಕಲ್ಪ ಮಾಡಬೇಕೆಂಬ ದೃಷ್ಟಿಯಿಂದ ನಾವೆಲ್ಲರೂ ಕೂಡ ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ಅದರ ಅಂಗವಾಗಿ ನನ್ನ ಒಂದು ಕಳಕಳಿ ಏನೆಂದರೆ, ಯಾವುದೇ ದೇಶ, ರಾಜ್ಯ ಮತ್ತು ಪ್ರದೇಶ ಅಭಿವೃದ್ಧಿಯಾಗಬೇಕು ಎಂದರೆ, ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಹೇಳಿದಂತೆ ಮೊದಲನೆಯದಾಗಿ ಪ್ರತಿಯೊಬ್ಬ ವ್ಯಕ್ತಿಗೆ ಶಿಕ್ಷಣ ನೀಡಬೇಕು ಎನ್ನುವಂಥದ್ದು. ಹಿಂದುಳಿದ ಈ ಭಾಗದ ಜಿಲ್ಲೆಗಳಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಒಂದರಲ್ಲೇ 1550 ಶಿಕ್ಷಕರ ಹುದ್ದೆಗಳು ಖಾಲಿಯಿವೆ. ದಕ್ಷಿಣ ಕನ್ನಡದಲ್ಲಿ 1256 ಶಿಕ್ಷಕರ ಹುದ್ದೆಗಳು ಖಾಲಿಯಿವೆ. ಬೀದರ್ ಜಿಲ್ಲೆಯ್ಯಲ್ಲಿ 1030 ಶಿಕ್ಷಕರ ಹುದ್ದೆಗಳು ಖಾಲಿಯಿವೆ. ವಿಜಯಪುರ ಜಿಲ್ಲೆಯಲ್ಲಿ 1782 ಶಿಕ್ಷಕರ ಹುದ್ದೆಗಳು ಖಾಲಿಯಿವೆ. ರಾಯಚೂರು ಜಿಲ್ಲೆಯಲ್ಲಿ 2578 ಶಿಕ್ಷಕರ ಹುದ್ದೆಗಳು ಖಾಲಿಯಿವೆ. ಬಾಗಲಕೋಟೆ ಜಿಲ್ಲೆಯಲ್ಲಿ 1824 ಶಿಕ್ಷಕರ ಹುದ್ದೆಗಳು ಖಾಲಿಯಿವೆ. ಕಲಬುರಗಿ ಜಿಲ್ಲೆಯಲ್ಲಿ 2731 ಶಿಕ್ಷಕರ ಹುದ್ದೆಗಳು ಖಾಲಿಯಿವೆ. ದಾವಣಗೆರೆ ಜಿಲ್ಲೆಯಲ್ಲಿ 1725 ಶಿಕ್ಷಕರ ಹುದ್ದೆಗಳು ಖಾಲಿಯಿವೆ. ಒಂದೊಂದು ಜಿಲ್ಲೆಯಲ್ಲಿ ಮಂಜೂರಾತಿ ಆಗಿರುವಂತಹ ಪ್ರಾಥಮಿಕ ಶಾಲಾ ಶಿಕ್ಷಕರ ಇಷ್ಟೊಂದು ಹುದ್ದೆಗಳು ಖಾಲಿಯಿವೆ. ಈ ಹಿಂದುಳಿದ ಜಿಲ್ಲೆಗಳ ಈ ಪ್ರದೇಶಗಳಲ್ಲಿ ನಾವು ಮಕ್ಕಳಿಗೆ ಯಾವ ರೀತಿಯ ಶಿಕ್ಷಣವನ್ನು ಕೊಡುತ್ತಿದ್ದೇವೆ ಎನ್ನುವುದರ ಬಗ್ಗೆ ನಮ್ಮ ಈಗಿನ ಸರ್ಕಾರ ಬೆಳಕು ಚೆಲ್ಲಬೇಕು ಮತ್ತು ಅದರ ಬಗ್ಗೆ ಚಿಂತನೆ ನಡೆಸಬೇಕು. ಹಾಗೆಯೇ, ಪ್ರೌಢಶಾಲೆಗಳಲ್ಲಿ ಬೆಳಗಾವಿ ಜಿಲ್ಲೆಯಲ್ಲಿ 250 ಶಿಕ್ಷಕರ ಹುದ್ದೆಗಳು ಖಾಲಿಯಿವೆ. ವಿಜಯಪುರ ಜಿಲ್ಲೆಯಲ್ಲಿ 261 ಶಿಕ್ಷಕರ ಹುದ್ದೆಗಳು ಖಾಲಿಯಿವೆ. ಬಾಗಲಕೋಟೆ ಜಿಲ್ಲೆಯಲ್ಲಿ 296 ಶಿಕ್ಷಕರ ಹುದ್ದೆಗಳು ಖಾಲಿಯಿವೆ. ರಾಯಚೂರು ಜಿಲ್ಲೆಯಲ್ಲಿ 329 ಶಿಕ್ಷಕರ ಹುದ್ದೆಗಳು ಖಾಲಿಯಿವೆ. ಚಿಕ್ಕೋಡಿ ಜಿಲ್ಲೆಯಲ್ಲಿ 442 ಶಿಕ್ಷಕರ ಹುದ್ದೆಗಳು ಖಾಲಿಯಿವೆ. ಯಾದಗಿರಿ ಜಿಲ್ಲೆಯಲ್ಲಿ 233 ಶಿಕ್ಷಕರ ಹುದ್ದೆಗಳು ಖಾಲಿಯಿವೆ. ಅಂದರೆ, ಸರ್ಕಾರದ ಪ್ರೌಢಶಾಲೆಗಳಲ್ಲಿ ಇಷ್ಟೊಂದು ಹುದ್ದೆಗಳು ಖಾಲಿ ಇದ್ದರೆ. ಈ ಭಾಗದ ಜನರ ಬದುಕಿನಲ್ಲಿ ಯಾವ ರೀತಿ ಸುಧಾರಣೆ ತರುವುದಕ್ಕೆ ಸಾಧ್ಯವಿದೆ? ಈ ಶಾಲೆಗಳಲ್ಲಿ ಬಡವರ ಮಕ್ಕಳು ಕಲಿಯುತ್ತಾರೆ. ವಿಶೇಷವಾಗಿ ಇನ್ನೊಂದು ವಿಷಯವನ್ನು ಹೇಳಬೇಕೆಂದರೆ, ಈ ಭಾಗದಲ್ಲಿ ಸರ್ಕಾರಿ ಶಾಲಾ-ಕಾಲೇಜುಗಳು ಬಹಳ ಕಡಿಮೆ. ಈ ಭಾಗದಲ್ಲಿ ಖಾಸಗಿ ಶಾಲಾ-ಕಾಲೇಜುಗಳೇ ಜಾಸ್ತಿ ಇವೆ. ಇಂತಹ ಸರ್ಕಾರಿ ಶಾಲೆಗಳಲ್ಲಿ ಬಡವರ, ದೀನ ಮತ್ತು ನಿರ್ಗತಿಕರ ಮಕ್ಕಳು ಓದುತ್ತಾರೆ. ಇಲ್ಲಿ ಇಂತಹವರಿಗೆ ಕಲಿಸುವಂತಹ ಶಾಲೆಗಳೇ ಕಡಿಮೆ. ಆ ಶಾಲೆಗಳಲ್ಲೂ ಕೂಡ ಒಂದೊಂದು ಜಿಲ್ಲೆಗಳಲ್ಲಿ ಒಂದು ಮತ್ತು ಎರಡು ಸಾವಿರ ಶಿಕ್ಷಕರ ಕೊರತೆ ಎಂದು ಹೇಳಿದ್ದರೆ, ನಾವು ಈ ಭಾಗದಲ್ಲಿ ಬಡ ಮಕ್ಕಳಿಗೆ ಯಾವ ರೀತಿಯ ಶಿಕ್ಷಣವನ್ನು ಕಲಿಸುತ್ತಿದ್ದೇವೆ. ಇದರಲ್ಲಿ ನಾವು ಬಹಳ ತೀರಾ ಹಿಂದುಳಿದಿದ್ದೇವೆ. ಇದನ್ನು ಘನ ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕು. ನಾನು ಈ ಮಾತನ್ನು ಏಕೆ ಹೇಳುತ್ತೇನೆಂದರೆ, ಮೊಟ್ಟ ಮೊದಲಿಗೆ 2006-07ನೇ ಸಾಲಿನಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಮತ್ತು ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಬಿಜೆಪಿ ಸರ್ಕಾರ ರಚನೆ ಮಾಡಿದಂತಹ ಸಂದರ್ಭದಲ್ಲಿ ಮೊಟ್ಟಮೊದಲಿಗೆ ಕರ್ನಾಟಕ ರಾಜ್ಯದಲ್ಲಿ ಸುಮಾರು 187 ಪ್ರಥಮ ದರ್ಜೆ ಕಾಲೇಜುಗಳಿಗೆ

ಅನುಮತಿಯನ್ನು ಕೊಟ್ಟರು. ಅವುಗಳಲ್ಲಿ ಹೆಚ್ಚು ಪ್ರಥಮ ದರ್ಜೆ ಕಾಲೇಜುಗಳನ್ನು ಈ ಹಿಂದುಳಿದ ಜಿಲ್ಲೆಗಳಿಗೆ ಕೊಟ್ಟರು. ಅಲ್ಲಿಯವರೆಗೆ ಒಂದೂ ಕೂಡ ಪ್ರಥಮ ದರ್ಜೆ ಕಾಲೇಜುಗಳು ಇರಲಿಲ್ಲ. ಸನ್ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಸುಮಾರು 183 ಸರ್ಕಾರಿ ಕಾಲೇಜುಗಳನ್ನು ತೆರೆದರು. ಅವರು ಅವುಗಳಿಗೆಲ್ಲಾ ಒಂದೇ ವರ್ಷದಲ್ಲಿ ಕಟ್ಟಡಗಳನ್ನು ಒದಗಿಸಿ, ಬೋಧಕರ ಹುದ್ದೆಗಳನ್ನು ಮಂಜೂರು ಮಾಡಿದರು. ಆಗ ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಉಪ ಮುಖ್ಯಮಂತ್ರಿ ಮತ್ತು ಹಣಕಾಸು ಸಚಿವರಾಗಿದ್ದರು. ಅದರ ಜೊತೆಗೆ ಶಿಕ್ಷಣ ಇಲಾಖೆಗೆ 1554 ಸರ್ಕಾರಿ ಪ್ರೌಢಶಾಲೆಗಳನ್ನು ನೀಡಿರುವುದು ಅದು ಒಂದು ಇತಿಹಾಸ. ಆ 1554 ಪ್ರೌಢಶಾಲೆಗಳಲ್ಲಿ ಶೇಕಡಾ 70ರಷ್ಟು ಭಾಗದಷ್ಟು ಪ್ರೌಢಶಾಲೆಗಳನ್ನು ಈ ಹಿಂದುಳಿದ ಭಾಗಗಳಿಗೆ ನೀಡಿದರು. ಹಾಗೆಯೇ ಹುದ್ದೆಗಳಿಗೂ ಸಹ ಮಂಜೂರಾತಿಯನ್ನು ನೀಡಿದರು. ಹೊಸ ಪ್ರೌಢಶಾಲೆಗಳ ಕಟ್ಟಡಗಳಿಗೂ ಸಹ ಮಂಜೂರಾತಿಯನ್ನು ನೀಡಿದರು. ಅದರ ಜೊತೆಗೆ ಅದೇ ಅವಧಿಯಲ್ಲಿ ಅದರಲ್ಲೂ ವಿಜ್ಞಾನ ವಿಭಾಗವನ್ನು ಗ್ರಾಮೀಣ ಪ್ರದೇಶದ ಹಿಂದುಳಿದ ಈ ಜಿಲ್ಲೆಗಳಿಗೆ ಕೊಡಬೇಕೆಂದು 386 ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ತೆರೆದರು. ಆ ಸಮಯದಲ್ಲಿ ಇಂದಿನ ಮಾನ್ಯ ಸಭಾಪತಿಯವರು ಶಿಕ್ಷಣ ಸಚಿವರಾಗಿದ್ದರು. ಇದರ ಜೊತೆಗೆ ಮಾಜಿ ಮುಖ್ಯಂತ್ರಿಗಳಾದ ಸನ್ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರ ನೇತೃತ್ವದಲ್ಲಿ 10 ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳನ್ನು ಪ್ರಾರಂಭ ಮಾಡಿದರು. ಇಲ್ಲಿ ಬಡವರ, ದೀನ, ದಲಿತರ ಮಕ್ಕಳು ತಾಂತ್ರಿಕ ಶಿಕ್ಷಣವನ್ನು ಕಲಿಯಬೇಕೆಂಬ ಸದುದ್ದೇಶದಿಂದ ಅವುಗಳಲ್ಲಿ 6 ಎಂಜಿನಿಯರಿಂಗ್ ಕಾಲೇಜುಗಳನ್ನು ಈ ಹಿಂದುಳಿದ ಭಾಗಕ್ಕೆ ನೀಡಿದರು. ಆ ನಂತರ ಕಾಂಗ್ರೆಸ್ ಸರ್ಕಾರ ಕೂಡ 4 ಎಂಜಿನಿಯರಿಂಗ್ ಕಾಲೇಜುಗಳನ್ನು ತೆರೆಯಿತು. ಆದರೆ, ಇವತ್ತಿಗೂ ಕೂಡ ಇವರು ಅವುಗಳಿಗೆ ಬೋಧಕರನ್ನು ಮತ್ತು ಮೂಲಭೂತ ಸೌಲಭ್ಯಗಳನ್ನು ಕೊಡುವುದಕ್ಕೆ ಆಗುತ್ತಿಲ್ಲ. ಇವತ್ತು ಈ ಸರ್ಕಾರಕ್ಕೆ ವಿದ್ಯುಚ್ಛಕ್ತಿ ಬಿಲ್ಲುಗಳನ್ನು ಪಾವತಿ ಮಾಡುವುದಕ್ಕೆ ಆಗುತ್ತಿಲ್ಲ, ಅದಕ್ಕೆ ವಿದ್ಯುಚ್ಛಕ್ತಿಯ ಸರಬರಾಜು ನಿಲ್ಲಿಸಿದ್ದಾರೆ. ಈ ರೀತಿಯಾದ್ದರೆ ಈ ಜಿಲ್ಲೆಗಳನ್ನು ಯಾವ ರೀತಿ ಅಭಿವೃದ್ಧಿ ಮಾಡವುದಕ್ಕೆ ಸಾಧ್ಯವಿದೆ. ಇವತ್ತು ಈ ಭಾಗದ ಜನರಿಗೆ ಕೊಡುವ ವಿಚಾರದಲ್ಲಿ ಸರ್ಕಾರ ಇನ್ನೂ ಹಿಂದೆ ಬಿದ್ದಿದೆ ಎಂದರೆ, ಬಡವರ ಮಕ್ಕಳಿಗೆ ಎಲ್ಲಿಂದ ಶಿಕ್ಷಣ ದೊರೆಯಬೇಕು ಮತ್ತು ಈ ಭಾಗ ಯಾವ ರೀತಿ ಅಭಿವೃದ್ಧಿಯಾಗಬೇಕು. ಇದರ ಬಗ್ಗೆ ಘನ ಸರ್ಕಾರ ಗಮನ ಹರಿಸಬೇಕು ಮತ್ತು ಇದಕ್ಕೆ ಹೆಚ್ಚು ಒತ್ತು ಕೊಡಬೇಕೆಂದು ನಾನು ತಮ್ಮ ಮೂಲ್ಕಕ ವಿನಂತಿ ಮಾಡುತ್ತೇನೆ. ಹಾಗೆಯೇ ಇವತ್ತಿನ ದಿವಸ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಎಂದು ಹೇಳಿದರೆ ಅದು ತಮಗೆಲ್ಲರಿಗೂ ಸಹ ಗೊತ್ತಿದೆ. ಇವತ್ತು ಗ್ರಾಮೀಣ ಪ್ರದೇಶದ ಪ್ರತಿಭಾನ್ವಿತ ಮಕ್ಕಳು ಆರನೇ ತರಗತಿಯಿಂದ ಹನ್ನೆರಡನೆ ತರಗತಿಯವರೆಗೆ ಮತ್ತು ಹತ್ತನೇ ತರಗತಿವರೆಗೆ ಕಲಿಯುವಂಥದ್ದು. ಈ ಭಾಗದಲ್ಲಿ ಯಾವ ರೀತಿ ಇದೆ ಎಂದರೆ, ಬೆಳಗಾವಿ ಜಿಲ್ಲೆಯಲ್ಲಿ 54 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಇವೆ. ಬಾಗಲಕೋಟೆ ಜಿಲ್ಲೆಯಲ್ಲಿ 30 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಇವೆ. ಬೀದರ್ ಜಿಲ್ಲೆಯಲ್ಲಿ 29 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 11 ಮೊರಾರ್ಜಿ ದೇಸಾಯಿ ವಸತಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶಾಲೆಗಳು ಇವೆ. ಕಲಬುರಗಿ ಜಿಲ್ಲೆಯಲ್ಲಿ 45 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಇವೆ. ಕೊಪ್ಪಳ ಜಿಲ್ಲೆಯಲ್ಲಿ 29 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಇವೆ. ವಿಜಯಪುರ ಜಿಲ್ಲೆಯಲ್ಲಿ 23 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಇವೆ. ಯಾದಗಿರಿ ಜಿಲ್ಲೆಯಲ್ಲಿ 22 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಇವೆ.

(ಮುಂದು)

**(1227) 21.12.2021 05.50 LL-VK** **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಮರಿತಿಬ್ಬೇಗೌಡ(ಮುಂದು)**

ಪ್ರತಿಭಾನ್ವಿತ ಬಡವರ ಮಕ್ಕಳು ಓದಬೇಕೆಂಬ ಉದ್ದೇಶದಿಂದ ಸರ್ಕಾರ ವಸತಿ ಶಾಲೆಗಳನ್ನು ತೆರದಿದೆ. ಆದರೆ, ಹಿಂದುಳಿದಿರತಕ್ಕಂತಹ ಪ್ರದೇಶದಲ್ಲಿ ನಮ್ಮ ಸರ್ಕಾರಗಳು ಎಷ್ಟು ಕಡಿಮೆ ವಸತಿ ಶಾಲೆಗಳನ್ನು ಕೊಟ್ಟಿದೆ ಎಂಬುದನ್ನು ತಾವು ಗಮನಿಸಬೇಕು. ಇಂತಹ ಕಡೆಗಳಲ್ಲಿ ಹೆಚ್ಚು ವಸತಿ ಶಾಲೆಗಳನ್ನು ತೆರೆಯುವಂಥದ್ದಕ್ಕೆ ಸರ್ಕಾರ ಬದ್ಧತೆಯನ್ನು ತೋರಬೇಕು. ಈ ಭಾಗದಲ್ಲಿ ಬಡವರ ಮಕ್ಕಳು ಕಲಿಯುವಂಥದ್ದು; ಈ ಭಾಗದಲ್ಲಿ ಬಡವರ ಅಭಿವೃದ್ಧಿಯನ್ನು ನಾವು ಕಾಣಬೇಕಾಗಿರುವಂಥ ಕೆಲಸವನ್ನು ಮಾಡಬೇಕೆಂದು ನಾನು ಘನ ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ.

ಇವೊತ್ತಿನ ದಿವಸ, ಶಿಕ್ಷಣದ ಜೊತೆಗೆ ಕೈಗಾರಿಕೆಗಳ ಬಗ್ಗೆ ಸಹ ಚರ್ಚೆ ಮಾಡಬೇಕಾಗಿದೆ. ಮಾನ್ಯ ಕೈಗಾರಿಕಾ ಸಚಿವರಾದ ಶ್ರೀ ಮುರುಗೇಶ್ ನಿರಾಣಿಯವರು ಸಹ ಈ ಸದನದಲ್ಲಿ ಹಾಜರಿದ್ದಾರೆ. ಯಾವುದೇ ದೇಶ ಔದ್ಯೋಗಿಕವಾಗಿ ಬೆಳೆಯಬೇಕೆಂದರೆ, ಆ ದೇಶದಲ್ಲಿ ಶಿಕ್ಷಣದ ಜೊತೆಗೆ, ಕೈಗಾರಿಕೆಗಳ ಅವಶ್ಯಕತೆ ಸಹ ಇರುತ್ತದೆ. ಬಾಗಲಕೋಟೆ ಜಿಲ್ಲೆಯಲ್ಲಿ 3 ಕೈಗಾರಿಕೆಗಳ ಯೂನಿಟ್‌ಗಳು, ಬೆಳಗಾವಿ ಜಿಲ್ಲೆಯಲ್ಲಿ 8 ಕೈಗಾರಿಕೆಗಳ ಯೂನಿಟ್‌ಗಳು, ಬಳ್ಳಾರಿ ಜಿಲ್ಲೆಯಲ್ಲಿ 9 ಕೈಗಾರಿಕೆಗಳ ಯೂನಿಟ್‌ಗಳು, ಬೀದರ್ ಜಿಲ್ಲೆಯಲ್ಲಿ 8 ಕೈಗಾರಿಕೆಗಳ ಯೂನಿಟ್‌ಗಳು, ವಿಜಯಪುರದಲ್ಲಿ ಕೇವಲ 4 ಕೈಗಾರಿಕೆಗಳ ಯೂನಿಟ್‌ಗಳು, ಗದಗ ಜಿಲ್ಲೆಯಲ್ಲಿ 1 ಕೈಗಾರಿಕೆಗಳ ಯೂನಿಟ್, ಗುಲ್ಬರ್ಗಾ ಜಿಲ್ಲೆಯಲ್ಲಿ 4 ಕೈಗಾರಿಕೆಗಳ ಯೂನಿಟ್‌ಗಳು, ಹಾವೇರಿ ಜಿಲ್ಲೆಯಲ್ಲಿ 1 ಕೈಗಾರಿಕೆಗಳ ಯೂನಿಟ್, ಕೊಪ್ಪಳ ಜಿಲ್ಲೆಯಲ್ಲಿ 3 ಕೈಗಾರಿಕೆಗಳ ಯೂನಿಟ್‌ಗಳು, ರಾಯಚೂರು ಜಿಲ್ಲೆಯಲ್ಲಿ 6 ಕೈಗಾರಿಕೆಗಳ ಯೂನಿಟ್‌ಗಳು ಮತ್ತು ಯಾದಗಿರಿ ಜಿಲ್ಲೆಯಲ್ಲಿ 2 ಕೈಗಾರಿಕೆಗಳ ಯೂನಿಟ್‌ಗಳು ಇರುತ್ತವೆ. ಇವೆಲ್ಲವೂ ಹಿಂದುಳಿದ ಪ್ರದೇಶ ಅಲ್ಲವೇ?

**ಶ್ರೀ ಮುರುಗೇಶ್ ಆರ್. ನಿರಾಣಿ(ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ಆ ಕೈಗಾರಿಕೆ ಸಂಖ್ಯೆಗಳು ಏನೆಂದು ನಮಗೆ ಗೊತ್ತಾಗುತ್ತಿಲ್ಲ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಅವು ಆಯಾ ಜಿಲ್ಲೆಯಲ್ಲಿ ಕೈಗಾರಿಕಾ ಪ್ರದೇಶಗಳು ಇರುವಂಥದ್ದು. ಅಂದರೆ, ಅವು ಸಣ್ಣ ಸಣ್ಣ ಘಟಕಗಳು ಆಗಿರುತ್ತವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, ತಪ್ಪು ಸಂದೇಶ ಹೋಗುತ್ತಿದೆ. ಬಾಗಲಕೋಟೆ ಜಿಲ್ಲೆಯಲ್ಲಿ 11 ಸಕ್ಕರೆ ಕಾರ್ಖಾನೆಗಳು ಇವೆ. ಆದರೆ, ಮಾನ್ಯ ಸದಸ್ಯರು ಕೇವಲ 3 ಎಂದು ಹೇಳಿರುತ್ತಾರೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವುದು ಕಾರ್ಖಾನೆಗಳ ಬಗ್ಗೆ ಅಲ್ಲ. ಬದಲಾಗಿ, ಕೆ.ಐ.ಎ.ಡಿ.ಬಿ. ಘಟಕಗಳ ಬಗ್ಗೆ ನಾನು ಹೇಳುತ್ತಿದ್ದೇನೆ. ಇವೊತ್ತಿನ ದಿವಸ ಕೆ.ಐ.ಎ.ಡಿ.ಬಿ. ಎನ್ನುವಂತಹ ಸಂಸ್ಥೆ ನಮ್ಮ ರಾಜ್ಯದಲ್ಲಿ ಪ್ರತಿ ವರ್ಷ ಬಹಳ ದೊಡ್ಡದಾಗಿ ಜಾಹೀರಾತು ಕೊಟ್ಟು, 'ಹೊಸ ಕೈಗಾರಿಕಾ ನೀತಿ' ಎಂದು ಹೇಳಿಕೊಂಡು ಪ್ರತಿ ವರ್ಷ ಬಹಳ ದೊಡ್ಡ ಸಮ್ಮೇಳನ ನಡೆಸುತ್ತಿದ್ದು, ಆ ಸಮ್ಮೇಳನಕ್ಕೆ ದೇಶ-ವಿದೇಶಗಳಿಂದ ಪ್ರತಿನಿಧಿಗಳು ಬರುತ್ತಾರೆ. ಅದರಲ್ಲಿಯೂ ನಮ್ಮ ಸರ್ಕಾರದಲ್ಲಂತೂ ಮಾನ್ಯ ದೇಶಪಾಂಡೆಯವರು ಬಹಳ ವರ್ಷಗಳ ಕಾಲ ಕೈಗಾರಿಕಾ ಸಚಿವರಾಗಿದ್ದರು. ಅವರನ್ನು ಬಿಟ್ಟರೆ ಈಗ ಮಾನ್ಯ ಮುರುಗೇಶ್ ನಿರಾಣಿಯವರೇ ಬಹಳ ದೀರ್ಘಕಾಲ ಕೈಗಾರಿಕಾ ಸಚಿವರಾಗಿದ್ದಾರೆ. ಆ ಬಗ್ಗೆ ನಮಗೆ ಬಹಳ ಸಂತೋಷ ಇದೆ. ಅಲ್ಲದೇ, ಅವರುಗಳು ಅದರಲ್ಲಿ ಬಹಳ ಚೆನ್ನಾಗಿ ಅಧ್ಯಯನ ಮಾಡಿಕೊಂಡಿದ್ದಾರೆ.

ಆದರೆ, ನಾನು ಹೇಳುವುದೇನೆಂದರೆ, ಇವೊತ್ತಿನ ದಿವಸ ಈ ಭಾಗದಲ್ಲಿ ಕೈಗಾರಿಕೆಗಳಿಗೆ ಹೆಚ್ಚಿನ ಉತ್ತೇಜನ ಕೊಡಬೇಕು. ಏಕೆಂದರೆ, ಈ ಭಾಗದಲ್ಲಿ ಯಥೇಚ್ಛವಾಗಿ ಕಬ್ಬು ಬೆಳೆಯುತ್ತಾರೆ ಮತ್ತು ಇಲ್ಲಿ ಯಥೇಚ್ಛವಾಗಿ ಗಣಿಗಾರಿಕೆ ಇದೆ. ಇವೊತ್ತಿನ ದಿವಸ ವಿಜಯಪುರ ಜಿಲ್ಲೆಯಲ್ಲಿ ಎಂತಹ ಪ್ರಸಿದ್ಧಿಯಾದಂತಹ ಗ್ರಾನೈಟ್ ಇದೆ. ಅದೇ ರೀತಿ ಕೊಪ್ಪಳ ಜಿಲ್ಲೆಯಲ್ಲಿಯೂ ಸಹ ಎಂತಹ ಗ್ರಾನೈಟ್ ಇದೆ. ಆದುದರಿಂದ, ಇಲ್ಲಿ ಕೈಗಾರಿಕೆಗಳಿಗೆ ಬಹಳ scope ಇದೆ. ಇಂತಹ ಕಡೆಗಳಲ್ಲಿ ಕೈಗಾರಿಕೆಗಳು ಬಂದರೆ, ಇವೊತ್ತಿನ ದಿವಸ ಬೆಳಗಾವಿ, ಹುಬ್ಬಳ್ಳಿ ಮತ್ತು ಧಾರವಾಡ ಈ ಮೂರು ಜಿಲ್ಲೆಗಳಲ್ಲಿ ಕೈಗಾರಿಕೆಗಳು ಬೆಳೆದರೆ ನಮ್ಮ ರಾಜ್ಯದಲ್ಲಿ ಪೂನಾದಂತಹ ಮತ್ತೊಂದು ದೊಡ್ಡ ಪಟ್ಟಣವನ್ನು ಭವಿಷ್ಯದಲ್ಲಿ ಕಟ್ಟುವುದಕ್ಕೆ ಸಾಧ್ಯವಿದೆ. ಇಲ್ಲಿ ಒಂದು ಅದಕ್ಕಿಂತಲೂ ಉನ್ನತವಾದಂತಹ ಪೂನಾ ನಗರವನ್ನು ಕಟ್ಟಬಹುದು. ಅಂತಹ potentiality ನಮ್ಮಲ್ಲಿದೆ.

ಇನ್ನೂ ಸಕ್ಕರೆ ಕಾರ್ಖಾನೆಗಳ ಬಗ್ಗೆ ಮಾನ್ಯ ಸಚಿವರು ಮಾತನಾಡಿದ್ದಾರೆ. ನನಗೂ ಸಹ ಸಕ್ಕರೆ ಕಾರ್ಖಾನೆ ವಿಷಯದ ಬಗ್ಗೆ ಬಹಳ ಸಂತೋಷ ಇದೆ. ನಮ್ಮ ರಾಜ್ಯದಲ್ಲಿ ಹೆಚ್ಚು ಕಬ್ಬನ್ನು ಬೆಳೆಯುತ್ತೇವೆ. ನಮ್ಮ ರಾಜ್ಯದಲ್ಲಿ 89 ಸಕ್ಕರೆ ಕಾರ್ಖಾನೆಗಳು ಇವೆ. ಅವುಗಳಲ್ಲಿ ಕೇವಲ 65 ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿವೆ. ಸದರಿ 65 ಸಕ್ಕರೆ ಕಾರ್ಖಾನೆಗಳಲ್ಲಿ ಬೆಳಗಾವಿ, ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆ ಈ ಮೂರು ಜಿಲ್ಲೆಗಳಲ್ಲಿ 44 ಸಕ್ಕರೆ ಕಾರ್ಖಾನೆಗಳು ಇವೆ. ಇವುಗಳು ಇನ್ನೂ ಉತ್ಕೃಷ್ಟವಾಗುವುದಕ್ಕೆ ಏನೇನು ಮಾಡಬೇಕು? ಅಂದರೆ, ಈ ಕಾರ್ಖಾನೆಗಳಿಗೆ Ethanol ಇರಬಹುದು, ಮತ್ತೊಂದು ಇರಬಹುದು,

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

Distillery ಇರಬಹುದು, Cogen ಇರಬಹುದು, ಇದೆಲ್ಲವನ್ನೂ ಕೂಡ ಹಾಕುವುದಕ್ಕೆ ಸರ್ಕಾರ ಹೆಚ್ಚು ಅನುಮತಿ ಕೊಡಬೇಕು.

ಆಗಲೇ ಮಾನ್ಯ ವಿರೋಧ ಪಕ್ಷದವರು ಮಾತನಾಡುತ್ತಾ, "ಸಕ್ಕರೆ ಆಯುಕ್ತಾಲಯವನ್ನು ಬೆಂಗಳೂರಿನಿಂದ ಕಳೆದ ಅಕ್ಟೋಬರ್ ತಿಂಗಳಿನಲ್ಲಿ ಬೆಳಗಾವಿಗೆ ಸ್ಥಳಾಂತರ ಮಾಡಿದ್ದಾರೆ" ಎಂದು ಹೇಳಿದರು. ಅದರಿಂದಾಗಿ, ನನಗೆ ಆ ವಿಷಯ ತಿಳಿದು ಬಂತು. ಸದರಿ ಆಯುಕ್ತಾಲಯವನ್ನು ಸ್ಥಳಾಂತರ ಮಾಡಿರುವುದಕ್ಕೆ ನನ್ನ ಆಕ್ಷೇಪಣೆ ಇರುವುದಿಲ್ಲ. ಆದರೆ, ಒಂದು ವಿಷಯ ಏನೆಂದರೆ, ಇಲ್ಲಿ ಒಂದು Regional Centre ಮಾಡಿ, ಆಯುಕ್ತಾಲಯವನ್ನು ಅಲ್ಲಿಯೇ ಉಳಿಸಿದ್ದರೆ ಚೆನ್ನಾಗಿರುತ್ತಿತ್ತು. ಏಕೆಂದರೆ, ಯಾವುದೇ ಸಕ್ಕರೆ ಕಾರ್ಖಾನೆಗಳ ಮಾಲೀಕರು ಅಲ್ಲಿಯ ಅಧಿಕಾರಿಗಳೊಂದಿಗೆ ವ್ಯವಹರಿಸಬೇಕೆಂದು ಹೇಳಿದರೆ, ಕೇವಲ ಆಯುಕ್ತಾಲಯದಲ್ಲಿ ಆಯುಕ್ತರು ಮತ್ತು ಮುಖ್ಯಮಂತ್ರಿಗಳು ಮತ್ತು ಸಕ್ಕರೆ ಮಂತ್ರಿಗಳು ಯಾವಾಗಲೂ ಜೊತೆ ಜೊತೆಯಲ್ಲಿ ಸಂಪರ್ಕದಲ್ಲಿರಬೇಕು. ಏಕೆಂದರೆ, ಕೃಷಿ ಇಲಾಖೆ, ಅಬಕಾರಿ ಇಲಾಖೆ, ಮಾಲಿನ್ಯ ನಿಯಂತ್ರಣ ಮಂಡಳಿ, ಆರ್ಥಿಕ ಇಲಾಖೆ, ಇಂಧನ ಇಲಾಖೆ ಈ ಎಲ್ಲಾ ಸಚಿವಾಲಯದಲ್ಲಿಯೂ ಈ ಕಾರ್ಖಾನೆಗಳ ಕೆಲಸ ಇರುತ್ತದೆ. ಆದುದರಿಂದ, ಆಯುಕ್ತರು ಈ ಎಲ್ಲಾ ಇಲಾಖೆಗಳಲ್ಲಿಯೂ ಸಹ ಹೊಂದಾಣಿಕೆಯಿಂದ ಕೆಲಸ ಮಾಡಬೇಕಾಗುತ್ತದೆ. ಒಂದು ವೇಳೆ ಸದರಿ ಆಯುಕ್ತರು ಬೆಳಗಾವಿಯಲ್ಲಿಯೇ ಖಾಯಂ ಆಗಿ ಇದ್ದರೆ, ರಾಜಧಾನಿಯಲ್ಲಿ ಈ ಎಲ್ಲಾ ಇಲಾಖೆಯಲ್ಲಿ ಹೊಂದಾಣಿಕೆ ಮಾಡಿಕೊಂಡು ಕೆಲಸ ಮಾಡುವಂಥದ್ದು ಕಷ್ಟಸಾಧ್ಯ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಕ್ಕರೆ ಸಚಿವರ ಜೊತೆಯಲ್ಲಿ ನಿರ್ದಿಷ್ಟವಾದಂತಹ ನಿರಂತರ ಸಂಪರ್ಕ ಅವರಿಗೆ ಇರಬೇಕಾಗುತ್ತದೆ. ಆದುದರಿಂದ, ಆ ಆಯುಕ್ತಾಲಯವನ್ನು ಅಲ್ಲಿಯೇ ಉಳಿಸಿ, ಬೆಳಗಾವಿಯಲ್ಲಿ ಒಂದು Regional Centre ಮಾಡಿದ್ದರೆ ಹೆಚ್ಚು ಉಪಯುಕ್ತವಾಗುತ್ತಿತ್ತು ಎಂಬುದು ನನ್ನ ಅಭಿಪ್ರಾಯ.

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರವರ ಮಾತಿಗೆ ಪೂರಕವಾಗಿ ನಾನು ನನ್ನ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ನಾನು ಸರ್ಕಾರಕ್ಕೆ ಯಾವ ಶಿಫಾರಸ್ಸು ಮಾಡಿದೆನೆಂದರೆ, ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರು ಕರ್ನಾಟಕ ಭಾಗ ಯಾವ್ವ ಇಲಾಖೆಯಲ್ಲಿ ಹಿಂದುಳಿದೆ, ಆ ಇಲಾಖೆಯ ಮಂತ್ರಿಗಳು ಸೇರಿದಂತೆ ಸ್ಥಳಾಂತರ ಮಾಡಬೇಕೆಂದು ಹೇಳಿರುತ್ತೇನೆ. ಇವೊತ್ತಿನ ದಿವಸ ಸಕ್ಕರೆ ಆಯುಕ್ತರಷ್ಟೇ ಅಲ್ಲದೇ, ಸಕ್ಕರೆ ಮಂತ್ರಿಗಳೇ ಬೆಳಗಾವಿಗೆ ಬರಬೇಕು. ಬೆಂಗಳೂರಿನಲ್ಲಿರುವ ಎಲ್ಲಾ ಇಲಾಖೆಗಳಿಗೆ ನಾವು ಬರುವುದಿಲ್ಲವೇ? ಕೇವಲ ಹತ್ತಾರು ಇಲಾಖೆಗಳನ್ನು ಬೆಳಗಾವಿಗೆ ಸ್ಥಳಾಂತರ ಮಾಡಿದರೆ ಏನಾಗುತ್ತದೆ. ಬೆಳಗಾವಿ ರಾಜ್ಯದ ಎರಡನೆ ರಾಜಧಾನಿಯಾಗಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಅದು ನನ್ನ ಅಭಿಪ್ರಾಯ. ಆದುದರಿಂದ, ಈ ಭಾಗದಲ್ಲಿ ಅಂದರೆ, ಹಿಂದುಳಿದಿರುವಂತಹ ಪ್ರದೇಶಗಳಲ್ಲಿ ಹೆಚ್ಚು ಕೈಗಾರಿಕಾ ಪ್ರದೇಶವನ್ನು ಪ್ರಾರಂಭ ಮಾಡಬೇಕು. ಹೆಚ್ಚು ಕೈಗಾರಿಕೆಗಳು ರಾಜಧಾನಿ ಸುತ್ತಲೂ ಬರುವುದನ್ನು ತಪ್ಪಿಸಿ, ಯಾವ ಭಾಗದಲ್ಲಿ ಹೆಚ್ಚು ಕಚ್ಚಾ ವಸ್ತುಗಳು ಸಿಗುತ್ತದೆ, ಅಲ್ಲಿ ಅಂತಹ ಕಾರ್ಖಾನೆಗಳು ಬರುವುದಕ್ಕೆ ಅವಕಾಶಗಳನ್ನು ಕಲ್ಪಿಸಿದರೆ, ಈ ಮೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ ಮತ್ತೊಂದು ಪೂನಾ ನಗರವನ್ನು ಕಟ್ಟುವಂತಹ ಅವಕಾಶ ಈ ಸರ್ಕಾರಕ್ಕಿದೆ. ಆ ಕೆಲಸವನ್ನು ಘನ ಸರ್ಕಾರ ಮಾಡುತ್ತದೆಯೆಂಬ ಭರವಸೆ ನನಗಿದೆ. ಆ ನಿಟ್ಟಿನಲ್ಲಿ ತಮ್ಮ ಪ್ರಯತ್ನವನ್ನು ಮುಂದುವರೆಸಬೇಕೆಂದು ಹೇಳುತ್ತೇನೆ. ಇದರ ಜೊತೆಗೆ, ಕಾರ್ಖಾನೆಗಳಿಂದ ಲಕ್ಷಾಂತರ ಜನರಿಗೆ ಉದ್ಯೋಗ ಸಿಗುತ್ತದೆ. ಆ ಕೆಲಸವನ್ನು ಸರ್ಕಾರ ಮಾಡಬೇಕು. ಈ ಭಾಗದಲ್ಲಿ ಎಲ್ಲಾ ಜಿಲ್ಲೆಗಳಲ್ಲಿಯೂ ಕೂಡ ಕೈಗಾರಿಕೆಗಳು ಬರಬೇಕು, ಆ ರೀತಿ ಕ್ರಮ ಕೈಗೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರಾದ ಶ್ರೀ ಈಶ್ವರಪ್ಪನವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಮೊಟ್ಟಮೊದಲಿಗೆ ಗ್ರಾಮೀಣ ಜನರಿಗೆ ಮೂಲಭೂತ ಸೌಲಭ್ಯಗಳ ಬಗ್ಗೆ ಹೆಚ್ಚು ಪರಿಚಯ ಮಾಡಿಕೊಟ್ಟಂತಹ ಸರ್ಕಾರ ಎಂದು ಹೇಳಿದರೆ, ಅದು ಶ್ರೀ ರಾಮಕೃಷ್ಣ ಹೆಗಡೆಯವರ ನೇತೃತ್ವದ ಜನತಾ ಪಾರ್ಟಿ ಸರ್ಕಾರ. Sri Abdul Nazir Sab (ನೀರ್‌ಸಾಬ್)ರವರು ಈ ಗ್ರಾಮೀಣ ವ್ಯವಸ್ಥೆಯ ಮೂಲ ಪರಿಕಲ್ಪನೆಯಲ್ಲಿ ಮೊಟ್ಟ ಮೊದಲು 'ನೀರ್ ಸಾಬ್' ಎಂತಲೇ ಕರೆದು, ಎಲ್ಲಾ ಹಳ್ಳಿಗಳಿಗೆ ಟ್ಯಾಂಕರ್ ಮೂಲಕ ನೀರು ಕೊಡತಕ್ಕಂಥದ್ದು; ಮತ್ತು ಗ್ರಾಮ ಪಂಚಾಯಿತಿಗಳನ್ನು ಮಂಡಲ್ ಪಂಚಾಯಿತಿಗಳಾಗಿ ಮಾಡಿ ಹೆಚ್ಚು ಅಧಿಕಾರ ಕೊಟ್ಟಂಥದ್ದು; ಮತ್ತು ಬೋರ್‌ವೆಲ್‌ಗಳನ್ನು ಹಾಕತಕ್ಕಂಥದ್ದು; ಈ ಎಲ್ಲಾ ವ್ಯವಸ್ಥೆಗಳಿಗೆ ಆಗಿನಿಂದ ಹೆಚ್ಚು ಪ್ರಚಾರ ಬಂದಿರುತ್ತದೆ.

ಇವೊತ್ತಿನ ದಿವಸ ಆ ಖಾತೆ ಮಾನ್ಯ ಈಶ್ವರಪ್ಪನರಿಗೆ ಸಿಕ್ಕಿದೆ. ಅವರು ಸಹ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ, ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ಹಿಂದುಳಿದಿರತಕ್ಕಂತಹ ಈ ಜಿಲ್ಲೆಗಳಲ್ಲಿ ಇನ್ನೂ ಕೂಡ ಪಂಚಾಯತ್ ರಾಜ್ ಮೂಲಸೌಲಭ್ಯಗಳು ಅಂದರೆ, ರಸ್ತೆಗಳು ಇರಬಹುದು, ಶುದ್ಧ ಕುಡಿಯುವ ನೀರು ಇರಬಹುದು, ರಾಯಚೂರು ಮತ್ತು ಯಾದಗಿರಿ ಜಿಲ್ಲೆಯ ಹಳ್ಳಿಗಳಲ್ಲಿ ಇನ್ನೂ ಕೂಡ ಮಿಶ್ರಿತ ನೀರು. ಶುದ್ಧ ಕುಡಿಯುವ ನೀರನ್ನು ಈ ಭಾಗದ ಕೆಲವು ಕಡೆಗಳಲ್ಲಿ ಕೊಡುವುದಕ್ಕೆ ಇದುವರೆವಿಗೂ ಆಗಿರುವುದಿಲ್ಲ. ಅದರ ಬಗ್ಗೆ ಹೆಚ್ಚು ಗಮನ ಹರಿಸಬೇಕು.

ಅದರ ಜೊತೆಗೆ, ಕೆಲವೊಂದು ಹಳ್ಳಿಗಳಿಗೆ ಸಂಪರ್ಕ ರಸ್ತೆಗಳೇ ಇರುವುದಿಲ್ಲ. ಉದಾಹರಣೆಗೆ, ಖಾನಾಪುರ ತಾಲ್ಲೂಕಿನಲ್ಲಿ ಬಹಳಷ್ಟು ಕಡೆಗೆ ಹಳ್ಳಿಯಿಂದ ಹಳ್ಳಿಗೆ ಸಂಪರ್ಕ ರಸ್ತೆಗಳೇ ಇರುವುದಿಲ್ಲ. ಈ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೆಲಸಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಆಗುವಂತಹ ಕೆಲಸಗಳು. ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು ಮತ್ತು ರಸ್ತೆಗಳ ಜೊತೆಗೆ, ನಿರ್ಮಲ್ ಭಾರತ್ ಯೋಜನೆಯಲ್ಲಿ ಶೇಕಡ 100ರಷ್ಟು ನಾವು ಶೌಚಾಲಯಗಳನ್ನು ಎಲ್ಲಾ ಮನೆಗಳಿಗೆ ಕೊಟ್ಟಿದ್ದೇವೆಂದು ಘೋಷಣೆ ಮಾಡಿರುವುದನ್ನು ನಾನು ಯಾವುದೋ ಪತ್ರಿಕೆಯಲ್ಲಿ ಓದಿರುತ್ತೇನೆ. **(ಗೊಂದಲ)** ಮೊದಲನೆಯದು ನಿರ್ಮಲ್ ಭಾರತ್. ಆನಂತರ ಅದು ಸ್ವಚ್ಛ ಭಾರತ್ ಆಗಿರುತ್ತದೆ. ಆದರೆ, ಇವೊತ್ತಿನವರೆಗೂ ಕೂಡ ಕೇವಲ ಹಿಂದುಳಿದಿರತಕ್ಕಂತಹ ಈ ಭಾಗಗಳಷ್ಟೇ ಅಲ್ಲದೇ, ಇಡೀ ಕರ್ನಾಟಕ ರಾಜ್ಯದ ಹಳ್ಳಿ ಹಳ್ಳಿಯಲ್ಲಿ ಬಯಲು ಪ್ರದೇಶದಲ್ಲಿ ಹೆಣ್ಣುಮಕ್ಕಳು, ಗಂಡು ಮಕ್ಕಳು ಎಲ್ಲರೂ ಸಹ ಬಹಿರ್ದೆಸೆ ಹೋಗುವಂಥದ್ದನ್ನು ನಾವು ಇವತ್ತಿಗೂ ನೋಡುತ್ತೇವೆ. ಇದಕ್ಕೆ ಕಾರಣ ಏನು ಎನ್ನುವುದನ್ನು ನಾವೆಲ್ಲರೂ ಗಮನಿಸಬೇಕು. ತಾವು ಹಿರಿಯರಿದ್ದೀರಿ.

(ಮುಂದು)

**(1228) 21.12.2021 6.00 YL-BNS** **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಮರಿತಿಬ್ಬೇಗೌಡ(ಮುಂದು):-**

ಒಂದು ಕಡೆ ಶೌಚಾಲಯವನ್ನು ಏನೋ ನಿರ್ಮಿಸಿಕೊಂಡಿದ್ದು, ಆದರೆ, ಅದಕ್ಕೆ ನೀರೇ ಸರಬರಾಜು ಇಲ್ಲ, ನೀರಿಲ್ಲ ಎಂದು ಹೇಳುತ್ತಾರೆ. ಮತ್ತೊಂದು ಕಡೆ ಕೆಲವರು ಮನೆಯಲ್ಲಿ ಶೌಚಾಲಯ ಇದ್ದರೂ ಸಹ ಬಯಲಿಗೆ ಹೋಗುವ ಅಭ್ಯಾಸ ಎಂದು ಹೇಳುತ್ತಾರೆ. ಕೆಲವು ಕಡೆ ಬಹಿರ್ದೆಸೆಗೆ ಹೋಗುವಾಗ ಕೆಲವರಿಗೆ ಹಾವು ಕಚ್ಚಿ, ಸತ್ತಿರುವವರು ಬಹಳ ಜನರು ಇದ್ದಾರೆ, ಕತ್ತಲೆಯಲ್ಲಿ ಬಹಿರ್ದೆಸೆಗೆ ಹೋಗುತ್ತಾರೆ. ಇದರಿಂದಾಗಿ ಬಹಳಷ್ಟು ಅನಾಹುತಗಳು ಸಂಭವಿಸುತ್ತವೆ, ಜೊತೆಗೆ ಸಮಾಜಘಾತುಕ ಕೆಲಸವು ನಡೆಯುತ್ತದೆ. ಹಾಗಾಗಿ ದಯವಿಟ್ಟು ಸರ್ಕಾರವು ನೀಡಿರುವಂಥ ಶೌಚಾಲಯಗಳಿಗೆ ನೀರು ಇದೆಯೇ, ಏನೇನು ಇಲ್ಲ ಎಂಬುದನ್ನು ನೋಡಬೇಕು. ಅದರೊಂದಿಗೆ ಶೌಚಾಲಯವನ್ನು ಉಪಯೋಗಿಸಲು ಪ್ರತಿ ಮನೆಗಳಿಗೂ ಯಾವ ರೀತಿ ಜಾಗೃತಿ ಮೂಡಿಸಬಹುದು, ಅಂತಹ ಜಾಗೃತಿ ಮೂಡಿಸುವಂಥ ವಿಶೇಷ ಕಾರ್ಯಕ್ರಮವನ್ನು ಇಲಾಖೆಯವರು ಮಾಡಬೇಕೆಂದು ವಿನಯ ಪೂರ್ವಕವಾಗಿ ವಿನಂತಿಸುತ್ತೇನೆ. ನಮ್ಮ ದೇಶದಲ್ಲಿ ಬಹಿರ್ದೆಸೆಯನ್ನು ತಪ್ಪಿಸಬೇಕು. ಪ್ರೊ.ನಂಜುಂಡಸ್ವಾಮಿಯವರು ದೀರ್ಘಕಾಲದಿಂದ ಈ ವ್ಯವಸ್ಥೆಯನ್ನು ವಿರೋಧಿಸಿಕೊಂಡು ಬಂದವರು. ವಿಶೇಷವಾಗಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಏನೆಲ್ಲಾ ಯೋಜನೆಯನ್ನು ರೂಪಿಸಿಕೊಂಡರೂ ಸಹ ಸ್ವಲ್ಪವೂ ಪರಿಣಾಮಕಾರಿ ಆಗಲಿಲ್ಲ. ಆದ್ದರಿಂದ ಇದನ್ನು ಅನುಷ್ಠಾನಗೊಳಿಸಲು ಏನು ಕೊರತೆ ಎಂಬುದನ್ನು ತಜ್ಞರ ವರದಿಯನ್ನು ತರಿಸಿಕೊಂಡು, ಮನೆಗಳಲ್ಲಿ ನಿರ್ಮಿಸಿಕೊಂಡಿರುವ ಶೌಚಾಲಯವನ್ನು ಅವರುಗಳು ಉಪಯೋಗಿಸಿಕೊಳ್ಳುವ ಹಾಗೆ ಜಾಗೃತಿ ಮೂಡಿಸುವಂಥ ಏನಾದರೂ ವಿಶೇಷ ಕಾರ್ಯಕ್ರಮವನ್ನು ಹಾಕಿಕೊಂಡು ಸರಿಪಡಿಸಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಪತ್ರಿಕೆಗಳಲ್ಲಿ, ಮಾಧ್ಯಮಗಳಲ್ಲಿ ನೋಡುತ್ತಿರುವ ಹಾಗೆ ಉತ್ತರ ಕರ್ನಾಟಕ ಭಾಗದಲ್ಲಿ ಗುಳೆ ಹೋಗುತ್ತಾರೆ. ಅದರಲ್ಲಿಯು ಕೋವಿಡ್-19 ಬಂದ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಂದರ್ಭದಲ್ಲಿಯು ಈ ಕಡೆಯಿಂದ ಆ ಕಡೆಗೆ, ಆ ಕಡೆಯಿಂದ ಈ ಕಡೆಗೆ ಎಷ್ಟೋ ಜನರು ಗುಳೆ ಹೋಗುತ್ತಾ, ಬರುತ್ತಾ ಮನೆ ಸೇರದೆ ಸತ್ತು ಹೋದರು. ಈ ದಿಸೆಯಿಂದ ತಮ್ಮಲ್ಲಿ ವಿನಂತಿಸುವುದೇನೆಂದರೆ, ಕೇಂದ್ರ ಸರ್ಕಾರದ ನರೇಗಾ ಯೋಜನೆಯಾದ ಉದ್ಯೋಗ ಖಾತ್ರಿ ಯೋಜನೆ ಏನಿದೆ, ಅದನ್ನು ಉತ್ತರ ಕರ್ನಾಟಕ ಭಾಗದಲ್ಲಿ ಪರಿಣಾಮಕಾರಿಯಾಗಿ ಮಾಡಿ, ಈ ಭಾಗದ ಜನರು ಗುಳೆ ಹೋಗುವುದನ್ನು ತಪ್ಪಿಸಲು ಮಾನ್ಯ ಸಚಿವರು ತಮ್ಮ ಇಲಾಖೆ ವತಿಯಿಂದ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು. ಏಕೆಂದರೆ, ಉದ್ಯೋಗಕ್ಕಾಗಿಯೇ ಅವರು ಗುಳೆ ಹೋಗುವುದು. ನರೇಗಾ ಯೋಜನೆಯಲ್ಲಿ, ಏನಾಗಿದೆ ಎಂದರೆ, ಕಾರ್ಮಿಕರ ಮೂಲಕ ಕೆಲಸ ಮಾಡಿಸದೇ ಎಲ್ಲವನ್ನೂ ಯಂತ್ರದ ಮೂಲಕ ಮಾಡಿಸುತ್ತಾರೆ, ಅಧಿಕಾರಿಗಳು ಎಲ್ಲರೂ ಶಾಮೀಲಾಗಿದ್ದಾರೆ, ದುಡ್ಡು ಹಂಚಿಕೊಳ್ಳುತ್ತಾರೆ ಎನ್ನುವಂಥ ಕೂಗು ಇದೆ. ಈ ಗುಳೆ ಹೋಗುವಂಥವರಿಗೆ ಹಿಂದುಳಿದ ಪ್ರದೇಶಗಳಿಗೆ ಅತೀ ಹೆಚ್ಚು ಹಣವನ್ನು ಬಿಡುಗಡೆ ಮಾಡಿ, ಗುಳೆ ಹೋಗುವ ಜನರಿಗೆ ಪರಿಣಾಮಕಾರಿಯಾಗಿ ಆ ಕೂಲಿಗಳಿಗೆ ತಲುಪುವಂಥ ಒಂದು ವಿಶೇಷ ಕಾರ್ಯಕ್ರಮವನ್ನು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಸಿಕೊಳ್ಳುತ್ತೇನೆ. ಅದೇ ರೀತಿ ಕೃಷಿ ಇಲಾಖೆಗೆ ಸಂಬಂಧಿಸಿದಂತೆ, ...

**ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಉತ್ತರ ನೀಡುವಾಗ ಮಾನ್ಯ ಸಚಿವರು ಮಾತನಾಡಲಿ. ಈಗ ಅವರು ಮಾತನಾಡಿದರೆ ಸಮಯ ವ್ಯಯವಾಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಎರಡೇ ನಿಮಿಷದಲ್ಲಿ ಮಾನ್ಯ ಸದಸ್ಯರ ವಿಚಾರವನ್ನು ಸ್ಪಷ್ಟಪಡಿಸುತ್ತೇನೆ. ಬೇರೆ ಏನು ಹೇಳುವುದಿಲ್ಲ. ವಿಶೇಷವಾಗಿ ಶೌಚಾಲಯ ಮತ್ತು ಉದ್ಯೋಗ ಖಾತ್ರಿ ಯೋಜನೆ ಬಗ್ಗೆ ಪ್ರಸ್ತಾಪಿಸಲು ಬಯಸುತ್ತೇನೆ. ಉಳಿದಂತೆ ನೀರು, ರಸ್ತೆ ಬಗ್ಗೆ ಈಗ ಮಾತನಾಡುವುದಿಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ ಶೌಚಾಲಯಗಳನ್ನು ಬಹಳ ಆಸಕ್ತಿವಹಿಸಿ ಪ್ರತಿಯೊಂದು ಜಿಲ್ಲಾ ಪಂಚಾಯಿತಿಗೆ ಹೋದ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಸದಸ್ಯರನ್ನು ಕೂರಿಸಿಕೊಂಡು, ಸಿ.ಇ.ಓ. ರವರನ್ನು ಸಭೆಗೆ ಕರೆಸಿ, ಎಷ್ಟು ಸಾಧ್ಯವೋ ಅಷ್ಟು ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಮೊದಲು ಎಸ್.ಸಿ./ಎಸ್.ಟಿ. ಗಳಿಗೆ ರೂ.15000 ನೀಡುತ್ತಿದ್ದು, ಈಗ ರೂ.25000 ನೀಡಲಾಗುತ್ತಿದೆ. ಶೌಚಾಲಯಗಳನ್ನು ಜಾಸ್ತಿ ನಿರ್ಮಿಸಿದ್ದಾರೆ ಇಲ್ಲವೆಂದು ಹೇಳುವುದಿಲ್ಲ. ಆದರೆ, ನಿರ್ಮಿಸಿರುವಂಥ ಶೌಚಾಲಯವನ್ನು ಬಳಸುವುದಿಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ, ಏತಕ್ಕೋ ಗೊತ್ತಿಲ್ಲ, ಕೆಲವು ಜನರಿಗೆ ಬಯಲಿಗೆ ಹೋಗುತ್ತಾರೆ, ಅವರಿಗೆ ಬಯಲಿಗೆ ಹೋದರೇನೇ ಸಮಾಧಾನ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಏತಕ್ಕೇ ಆ ರೀತಿ ಎಂಬುದು ನಿಜಕ್ಕೂ ನನಗೆ ಅರ್ಥವಾಗುತ್ತಿಲ್ಲ. ಅಲ್ಲಿಯ ಜನರ ಹತ್ತಿರ, ಗ್ರಾಮ ಪಂಚಾಯಿತಿಯಲ್ಲಿ ಗೆದ್ದವರ ಹತ್ತಿರ ಖಾಸಗಿಯಾಗಿ ಮಾತನಾಡುವಂಥ ಸಂದರ್ಭದಲ್ಲಿ 'ಶೌಚಾಲಯವನ್ನು ನಿರ್ಮಿಸಲಾಗಿದ್ದು, ನಮ್ಮ ಸ್ವಂತ ಅಕ್ಕ ತಂಗಿಯರೆ ಬಯಲಿಗೆ ಹೋಗುತ್ತಾರೆ, ಏತಕ್ಕೆ ಆ ರೀತಿ ಮಾಡುತ್ತಾರೆ ಎಂದು ಕೇಳಿದರೆ, 'ಸರ್, ಒಟ್ಟಿಗೆ ಹರಟೆ ಹೊಡೆಯುತ್ತಾ ಕುಳಿತುಕೊಳ್ಳುತ್ತಾರೆ, ನಾವು ಏನು ಮಾಡೋಣ, ನಾವು ಏನು ಹೇಳಿದರೂ ನಮ್ಮ ಮಾತನ್ನು ಕೇಳುವುದಿಲ್ಲ' ಎಂದು ಹೇಳುತ್ತಾರೆ. ಇಂತಹ ಪರಿಸ್ಥಿತಿ ಇದೆ. ಈಗಾಗಲೇ ಗ್ರಾಮಪಂಚಾಯಿತಿ ಸದಸ್ಯರು ಅದನ್ನು ತಡೆಗಟ್ಟಲು ಸಾಕಷ್ಟು ಪ್ರಯತ್ನವನ್ನು ನಡೆಸಿದ್ದಾರೆ. ಹಣವನ್ನು ಎಷ್ಟು ಬೇಕಾದರೂ ನೀಡಬಹುದು. ಆದರೆ, ಕೇವಲ ಹಣದಲ್ಲಿ ಕೆಲಸವಾಗುವುದಿಲ್ಲ. ಆ ಜನರಲ್ಲಿಯೇ ಪರಿವರ್ತನೆಯಾಗಬೇಕು. ಅದರ ಜೊತೆಗೆ ಮಾನ್ಯ ಸದಸ್ಯರು ಏನೇನು ತಿಳಿಸಿದ್ದಾರೆ ಆ ದಿಕ್ಕಿನಲ್ಲಿಯು ಪ್ರಯತ್ನ ಮಾಡುತ್ತೇವೆ. ಹಾಗೆಯೇ ಈಗಾಗಲೇ ಉದ್ಯೋಗ ಖಾತ್ರಿ ಯೋಜನೆ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದರು. ಕಳೆದ ವರ್ಷ ಇಡೀ ದೇಶದಲ್ಲಿಯೇ ಕರ್ನಾಟಕ ರಾಜ್ಯದಲ್ಲಿ ಅತೀ ಹೆಚ್ಚು ಉದ್ಯೋಗವನ್ನು ಕಲ್ಪಿಸಬೇಕೆಂದು 13 ಕೋಟಿ ಮಾನವ ದಿನಗಳನ್ನು ಕೇಂದ್ರ ಸರ್ಕಾರ ನೀಡಿತ್ತು. ಆಗ ಕೋವಿಡ್-19 ಇದ್ದ ಪ್ರಯುಕ್ತ ಹೇಗೆ 13 ಕೋಟಿ ಮಾನವ ದಿನಗಳನ್ನು ಮುಟ್ಟುವುದು ಎಂದು ಯೋಚನೆ ಮಾಡುತ್ತಿದ್ದೆವು. ಆದರೆ, ನನಗೆ ಇವತ್ತಿಗೂ ಆ ವಿಚಾರವನ್ನು ಹೇಳಲು ಸಂತೋಷವಾಗುತ್ತದೆ, ಅದೇನೆಂದರೆ, 'ಪ್ರತಿ ಜಿಲ್ಲೆಗಳಲ್ಲಿ ಸಹ ಯಾರು job card ಕೇಳುತ್ತಾರೆ, ಅಂಥವರಿಗೆ ಹಿಂದೆ-ಮುಂದೆ ನೋಡದೆಯೇ job card ನೀಡಿ' ಎಂದು ತಿಳಿಸಿದ್ದೆವು. Job card ನೀಡಿದ ಪ್ರಯುಕ್ತ ನವೆಂಬರ್ ಮಾಹೆಯೊಳಗೆ ಕೇಂದ್ರ ಸರ್ಕಾರ ನೀಡಿದಂಥ 13 ಕೋಟಿ ಮಾನವ ದಿನಗಳ ಗುರಿ ಏನಿತ್ತು, ಅದು ಮುಗಿದು ಹೋಗಿತ್ತು. ಆಮೇಲೆ ನಾವು ಕೇಂದ್ರ ಸರ್ಕಾರದ ಮೊರೆ ಹೋಗಿ ಎಲ್ಲಾ ರಾಜ್ಯಗಳಿಗಿಂತ ಜಾಸ್ತಿ ಮಾಡಿದ್ದೇವೆ ನೋಡಿ, ಇನ್ನೂ ಸ್ವಲ್ಪ ಹೆಚ್ಚುವರಿಯಾಗಿ ನೀಡಬೇಕೆಂದು ಕುಳಿತುಕೊಂಡಾಗ ಎರಡು ಕೋಟಿ ಹೆಚ್ಚಿಗೆ ನೀಡಿದ್ದರು. ನಾವು ಅದರ ಟಾರ್ಗೆಟ್ ಮುಟ್ಟಿದ್ದೇವೆ. ದೇಶದಲ್ಲಿಯೇ ಉದ್ಯೋಗ ಖಾತ್ರಿಯನ್ನು ಯಶಸ್ವಿ ಮಾಡುವ ನಿಟ್ಟಿನಲ್ಲಿ ನಮ್ಮ ರಾಜ್ಯ ಮೊದಲ ಸ್ಥಾನದಲ್ಲಿದೆ. ಈ ವರ್ಷ ಸಹ ಮತ್ತೆ ಕೇಂದ್ರ ಸರ್ಕಾರವು 13 ಕೋಟಿ ಮಾನವ ದಿನಗಳನ್ನು ನೀಡಿತ್ತು. ಅದು ಸಹ ಮೊನ್ನೆ ನವೆಂಬರ್ ಮಾಹೆಗೆ ಖಾಲಿಯಾಗಿತ್ತು. ಮೊನ್ನೆ ದಿವಸ ಕೇಂದ್ರ ಸಚಿವರಾದ ಮಾನ್ಯ ಗಿರಿರಾಜ್ ಸಿಂಗ್‌ರವರು ನಮ್ಮ ರಾಜ್ಯಕ್ಕೆ ಬಂದಾಗ 'ಕೇವಲ 13 ಕೋಟಿ ಮಾನವ ದಿನಗಳು ಸಾಕಾಗುವುದಿಲ್ಲ, ಬೇರೆ ರಾಜ್ಯಕ್ಕಿಂತ ಉದ್ಯೋಗ ಖಾತ್ರಿ ಯೋಜನೆಯಡಿ ಜನರು ಚೆನ್ನಾಗಿಯೇ ಬರುತ್ತಿದ್ದಾರೆ' ಎಂದು ಹೆಚ್ಚಾಗಿ ನೀಡಿ ಎಂದು ಅವರ ಹತ್ತಿರ ಮನವಿ ಮಾಡಿಕೊಂಡಿದ್ದೇವೆ. ಹಾಗೆಯೇ ಮಾನ್ಯ ಸದಸ್ಯರು ಯಂತ್ರಗಳನ್ನು ಉಪಯೋಗಿಸುತ್ತಾರೆ, ದುಡ್ಡು ಹಂಚಿಕೊಳ್ಳುತ್ತಾರೆ ಎನ್ನುವ ಮಾತನ್ನು ಹೇಳಿದ್ದರು. ಈಗ ಜನರು ಬಹಳ ಬುದ್ಧಿವಂತರಾಗಿದ್ದಾರೆ. ಬ್ಯಾಂಕ್ ಖಾತೆಗೆ ಸಂಬಳ ಹೋದರೇನೇ ಸಮಾಧಾನ. ಈ ಮೊದಲು ಬ್ಯಾಂಕ್ ಖಾತೆಗೆ ಸಂಬಳ ಹೋಗಲು ನಾಲ್ಕು-ಐದು ತಿಂಗಳು ಆಗುತ್ತಿತ್ತು. ಆದರೆ, ಈಗ ಮೂರು ರೀತಿಯ ಪದ್ಧತಿಗಳನ್ನು ಮಾಡಲಾಗಿದ್ದು, ಎಸ್. ಸಿ. ಗಳಿಗೆ ಮೊದಲು labour amount ಹೋಗಬೇಕು. ಎರಡನೆಯದಾಗಿ, ಎಸ್.ಟಿ. ಗಳಿಗೆ ಹೋಗಬೇಕು.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮೂರನೆಯದಾಗಿ ಸಾಮಾನ್ಯ ವರ್ಗದವರಿಗೆ ಹೋಗುವಂತೆ ಮಾಡಲಾಗಿದೆ. ಇದರಿಂದಾಗಿ 15 ದಿವಸ ಅಥವಾ ಒಂದು ತಿಂಗಳೊಳಗೆ ಎಸ್.ಸಿ./ಎಸ್.ಟಿ. ಗಳ ಖಾತೆಗೆ amount ಹೋಗುತ್ತದೆ. ಸಾಮಾನ್ಯ ವರ್ಗದವರ ಖಾತೆಗೆ ಹೋಗಲು ಎರಡು ತಿಂಗಳು ಆಗುತ್ತದೆ. ರೂ.658.00 ಕೋಟಿ ರೂಪಾಯಿಗಳಷ್ಟು ಬಾಕಿ ಹಣ ಉಳಿದಿದೆ. ಕಳೆದ ಸಲ ಕೇಂದ್ರ ಸಚಿವರಾದ ಮಾನ್ಯ ಗಿರಿರಾಜ್ ಸಿಂಗ್‌ರವರು ಬರುವ ಮುನ್ನ ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ಬಿಡುಗಡೆ ಮಾಡಿ ಬಂದಿದ್ದರು. ಎಸ್.ಸಿ./ಎಸ್.ಟಿ. ಎಲ್ಲರಿಗೂ ಸಂಬಂಧಿಸಿದಂತೆ ಕ್ಲಿಯರ್ ಆಗಿದೆ. ಮತ್ತೆ ಹಣವನ್ನು ಕೇಳಿರುವುದರಿಂದ supplementary budget ನಲ್ಲಿ ಕ್ಲಿಯರ್ ಮಾಡಿ ಕೊಡುತ್ತೇವೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಅದರ ಜೊತೆಗೆ ಕೇಂದ್ರ ಸರ್ಕಾರದವರು ನೀಡಿದಂಥ ಟಾರ್ಗೆಟ್ ಮುಗಿದು ಹೋಗಿದ್ದು, ಎಕ್ಸ್‌ಟ್ರಾ ರೂ.400 ಕೋಟಿ ಅನುದಾನವನ್ನು ಬಿಡುಗಡೆ ಮಾಡಿದ್ದಾರೆ. ಖಂಡಿತವಾಗಿ ಈ ದೇಶದಲ್ಲಿ ನಮ್ಮ ಕರ್ನಾಟಕ ರಾಜ್ಯವು ಮೊದಲನೆ ಸ್ಥಾನಕ್ಕೆ ಹೋಗುತ್ತದೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಉತ್ತರ ಭಾಗಕ್ಕೆ ಹೆಚ್ಚು ನೀಡಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಉತ್ತರ ಭಾಗ, ದಕ್ಷಿಣ ಭಾಗ ಎನ್ನುವಂಥ ಪ್ರಶ್ನೆ ಬರುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಆ ರೀತಿ ಹೇಳಲಿಲ್ಲ. ಗುಳೆ ಹೋಗುತ್ತಿರುವ ದೃಷ್ಟಿಯಿಂದ ಈ ಭಾಗಕ್ಕೆ ಹೆಚ್ಚು job card ನೀಡಿ ಎಂದು ಹೇಳುತ್ತಿರುವುದು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೇ ಈಗಾಗಲೇ ಹೇಳಿದ ಹಾಗೆ ರಾಜ್ಯದ ಹಿತದೃಷ್ಟಿಯಿಂದ ಯಾವುದೇ ಭಾಗದಲ್ಲಿ ಎಷ್ಟೇ ಕೆಲಸ ಮಾಡಿದ್ದರೂ job card ನೀಡುತ್ತೇವೆ. ಆ ಕರ್ನಾಟಕ, ಈ ಕರ್ನಾಟಕ ಎನ್ನುವ ಪ್ರಶ್ನೆ ಬರುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಸ್ವಲ್ಪ ಗುಳೆ ಹೋಗುವುದನ್ನು ತಪ್ಪಿಸಿ ಎಂದು ಹೇಳುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನಾನು ಇದಕ್ಕಿಂತ ಹೆಚ್ಚಿಗೆ ಏನು ಮಾಡಲು ಸಾಧ್ಯ ಹೇಳಿ. ಯಾರು ಯಾರು job card ಕೇಳುತ್ತಿದ್ದಾರೆ, ಅಂಥವರಿಗೆಲ್ಲಾ job card ನೀಡಲಾಗುತ್ತಿದೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಹಾಗಾದರೆ, ಸರಿ. ಮಾನ್ಯ ಸಚಿವರಿಗೆ ಧನ್ಯವಾದಗಳು. ಹಾಗೆಯೇ ಕೃಷಿ ಇಲಾಖೆಗೆ ಸಂಬಂಧಿಸಿದಂತೆ, ಮಾನ್ಯ ಕೃಷಿ ಸಚಿವರು ಸದನದಲ್ಲಿಯೇ ಇದ್ದು, ಬಹಳ ಚೆನ್ನಾಗಿ ಕೆಲಸ ಮಾಡುತ್ತಾರೆ. ಆದರೆ, ಕಲಬುರ್ಗಿ ಜಿಲ್ಲೆಯಲ್ಲಿ 'ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ' ಇತ್ತು. ಅದನ್ನು 'ದ್ವಿದಳಧಾನ್ಯ ಅಭಿವೃದ್ಧಿ ಮಂಡಳಿ' ಎಂದು ಹೊಸದಾಗಿ ನಾಮಕರಣ ಮಾಡಿ, ಬಹಳ ವರ್ಷಗಳೇ ಕಳೆದಿವೆ. ಅಲ್ಲಿ ವ್ಯವಸ್ಥಾಪಕ ನಿರ್ದೇಶಕರ ಹುದ್ದೆ ಮಾತ್ರ ಖಾಯಂ ಮಾಡಿದ್ದು, ಮತ್ತೆ ಯಾವ ಹುದ್ದೆಯನ್ನು ಅಲ್ಲಿ ಭರ್ತಿ ಮಾಡಲಿಲ್ಲ. ಒಬ್ಬರೇ ಒಬ್ಬ ವ್ಯವಸ್ಥಾಪಕ ನಿರ್ದೇಶಕರು ಆ ಮಂಡಳಿಯನ್ನು ನೋಡಿಕೊಳ್ಳುತ್ತಿದ್ದಾರೆ. ದ್ವಿದಳಧಾನ್ಯ ಅಭಿವೃದ್ಧಿ ಮಂಡಳಿ ಎಂದು ಬಹಳ ವರ್ಷಗಳ ಹಿಂದೆಯೇ ಆಗಿದ್ದು, ಅಲ್ಲಿ ತೊಗರಿಯನ್ನು ಮಾತ್ರ ಖರೀದಿ ಮಾಡುತ್ತಾರೆ. ಈ ಭಾಗದಲ್ಲಿ ತೊಗರಿ, ಹೆಸರು, ಉದ್ದು, ಅಲಸಂದೆ, ಕಡಲೆ ಇತ್ಯಾದಿ ಉತ್ಕೃಷ್ಟವಾದಂಥ ದ್ವಿದಳಧಾನ್ಯಗಳನ್ನು ಈ ಭಾಗದ ರೈತರು, ಕೃಷಿಕರು ಎಷ್ಟೊಂದು ಸಮೃದ್ಧವಾಗಿ ಬೆಳೆಯುತ್ತಾರೆ. ಅಂಥವರಿಗೆ ಒಂದು ಮಾರುಕಟ್ಟೆ ವ್ಯವಸ್ಥೆ ಇಲ್ಲ. 'ದ್ವಿದಳಧಾನ್ಯ ಅಭಿವೃದ್ಧಿ ಮಂಡಳಿ' ಎಂದು ಮಾಡಿದ ಮೇಲೆ ಅವರಿಗೆ ಒಂದು ಮಾರುಕಟ್ಟೆ ವ್ಯವಸ್ಥೆ ಇಲ್ಲ. ಜೊತೆಗೆ ಅವರು ಬೆಳೆದಂತಹ ದ್ವಿದಳಧಾನ್ಯಗಳನ್ನು ಖರೀದಿಸುವಂಥ ವ್ಯವಸ್ಥೆ ಇಲ್ಲ ಮತ್ತು ಸಂಶೋಧನೆ ಹಾಗೂ ಉತ್ತೇಜನ ಮಾಡುವಂಥ ಯೋಜನೆಯು ಈ ಮಂಡಳಿಯಿಂದ ಇಲ್ಲ ಎಂದು ಹೇಳಲು ಬಯಸುತ್ತೇನೆ. ಎಷ್ಟೋ ಮಂದಿ ರೈತರು ಅದೆಲ್ಲವನ್ನೂ ಉತ್ಕೃಷ್ಟವಾಗಿ ಬೆಳೆದು ನಮ್ಮ ನಾಡಿನ ಜನರೇ ದ್ವಿದಳಧಾನ್ಯಗಳನ್ನು ಬೆಳೆದು ತುಂಬಾ ತೊಂದರೆಯನ್ನು ಅನುಭವಿಸುತಿದ್ದಾರೆ. ಆದ್ದರಿಂದ ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಸುವುದೇನೆಂದರೆ, ಕೂಡಲೇ ಆ ಕಛೇರಿಗೆ ಉಳಿದಂಥ ಅಧಿಕಾರಿಗಳನ್ನು ನೇಮಿಸುವುದರ ಜೊತೆಗೆ ದ್ವಿದಳಧಾನ್ಯಗಳಾದ ಹೆಸರು, ಉದ್ದು, ಅಲಸಂದೆ, ಇತ್ಯಾದಿಗಳನ್ನು ಖರೀದಿಸಲು ಅವಕಾಶ ಕಲ್ಪಿಸಬೇಕು. ಅದರ ಜೊತೆಗೆ ತೊಗರಿಯನ್ನು ಉತ್ತೇಜನ ಮಾಡಲು ಹೇಗೆ ಮಂಡಳಿ ತೆಗೆದುಕೊಳ್ಳುತ್ತದೆ, ಅದೇ ರೀತಿ ಇತರೆ ಧಾನ್ಯಗಳಿಗೂ ಉತ್ತೇಜನ, ಸಂಶೋಧನೆ, ಮಾರುಕಟ್ಟೆ ವ್ಯವಸ್ಥೆ, ಬೆಲೆ ಇದೆಲ್ಲವನ್ನೂ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಕೂಡಲೇ ಕ್ರಮವಹಿಸಬೇಕು. ದ್ವಿದಳಧಾನ್ಯವನ್ನು ಬೆಳೆಯುವಂಥ ಈ ಭಾಗದ ರೈತರಿಗೆ ಆಶಾಕಿರಣವಾಗಿ ಸರ್ಕಾರ ಕೆಲಸ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

(ಮುಂದು)

**(1229) 21-12-2021 / 6.10 / SK-BNS** **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಮರಿತಿಬ್ಬೇಗೌಡ (ಮುಂದು):-**

ಮಾನ್ಯ ಸಭಾಪತಿಯವರೇ, ವಿದ್ಯುಚ್ಛಕ್ತಿ ಇಲಾಖೆಗೆ ನಮ್ಮ ಸಭಾಪತಿಯವರು ಅತಿ ಸಣ್ಣ ರೈತರಿಗೆ ಟ್ರಾನ್ಸ್‌ಫಾರ್ಮರ್ ಮತ್ತೊಂದು ಏನಾದರೂ ಹೋದರೆ ಎನ್ನುವ ಬಗ್ಗೆ ಪತ್ರವನ್ನು ಬರೆದಿದ್ದಾರೆ. ಸಣ್ಣ ರೈತರು ಮತ್ತು ಅತಿ ಸಣ್ಣ ರೈತರು, ಎರಡು ಎಕರೆಗಿಂತ ಕಡಿಮೆ ಜಮೀನು ಹೊಂದಿರುವವರಿಗೆ ಭೂ

ಹಿಡುವಳಿ ಪತ್ರ ಕೊಟ್ಟಿಲ್ಲ. ಭೂ ಹಿಡುವಳಿ ಪತ್ರವನ್ನು ರೈತರು ತೆಗೆದುಕೊಳ್ಳಬೇಕೆಂದರೆ, ಕಂದಾಯ ಇಲಾಖೆಯಲ್ಲಿ ಒಂದೆರಡು ತಿಂಗಳುಗಳಾದರೂ ಆಗುತ್ತಿಲ್ಲ. ಇದರಿಂದ ಬಹಳ ತೊಂದರೆಯಾಗುತ್ತಿದೆ. ಈ ಭೂ ಹಿಡುವಳಿ ಪತ್ರ ಇಲ್ಲದೇ ಹೋದರೆ, ಅವರಿಗೆ ವಿದ್ಯುತ್ ಸೌಲಭ್ಯವಿಲ್ಲ. ಈ ಭಾಗದಲ್ಲಿ ಇಂತಹ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಈ ಭಾಗದ ಹಿಂದುಳಿದಿರುವ ಪ್ರದೇಶದ ಸಣ್ಣ ಮತ್ತು ಅತಿ ಸಣ್ಣ ರೈತರು ಪಂಪ್‌ಸೆಟ್‌ಗಳ ಬಳಕೆ ಮಾಡುವುದಕ್ಕೆ ವಿದ್ಯುಚ್ಛಕ್ತಿ ಸರಬರಾಜಿಗಾಗಿ ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ತೋಟದ ಬೆಳೆ, ಯಾವುದೇ ಬೆಳೆ ಮಾಡಬಹುದು. ಇವತ್ತು ಅರೆ ಖುಷ್ಕಿ ಬೇಸಾಯ ಮಾಡುವಂತಹವರು ಬಹಳ ತೊಂದರೆಯಲ್ಲಿದ್ದಾರೆ. ಏಳು ಗಂಟೆ ವಿದ್ಯುತ್ ಕೊಡುತ್ತೇವೆಂದು ಹೇಳಿ, ಒಂದು ದಿನಕ್ಕೆ ಐದು ಗಂಟೆಯಾದರೂ ನಿಗಧಿತ ಸಮಯದಲ್ಲಿ ವಿದ್ಯುತ್ ಕೊಡುವುದಿಲ್ಲ ಎನ್ನುವ ಕೂಗು ಇವತ್ತು ಇದೆ. ಹಿಂದುಳಿದ ಪ್ರದೇಶದ ಜಿಲ್ಲೆಗಳಲ್ಲಿರುವ ರೈತರಿಗೆ ವಿದ್ಯುತ್ ಈ ಪ್ರಮಾಣದಲ್ಲಿ ಕೊಡುವುದಿಲ್ಲವೆಂದರೆ, ಇದನ್ನೇ ನಂಬಿರುವ ರೈತರು ಯಾವ ರೀತಿ ಆರ್ಥಿಕ ಸುಧಾರಣೆ ಮಾಡಿಕೊಳ್ಳುವುದಕ್ಕೆ ಸಾಧ್ಯ? ಇಲ್ಲಿ ಯಾವ ವಿದ್ಯುತ್ ಪ್ರಸರಣ ನಿಗಮದ ಅಧಿಕಾರಿಗಳಿದ್ದಾರೆ, ಇಲ್ಲಿ ಯಾವ ಕಂಪನಿ ಕೆಲಸ ಮಾಡುತ್ತಿದೆ, ಅವರಿಗೆ ಕೂಡಲೇ ನಿರ್ದೇಶನ ಕೊಡಬೇಕು ಮತ್ತು ಕಂದಾಯ ಇಲಾಖೆಯಲ್ಲಿ ಭೂ ಹಿಡುವಳಿ ಪತ್ರ ಕೊಡುವಂತಹದ್ದನ್ನು ಕೂಡಲೇ ಜರೂರಾಗಿ apply ಮಾಡಿದ ಒಂದು ವಾರದೊಳಗೆ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಭೂ ಹಿಡುವಳಿ ಪತ್ರ ಸಿಗಬೇಕು. ಆ ರೀತಿಯ ನಿರ್ದೇಶನ ಕೊಡಬೇಕು. ಸರ್ಕಾರ ನಿಗಧಿಗೊಳಿಸಿರುವಂತಹ ಕನಿಷ್ಠ ಏಳು ಗಂಟೆಗಳ ಕಾಲ ವಿದ್ಯುಚ್ಛಕ್ತಿಯವನ್ನು ವ್ಯವಸಾಯಕ್ಕೆ ಕೊಡುವಂತಹ ವ್ಯವಸ್ಥೆಯನ್ನು ಈ ಭಾಗದ ರೈತರಿಗೆ ಮಾಡಬೇಕೆಂದು ಹೇಳಿ ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ನಾನು ನೀರಾವರಿಯ ಬಗ್ಗೆ ಮಾತನಾಡುವುದಿಲ್ಲವೆಂದು ಹೇಳಿದೆ. ಏಕೆಂದರೆ, ನೀರಾವರಿಯ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಸದಸ್ಯರೆಲ್ಲರೂ ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಅವರು ಬಿಟ್ಟಿರುವಂತಹ ಎರಡು ಅಂಶಗಳನ್ನು ನಾನು ಮಾತನಾಡುತ್ತೇನೆ. ಅದೇನೆಂದರೆ, ಆಲಮಟ್ಟಿ ಅಣೆಕಟ್ಟು, ನಾರಾಯಣಪುರ ಅಣೆಕಟ್ಟು, ಕಾರಾಂಜ ಅಣೆಕಕಟ್ಟು, ತುಂಗಾಭದ್ರಾ ಅಣೆಕಟ್ಟು, ನವಿಲು ತೀರ್ಥ ಅಣೆಕಟ್ಟು, ಹಿಡ್ಕಲ್ ಅಣೆಕಟ್ಟು, ಸೂಪ ಅಣೆಕಟ್ಟು, ಸುಮಾರು ಏಳು ಅಣೆಕಟ್ಟುಗಳು ಹಿಂದುಳಿದಿರುವ ಪ್ರದೇಶದಲ್ಲಿ ಜಲಾಶಯಗಳಿವೆ. ಇವೆಲ್ಲಾ ಜಲಾಶಯಗಳಿಂದ ರೈತರ ಜಮೀನುಗಳಿಗೆ ನೀರು ಸರಬರಾಜಿನ ವ್ಯವಸ್ಥೆ ಬಹಳ ವರ್ಷಗಳಿಂದ ಇದೆ.

ಆದರೆ ಕೆಲವು ಅಣೆಕಟ್ಟುಗಳಲ್ಲಿ ಹೂಳು ತುಂಬಿ ಹೋಗಿವೆ. ಆ ಹೂಳು ತೆಗೆಯುವಂತಹ ಕೆಲಸವಾಗಬೇಕು. ಡ್ಯಾಂನ ನಂತರ ನದಿಯಲ್ಲಿ ನೀರು ಹರಿದು ಹೋಗುತ್ತದೆ. ಘಟಪ್ರಭಾ ನದಿ, ಮಲಪ್ರಭಾ ನದಿ, ಕೃಷ್ಣಾ ನದಿ, ಭೀಮಾ ನದಿ, ತುಂಗಾಭದ್ರಾ ನದಿಗಳು ಈ ಭಾಗದಲ್ಲಿರುವ ನದಿಗಳು ಏನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹರಿಯುತ್ತವೆ. ಆ ನದಿಗಳಿಗೆ ಬ್ಯಾರೇಜ್ ಕಟ್ಟುವಂತಹ ಕೆಲಸವಾಗಬೇಕು. ಕಡಿಮೆ ನೀರು ಹರಿಯುವಂತಹ ಕಡೆ ಚೆಕ್ ಡ್ಯಾಂಗಳನ್ನು ಕಟ್ಟುವಂತಹ ಕೆಲಸವಾಗಬೇಕು. ಈ ಬ್ಯಾರೇಜ್ ಮತ್ತು ಚೆಕ್ ಡ್ಯಾಂಗಳಿಂದ ಇವತ್ತು ಕೆರೆಗೆ ನೀರು ತುಂಬಿಸುವಂತಹ ವ್ಯವಸ್ಥೆ ಈ ಭಾಗದಲ್ಲಿ ಕೆರೆ ತುಂಬಿಸುವ ಯೋಜನೆಯು ಆಗಬೇಕು. ಹಿಂದುಳಿದಿರುವಂತಹ ಈ ಭಾಗದಲ್ಲಿ ನದಿ ನೀರುಗಳನ್ನು ಬಳಸಿಕೊಂಡು, surface water ನಲ್ಲಿ ಕೆರೆ ತುಂಬಿಸುವ ಯೋಜನೆಯನ್ನು ಇಲ್ಲಿ ಕಾರ್ಯಗತ ಮಾಡಿದರೆ, ಇಲ್ಲಿ ಬಹಳಷ್ಟು ಗ್ರಾಮೀಣ ಪ್ರದೇಶದ ಜನರಿಗೆ ಕುಡಿಯುವ ನೀರು ಮತ್ತು ಅರೆ ಬೇಸಾಯ ಪದ್ಧತಿಗೆ ಹೆಚ್ಚು ಒತ್ತು ಕೊಟ್ಟಂತಾಗ್ತುತ್ತದೆ. ಈ ನದಿಗಳಿಗೆ ಬ್ಯಾರೇಜ್‍ಗಳು ಮತ್ತು ಚೆಕ್ ಡ್ಯಾಂಗಳನ್ನು ಹಾಕುವಂತಹದ್ದಕ್ಕೆ ಹೆಚ್ಚಿನ ಆಸಕ್ತಿ, ಒಲವನ್ನು ಕೊಡಬೇಕು ಮತ್ತು ನದಿಗಳ ನೀರನ್ನು ಬಳಕೆ ಮಾಡಿಕೊಂಡು, ಆ ಭಾಗದಲ್ಲಿರುವ ಕೆರೆಗಳಿಗೆ ನೀರು ತುಂಬಿಸುವ ಹೊಸ ಯೋಜನೆಯನ್ನು ಈ ಭಾಗಕ್ಕೆ ರೂಪಿಸಬೇಕೆಂದು ಹೇಳುತ್ತಾ, ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ಇವತ್ತು ಹಿಂದುಳಿದ ಪ್ರದೇಶದಲ್ಲಿರುವ ಜಿಲ್ಲೆಗಳ ಅಭಿವೃದ್ಧಿಗಾಗಿ, ಆರ್ಥಿಕವಾಗಿ ಹಿಂದುಳಿದಿದ್ದಾರೆ ಎನ್ನುವ ಸದುದ್ದೇಶದಿಂದ 2006-07 ನೇ ಸಾಲಿನಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಮೊಟ್ಟಮೊದಲು, ಅದುವರೆಗೂ ಬಂದಂತಹ ಸರ್ಕಾರಗಳು ಕೂಡ ಈ ಭಾಗದ ಅಭಿವೃದ್ಧಿಗೆ ದೊಡ್ಡ ಚಿಂತನೆ ಮತ್ತು ಅಲೋಚನೆ ಮಾಡಿಕೊಂಡು ಬಂದಿದೆ. ಆದರೆ ಈ ಭಾಗದಲ್ಲಿ ಸುವರ್ಣ ಸೌಧವನ್ನು ಕಟ್ಟಿದರೆ ಅಭಿವೃದ್ಧಿಯಾಗುತ್ತದೆ ಎನ್ನುವ ಚಿಂತನೆಯಲ್ಲಿ ಕಟ್ಟಲಿಲ್ಲ. ಆದರೆ ಈ ಭಾಗದಲ್ಲಿ ಕರ್ನಾಟಕ ಸರ್ಕಾರ ಒಂದಿಷ್ಟು ದಿನಗಳ ಕಾಲ ಅಧಿವೇಶನವನ್ನು ನಡೆಸಿದರೆ, ಈ ಭಾಗಕ್ಕೆ ಹೆಚ್ಚು ಕಳಕಳಿ ವಹಿಸುವಂತಹ ಕೆಲಸ ಸರ್ಕಾರದಿಂದ ಆಗುತ್ತದೆ. ಈ ಭಾಗದ ಸಮಸ್ಯೆಗಳು ಇನ್ನು ಹೆಚ್ಚಿನ ರೀತಿಯಲ್ಲಿ ಆಳವಾಗಿ ಸರ್ಕಾರ ತಿಳಿದುಕೊಂಡು ಪರಿಹಾರ ಒದಗಿಸುವುದಕ್ಕೆ ಆಗುತ್ತದೆ ಎನ್ನುವ ಸದುದ್ದೇಶದಿಂದ ಸುವರ್ಣಸೌಧವನ್ನು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಈ ಭಾಗದ ಸಮಗ್ರ ಅಭಿವೃದ್ಧಿಯ ಹಿನ್ನೆಲೆಯಲ್ಲಿ ಸುವರ್ಣಸೌಧವನ್ನು ಪ್ರಾರಂಭ ಮಾಡಿದರು. ಆ ಹಿನ್ನೆಲೆಯಲ್ಲಿ ನಾವು ಇವತ್ತು ಇಲ್ಲಿ ಅಧಿವೇಶನಗಳನ್ನು ನಡೆಸುತ್ತಿದ್ದೇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಸಚಿವರು):-** ಮಾನ್ಯ ಮರಿತಿಬ್ಬೇಗೌಡರೇ ಒಂದು ನಿಮಿಷ. 2006ರಲ್ಲಿ ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರೇ ಸುವರ್ಣ ಸೌಧವನ್ನು ಕಟ್ಟಿದ್ದರು ಎಂದು ಪ್ರತಿಯೊಂದು ಮಾತಿನ ಮಧ್ಯೆದಲ್ಲಿ ಹೇಳುತ್ತಿದ್ದಾರೆ. ಆ ಸಮಯದಲ್ಲಿದ್ದಂತಹ ಹಣಕಾಸು ಮಂತ್ರಿಯಾದಂತಹ ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಇದ್ದರು. ಸಮ್ಮಿಶ್ರ ಸರ್ಕಾರವಿದ್ದಾಗ ಈ ಭಾಗದಲ್ಲಿ ಅಭಿವೃದ್ಧಿಯಾಗಬೇಕು ಎಂದು ಹಠ

ಮಾಡಿರುವಂತಹದ್ದು. 2008 ರಲ್ಲಿ ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಮುಖ್ಯಮಂತ್ರಿಯಾದಾಗ, ಇದಕ್ಕೆ ಹೆಚ್ಚು ಅನುದಾನ ಕೊಟ್ಟಿರುವಂತಹವರು. ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಇದಕ್ಕೆ ಹೆಚ್ಚು ಒತ್ತು ಕೊಟ್ಟು, ಭೂಮಿ ಪೂಜೆ ಮಾಡಿ ಉದ್ಘಾಟನೆ ಮಾಡಿರುವಂತಹವರು.

**ಶ್ರೀ ಮರಿತಿಬ್ಬೇ ಗೌಡ:-** ಮಾನ್ಯ ಸಭಾಪತಿಯವರೇ, ಮೊದಲು ಇಲ್ಲಿ ಸುವರ್ಣಸೌಧ ಕಟ್ಟಬೇಕು ಎನ್ನುವ ಅಡಿಪಾಯವನ್ನು ಹಾಕಿದಂತಹವರು ಈ ರಾಜ್ಯದಲ್ಲಿ ಮೊಟ್ಟಮೊದಲನೆಯದ್ದಾಗಿ ಮಾಜಿ ಮುಖ್ಯಮಂತ್ರಿ ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರು. ಆನಂತರ ಮಾನ್ಯ ಯಡಿಯೂರಪ್ಪನವರು ಸುವರ್ಣಸೌಧವನ್ನು ಕಟ್ಟುವಂತಹ ಪ್ರಯತ್ನ ಮಾಡಿದ್ದು. ಅವೊತ್ತಿನ ದಿವಸ ಬಿ.ಜೆ.ಪಿ. ಪಕ್ಷ ಮತ್ತು ಜೆ.ಡಿ(ಎಸ್) ಪಕ್ಷ ಇವೆರಡು ಸಮ್ಮಿಶ್ರ ಸರ್ಕಾರ ಇದ್ದಂತಹದ್ದು. ಆ ಉದ್ದೇಶವೇನೆಂದರೆ, ಮೊಟ್ಟಮೊದಲು, ಅಡಿಪಾಯ ಹಾಕಿರುವಂತಹದ್ದು ಇದೆ. ಇವತ್ತು ಆರ್ಟಿಕಲ್ 371 (ಜೆ) ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಾರೆ ಅಂದುಕೊಂಡಿದ್ದೆ. ಆದರೆ ಅವರು ಮಾತನಾಡಲಿಲ್ಲ. ಈ ಭಾಗದಲ್ಲಿರುವಂತಹ ತೀರಾ ಹಿಂದುಳಿದ ಪ್ರದೇಶದ ಎಂದು ಹೇಳಿ, ಆ ಪ್ರದೇಶದ ಜನರ ಬದುಕಲ್ಲಿ ಆರ್ಥಿಕವಾಗಿ ಸುಧಾರಣೆ ತರಬೇಕೆಂದು ಹೇಳಿ, ಆರ್ಟಿಕಲ್ 371(ಜೆ) ತಂದು ಬಹಳ ವರ್ಷಗಳಾಯಿತು. ಆ ಆರ್ಟಿಕಲ್ 371 (ಜೆ) ಅನ್ನು ಇನ್ನು ಕೂಡ ಕೆಲವು ಇಲಾಖೆಗಳಲ್ಲಿ ಅನುಷ್ಠಾನ ಮಾಡುತ್ತಿಲ್ಲ. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ, ಅದರಲ್ಲಿ ವಿಶೇಷವಾಗಿ ಮಾನ್ಯ ಮಲ್ಲಿಕಾರ್ಜುನ ಖರ್ಗೆ ಮತ್ತು ಕಾಂಗ್ರೆಸ್ ಸಂಸದರು ಹಾಗೂ ಎಲ್ಲರ ಸಹಕಾರದಿಂದ ಆರ್ಟಿಕಲ್ 371(ಜೆ) ಬಂದಂತಹದ್ದು. ಆ ಭಾಗದ ಆರೇಳು ಜಿಲ್ಲೆಗಳ ಜನರ ಸಮಗ್ರ ಆರ್ಥಿಕ ಸುಧಾರಣೆಗೋಸ್ಕರ ತಂದಂತಹ ಕಾರ್ಯಕ್ರಮವಾಗಿದೆ. ಆದರೂ ಕೂಡ ಇನ್ನು ಪರಿಪೂರ್ಣವಾಗಲಿಲ್ಲ. ಅದನ್ನು ಪರಿಪೂರ್ಣವಾಗಿ ಮಾಡಬೇಕೆಂದು ನಾನು ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

ಡಾ|| ನಂಜುಂಡಪ್ಪನವರ ವರದಿ ಕೊಟ್ಟಿರುವುದರಲ್ಲಿ, ಅದನ್ನು ಕೂಡ ಸನ್ಮಾನ್ಯ ಎಸ್.ಎಂ. ಕೃಷ್ಣಾರವರ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಈ ಒಂದು ಸಮಿತಿ ರಚನೆಯಾಗಿ ವರದಿ ಬಂತು. ಅದೇ ಸರ್ಕಾರ ಒಪ್ಪಿಗೆಯೂ ಕೊಟ್ಟಿತು. ಅದರಲ್ಲಿ ಭಾಗಶಃ ಶೇಕಡ 70 ರಷ್ಟು ಸರ್ಕಾರ ಅನುಷ್ಠಾನ ಮಾಡಿದೆ. ಇನ್ನು ಶೇಕಡ 30 ರಷ್ಟು ಅನುಷ್ಠಾನ ಮಾಡಬೇಕಾಗಿದೆ. ಇವತ್ತು ಈ ಭಾಗದಲ್ಲಿ ಹಿಂದುಳಿದವರ ಬಗ್ಗೆ ನಿರ್ದಿಷ್ಟವಾಗಿ ಗುರುತು ಮಾಡಿ, ಅಂಕಿ-ಅಂಶಗಳ ಸಮೇತ ವರದಿ ಕೊಟ್ಟಿರುವಂತಹದ್ದು ಒಂದೇ ಅದು ಡಾ|| ನಂಜುಂಡಪ್ಪನವರ ವರದಿ. ಆ ವರದಿಯನ್ನು ಆಧಾರವಾಗಿಟ್ಟುಕೊಂಡು, ಈ ಭಾಗದಲ್ಲಿರುವ ಬಡ ಜನರಿಗೆ ಆ ವರದಿಯಲ್ಲಿರುವಂತಹ ಒಂಭತ್ತು ಅಂಶಗಳ ಪರಿಪೂರ್ಣತೆ ಮಾಡಬೇಕು ಎನ್ನುವಂತಹ ಕಾಯಕಲ್ಪವನ್ನು ಇವತ್ತಿನ ಸರ್ಕಾರ ಮಾಡಬೇಕೆಂದು ನಾನು ತಮ್ಮ ಮೂಲಕ ವಿನಂತಿ ಮಾಡುತ್ತೇನೆ. ಇವತ್ತು ಸಮಗ್ರ ಕರ್ನಾಟಕದ ನೀರಾವರಿ ಅಭಿವೃದ್ಧಿಗೆ ಸನ್ಮಾನ್ಯ ಹೆಚ್.ಡಿ. ದೇವೇಗೌಡರ ಕೊಡುಗೆ ಈ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಭಾಗಕ್ಕೆ ಅಪಾರ ಎನ್ನುವಂತಹದ್ದನ್ನು ನಮ್ಮ ಮಾನ್ಯ ಸದಸ್ಯರೆಲ್ಲರೂ ಹೇಳಿದ್ದಾರೆ. ಅದನ್ನು ನಾನು ಕೂಡ ಹೇಳುತ್ತೇನೆ. ಇಷ್ಟು ವರ್ಷ ರಾಜ್ಯವನ್ನಾಳಿದಂತಹ ಕಾಂಗ್ರೆಸ್ ಸರ್ಕಾರದ ಕೊಡುಗೆ ಕೂಡ ಇದೆ.

(ಮುಂದು)

**(1230)21.12.2021/6.20/ಎಂ.ಎಂ-ಜಿ.ಆರ್ (ಉಪಸಭಾಪತಿಯವರ ಉಪಸ್ಥಿತಿ)**

**ಶ್ರೀ ಮರಿತಿಬ್ಬೇಗೌಡ (ಮುಂದು):-**

ಇವತ್ತು ಕರ್ನಾಟಕದ ಈ ಭಾಗದ ಬೀದರ್‌ನಲ್ಲಿ ಪಶುಸಂಗೋಪನಾ ಇಲಾಖೆಗೆ ಸಂಬಂಧಪಟ್ಟಂತೆ ವಿಶ್ವವಿದ್ಯಾಲಯವಾಗಿದೆ. ರಾಯಚೂರಿನಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯವಾಗಿದೆ. ಹುಬ್ಬಳ್ಳಿಯಲ್ಲಿ ಕಾನೂನು ವಿಶ್ವವಿದ್ಯಾಲಯವಾಗಿದೆ. ಧಾರವಾಡದಲ್ಲಿ ಜಾನಪದ ವಿಶ್ವವಿದ್ಯಾಲಯವಾಗಿದೆ. ತಾಂತ್ರಿಕ ಶಿಕ್ಷಣ ವಿಶ್ವವಿದ್ಯಾಲಯ ಬೆಳಗಾವಿಯಲ್ಲಾಗಿದೆ. ಇದಕ್ಕೆಲ್ಲಾ ಕಾಂಗ್ರೆಸ್ ಪಕ್ಷದ ಕೊಡುಗೆ ಎನ್ನುವುದನ್ನು ನಾವ್ಯಾರೂ ಕೂಡ ಮರೆಯಬಾರದು. ಇದನ್ನು ಈ ಭಾಗದ ಅಭಿವೃದ್ಧಿಗೆ ಕೊಟ್ಟಿರುವಂತಹದ್ದು. ಮೆಡಿಕಲ್ ಕಾಲೇಜುಗಳನ್ನು ಕೂಡ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗ ಮಾಡಿಕೊಂಡು ಬಂದಿದೆ. ಹೀಗೆ ಅವರ ಹೆಜ್ಜೆಗುರುತುಗಳನ್ನು ಬಿಟ್ಟಿದೆ. ಇವತ್ತು ಈ ಭಾಗದಲ್ಲಿ ಡ್ಯಾಂಗಳು ಏನಿವೆ;

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ . . .

**ಶ್ರೀ ಮರಿತಿಬ್ಬೇಗೌಡ:-** ಇಷ್ಟೊಂದು ಪ್ರಮುಖವಾಗಿ ಹರಿಯುವ ನದಿ ನೀರನ್ನು ಬಳಕೆ ಮಾಡಿಕೊಂಡು ವ್ಯವಸಾಯ ಮಾಡುತ್ತಿದ್ದಾರೆಂದರೆ, ಅದಕ್ಕೆ ಕಾಂಗ್ರೆಸ್ ಪಕ್ಷ ಮತ್ತು ಜನತಾದಳ ಪಕ್ಷದ ಕೊಡುಗೆ ಅಪಾರವಾದುದು.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, . . .

**ಉಪ ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ಮಾನ್ಯ ಮರಿತಿಬ್ಬೇಗೌಡರು ಮುಗಿಸಲಿ ಬಿಡಿ.

**ಶ್ರೀ ಮರಿತಿಬ್ಬೇಗೌಡ:-** ನಾನು ತಮ್ಮ ಮೂಲಕ ವಿನಂತಿ ಮಾಡುತ್ತೇನೆ, ಈ ಸದನದಲ್ಲಿ ನಾವು ಏನು ವಿಶೇಷವಾಗಿ ಚರ್ಚೆ ಮಾಡಿದ್ದೇವೆ;

**ಶ್ರೀ ಎನ್. ರವಿಕುಮಾರ್:-** ಮಾನ್ಯ ಮರಿತಿಬ್ಬೇಗೌಡರೇ, . . .

**ಶ್ರೀ ಮರಿತಿಬ್ಬೇಗೌಡ:-** ಇವತ್ತು ಕೋವಿಡ್-19 ಎಂಬ ಸಾಂಕ್ರಾಮಿಕ ರೋಗ ಬಂತು.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಎನ್. ರವಿಕುಮಾರ್:-** ಮಾನ್ಯ ಮರಿತಿಬ್ಬೇಗೌಡರೇ, . . .

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಅಂತಿಮ ಘಟ್ಟಕ್ಕೆ ಬಂದಿದ್ದೇನೆ, ನಾನು ಯೀಲ್ಡ್ ಆಗುವುದಿಲ್ಲ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇವರು ಕಾಂಗ್ರೆಸ್ ಪಕ್ಷ ಎಂದು ಹೇಳುತ್ತಾರೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನೀವು ಏನು ಬೇಕಾದರೂ ಹೇಳಿ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಬಿ.ಜೆ.ಪಿ ಮತ್ತು ಜೆ.ಡಿ(ಎಸ್) ಸೇರಿಕೊಂಡು ಸಮ್ಮಿಶ್ರ ಸರ್ಕಾರ ಇದ್ದಾಗ ಮಾಡಿರುವಂತಹ ಅಭಿವೃದ್ಧಿಯಲ್ಲಿ ಕಾಂಗ್ರೆಸ್‌ಗೆ ಕ್ರೆಡಿಟ್ ಕೊಡುತ್ತಾರೆ.

**ಉಪ ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ಇರಲಿ ಕುಳಿತುಕೊಳ್ಳಿ. ಅವರ ಅಭಿಪ್ರಾಯವನ್ನು ಹೇಳುತ್ತಿದ್ದಾರೆ, ಹೇಳಲಿ ಬಿಡಿ.

**ಶ್ರೀ ಎನ್. ರವಿಕುಮಾರ್:-** ಸಮ್ಮಿಶ್ರ ಸರ್ಕಾರ ಇದ್ದಿದ್ದು ಬಿ.ಜೆ.ಪಿ ಜೊತೆಯಲ್ಲಿ. ಅವರು ಕ್ರೆಡಿಟ್ ಕೊಡುತ್ತಿರುವುದು ಕಾಂಗ್ರೆಸ್‌ಗೆ. ಇದು ಯಾವ ನ್ಯಾಯ?

**ಉಪ ಸಭಾಪತಿಯವರು**:- ನಿಮಗೆ ಅವಕಾಶ ಸಿಕ್ಕಿದಾಗ ಅದರ ಬಗ್ಗೆ ಹೇಳಿ.

**ಶ್ರೀ ಎನ್.ರವಿಕುಮಾರ್:-** ಇವರು ನಮಗೆ ಹೇಳಲಿ. ಇವರು ತಾವು ಕಾಂಗ್ರೆಸ್ ಪಕ್ಷದಲ್ಲಿದ್ದೇನೆ ಎಂದು ಹೇಳಿದರೆ ನಾನು ಪ್ರಶ್ನೆಯನ್ನೇ ಕೇಳುವುದಿಲ್ಲ.

**ಉಪ ಸಭಾಪತಿಯವರು:-** ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, . . .

**ಉಪ ಸಭಾಪತಿಯವರು**:- ಮಾನ್ಯ ಹರಿಪ್ರಸಾದ್‌ರವರೇ, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಮರಿತಿಬ್ಬೇಗೌಡರು ಮಾತನಾಡುತ್ತಿದ್ದಾರೆ.

(ಗೊಂದಲ)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇವರು ಯಾರು ಕೇಳುವುದಕ್ಕೆ? ಮಾನ್ಯ ಸದಸ್ಯರು ಯೀಲ್ಡ್ ಆಗುವುದಿಲ್ಲ ಇನ್ನೂ ಮಾತನಾಡುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ಯೀಲ್ಡ್ ಆಗಿಲ್ಲ.

(ಗೊಂದಲ)

**ಉಪ ಸಭಾಪತಿಯವರು**:- ಮಾನ್ಯ ರವಿಕುಮಾರ್‌ರವರೇ, ಕುಳಿತುಕೊಳ್ಳಿ.

**ಶ್ರೀ ಎನ್.ರವಿಕುಮಾರ್:-** ಬಿ.ಜೆ.ಪಿ ಮತ್ತು ಜೆ.ಡಿ(ಎಸ್) (ಗೊಂದಲ) ಇವರು ಕ್ರೆಡಿಟ್ ಕೊಡುತ್ತಿರುವುದು ಕಾಂಗ್ರೆಸ್‌ಗೆ.

(ಗೊಂದಲ)

**ಉಪ ಸಭಾಪತಿಯವರು**:- ಅವರ ಅಭಿಪ್ರಾಯವನ್ನು ಹೇಳುತ್ತಿದ್ದಾರೆ ನೀವು ಕುಳಿತುಕೊಳ್ಳಿ. ನೀವು ಆಮೇಲೆ ಮಾತನಾಡಿ. ನಿಮಗೂ ಅವಕಾಶ ಕೊಡುತ್ತೇನೆ ಆಗ ಮಾತನಾಡಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇದು ಸರಿಯಲ್ಲ. ಮಾನ್ಯ ಮರಿತಿಬ್ಬೇಗೌಡರು ಸಮ್ಮಿಶ್ರ ಸರ್ಕಾರ ಇದ್ದಾಗ ಮಾಡಿದ ಅಭಿವೃದ್ಧಿಯನ್ನು ಸರಿಯಾಗಿ ಹೇಳಲಿ.

**ಶ್ರೀ ಆರ್.ಧರ್ಮಸೇನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ಒಬ್ಬ ಜವಾಬ್ದಾರಿಯುತ ಶಾಸಕರು. ಅವರು ಕೂಡ ಮಾಹಿತಿಯನ್ನು ತೆಗೆದುಕೊಂಡೇ ಮಾತನಾಡುತ್ತಿದ್ದಾರೆ. ಸುಮ್ಮನೇ ನೀವೆಲ್ಲಾ **(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ಆರು ಮೆಡಿಕಲ್ ಕಾಲೇಜು, ಆರು ಹೊಸ ವಿಶ್ವವಿದ್ಯಾಲಯಗಳು ಇಡೀ ಉತ್ತರ ಕರ್ನಾಟಕದ ಅಭಿವೃದ್ಧಿಗೆ . . .

**ಉಪ ಸಭಾಪತಿಯವರು:-** ಈಗ ಮಾನ್ಯ ಮರಿತಿಬ್ಬೇಗೌಡರು ಯೀಲ್ಡ್ ಆಗುತ್ತಿಲ್ಲ. ಮಾನ್ಯ ರವಿಕುಮಾರ್‌ರವರೇ ನಿಮಗೆ ಅವಕಾಶ ಕೊಡುತ್ತೇನೆ.

(ಗೊಂದಲ)

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಮುರುಗೇಶ್ ಆರ್. ನಿರಾಣಿ(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):-** ಮಾನ್ಯ ಮರಿತಿಬ್ಬೇಗೌಡರೇ, ತಾವು ಬಹಳ ಚೆನ್ನಾಗಿ ಮಾತನಾಡುತ್ತಿದ್ದೀರಿ. ನೀವು ಜನತಾ ದಳದ ಹೆಸರು ಹೇಳಿದಿರಿ ಓ.ಕೆ., ಆದರೆ ಕಾಂಗ್ರೆಸ್ ಪಕ್ಷದ ಹೆಸರು ಹೇಳುತ್ತೀರಲ್ಲಾ, ಯಾವಾಗ ಅರ್ಜಿ ಹಾಕಿದಿರಿ?

**ಶ್ರೀ ಮರಿತಿಬ್ಬೇಗೌಡ**:- ಅದನ್ನು ಹೇಳುತ್ತೇನೆ.

**ಶ್ರೀ ಆರ್.ಧರ್ಮಸೇನ**:- ಮಾನ್ಯ ಮರಿತಿಬ್ಬೇಗೌಡರು ಹಿರಿಯ ಸದಸ್ಯರಾಗಿದ್ದಾರೆ ಅವರು ಜವಾಬ್ದಾರಿಯುತವಾಗಿ ಮಾತನಾಡುತ್ತಿದ್ದಾರೆ.

**ಉಪ ಸಭಾಪತಿಯವರು:-** ಮಾನ್ಯ ಧರ್ಮಸೇನರವರೇ, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಮರಿತಿಬ್ಬೇಗೌಡರೇ, ನೀವು ಮಾತನಾಡಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಈ ಸರ್ಕಾರದಲ್ಲಿ ಈ ಸದನದಲ್ಲಿ ಮಾತನಾಡಿದ್ದೇನೆ. ಇದರ ಬಗ್ಗೆ ತಮ್ಮ ಮೂಲಕ ಪುನ ಸರ್ಕಾರದಲ್ಲಿ ವಿನಂತಿ ಮಾಡುವುದು ಇಷ್ಟೇ. ಇಷ್ಟೆಲ್ಲಾ ಜ್ವಲಂತ ಸಮಸ್ಯೆಗಳಿದೆ. ಹಿಂದಿನ ಸರ್ಕಾರಗಳು ಅದು ಬಿ.ಜೆ.ಪಿ., ಸರ್ಕಾರ ಇರಬಹುದು, ಜನತಾದಳ ಇರಬಹುದು, ಕಾಂಗ್ರೆಸ್ ಇರಬಹುದು ಹಾಕಿಕೊಂಡಿರುವಂತಹ ಹಳೆಯ ಯೋಜನೆಗಳನ್ನು ಮುಂದುವರೆಸಿ ಸಮಾಧಾನ ಪಟ್ಟುಕೊಳ್ಳುವುದರ ಜೊತೆಗೆ ಈ ಹಿಂದುಳಿದ ಪ್ರದೇಶಗಳ ಜನರಿಗೆ ಬೇರೆ ಹೊಸ ಮಾದರಿಯಲ್ಲಿ ಆರ್ಥಿಕ ನೆರವನ್ನು ಕೊಟ್ಟು ಇವರನ್ನು ಸಬಲೀಕರಣ ಮಾಡುವಂತಹ ಹೊಸ ಯೋಜನೆಗಳನ್ನು, ಕಾರ್ಯಕ್ರಮಗಳನ್ನು ಕೊಡುತ್ತೀರಾ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಉಪ ಸಭಾಪತಿಯವರು**:- ಮಾನ್ಯ ಮರಿತಿಬ್ಬೇಗೌಡರೇ, ನೀವು ಮಾಡಿ ಎಂದು ಸಲಹೆ ಕೊಡಿ.

**ಶ್ರೀ ಮರಿತಿಬ್ಬೇಗೌಡ**:- ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ 25 ಜನ ಲೋಕಸಭಾ ಸದಸ್ಯರಿದ್ದಾರೆ. ಎಂಟು ವರ್ಷದಿಂದ ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಡಬಲ್ ಎಂಜಿನ್ ಸರ್ಕಾರ ಇದೆ. ಆದರೆ ಇದುವರೆಗೂ ಕೂಡ ರಾಜ್ಯದಲ್ಲಿ ಈ ಹಿಂದುಳಿದ ವರ್ಗದ ಭಾಗಗಳಿಗೆ ಕಾಂಗ್ರೆಸ್, ಜೆ.ಡಿ(ಎಸ್) ಪಕ್ಷ ಮಾಡಿರುವಂತಹ ಅಭಿವೃದ್ಧಿ ಕೆಲಸಗಳನ್ನು ನೀವು ಮುಂದುವರೆಸಿಕೊಂಡು ಹೋಗುವುದನ್ನು ಬಿಟ್ಟರೆ ನಿಮ್ಮ ಕಾರ್ಯಕ್ರಮವೇನು? ಇವತ್ತು ನಾಡಿನ ಜನ ಭ್ರಮನಿರಸನರಾಗಿದ್ದಾರೆ. ನಾವು ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಎರಡೂ ಕಡೆ ಒಂದೇ ಸರ್ಕಾರ ಬಂದರೆ;

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಬಿ.ಸಿ.ಪಾಟೀಲ್(ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ಇಲ್ಲಿ ಉತ್ತರ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ಮಾತನಾಡುತ್ತಿದ್ದಾರಾ ಅಥವಾ ರಾಜಕೀಯ ಭಾಷಣ ಮಾಡುತ್ತಿದ್ದಾರಾ? ಅಥವಾ ಇದು ಪಕ್ಷಗಳನ್ನು ಹೊಗಳಿಕೆ ಮಾಡುವಂತಹದ್ದೇ? ಮಾನ್ಯ ಮರಿತಿಬ್ಬೇಗೌಡರೇ, ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಮಾತನಾಡಿ. ಉತ್ತರ ಕರ್ನಾಟಕದ ಅಭಿವೃದ್ಧಿಯನ್ನು ಯಾವ ರೀತಿ ಮಾಡಬೇಕೆಂಬುದರ ಬಗ್ಗೆ ಮಾತನಾಡಿ. ಆ ಪಕ್ಷ, ಈ ಪಕ್ಷ ಎಂದು ಇಲ್ಲಿ ಹೊಗಳುವಂತಹದ್ದೇನಿದೆ? ಇಲ್ಲಿ ಪಕ್ಷವನ್ನು ಹೊಗಳುವುದಕ್ಕೆ ಇರುವುದೇ?

(ಗೊಂದಲ)

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರಿಗೆ ಮಾತನಾಡುವುದಕ್ಕೆ ಹಕ್ಕಿದೆ.

**ಶ್ರೀ ಬಿ.ಸಿ. ಪಾಟೀಲ್:-** ಆಯಿತು. ಅವರು ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಮಾತನಾಡಲಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** (ಗೊಂದಲ) ನಿಮಗೆ ಮಾತನಾಡುವುದಕ್ಕೆ ಯಾರು ಬೇಡವೆಂದರು? ಒಬ್ಬ ಸದಸ್ಯನಿಗೆ ಹಕ್ಕಿದೆ ಅವರು ಮಾತನಾಡುತ್ತಾರೆ.

**ಶ್ರೀ ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, . . .

**ಉಪ ಸಭಾಪತಿಯವರು**:- ಮಾನ್ಯ ಹರಿಪ್ರಸಾದ್‌ರವರೇ, ಮಾನ್ಯ ಮಂತ್ರಿಗಳೇ ಕುಳಿತುಕೊಳ್ಳಿ. ಮಾನ್ಯ ಮರಿತಿಬ್ಬೇಗೌಡರೇ, ನೀವು ತುಂಬಾ ಚೆನ್ನಾಗಿ ಮಾತನಾಡುತ್ತೀರಿ. ಮಾತನಾಡುತ್ತಿರುವಂತಹ ಸಂದರ್ಭದಲ್ಲಿ ಕೆಲವು provoke ಮಾಡಿಕೊಂಡು ಹೋಗುತ್ತಿರುವ ಟ್ರ್ಯಾಕ್ ಅನ್ನು ನೀವು ಚೇಂಜ್ ಮಾಡಬೇಡಿ. ನಿಮ್ಮ ಪ್ರೆಸೆಂಟೇಷನ್ ಚೆನ್ನಾಗಿದೆ. ಇಲ್ಲವೆಂದಲ್ಲ. ಎಲ್ಲೋ ಒಂದು ಸಂದರ್ಭದಲ್ಲಿ ಆದಾಗ ಸುಮ್ಮನೇ ಕಾಲಹರಣವಾಗುತ್ತದೆ.

**ಶ್ರೀ ಬಿ.ಕೆ.ಹರಿಪ್ರಸಾದ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ಸದನದ ನಿಯಮದಲ್ಲಿ ಹೇಳುತ್ತಿದ್ದಾರೆ ಅವರು ಯೀಲ್ಡ್ ಆಗುವುದಿಲ್ಲ ಎಂದು ಹೇಳಿ . (ಗೊಂದಲ)

**ಉಪ ಸಭಾಪತಿಯವರು**:- ನಾನು ಹೇಳುತ್ತಿರುವುದು ಸಲಹೆಗಳನ್ನು ಕೊಡಿ, ಈ ಸರ್ಕಾರ ಏನು ಮಾಡಬೇಕೆಂಬುದನ್ನು ಹೇಳಿ, ಅವರು ಮಾಡುತ್ತಾರೆ.

**ಶ್ರೀ ಬಿ.ಕೆ. ಹರಿಪ್ರಸಾದ್**:- ಈ ಸದನ ನಿಯಮದ ಪ್ರಕಾರ ನಡೆಯಬೇಕು (ಗೊಂದಲ)

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಉಪ ಸಭಾಪತಿಯವರು:-** ನಿಯಮದ ಪ್ರಕಾರವೇ ನಡೆಯುತ್ತಿದೆ. ಮಾನ್ಯ ಮರಿತಿಬ್ಬೇಗೌಡರು ಯೀಲ್ಡ್ ಆಗುವುದಿಲ್ಲ ಎಂದು ಹೇಳಿದರೂ ಈಗ ನೀವು ಎದ್ದು ನಿಂತಿದ್ದೀರಲ್ಲಾ? ಅವರು ಯೀಲ್ಡ್ ಆಗಿದ್ದಾರೆಯೇ? ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಬಿ.ಕೆ. ಹರಿಪ್ರಸಾದ್**:- ಒಂದು ಉದಾಹರಣೆ (ಗೊಂದಲ) ....

**ಉಪ ಸಭಾಪತಿಯವರು**:- ಇರಬಹುದು. ಯಾರೂ ಯೀಲ್ಡ್ ಆಗದಿದ್ದಾಗ ನೀವೂ ಏಳಬಾರದು, ಅವರೂ ಏಳಬಾರದು.

**ಶ್ರೀ ಬಿ.ಕೆ. ಹರಿಪ್ರಸಾದ್**:- ಮೊದಲೇ ಹೇಳಿದ್ದರೆ ಈ ಸ್ಥಿತಿ ಬರುತ್ತಿರಲಿಲ್ಲ.

**ಉಪ ಸಭಾಪತಿಯವರು**:- ಅವರು ಯೀಲ್ಡ್ ಆದರೆ ಮಾತ್ರ ಮಾತನಾಡಬಹುದು. ಈಗ ತಾವು ಕುಳಿತುಕೊಳ್ಳಿ. ಮಾನ್ಯ ಹರಿಪ್ರಸಾದ್‌ರವರೇ, ತಾವು ಹಿರಿಯರಿದ್ದೀರಿ ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಮರಿತಿಬ್ಬೇಗೌಡರೇ, ನೀವು ಮುಂದುವರೆಸಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಇದಕ್ಕೆ ಸೇರಿಸುವ ಒಂದು ಅಂಶವನ್ನು ಮರೆತುಬಿಟ್ಟೆ. ಬಿಜಾಪುರ, ಬಾಗಲಕೋಟೆ ಜಿಲ್ಲೆಗಳ ಕಡೆ ನಾನು ಅನೇಕ ಸಲ ಹೋಗಿದ್ದೆ. ಬೆಂಗಳೂರಿನಿಂದ ಬಿಜಾಪುರ ಜಿಲ್ಲೆಗೆ ಹೋಗಬೇಕಾದರೆ ಬಸ್‌ನಲ್ಲಾಗಲೀ, ಕಾರ್‌ನಲ್ಲಾಗಲೀ ಅಥವಾ ರೈಲಲ್ಲಾಗಲೀ 10 ರಿಂದ 12 ಗಂಟೆಗಳ ಪ್ರಯಾಣ ಇರುತ್ತದೆ. ಪ್ರಯಾಣಕ್ಕೆ ಇರುವ ಇಂತಹ ನರಕಯಾತನೆ ರಾಜ್ಯದ ಯಾವುದೇ ಭಾಗದಲ್ಲಿಲ್ಲ. ಹುಬ್ಬಳ್ಳಿಯಲ್ಲಿ ಹಾಗೂ ಬೆಳಗಾವಿಯಲ್ಲಿ 100 ಕಿ.ಮೀ ಹಂತಕ್ಕೆ ವಿಮಾನ ನಿಲ್ದಾಣವಿದೆ. ಅಲ್ಲಿ ಎಷ್ಟೊಂದು remote place. ಅಲ್ಲೊಂದು ವಿಮಾನ ನಿಲ್ದಾಣವನ್ನು ಮಾಡಿ. ಅಲ್ಲಿಗೆ.

**ಉಪ ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ಗುಲ್ಬರ್ಗಾದಲ್ಲಿ ಆಗಿದೆ.

**ಶ್ರೀ ಮುರುಗೇಶ್ ಆರ್. ನಿರಾಣಿ:-** ಮಾನ್ಯ ಮರಿತಿಬ್ಬೇಗೌಡರೇ, ನಿಮಗೆ ಮಾಹಿತಿ ಇಲ್ಲದಿದ್ದರೆ ಹೇಳಬೇಡಿ. ಬಾಗಲಕೋಟೆಯಲ್ಲಿ ವಿಮಾನ ನಿಲ್ದಾಣ ಇದೆ. ಬಿಜಾಪುರದಲ್ಲಿ ರೆಡಿಯಾಗಿದೆ ಅದು ಉದ್ಘಾಟನೆಗೆ ರೆಡಿ ಇದೆ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಚಿವರೇ, ಅದನ್ನು ಬೇಗ ಮಾಡಿ ಮುಗಿಸಿ. ಈಗ ಅಲ್ಲಿ ವಿಮಾನ ಇಳಿಯುತ್ತದೆಯೇ?

**ಶ್ರೀ ಮುರುಗೇಶ್ ಆರ್. ನಿರಾಣಿ:-** ಹೌದು. ಇನ್ನು ಸ್ವಲ್ಪ ದಿವಸದಲ್ಲಿಯೇ ಇಳಿಯುತ್ತದೆ.

**ಶ್ರೀ ಮರಿತಿಬ್ಬೇಗೌಡ:-** ಯಾವಾಗ ಎಂಬುದನ್ನು ತಿಳಿಸಿ.

(ಗೊಂದಲ)

**ಉಪ ಸಭಾಪತಿಯವರು**:- ಮಾನ್ಯ ಮರಿತಿಬ್ಬೇಗೌಡರೇ, . . .

**ಶ್ರೀ ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ಬಾಗಲಕೋಟೆ, ಬಿಜಾಪುರದ ರಸ್ತೆಗಳ ಬಗ್ಗೆ ಮಾತನಾಡುತ್ತಿದ್ದಾರೆ. ಇಲ್ಲಿ ನಮ್ಮ ವಿರೋಧಪಕ್ಷದ ನಾಯಕರಿದ್ದಾರೆ.

**ಶ್ರೀ ಮರಿತಿಬ್ಬೇಗೌಡ**:- ಹೇಳಿ, ನಾವು ಖುಷಿ ಪಡುತ್ತೇವೆ. ನಿಮಗೆ ಅಭಿನಂದನೆಗಳನ್ನು ಹೇಳುತ್ತೇವೆ.

**ಶ್ರೀ ಮುರುಗೇಶ್ ಆರ್. ನಿರಾಣಿ:-** ನಮ್ಮಲ್ಲಿರುವಂತಹ (ಗೊಂದಲ) ನಮ್ಮ ಕ್ಷೇತ್ರದಲ್ಲಿ ಹೇಳುತ್ತಿದ್ದೇನೆ. ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನಲ್ಲಿ ಈ ವರ್ಷ ಏಳು ರ್ಯಾಂಕ್ ಬಂದಿದೆ. ಕರ್ನಾಟಕ ರಾಜ್ಯದಲ್ಲಿ ಒಂದು ತಾಲ್ಲೂಕಿಗೆ ಏಳು ರ್ಯಾಂಕ್ ಬಂದಿದೆ. 625ಕ್ಕೆ 621, 623, 619 ಅಂಕಗಳು. ಏಳು ರ್ಯಾಂಕ್ ಇವೆಲ್ಲವೂ ಬಂದಿರುವುದು ಸರ್ಕಾರಿ ಶಾಲೆಯಲ್ಲಿ. ಅಲ್ಲಿರುವುದು ಅತ್ಯಂತ ಕಡುಬಡವರ ಮಕ್ಕಳು. ಶಿಕ್ಷಣದ ಬಗ್ಗೆ ಮಾತನಾಡಬಾರದು ಎಂದರೂ ಮಾತನಾಡಿದೆ. ಪ್ರತಿ 100 ಕಿ.ಮೀ.,ಗೆ ಇಡೀ ಕರ್ನಾಟಕದಲ್ಲಿ ವಿಮಾನ ನಿಲ್ದಾಣವನ್ನು ಮಾಡುತ್ತಿದ್ದೇವೆ. ತಪ್ಪು ಮೆಸೇಜ್ ಹೇಳಬೇಡಿ. ನಮ್ಮಲ್ಲಿರುವಂತಹ ರಸ್ತೆ; ಬೇಕಾದರೆ ನಾನು ನಿಮ್ಮ ಕ್ಷೇತ್ರಕ್ಕೇ ಬರುತ್ತೇನೆ. ನಿಮ್ಮ ಕ್ಷೇತ್ರಗಳಲ್ಲಿ ಅಡ್ಡಾಡಿದ್ದೇನೆ. ನಮ್ಮಲ್ಲಿರುವಂತಹ ಒಳ್ಳೆಯ ರಸ್ತೆಗಳು ನಿಮ್ಮಲ್ಲಿಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಮರಿತಿಬ್ಬೇಗೌಡ**:- ನೀವು ಮಾಡಿದ್ದರೆ ಅಭಿನಂದಿಸುತ್ತೇನೆ.

**ಶ್ರೀ ಮುರುಗೇಶ್ ಆರ್. ನಿರಾಣಿ:-** ತಪ್ಪು ಸಂದೇಶ ಹೋಗಬಾರದು.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಮರಿತಿಬ್ಬೇಗೌಡರೇ, ಎಲ್ಲಿ ಅಭಿನಂದಿಸುತ್ತೀರಿ?

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಮರಿತಿಬ್ಬೇಗೌಡ:-** ನೀವು ಮುಖ್ಯ ರಸ್ತೆಗಳನ್ನು ಹೇಳಬೇಡಿ. ನಾನು ಗ್ರಾಮಗಳ ಸಂಪರ್ಕ ರಸ್ತೆಗಳನ್ನು ಹೇಳುತ್ತಿದ್ದೇನೆ.

**ಶ್ರೀ ಮುರುಗೇಶ್ ಆರ್. ನಿರಾಣಿ**:- ಗ್ರಾಮಗಳ ಸಂಪರ್ಕ ರಸ್ತೆಗಳು ನಿಮಗಿಂತಲೂ ನಮ್ಮಲ್ಲಿ ಚೆನ್ನಾಗಿದೆ.

**ಶ್ರೀ ಮರಿತಿಬ್ಬೇಗೌಡ**:- ಹೌದಾ, ಉತ್ತರ ಕರ್ನಾಟಕದಲ್ಲಿ?

**ಶ್ರೀ ಮುರುಗೇಶ್ ಆರ್. ನಿರಾಣಿ:-** ಹೌದು.

**ಶ್ರೀ ಮರಿತಿಬ್ಬೇಗೌಡ:-** ಹಾಗಿದ್ದರೆ ಬಿಡಿ, ಆ ಜನರಿಗೆ ಗೊತ್ತಾಗುತ್ತದೆ.

**ಶ್ರೀ ಮುರುಗೇಶ್ ಆರ್. ನಿರಾಣಿ:-** ಮಾನ್ಯ ಮರಿತಿಬ್ಬೇಗೌಡರೇ, ನೀವು ಒಳ್ಳೆಯ ಸಲಹೆ ಕೊಡಿ. ನಾವು ಸ್ವೀಕಾರ ಮಾಡುತ್ತೇವೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಮರಿತಿಬ್ಬೇಗೌಡರೇ, ನೀವು ಉತ್ತರ ಕರ್ನಾಟಕದ ಯಾವ ಹಳ್ಳಿಗಳಿಗೆ ಹೋಗಿದ್ದೀರಿ?

(ಗೊಂದಲ)

**ಉಪ ಸಭಾಪತಿಯವರು**:- ಮಾನ್ಯ ಮರಿತಿಬ್ಬೇಗೌಡರೇ, . . .

(ಗೊಂದಲ)

**ಶ್ರೀ ಯು.ಬಿ.ವೆಂಕಟೇಶ್:-** ನೀವು ಯಾರು ಕೇಳುವುದಕ್ಕೆ?

(ಗೊಂದಲ)

**ಉಪ ಸಭಾಪತಿಯವರು**:- ಮಾನ್ಯ ವೆಂಕಟೇಶ್‌ರವರೇ ಒಂದು ನಿಮಿಷ; (ಗೊಂದಲ) ಮಾನ್ಯ ಮರಿತಿಬ್ಬೇಗೌಡರೇ, ಮಾಹಿತಿಯ ಆಧಾರದ ಮೇಲೆ ಮಾತನಾಡಿ (ಗೊಂದಲ) ಮಾಹಿತಿಗಳ ಆಧಾರವಿಲ್ಲದೇ ಮಾತನಾಡಿದಾಗ ಈ ಸಮಸ್ಯೆ ಬರುತ್ತದೆ. (ಗೊಂದಲ) ಮಾನ್ಯ ಮಂತ್ರಿಗಳು ಉಲ್ಲೇಖ ಮಾಡಿದರು. ಮಾಹಿತಿಯ ಆಧಾರದ ಮೇಲೆ ಮಾತನಾಡಿ ತೊಂದರೆಯಿಲ್ಲ.

**ಶ್ರೀ ಮರಿತಿಬ್ಬೇಗೌಡ**:- ನಾನು ಹೇಳಿದೆನಲ್ಲವೇ? ಅವರು ಮಾಡಿದ್ದೇವೆ ಎಂದು ಹೇಳಿದರೆ ನಾವು ಅವರನ್ನು ಅಭಿನಂದಿಸುತ್ತೇವೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನೀವು (ಗೊಂದಲ) ನಮಗೂ ಅವಕಾಶ ಕೊಡಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಉಪ ಸಭಾಪತಿಯವರು:-** ನೀವು ಮೊದಲೇ ಮಾಹಿತಿ ತೆಗೆದುಕೊಂಡು ಮಾತನಾಡಬೇಕು.

(ಗೊಂದಲ)

**ಉಪ ಸಭಾಪತಿಯವರು:-** ಮಾನ್ಯ ವೆಂಕಟೇಶ್‌ರವರೇ, ಅವರು ಮುಗಿಸಲಿ.

**ಶ್ರೀ ಯು.ಬಿ. ವೆಂಕಟೇಶ್**:- ನೀವು ಏತಕ್ಕೆ (ಗೊಂದಲ) ಮಾತನಾಡುವುದಕ್ಕೆ . . . . (ಗೊಂದಲ)

**ಉಪಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ಒಂದು ಗಂಟೆಯಾಯಿತು. ಈಗ ಅವರು ಮುಗಿಸಬೇಕು. ಇನ್ನೂ ಮಾತನಾಡುವುದಕ್ಕೆ ಸುಮಾರು ಜನರಿದ್ದಾರೆ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್(ವಿರೋಧಪಕ್ಷದ ನಾಯಕರು):-** ಮಾನ್ಯ ರವಿಕುಮಾರ್‌ರವರೇ, ಕುಳಿತುಕೊಳ್ಳಿ ಮಾನ್ಯ ಮರಿತಿಬ್ಬೇಗೌಡರು ಮಾತನಾಡಲಿ.

(ಗೊಂದಲ)

**ಶ್ರೀ ಯು.ಬಿ. ವೆಂಕಟೇಶ್**:- ಮಾನ್ಯ ರವಿಕುಮಾರ್‌ರವರೇ, (ಗೊಂದಲ) ಏನೂ ಬೇಡ ನೀವು ಯಾರು ಮಾತನಾಡುವುದಕ್ಕೆ? ಮಧ್ಯದಲ್ಲಿ ಮಾತನಾಡುವುದಕ್ಕೆ ನಮಗೂ ಅವಕಾಶ ಕೊಡಿ.

(ಗೊಂದಲ)

**ಶ್ರೀ ಎನ್. ರವಿಕುಮಾರ್:-** ಸದನಕ್ಕೆ ತಪ್ಪು ಮಾಹಿತಿ (ಗೊಂದಲ)

**ಉಪ ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ಮಾನ್ಯ ವೆಂಕಟೇಶ್‌ರವರೇ, ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಯು.ಬಿ. ವೆಂಕಟೇಶ್**:- ಮಾನ್ಯ ಸಭಾಪತಿಯವರೇ, ಅವರಿಗೆ ಮಾತ್ರ ಕೊಡುತ್ತೀರಿ ನಮಗೆ ಕೊಡುವುದಿಲ್ಲವೇ?

**ಉಪ ಸಭಾಪತಿಯವರು:-** ಅವರಿಗೂ ಹೇಳುತ್ತಿದ್ದೇನೆ, ನಿಮಗೂ ಹೇಳುತ್ತಿದ್ದೇನೆ. ಈಗ ಅವರು ಕುಳಿತಿದ್ದಾರಲ್ಲಾ ನೀವು ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರಿಗೊಂದು ನಿಯಮ ನಮಗೊಂದು ನಿಯಮವೇ?

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಉಪ ಸಭಾಪತಿಯವರು:-** ಈಗ ಅವರನ್ನು ಕೂರಿಸಿಲ್ಲವೇ? ಮಾನ್ಯ ವೆಂಕಟೇಶ್ ರವರೇ, ಕುಳಿತುಕೊಳ್ಳಿ ಎಲ್ಲರಿಗೂ ಒಂದೇ ನಿಯಮ. ಬೇರೆ ನಿಯಮಗಳಿಲ್ಲ. ಸದನದೊಳಗೆ ಎಲ್ಲರಿಗೂ ಒಂದೇ ನಿಯಮವಿದೆ. ಮಾನ್ಯ ಮರಿತಿಬ್ಬೇಗೌಡರೇ, ದಯವಿಟ್ಟು ಯೀಲ್ಡ್ ಆಗಬೇಡಿ, ಮಾತನಾಡಿ. ಈಗಾಗಲೇ ತಾವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ಒಂದು ಗಂಟೆಯಾಗುತ್ತಾ ಬಂದಿದೆ. ದಯಮಾಡಿ ಒಂದು ಗಂಟೆ ಆದಮೇಲೆ ಮಾತನಾಡುವುದನ್ನು ನಿಲ್ಲಿಸಿ.

(ಮುಂದು)

(1231) 21-12-2021 KH/GR 6-30 **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆಯಿತು. ಆದರೆ, ನಾನು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ಇನ್ನು ಒಂದು ಗಂಟೆಯಾಗಿಲ್ಲ.

**ಉಪ ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೇ, ಆಯಿತು. ಈಗ ಮಾತನಾಡಿ. ತಾವು ಸರಿಯಾಗಿ 5 ಗಂಟೆ 40 ನಿಮಿಷಕ್ಕೆ ಪ್ರಾರಂಭ ಮಾಡಿದ್ದೀರಿ. ಈಗ 6 ಗಂಟೆ 30 ನಿಮಿಷ ಆಗಿದೆ. ತಾವೇ ನೋಡಿ. ನಾನು ಇದನ್ನು ನೋಟ್ ಮಾಡಿ ಬರೆದಿಟ್ಟಿದ್ದೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ತಾವು ಏನು ಸಮಯ ಕೊಡುತ್ತೀರೋ, ಆ ಸಮಯದಲ್ಲಿ ಮಾತನಾಡಿ ಮುಗಿಸುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೇ, ತಾವೇ ಒಂದು ಗಂಟೆ ಎಂದು ಹೇಳಿರುವಂತಹದ್ದು.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, . . .

**ಉಪ ಸಭಾಪತಿಯವರು:-** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ, ಕುಳಿತುಕೊಳ್ಳಿ. ತಮಗೆ ಮಾತನಾಡುವುದಕ್ಕೆ ಅವಕಾಶ ಬೇಕೋ, ಬೇಡವೋ ಹೇಳಿ. ಮಾನ್ಯ ಮರಿತಿಬ್ಬೇಗೌಡರವರೇ ತಾವು ಮಾತನಾಡಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಇವತ್ತು ಈ ಸರ್ಕಾರದ ಮುಖ್ಯಮಂತ್ರಿಯವರು ಈ ಭಾಗದವರಾಗಿದ್ದಾರೆ. ಸಂತೋಷ. ಇವತ್ತು ಕೈಗಾರಿಕಾ ಸಚಿವರು ಈ ಭಾಗದವರು ಇದ್ದಾರೆ. ಕೃಷಿ ಸಚಿವರು ಈ ಭಾಗದವರು ಇದ್ದಾರೆ. ನೀರಾವರಿ ಸಚಿವರು ಈ ಭಾಗದವರು ಇದ್ದಾರೆ. ಹಾಗೆಯೇ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳು ಈ ಭಾಗದವರು ಇದ್ದಾರೆ. ಎಂತೆಂತಹ ಪ್ರಮುಖ ಖಾತೆಗಳನ್ನು ವಹಿಸಿಕೊಂಡಿರುವಂತಹವರು ಈ ಭಾಗದ ಸಚಿವರುಗಳಾಗಿದ್ದಾರೆ. ಕಾಂಗ್ರೆಸ್ ಮತ್ತು ಜನತಾ ದಳ ಪಕ್ಷದವರು ಈ ಭಾಗದ ಅಭಿವೃದ್ಧಿಗೆ ಏನು ಮಾಡಲಿಲ್ಲ ಎಂದು ಹೇಳುವಂತಹವರು, ಇವತ್ತು ಡಬಲ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಂಜಿನ್ ಸರ್ಕಾರ ಹೊಂದಿರುವಂತಹವರು, 25 ಮಂದಿ ಪಾರ್ಲಿಮೆಂಟ್ ಸದಸ್ಯರಿರುವಂತಹವರು, ಕೋವಿಡ್-19ರ ಸಂದರ್ಭದಲ್ಲಿ ಈ ನಾಡಿನಲ್ಲಿ ಸಾವಿರಾರು ಮಂದಿ ಸತ್ತು ಹೋದರು. ಜೀವವನ್ನು ಕಳೆದುಕೊಂಡರು ಮತ್ತು ಅತಿವೃಷ್ಠಿ ಬಂದಾಗ ಸಾಕಷ್ಟು ಜಾನುವಾರುಗಳು ಸತ್ತು ಹೋದವು, ಪ್ರಾಣ ಹಾನಿಯಾಯಿತು, ಸಾಕಷ್ಟು ಬೆಳೆ ನಷ್ಟವಾಯಿತು, ಸಾಕಷ್ಟು ಜನ ಜೀವನ ಕಳೆದುಕೊಂಡರು. ಕೋವಿಡ್-19 ನಿಂದ ಪ್ರಾಣ ಹಾನಿಯಾಯಿತು. ಇಂತಹದೆಲ್ಲಾ ಭೀಕರ ಸಂದರ್ಭದಲ್ಲಿಯೂ ಸಹ 25 ಮಂದಿ ಲೋಕಸಭಾ ಸದಸ್ಯರು ಮತ್ತು ಈ ಪಕ್ಷದವರು ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿ, ನಮ್ಮ ರಾಜ್ಯಕ್ಕೆ ಈ ರೀತಿ ಆಗಬೇಕು, ಜನಜೀವನ ಈ ರೀತಿ ತೊಂದರೆಯಲ್ಲಿ ಇದೆ. ಅದರಲ್ಲೂ ಈ ಭಾಗದ ಜನ ಬಹಳ ತೊಂದರೆಯಲ್ಲಿದ್ದಾರೆ. ಒಂದಷ್ಟು ಹಣ ಕೊಡಿ ಎಂದು ಕೇಳುವಂತಹ ಸೌಜನ್ಯತೆಯನ್ನೇ ಮರೆಯಲಿಲ್ಲ ಎಂದ ಮೇಲೆ ಇಂತಹ ಖಾತೆ ಮಂತ್ರಿಗಳೆಲ್ಲಾ ಇಲ್ಲಿ ಇದ್ದುಕೊಂಡು, ಇನ್ನೇನು ಇವರ ಅವಧಿ ಸವೆಯುತ್ತಾ ಬಂದಿದೆ. ಇನ್ನು ಒಂದು ವರ್ಷಕ್ಕೆ ಸಾರ್ವತ್ರಿಕ ಚುನಾವಣೆ ಇದೆ. ಈ ರಾಜ್ಯದಲ್ಲಿ ಈಗ ಐದೈದು ವರ್ಷಗಳ ಎರಡು ಅವಧಿಯಾಯಿತು ಮತ್ತು ಕೇಂದ್ರದಲ್ಲಿ ಎಂಟು ವರ್ಷಗಳಾಯಿತು. ಇದು ಡಬಲ್ ಇಂಜಿನ್ ಸರ್ಕಾರ. ಎಂಟು ವರ್ಷಗಳಲ್ಲಿ ಮಾಡದೇ ಇರುವಂತಹ ಈ ಭಾಗದ ಅಭಿವೃದ್ಧಿಯನ್ನು ಈಗ ಇರುವಂತಹ ಒಂದು ವರ್ಷದಲ್ಲಿ ಏನು ಮಾಡುತ್ತಾರೆ? ಈ ಸರ್ಕಾರಗಳಿಂದ ಜನರಿಗೆ ಎಷ್ಟು ಮೋಸ ಮತ್ತು ವಂಚನೆಯಾಗುತ್ತಿದೆ? ಜನರಿಂದ ಮತ ತೆಗೆದುಕೊಂಡು ಈ ಭಾಗದ ಅಭಿವೃದ್ಧಿ ಮಾಡುತ್ತೇವೆ ಎಂದು ಈ ಬಿ.ಜೆ.ಪಿ., ಸರ್ಕಾರ ಪ್ರಧಾನ ಮಂತ್ರಿಯವರ ಎದುರುಗಡೆ ನಿಂತುಕೊಂಡು ಉಸಿರು ಬಿಡುವಷ್ಟು ಚೈತನ್ಯ ಇಲ್ಲದೇ ಇರುವಂತಹ 25 ಮಂದಿ ಲೋಕಸಭಾ ಸದಸ್ಯರು ಮತ್ತು ಪ್ರಭಾವಿ ಸಚಿವರು ಈ ಭಾಗದಲ್ಲಿ ಇದ್ದಾರೆ. ಇದನ್ನು ಮಾಡಿ ತೋರಿಸಲಿ. ಹೆಜ್ಜೆ ಗುರುತು ಇಡಲಿ. ಈ ಭಾಗದ ಜನರ ಸಂಕಷ್ಟಕ್ಕೆ ನೆರವಾಗಲಿ.

**ಉಪ ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೇ, ತಾವು conclude ಮಾಡಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಆಗ ಇವರೆಲ್ಲರಿಗೂ ಅಭಿನಂದಿಸುತ್ತೇನೆ. ಸಾರ್ವತ್ರಿಕವಾಗಿ ನಾನು ಇವರನ್ನೆಲ್ಲಾ ಅಭಿನಂದಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕೇಳಿ . . .

**ಉಪ ಸಭಾಪತಿಯವರು:-** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ಅವರು ಮಾತನಾಡುವುದನ್ನು ಮುಗಿಸಲಿ ಬಿಡಿ. ಮಾನ್ಯ ಮರಿತಿಬ್ಬೇಗೌಡರವರೇ, . . .

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಇದುವರೆಗೂ ಆಳಿದಂತಹ ಸರ್ಕಾರಗಳು ಈ ಭಾಗದ ಜನರಿಗೆ ಹೊಸ ಹೊಸ ಯೋಜನೆಗಳಲ್ಲಿ 4-6 ಯೋಜನೆಗಳನ್ನು ತಂದು ಅದನ್ನು ಮಾಡಿ ತೋರಿಸಲಿ. ಆ ದಿವಸ ನಾನೇ ಇವರಿಗೆ ಅಭಿನಂದಿಸುತ್ತೇನೆ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಉಪ ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೇ, ನಿಧಾನವಾಗಿ ಮಾತನಾಡಿ. Excite ಆಗಬೇಡಿ. ಸುಲಭವಾಗಿ ಮಾತನಾಡಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಇವರು ಮಾಡಿದ್ದೇವೆ ಮಾಡಿದ್ದೇವೆ ಎಂದು ಹೇಳುತ್ತಾರೆ. ದಯವಿಟ್ಟು ಇವತ್ತು ಈ ಸದನದಲ್ಲಿ ಏನು ಚರ್ಚೆಯಾಗಿದೆ? ಅದನ್ನು ತಾವು ಮಾಡಿ ತೋರಿಸಿ. ತಾವು ಈ ಭಾಗದ ಅಭಿವೃದ್ಧಿಗೋಸ್ಕರ ಇಂತಿಂಥಹ ಯೋಜನೆಗಳಿಗೆ ವಿಶೇಷವಾಗಿ ನಾವು ಅನುದಾನ ಕೊಡುತ್ತಿದ್ದೇವೆ ಎಂದು ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಈ ಸದನದಲ್ಲಿ ಹೇಳಿಸಿ. ಬಜೆಟೇತರವಾಗಿ ನಾವು ಇಷ್ಟು ಅನುದಾನ ಕೊಡುತ್ತಿದ್ದೇವೆ ಎಂದು ಅವರು ಹೇಳಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಮರಿತಿಬ್ಬೇಗೌಡರವರೇ, ಸುಮ್ಮನೆ ಆರ್ಭಟ ಮಾಡುವುದಲ್ಲ. ಸ್ವಲ್ಪ ಕೇಳಿ. ತಾವು ಮಾತನಾಡುವುದು ಕೇಳಬೇಕಲ್ಲವೇ?

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೇ, ತಾವು excite ಆಗಬೇಡಿ. ಅದನ್ನು ಕೂಲ್ ಆಗಿಯೇ ಹೇಳಿ. ಉದ್ವೇಗಕ್ಕೆ ಒಳಗಾಗಬೇಡಿ. ಕೂಲ್ ಆಗಿಯೇ ಇರಿ. ತಾವು ಹೇಳಬೇಕೆನ್ನುವುದನ್ನು ಕೂಲ್ ಆಗಿಯೇ ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಮರಿತಿಬ್ಬೇಗೌಡರವರೇ, ತಾವು ಆರ್ಭಟ ಮಾಡಬಾರದು. ನಾವೆಲ್ಲಾ ತಮ್ಮ ಸ್ನೇಹಿತರಲ್ಲವೇ, ಸ್ವಲ್ಪ ನಾವು ಹೇಳುವುದನ್ನು ಕೇಳಿ. ತಾವು ಸ್ವಲ್ಪ ನೀರು ಕುಡಿದು ಮಾತನಾಡಿ. ಈಗ ನಾನು ಮಾತನಾಡಬಹುದೇ?

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಯೀಲ್ಡ್ ಆಗಿಲ್ಲ.

**ಉಪ ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೇ, ತಾವು ಕೂಲ್ ಆಗಿ ಮಾತನಾಡಿ. ಮೈಕ್ ಇದೆ. ತಾವು ಹೇಳುವುದು ಕೇಳುತ್ತಿದೆ. ತಾವು ಒಂದು ನಿಮಿಷ ರಿಲಾಕ್ಸ್ ಮಾಡಿ ಮಾತನಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಮರಿತಿಬ್ಬೇಗೌಡರವರೇ, ತಾವೇ ಮಾತನಾಡಿ ನಮಗೆ ಅಡ್ಡಿ ಇಲ್ಲ. ತಮ್ಮನ್ನು ಸ್ವಲ್ಪ ಸಮಾಧಾನಪಡಿಸುವುದು ಬಿಟ್ಟರೆ ಬೇರೆ ಏನೂ ಇಲ್ಲ. **(ಗೊಂದಲ)** ಬೇಕಾದರೆ ಇನ್ನು 5 ನಿಮಿಷ ಜಾಸ್ತಿ ತೆಗೆದುಕೊಳ್ಳಿ. ಸುಮ್ಮನೆ ಆರ್ಭಟ ಏಕೆ?

**ಉಪ ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೇ, ತಾವು ರಿಲಾಕ್ಸ್ ಮಾಡಿ. ಮತ್ತೆ 5 ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. Excite ಆಗಬೇಡಿ. ತಮ್ಮ ಮಾತನ್ನು ಮುಂದುವರೆಸಿ. ಕೂಲ್ ಆಗಿ ಮಾತನಾಡಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಅಗತ್ಯ ಏನಿಲ್ಲ?

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರವರು ಇನ್ನು ಒಂದು ಗ್ಲಾಸ್ ನೀರನ್ನು ಕುಡಿಯಲಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಘನ ಸರ್ಕಾರದಲ್ಲಿ ವಿನಂತಿ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಯವರಾದ ಬಸವರಾಜ ಬೊಮ್ಮಾಯಿಯವರ ಬಗ್ಗೆ ನನ್ನಗೆ ಬಹಳ ವಿಶ್ವಾಸ ಇದೆ. ಹಾಗೆಯೇ ಮಾಜಿ ಮುಖ್ಯಮಂತ್ರಿಯವರಾದ ಬಿ.ಎಸ್.ಯಡಿಯೂರಪ್ಪನವರ ಬಗ್ಗೆಯೂ ಸಹ ನನಗೆ ವಿಶ್ವಾಸ ಇತ್ತು. ತಮ್ಮಗಳ ಬಗ್ಗೆಯೂ ಕೂಡ ನನಗೆ ಬಹಳ ವಿಶ್ವಾಸ ಇದೆ. ಆದರೆ, ಈಗ ತಮ್ಮ ಸರ್ಕಾರಗಳಿಗೆ ವಾಯಿದೆ ಮುಗಿದು ಹೋಗಿದೆ. ನಾವು ನೀವು ಏನು ಮಾಡುವುದಕ್ಕೆ ಆಗುವುದಿಲ್ಲ? ಇನ್ನು ಒಂದು ವರ್ಷದಲ್ಲಿ ನಾವು ಚುನಾವಣೆಗೆ ಹೋಗುತ್ತಿದ್ದೇವೆ. ಈಗಾಗಲೇ ವಾಯಿದೆ ಮುಗಿದು ಹೋಗಿದೆ. ಕಳೆದ ಎಂಟು ವರ್ಷಗಳಲ್ಲಿಯೇ ತಾವೇನು ಸಾಧಿಸುವುದಕ್ಕೆ ಆಗಲಿಲ್ಲ? ಆದರೆ, ಈಗ ಇರುವಷ್ಟು ಅವಧಿಯಲ್ಲಾದರೂ ಕೂಡ ಇಂತಹ ಪ್ರಮುಖ ಖಾತೆಗಳನ್ನು ಹೊಂದಿರುವಂತಹ ತಾವುಗಳು ಈ ಭಾಗದಲ್ಲಿರುವುದರಿಂದ, ಈ ಭಾಗದ ನೊಂದ ಜೀವಗಳಿಗೆ, ನೊಂದ ಜನರಿಗೆ ಆರ್ಥಿಕವಾಗಿ ಹಿಂದುಳಿದಿರುವಂತಹವರನ್ನು ಸಬಲೀಕರಣ ಮಾಡುವುದಕ್ಕೆ ಶಿಕ್ಷಣ ಇಲಾಖೆ, ಕೈಗಾರಿಕಾ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಪಂಚಾಯತ್ ರಾಜ್ ಇಲಾಖೆಯಲ್ಲಿ ತಾವು ಹೊಸ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಮಾಡಿ, ಇದಕ್ಕೆ ಎಷ್ಟೆಷ್ಟು ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಅನ್ನು ಈ ಭಾಗದ ಹಿಂದುಳಿದವರಿಗೆ ನಾವು ಕೊಡುತ್ತಿದ್ದೇವೆ ಎನ್ನುವಂತಹದನ್ನು ಈ ಸದನದಲ್ಲಿಯೇ ಘೋಷಣೆ ಮಾಡಿ. ಆಗ ನಾವು ತಮ್ಮನ್ನು ಪ್ರೀತಿಯಿಂದ ಅಪ್ಪಿಕೊಂಡು ಅಭಿನಂದಿಸುತ್ತೇವೆ. ಅದನ್ನು ಬಿಟ್ಟು ಸುಮ್ಮನೆ ಏನೋ ಒಂದು ಕಾಟಾಚಾರಕ್ಕೆ ಉತ್ತರ ಕೊಟ್ಟು ಹೋಗಬೇಡಿ ಎಂದು ಹೇಳಿ ಅವಕಾಶ ಕೊಟ್ಟಿದ್ದಕ್ಕಾಗಿ ನನ್ನ ಮಾತುಗಳನ್ನು . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, . . .

**ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಕೇವಲ ಒಂದು ನಿಮಿಷ.

**ಉಪ ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ, ತಾವು ಮಾತನಾಡಿದರೆ, ಅವರು ಮತ್ತೆ ಮಾತನಾಡುವುದನ್ನು ಮುಂದುವರೆಸುತ್ತಾರೆ. ಈಗಾಗಲೇ ಅವರು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ಒಂದು ಗಂಟೆಯಾಯಿತು. ನಾನು ಮುಗಿಸುವುದಕ್ಕೆ ಹೇಳಿದ್ದೇನೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ||ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರವರನ್ನು ಅಪ್ಪಿಕೊಂಡರೆ ಧೃತರಾಷ್ಟ್ರ ಭೀಮನನ್ನು ಅಪ್ಪಿಕೊಂಡಂತಾಗುತ್ತದೆ.

**ಉಪ ಸಭಾಪತಿಯವರು:-** ಮಾನ್ಯ ವೈ.ಎ.ನಾರಾಯಣಸ್ವಾಮಿಯವರೇ ಮತ್ತು ಮಾನ್ಯ ಎನ್.ರವಿಕುಮಾರ್‌ರವರೇ, ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರವರ್ರು ಯೀಲ್ಡ್ ಆಗಿದ್ದಾರೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಅವರು ಯೀಲ್ಡ್ ಆಗಿಲ್ಲ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ...

**ಉಪ ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೇ, ಇನ್ನು ಎರಡು ನಿಮಿಷಗಳು ಅಷ್ಟೇ. ಅಲ್ಲಿಗೆ ಸರಿಯಾಗಿ ಒಂದು ಗಂಟೆಯಾಗುತ್ತದೆ. ಅಲ್ಲಿಗೆ ತಾವು ಮಾತನಾಡುವುದನ್ನು ಮುಕ್ತಾಯ ಮಾಡಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾವೆಲ್ಲಾ ವಿರೋಧ ಪಕ್ಷದಲ್ಲಿದ್ದುಕೊಂಡು ನಾವು ಈ ಭಾಗದ ಬಡವರ, ದೀನದಲಿತರ, ಆರ್ಥಿಕವಾಗಿ ಹಿಂದುಳಿದವರಿಗೆ, ದಿಕ್ಕಿಲ್ಲದವರಿಗೆ ಕೆಲವು ಕಾರ್ಯಕ್ರಮಗಳನ್ನು ಮತ್ತು ಯೋಜನೆಗಳನ್ನು ಕೊಡಬೇಕೆಂದು ಸರ್ಕಾರದ ಮುಂದೆ ಬೆಳಕು ಚೆಲ್ಲುವಂತಹ ಕೆಲಸವನ್ನು ಮಾಡಿದ್ದೇವೆ. ಇದಕ್ಕೆ ಉತ್ತರ ಕೊಡುವಂತಹ ಸಂದರ್ಭದಲ್ಲಿ ಸರ್ಕಾರ ಕಟುಬದ್ಧವಾಗಿ ಈ ಸದನದಲ್ಲಿ ಯಾವ ಯಾವ ಯೋಜನೆಗಳ ಬಗ್ಗೆ ಚರ್ಚೆಯಾಗಿದೆ, ಆ ಯೋಜನೆಗಳಿಗೆ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡುತ್ತೇವೆ, ಏನೇನು ಹೊಸ ಕಾರ್ಯಕ್ರಮಗಳನ್ನು ಹಾಕಿ ಕೊಡುತ್ತೇವೆ ಎನ್ನುವಂತಹದ್ದನ್ನು ಘೋಷಣೆ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ಆ ರೀತಿ ಏನಾದರೂ ಮಾಡದೇ ಹೋದರೆ ಇದು ನಿಜಕ್ಕೂ ಕೂಡ ಈ ಸರ್ಕಾರಕ್ಕೆ, ಈ ಭಾಗದ ಬಡವರಿಗೆ, ಹಿಂದುಳಿದವರಿಗೆ, ಈ ಭಾಗದ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಈ ಸರ್ಕಾರಕ್ಕೆ ಬದ್ಧತೆ ಇಲ್ಲ ಎನ್ನುವುದನ್ನು ಜನಸಾಮಾನ್ಯರು ಅರ್ಥಮಾಡಿಕೊಳ್ಳುತ್ತಾರೆ ಎನ್ನುವಂತಹ ಮಾತನ್ನು ಹೇಳುತ್ತಾ, ದಯಮಾಡಿ ಈ ಚರ್ಚೆಗೆ ಸ್ವಲ್ಪ ಕಿಮ್ಮತ್ತು ಸಿಗುವಂತೆ ಇವರು ಕೂಡ ಈ ಭಾಗದ ಜನರ ಕಣ್ಣೀರು ಒರೆಸುವಂತಹ ಕಾರ್ಯಕ್ರಮಗಳನ್ನು ಘೋಷಣೆ ಮಾಡಲಿ ಎಂದು ತಮ್ಮ ಮೂಲಕ ವಿನಂತಿ ಮಾಡಿ, ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ತಿಳಿಸಿ, ನನ್ನ ಎರಡು ಮಾತುಗಳಿಗೆ ವಿರಾಮ ಕೊಡುತ್ತೇನೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಮೆಚ್ಚಿಸುವಂತಹ ಭಾಷಣ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಉಪ ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ, ಕೌಂಟರ್ ಮಾಡಬೇಡಿ. ಮಾನ್ಯ ಮರಿತಿಬ್ಬೇಗೌಡರವರು ಮತ್ತೆ ಮಾತನಾಡುವುದಕ್ಕೆ ಪ್ರಾರಂಭ ಮಾಡುತ್ತಾರೆ. ಅವರು ಮಾತನಾಡುವುದನ್ನು ಮುಗಿಸಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾನು ಒಂದು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ಏನಾದರೂ ಸ್ಪಷ್ಟೀಕರಣ ಇದ್ದರೆ ಹೇಳಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಮರಿತಿಬ್ಬೇಗೌಡರವರಿಗೆ ಕಾಂಗ್ರೆಸ್‌ನವರು ಚಪ್ಪಾಳೆಯನ್ನೇ ತಟ್ಟಲಿಲ್ಲ.

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಮೇಜನ್ನು ತಟ್ಟಿದರು)**

**ಉಪ ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ, ಒಂದು ನಿಮಿಷ. ಈಗ ಮಾನ್ಯ ಮಂತ್ರಿಗಳು ಮಾತನಾಡುತ್ತಾರೆ.

**ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವರು):-** ಮಾನ್ಯ ಸಭಾಪತಿಯವರೇ, ನಮಗೆ ಸ್ವಾತಂತ್ರ್ಯ ದೊರೆತು 75 ವರ್ಷಗಳಲ್ಲಿ ಅತಿ ಹೆಚ್ಚಿನ ಅವಧಿಯನ್ನು ಕಾಂಗ್ರೆಸ್‌ನವರೇ ಆಳ್ವಿಕೆ ಮಾಡಿಕೊಳ್ಳುತ್ತಾ ಬಂದಿದ್ದಾರೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, . . .

**ಉಪ ಸಭಾಪತಿಯವರು:-** ಮಾನ್ಯ ಯು.ಬಿ.ವೆಂಕಟೇಶ್‌ರವರೇ, ಒಂದು ನಿಮಿಷ. ನಾನು ಮಂತ್ರಿಗಳಿಗೆ ಅವಕಾಶ ಕೊಟ್ಟಿದ್ದೇನೆ. ಅವರು ಮಾತನಾಡಲಿ.

**ಶ್ರೀ ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, ಈ ಎಲ್ಲಾ ಸರ್ಕಾರದಲ್ಲಿಯೂ ಸಹ ಅಭಿವೃದ್ಧಿಯಾಗುತ್ತಾ ಬಂದಿದೆ. ಇವತ್ತು ಬಿಜೆಪಿ ಸರ್ಕಾರದಲ್ಲಿ, ಡಬಲ್ ಇಂಜಿನ್ ಸರ್ಕಾರದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದಲ್ಲಿ ಯಾವುದೇ ರೀತಿಯಲ್ಲಿ ಅಭಿವೃದ್ಧಿಯಾಗುತ್ತಿಲ್ಲ ಎನ್ನುವುದನ್ನು ತಾವೇ ವಿಚಾರ ಮಾಡಿ ಹೇಳುತ್ತಿದ್ದೀರಿ. ಅದು ನೂರಕ್ಕೆ ನೂರರಷ್ಟು ಸುಳ್ಳು. ನಾನು ಇದಕ್ಕೆ ಉದಾಹರಣೆಯನ್ನು ಕೊಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, . . .

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಉಪ ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೇ, ಇದು ರಿಪ್ಲೈ ಅಲ್ಲ. ಮಾನ್ಯ ಮಂತ್ರಿಗಳಿಗೆ ಅವಕಾಶ ಕೊಟ್ಟಿದ್ದೇನೆ. ಅವರು ಮಾತನಾಡುತ್ತಿದ್ದಾರೆ. ತಾವು ಮಾತನಾಡುವುದು ಮುಗಿದಿದೆ. ಈಗ ಬೇರೆಯವರು ಮಾತನಾಡಲಿ.

**ಶ್ರೀ ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, ತಾವು ಬೆಂಗಳೂರು ಕಡೆ ಕುಳಿತುಕೊಂಡು ಉತ್ತರ ಕರ್ನಾಟಕ ಎಂದ ತಕ್ಷಣವೇ ಬಹಳ ಹಿಂದುಳಿದ ಭಾಗ ಎಂದು ತಾವೇನು ಬಿಂಬಿಸುತ್ತಿದ್ದೀರಿ. ನಾವು ಇನ್ನು ಬಹಳಷ್ಟು ಅಭಿವೃದ್ಧಿ ಮತ್ತು ಸುಧಾರಣೆಯಾಗಬೇಕಾಗಿದೆ. ಮೊದಲು ತಾವು ಸುಮಾರು 50-60 ವರ್ಷಗಳು ರಾಜಕಾರಣ ಮಾಡಿದ್ದೀರಿ. ಇಲ್ಲಿ ಸರ್ಕಾರ ನಡೆಸಿದ್ದೀರಿ. ಆ ಭಾಗದಲ್ಲಿ ಅಭಿವೃದ್ಧಿ ಆಗಿದೆ. ಇವತ್ತು ನಮ್ಮ ಹೊಸ ಸರ್ಕಾರ ಬಂದ ಮೇಲೆ ತಮ್ಮಷ್ಟೂ ಜನರನ್ನು ನಮ್ಮ ಏರಿಯಾಗೆ ಕರೆದುಕೊಂಡು ಹೋಗುತ್ತೇನೆ. ಉದಾಹರಣೆಗಾಗಿ ನನ್ನ ಒಂದೇ ಕ್ಷೇತ್ರದ ಬಗ್ಗೆ ಹೇಳುತ್ತೇನೆ. ಒಂದು ವಿಧಾನಸಭಾ ಕ್ಷೇತ್ರದಲ್ಲಿ 7 rank ಬಂದಿದೆ. ಹನ್ನೆರಡು 220 KV ಸ್ಟೇಷನ್‌ಗಳನ್ನು ವಿರೋಧ ಪಕ್ಷದ ನಾಯಕರ ಊರಿನಲ್ಲಿಯೇ ಮಾಡುತ್ತಿದ್ದೇವೆ. ಒಂದೊಂದು ಜಿಲ್ಲಾ ಪಂಚಾಯಿತಿಗೆ 110 KV ಸ್ಟೇಷನ್ ಅನ್ನು 270 ಕೋಟಿ ರೂಪಾಯಿಗಳಲ್ಲಿ ಮಾಡುತ್ತಿದ್ದೇವೆ. ನಾನು ಒಂದು ತಾಲ್ಲೂಕಿನ ಬಗ್ಗೆ ಮಾತ್ರ ಮಾತನಾಡುತ್ತಿದ್ದೇನೆ. ಒಂದು ಲಕ್ಷ 25 ಸಾವಿರ ಎಕರೆ ಜಮೀನಿಗೆ ಹೊಸ ನೀರಾವರಿ ಯೋಜನೆಯನ್ನು ಮಾಡುತ್ತಿದ್ದೇವೆ. ಎರಡು Bridge-cum-barrage ಕಟ್ಟಿಸುತ್ತಿದ್ದೇವೆ. ಆಮೇಲೆ ಎಲ್ಲಾ ಕೆರೆಗಳನ್ನು ತುಂಬಿಸುವಂತಹ ಯೋಜನೆಯನ್ನು ಮಾಡುತ್ತಿದ್ದೇವೆ. ರಸ್ತೆಗಳನ್ನು ತಾವು ನೋಡಿದರೆ ನಂಬುವುದಿಲ್ಲ. ಆ ರೀತಿಯ ರಸ್ತೆಗಳನ್ನು ಅಭಿವೃದ್ಧಿಪಡಿಸುತ್ತಿದ್ದೇವೆ. ಮೊದಲಿಗಿಂತಲೂ ನಮ್ಮ ಹೊಸ ಸರ್ಕಾರ ಬಂದ ಮೇಲೆ ಆಗಿದೆ. ಬೇರೆ ಬೇರೆ ನದಿಗಳನ್ನು lift ಮಾಡಿಕೊಂಡು ಹೊಸ ನೀರಾವರಿ ಯೋಜನೆಯನ್ನು ಮಾಡುವಂತಹದ್ದಾಗಿದೆ. ಇದರಲ್ಲಿ ಏನಾಗಿದೆಯೆಂದರೆ, ನಮ್ಮ ಸರ್ಕಾರ ಎರಡು ಕಡೆ ಬಂದಿರುವುದರಿಂದ, ಅವರ ಕಲ್ಪನೆ ಏನಿದೆ, ನೇರವಾಗಿ ವಿಮಾನ ನಿಲ್ದಾಣದಿಂದ ಬೆಳಗಾವಿ ಅಥವಾ ಹುಬ್ಬಳ್ಳಿಗೆ ಬರುತ್ತಾರೆ. ಇಲ್ಲಿಂದಲೇ ವಾಪಸ್ಸು ಹೋಗುತ್ತಾರೆ.

(ಮುಂದು)

**(1232) ಎಸ್‌ಪಿಆರ್/ಎಂಡಿ 6:40 21/12/2021** **(ಉಪಸಭಾಪತಿಯವರ ಉಪಸ್ಥಿತಿ)**

**ಶ್ರೀ ಮುರುಗೇಶ್ ಆರ್.ನಿರಾಣಿ (ಮುಂದು):-**

ಕಳೆದ ಒಂದು ದಶಕದಲ್ಲಿ ಏನು ಅಭಿವೃದ್ಧಿಯಾಗಿದೆ ಹಾಗೂ ಅದರ ಹಿಂದೆ ಯಾವ ಅಭಿವೃದ್ಧಿಯಾಗಿತ್ತು ಎನ್ನುವ ಎರಡೂ ಅಂಶಗಳನ್ನು ತುಲನೆ ಮಾಡಿ ನೋಡಿದಾಗ, ನಮ್ಮ ಸರ್ಕಾರದ ಆಡಳಿತದಲ್ಲಿ ಸಾಕಷ್ಟು ಅಭಿವೃದ್ಧಿಯಾಗುತ್ತಿದೆ. 'ಕಾಮಾಲೆ ಕಣ್ಣಿಗೆ ಲೋಕವೆಲ್ಲಾ ಹಳದಿ' ಎನ್ನುವ ನಾಣ್ಣುಡಿಯಂತೆ, ಶ್ರೀ ಮರಿತಿಬ್ಬೇಗೌಡರು ಮಾತನಾಡಿದಂತೆ, ಪರಿಸ್ಥಿತಿಗಳಿಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಉಪ ಸಭಾಪತಿಯವರು:-** ಬಾಕಿ ಉಳಿದಿರುವುದನ್ನೆಲ್ಲವನ್ನೂ ಶೀಘ್ರವಾಗಿ ಪೂರ್ಣಗೊಳಿಸಿ.

**ಶ್ರೀ ಮುರುಗೇಶ್ ಆರ್. ನಿರಾಣಿ(ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):-** ಮಾನ್ಯ ಸಭಾಪತಿಯವರೇ, ಒಂದೆರೆಡು ಅಂಶಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಾವು ಎಲ್ಲಾ ರೀತಿಯ ಉದಾಹರಣೆಯನ್ನು ತೆಗೆದುಕೊಳ್ಳುವುದಾದರೆ, ಇವತ್ತಿನ ದಿಸವ ಕಲಬುರಗಿ ಜಿಲ್ಲೆಯು ಅತ್ಯಂತ ಹಿಂದುಳಿದ ಜಿಲ್ಲೆ ಎಂಬುದಾಗಿ ನಾವು ಹೇಳುತ್ತೇವೆ. ಬೆಂಗಳೂರು ನಗರವನ್ನು ಹೊರತುಪಡಿಸಿದರೆ, ಇಲ್ಲಿಯೇ 4 ವೈದ್ಯಕೀಯ ಕಾಲೇಜುಗಳಿವೆ.

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ಮಂಗಳೂರು ನಗರದಲ್ಲಿ 7-8 ವೈದ್ಯಕೀಯ ಕಾಲೇಜುಗಳಿವೆ.

**ಶ್ರೀ ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, ಮಂಗಳೂರು ಜಿಲ್ಲೆಯನ್ನು "Special Education Hub" ಎಂಬುದಾಗಿ ನಾವು ಪರಿಗಣಿಸುತ್ತೇವೆ. ಬೆಂಗಳೂರು ನಗರವನ್ನು ಹೊರತುಪಡಿಸಿದರೆ, ಮಂಗಳೂರು ನಗರದಲ್ಲಿ ಶಿಕ್ಷಣಕ್ಕಾಗಿ ವಿಶೇಷ ಸೌಲಭ್ಯಗಳಿವೆ. ಇವುಗಳನ್ನು ಹೊರತುಪಡಿಸಿದರೆ, ಕಲಬುರಗಿ ಜಿಲ್ಲೆಯು ಶಿಕ್ಷಣಕ್ಕಾಗಿ ಹೆಚ್ಚು ಒತ್ತನ್ನು ನೀಡುತ್ತಿದೆ. ಕಾಂಗ್ರೆಸ್ ಪಕ್ಷದ ಶ್ರೀ ಮಲ್ಲಿಕಾರ್ಜುನ ಖರ್ಗೆರವರಿಗೆ ನಾವು ಅಭಿನಂದಿಸುತ್ತೇವೆ. ಕಲಬುರಗಿಯಲ್ಲಿರುವ ಇ.ಎಸ್.ಐ. ಆಸ್ಪತ್ರೆಯು ನಮ್ಮ ಇಡೀ ರಾಜ್ಯದಲ್ಲಿಯೇ ಇಲ್ಲ. ಇಂತಹ ಒಳ್ಳೆಯ ಸುಸಜ್ಜಿತ ಆಸ್ಪತ್ರೆಯನ್ನು ಅವರು ನಿರ್ಮಿಸಿದ್ದಾರೆ. ಆದರೆ ರಾಜ್ಯದ ದಕ್ಷಿಣ ಭಾಗದಲ್ಲಿರುವವರು ತಿಳಿದುಕೊಳ್ಳುವ ರೀತಿಯಲ್ಲಿ ಅಲ್ಲಿನ ಪರಿಸ್ಥಿತಿಗಳಿಲ್ಲ; ಅಲ್ಲಿನ ಭಾಗದಲ್ಲಿ ಬಹಳಷ್ಟು ಸುಧಾರಣೆಗಳಾಗಿವೆ. ಮುಂಬರುವ 10 ವರ್ಷದಲ್ಲಿ ಹೊಸದಾಗಿ ಬರುವ ಕೈಗಾರಿಕೆಗಳಷ್ಟು ರಾಜ್ಯದ ದಕ್ಷಿಣ ಭಾಗದಲ್ಲಿಲ್ಲ. ಉತ್ತರ ಕರ್ನಾಟಕ ಭಾಗದಲ್ಲಿ 65 ಸಕ್ಕರೆ ಕಾರ್ಖಾನೆಗಳಿವೆ. ದಕ್ಷಿಣ ಕರ್ನಾಟಕ ಭಾಗದಲ್ಲಿ ಕೆ.ಆರ್.ಎಸ್. ಮತ್ತು ಆಲಮಟ್ಟಿ ಅಣೆಕಟ್ಟುಗಳಿವೆ. ಅಲ್ಲಿನ 9 ಸಕ್ಕರೆ ಕಾರ್ಖಾನೆಗಳ ಪೈಕಿ ಕೇವಲ 6 ಕಾರ್ಖಾನೆಗಳು ಚಾಲ್ತಿಯಲ್ಲಿದ್ದು, 3 ಕಾರ್ಖಾನೆಗಳು ಸ್ಥಗಿತಗೊಂಡಿವೆ. ನಮ್ಮ ಉತ್ತರ ಕರ್ನಾಟಕ ಭಾಗದಲ್ಲಿ 54 ಸಕ್ಕರೆ ಕಾರ್ಖಾನೆಗಳು ಚಾಲ್ತಿಯಲ್ಲಿವೆ.

**ಶ್ರೀ ಮರಿತಿಬ್ಬೇಗೌಡರು:-** ಮಾನ್ಯ ಸಭಾಪತಿಯವರೇ....

**ಉಪ ಸಭಾಪತಿಯವರು:-** ಶ್ರೀ ಮರಿತಿಬ್ಬೇಗೌಡರೇ, ಕೌಂಟರ್ ಮಾಡಬೇಡಿ.

**ಶ್ರೀ ಮರಿತಿಬ್ಬೇಗೌಡರು:-** ಮಾನ್ಯ ಸಭಾಪತಿಯವರೇ, ಮಂತ್ರಿಗಳಲ್ಲಿ ನನ್ನದೊಂದು ವಿನಂತಿ. ಅವರು ಮಾತನಾಡುವಾಗ 'ನಿಮ್ಮಲ್ಲಿ ಮತ್ತು ನಮ್ಮಲ್ಲಿ' ಎಂಬುದಾಗಿ ಮಾತನಾಡುವುದು ಬೇಡ. ಕರ್ನಾಟಕ ರಾಜ್ಯದಲ್ಲಿ ಎಂಬುದಾಗಿ ಹೇಳಲಿ. ಅವರು ಒಬ್ಬ ಮಂತ್ರಿಯಾಗಿ ......

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಗೊಂದಲ)**

**ಶ್ರೀ ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುವುದಕ್ಕೆ ನನ್ನ ಸಹಮತಿ ಇದೆ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಸದಸ್ಯರ ಭಾಷೆಯಲ್ಲಿಯೇ ಮಾನ್ಯ ಸಚಿವರು ಮಾತನಾಡುತ್ತಿದ್ದಾರೆ.

**ಉಪ ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೇ, ನೀವು ಮಾತನಾಡುವಾಗ ಇದೇ ರೀತಿಯಾಗಿಯೇ ಮಾತನಾಡಿದ್ದೀರಿ. ಹೀಗಾಗಿ ನೀವು ಕುಳಿತುಕೊಳ್ಳಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಶ್ರೀ ಬಸವರಾಜ ಹೊರಟ್ಟಿರವರು ಸಭಾಪತಿಯಾಗಿದ್ದ ಸಂದರ್ಭದಲ್ಲಿ .......

**ಶ್ರೀ ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, ನಾನು ಕೊನೆಯ ಎರಡು ಅಂಶಗಳ ಬಗ್ಗೆ ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ. ಇವತ್ತಿನ ದಿವಸ ನಮ್ಮ ಉತ್ತರ ಕರ್ನಾಟಕ ಭಾಗದಲ್ಲಿ ಸಾಕಷ್ಟು ಅಭಿವೃದ್ಧಿಯಾಗಬೇಕಾಗಿದೆ. ಇದನ್ನು ನಾವು ವಿರೋಧಿಸುತ್ತಿಲ್ಲ. ಅದೇ ರೀತಿಯಾಗಿ ಎಲ್ಲಾ ರೀತಿಯ ಅಭಿವೃದ್ಧಿಗಳಾಗಿವೆ ಎನ್ನುವಂತೆ ನಾವೇನೂ ಹೇಳುತ್ತಿಲ್ಲ. ರಾಜ್ಯದ ದಕ್ಷಿಣ ಭಾಗದಲ್ಲಿ ಎಲ್ಲವೂ ಅಭಿವೃದ್ಧಿ ಪ್ರದೇಶವಾಗಿದ್ದರೆ, ಉತ್ತರ ಕರ್ನಾಟಕ ಭಾಗದಲ್ಲಿ ಅಭಿವೃದ್ಧಿಯಾಗುವ ಪ್ರದೇಶವಾಗುತ್ತಿದೆ. ಎಲ್ಲಾ ಕ್ಷೇತ್ರಗಳಲ್ಲಿಯೂ ಸಹ ಅತಿ ವೇಗದಿಂದ ಉತ್ತರ ಕರ್ನಾಟಕ ಭಾಗದಲ್ಲಿ ಅಭಿವೃದ್ಧಿಗಳಾಗುತ್ತಿವೆ. ಈ ಭಾಗದಲ್ಲಿ ಯಾವುದೇ ಅಭಿವೃದ್ಧಿಯಾಗಿಲ್ಲ ಎನ್ನುವ ಭಾವನೆಯು ಸದಸ್ಯರಲ್ಲಿ ಬರುವುದು ಬೇಡ.

**ಉಪ ಸಭಾಪತಿಯವರು:-** ಶ್ರೀ ಅಲ್ಲಂ ವೀರಭದ್ರಪ್ಪನವರೇ ಮಾತನಾಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಂತ್ರಿಗಳು ಹೇಳವುದು ಒಳ್ಳೆಯದು. ಆದರೆ,.....

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನೀವು ಈಗಾಗಲೇ ಎರಡು ಗಂಟೆಗಳಷ್ಟು ಮಾತನಾಡಿದ್ದೀರಿ. ಮತ್ತೂ ಮಾತನಾಡುತ್ತೀರೆಂದು ಹೇಳಿದರೆ ಹೇಗೆ? ಈ ವಿಷಯದ ಬಗ್ಗೆ ಮಾತನಾಡುವವರು ಇನ್ನೂ ಆರೇಳು ಸದಸ್ಯರಿದ್ದಾರೆ; ಏನು ಮಾಡಬೇಕು?

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸಚಿವರು ಹೇಳಿದ್ದನ್ನು ನಾನು ಸ್ವಾಗತಿಸುತ್ತೇನೆ. ಪರಂತು, ಕಲಬುರಗಿ ಜಿಲ್ಲೆಯಲ್ಲಾಗಿರುವ ಅಭಿವೃದ್ಧಿಯು ಅದು ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆರವರು ಕೇಂದ್ರದ ಮಂತ್ರಿಗಳಾಗಿದ್ದಾಗ ....

**ಉಪ ಸಭಾಪತಿಯವರು:-** ಸಚಿವರು ಈ ಅಂಶವನ್ನೂ ಸಹ ಹೇಳಿದ್ದಾರೆ. ಶ್ರೀ ಮಲ್ಲಿಕಾರ್ಜುನ ಖರ್ಗೆರವರೇ ಮಾಡಿದ್ದಾರೆಂದು ಸಚಿವರು ಹೇಳಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಕಲಬುರಗಿ ಜಿಲ್ಲೆಯು ಈಗ "Medical Hub" ಆಗಿದೆ. It is because of Sri Mallikarjuna Karge.

**ಉಪ ಸಭಾಪತಿಯವರು:-** ಶ್ರೀ ಅಲ್ಲಂ ವೀರಭದ್ರಪ್ಪನವರೇ ಮಾತನಾಡಿ.

**ಶ್ರೀ ಅಲ್ಲಂ ವೀರಭದ್ರಪ್ಪ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಪ್ರಸ್ತುತ ವಿಷಯಕ್ಕೆ ಸಂಬಂಧಪಟ್ಟಂತೆ, ಇವತ್ತಿನ ದಿವಸ ಮಾನ್ಯ ಸದಸ್ಯರುಗಳು ಪ್ರಸ್ತಾಪಿಸಿದ ಅಂಶಗಳು ಪುನರಾವರ್ತನೆಯಾಗಬಾರದೆಂದು ತಾವು ತಿಳಿಸಿದ್ದೀರಿ. ನಮ್ಮ ಹಿರಿಯ ಸದಸ್ಯರಾದ ಶ್ರೀ ಎಸ್.ಆರ್.ಪಾಟೀಲ್ ರವರು ಎಲ್ಲಾ ವಿಚಾರಗಳ ಬಗ್ಗೆ ವಿವರವಾಗಿ ಮಾತನಾಡಿದ್ದಾರೆ. ಇದರಿಂದಾಗಿ ನಮಗೆ ಮಾತನಾಡಲು ಅವಕಾಶ ಸಿಗದಂತಾಗಿದೆ. ಆದರೆ ನಾನು ಆ ಭಾಗದಿಂದ ಬಂದಿರುವುದರಿಂದ ಮಾತನಾಡುತ್ತೇನೆ. ನಮ್ಮ ಭಾಗದಲ್ಲಿ 'ನವಲಿ' ಎಂಬ ಗ್ರಾಮದಲ್ಲಿ Balancing Reservoirನ್ನು ನಿರ್ಮಿಸಲಾಗುತ್ತಿದೆ. ಶ್ರೀ ಮರಿತಿಬ್ಬೇಗೌಡರವರು ಮಾತನಾಡುವ ಸಂದರ್ಭದಲ್ಲಿ ತುಂಗಭದ್ರಾ ಅಣೆಕಟ್ಟಿನಲ್ಲಿ ಸುಮಾರು 30-32 ಟಿ.ಎಂ.ಸಿ. ಯಷ್ಟು ತುಂಬಿರುವ ಹೂಳನ್ನು ತೆಗೆಯುವ ಕಾರ್ಯಕ್ರಮಗಳ ಬಗ್ಗೆ ತಿಳಿಸಿದರು. ತುಂಬಿರುವ ಹೂಳನ್ನು ತೆಗೆಯಬೇಕೆಂದರೆ ಬಹಳಷ್ಟು..., ಈ ವಿಚಾರದಲ್ಲಿ ಬಹಳಷ್ಟು ದೇಶದೊಂದಿಗೆ ಮಾತನಾಡಿ, ಅಲ್ಲಿನ ತಂತ್ರಜ್ಞಾನಗಳ ಬಗ್ಗೆ ತಿಳಿದುಕೊಂಡಾಗ, ಅಲ್ಲಿನ ಹೂಳನ್ನು ತೆಗೆಯಲು ಆಗುವುದಿಲ್ಲವೆಂದು ಗೊತ್ತಾದ ಮೇಲೆ, ಅದನ್ನು ಗುರುತ್ವಾಕರ್ಷಣೆಯ ಮೂಲಕ ಅಲ್ಲಿನ ನೀರನ್ನು Balancing Reservoir ನಿರ್ಮಿಸಲು ಅನುಕೂಲವಾಗಿದೆ ಎಂದು ಈಗಾಗಲೇ ಹೇಳಿದ್ದೀರಿ. ಕಳೆದ ಅಧಿವೇಶನದಲ್ಲಿ ಆಗಿನ ನೀರಾವರಿ ಮಂತ್ರಿಗಳು ಈ ವಿಚಾರದಲ್ಲಿ ಬಾಕಿ ಇರುವ ಎಲ್ಲಾ ಕೆಲಸಗಳಾಗಿವೆ. ಈ ಸಂಬಂಧ ಬೇರೆ ರಾಜ್ಯಗಳೊಂದಿಗೆ ಮಾತನಾಡಿದ್ದೇವೆ ಹಾಗೂ ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸಲಾಗಿದ್ದು; ಈ ಯೋಜನೆಗಾಗಿ 5 ಕೋಟಿ ರೂಪಾಯಿಗಳನ್ನು ಮೀಸಲಿಡುವುದಾಗಿ ತಿಳಿಸಿದರು. ಆದರೆ ಈ ಬಗ್ಗೆ ಇವತ್ತಿನವರೆಗೂ ಸಹ ಯಾವುದೇ ಪ್ರಗತಿಯಾಗಿರುವುದಿಲ್ಲ. ನಮ್ಮ ಹಿರಿಯ ಸದಸ್ಯರು ಪ್ರಸ್ತಾಪಿಸಿದಂತೆ, ಈ ವಿಚಾರದಲ್ಲಿ ಸರ್ಕಾರಕ್ಕೆ ಕಾಳಜಿ ಇಲ್ಲವೆಂಬ ಬಹಳ ಗಂಭೀರವಾದ ಆರೋಪವನ್ನು ನಾನು ಮಾಡುತ್ತೇನೆ. ಇವತ್ತಿನ ದಿವಸ ಕಾವೇರಿ ನದಿಯ ಯೋಜನೆಗಳಿಗೆ ಸುಮಾರು 60 ಸಾವಿರ ಕೋಟಿ ರೂಪಾಯಿಗಳ ಅವಶ್ಯಕತೆ ಇದೆ. ಆದರೆ ನಮ್ಮ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಈ ಯೋಜನೆಗೆ ಕೇವಲ 5 ಸಾವಿರ ಕೋಟಿ ರೂಪಾಯಿಗಳು ಮಾತ್ರವೇ ಅವಶ್ಯಕವಾಗಿದ್ದು, ಇದರಿಂದ ನಮಗೆ 32 ಟಿ.ಎಂ.ಸಿ.ಯಷ್ಟು ನೀರು ನಮಗೆ ದೊರೆಯುತ್ತದೆ. ನಾನು ಇನ್ನೂ ಹೆಚ್ಚಿಗೆ ಮಾತನಾಡುವುದಿಲ್ಲ.

**ಉಪ ಸಭಾಪತಿಯವರು:-** ನಾನು ನಿಮಗೆ ಹೇಳುತ್ತಿಲ್ಲ. ನಾನು ನಿಮ್ಮ ಪಕ್ಕದವರೊಂದಿಗೆ ಮಾತನಾಡುತ್ತಿದ್ದೇನೆ. ನೀವು ಮುಂದುವರೆಸಿ.

**ಶ್ರೀ ಅಲ್ಲಂ ವೀರಭದ್ರಪ್ಪ:-** ಮಾನ್ಯ ಸಭಾಪತಿಯವರೇ, Ok, it's alright. ನಮ್ಮ ಹಿರಿಯ ಸದಸ್ಯರು ಕಲ್ಲೇಶ್ವರಂ ಏತ ನೀರಾವರಿ ಯೋಜನೆಯ ಬಗ್ಗೆ ಮಾತನಾಡಿದರು. The difference between our project and that project is, that is costlier, more effective because it's a lift irrigation scheme. ನಮ್ಮ ಯೋಜನೆಯು ಮಾಮೂಲಾಗಿ ನದಿಗೆ ಸುಮ್ಮನೆ ಅಡ್ಡಲಾಗಿ ನಿರ್ಮಿಸಲಾಗುವ ಅಣೆಕಟ್ಟಾಗಿರುತ್ತದೆ. ಆದರೆ ನೆರೆಯ ರಾಜ್ಯದವರು ನದಿಯ ಏತ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದು, ಅದು ಬಹಳ ಸೂಕ್ತವಾದ ಯೋಜನೆ ಎಂದು ನಾವು ಹೇಳಬೇಕಾಗುತ್ತದೆ. ನಮ್ಮ ಆಲಮಟ್ಟಿ ಅಣೆಕಟ್ಟಿಗೂ ಅವರ ಅಣೆಕಟ್ಟಿಗೂ ಬಹಳ ವ್ಯತ್ಯಾಸಗಳಿವೆ. So, we must really appreciate the Telangana Government. Now, I would like to talk about KKRDB (Kalyana Karnataka Region Development Board). ಇವತ್ತಿನ ದಿವಸ ನಮ್ಮ ಭಾಗದಲ್ಲಿ ಅಭಿವೃದ್ಧಿಯಾಗಬೇಕೆಂದು ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಅನುದಾನವನ್ನು ನಿಗದಿಪಡಿಸಿದ್ದಾರೆ. ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರವು ಅಸ್ತಿತ್ವದಲ್ಲಿದ್ದಾಗ ನಮ್ಮ ಭಾಗದ ಅಭಿವೃದ್ಧಿಗಾಗಿ ನಿಗದಿಪಡಿಸಿದ ಮೊತ್ತವನ್ನು ಒಂದು ಸಾವಿರದಿಂದ 1,500 ಕೋಟಿ ರೂಪಾಯಿಗಳಿಗೆ ಹೆಚ್ಚಿಗೆ ಮಾಡಿದರು. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ ರವರು ಕಲಬುರಗಿ ಜಿಲ್ಲೆಗೆ ಭೇಟಿ ನೀಡಿದಾಗ ಈ ಅನುದಾನವನ್ನು ಎರಡು ಸಾವಿರದಿಂದ ಎರಡೂವರೆ ಸಾವಿರಕ್ಕೆ ಹೆಚ್ಚಿಸುವುದಾಗಿ ಘೋಷಿಸಿದ್ದಾರೆ. ಅಂದು ಶ್ರೀ ಸಿ.ಎಂ.ಉದಾಸಿ ಮತ್ತು ಶ್ರೀ ಮುರುಗೇಶ್ ಆರ್.ನಿರಾಣಿ ರವರುಗಳೂ ಸಹ ಉಪಸ್ಥಿತರಿದ್ದರು.

**ಶ್ರೀ ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, 3,000 ರೂಪಾಯಿಗಳಷ್ಟು ಅನುದಾನವನ್ನು ಮೀಸಲಿಡುವುದಾಗಿ ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

**ಶ್ರೀ ಅಲ್ಲಂ ವೀರಭದ್ರಪ್ಪ:-** ಮಾನ್ಯ ಸಭಾಪತಿಯವರೇ, ಇದು ಬಹಳ ಸಂತೋಷದ ವಿಚಾರವಾಗಿದ್ದು ಇದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಆದರೆ, ಅಲ್ಲಿನ ವಾಸ್ತವಿಕತೆ ಏನೆಂದರೆ, ಈಗಾಗಲೇ ನಮ್ಮ ಸದಸ್ಯರೊಬ್ಬರು ಪ್ರಸ್ತಾಪಿಸಿದಂತೆ, ಆ ಭಾಗದಲ್ಲಿ ಸದಸ್ಯರುಗಳಿಲ್ಲ. ಪ್ರಾದೇಶಿಕ ಆಯುಕ್ತರೇ ಅಲ್ಲಿನ ಅಧ್ಯಕ್ಷರಾಗಿರುತ್ತಾರೆ. ಇದಕ್ಕಾಗಿ full-fledged office ಕಛೇರಿಯ ಅವಶ್ಯಕತೆ ಇದೆ. ಅಲ್ಲಿ ಇಂಜಿನಿಯರ್‌ಗಳ ಕೊರತೆ ಇದೆ. ಯಾವುದೇ ಯೋಜನೆಯನ್ನು ಪ್ಲ್ಯಾನಿಂಗ್ ಮಾಡಲು ಬಂದರೆ, it

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

takes time. Art of managing the show ಎನ್ನುವ ರೀತಿಯಲ್ಲಿ ನಮ್ಮ ರಾಜ್ಯದ ವಿತ್ತೀಯ ಮಂತ್ರಿಗಳು ಎಲ್ಲಾ ಯೋಜನೆಗಳನ್ನು ಘೋಷಿಸುತ್ತಾರೆ ಹಾಗೂ ಮಾತನಾಡುತ್ತಾರೆ. ಆದರೆ, ಇದರ ಬಗ್ಗೆ ಯಾವುದೇ ಕ್ರಮಗಳಾಗುವುದಿಲ್ಲ. ಜನವರಿ ತಿಂಗಳಿನಲ್ಲಿ ಯೋಜನೆಗೆ ಸಂಬಂಧಪಟ್ಟ ಮಾಹಿತಿಗಳೆಲ್ಲವನ್ನೂ ತಮಗೆ ಕಳುಹಿಸಿ ಕೊಡುವಂತೆ ತಿಳಿಸುತ್ತಾರೆ. ಆ ಸಂದರ್ಭದಲ್ಲಿ ಯೋಜನೆಯ ಶೇಕಡಾ 20-30 ರಷ್ಟು ಕೆಲಸಗಳೂ ಸಹ ಆಗಿರುವುದಿಲ್ಲ. ಹೀಗಾಗಿ ಅದನ್ನು ಹಾಗೇಯೇ ಮುಂದುವರೆಸುತ್ತಾರೆ. This is how it is been going on. 1,500 ಕೋಟಿ ರೂಪಾಯಿಗಳನ್ನು ಘೋಷಿಸಿದರೆ, ಅದನ್ನು ಮೀಸಲಿಡಬೇಕೆಂದು ನಾವು ಹೇಳುತ್ತೇವೆ. ಈ ಬಗ್ಗೆ ನಿಯಮಗಳಿದ್ದರೂ ಸಹ, ಈ ಅನುದಾನದ ಸದ್ಬಳಕೆಯಾಗುತ್ತಿಲ್ಲ. Because of so many things, ಈ ಭಾಗದಲ್ಲಿ ಸಾಕಷ್ಟು ಸಿಬ್ಬಂದಿ, ಇಂಜಿನಿಯರ್‌ಗಳ ಕೊರತೆ ಇದೆ. ಈ ಕಾರಣಕ್ಕಾಗಿ, ಕಲ್ಯಾಣ ಕರ್ನಾಟಕ ಭಾಗದ ಒಂದೊಂದು ಜಿಲ್ಲೆಗೆ KKRDB ಯಿಂದ ಒಬ್ಬೊಬ್ಬ ಕಾರ್ಯಪಾಲಕ ಇಂಜಿನಿಯರ್ ಮತ್ತು ಅಧಿಕಾರಿಯನ್ನು ವಿಶೇಷವಾಗಿ ಈ ಕೆಲಸಕ್ಕಾಗಿಯೇ ನೇಮಿಸಬೇಕು. ಇವತ್ತಿನ ಪರಿಸ್ಥಿತಿಯಲ್ಲಿ ಸ್ಥಳೀಯ ಕಾರ್ಯಪಾಲಕ ಇಂಜಿನಿಯರ್‌ಗಳೇ ಕೆಲಸವನ್ನು ನಿರ್ವಹಿಸಬೇಕಾಗಿದೆ. ಅವರೇ ಹೈದ್ರಬಾದ್ - ಕರ್ನಾಟಕ ಭಾಗದ ಕೆಲಸಗಳನ್ನೂ ಮತ್ತು ಅದರ ಜೊತೆಗೆ ಬಳ್ಳಾರಿ ಜಿಲ್ಲೆಯ ಮೈನಿಂಗ್ ಕೆಲಸಗಳನ್ನೂ ಸಹ ನಿರ್ವಹಿಸಬೇಕು. ಈ ಕಾರಣಕ್ಕಾಗಿ ಎಲ್ಲಾ ಕೆಲಸಗಳಾಗುತ್ತಿಲ್ಲ. ಹೀಗಾಗಿ ಕಲ್ಯಾಣ ಕರ್ನಾಟಕ ಅಭಿವೃದ್ಧಿಗಾಗಿಯೇ exclusively ಒಂದೊಂದು ಜಿಲ್ಲೆಗೆ ಒಬ್ಬ ಕಾರ್ಯಪಾಲಕ ಇಂಜಿನಿಯರ್‌ಗಳನ್ನು ನೇಮಿಸುವಂತೆ ನಾನು ಸಲಹೆ ನೀಡುತ್ತೇನೆ.

**ಶ್ರೀ ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ನೀಡಿದ್ದಾರೆ.

**ಶ್ರೀ ಅಲ್ಲಂ ವೀರಭದ್ರಪ್ಪ:-** ಮಾನ್ಯ ಸಭಾಪತಿಯವರೇ, ಹಿರಿಯ ಐ.ಎ.ಎಸ್. ಅಧಿಕಾರಿಯನ್ನು ಇಲ್ಲಿ ನೇಮಿಸಿದಾಗ, ಆಗ ಅಭಿವೃದ್ಧಿ ಕಾರ್ಯಗಳು ಖಂಡಿತವಾಗಿಯೂ ಸಹ ಆಗುತ್ತವೆಂದು ನಾನು ಈ ಸಂದರ್ಭದಲ್ಲಿ ಸಲಹೆ ನೀಡುತ್ತಿದ್ದೇನೆ. ಸಂವಿಧಾನದ ಅನುಚ್ಛೇದ 371(ಜೆ) ರಡಿ ವಿಶೇಷ ಪ್ರಾತಿನಿಧ್ಯವನ್ನು ನಮ್ಮ ಭಾಗಕ್ಕೆ ನೀಡಿದ್ದಾರೆ. ಶ್ರೀ ಮರಿತಿಬ್ಬೇಗೌಡರು ಪ್ರಸ್ತಾಪಿಸಿದಂತೆ, ಆ ಭಾಗದ ಎಲ್ಲಾ ಹಿರಿಯ ನಾಯಕರುಗಳಾದ ಶ್ರೀ ಧರ್ಮಸಿಂಗ್, ಶ್ರೀ ವೈದ್ಯನಾಥ್ ಪಾಟೀಲ್ ಮತ್ತು ಮಲ್ಲಿಕಾರ್ಜುನ ಖರ್ಗೆ ಇವರುಗಳ ಕೂಗಿತ್ತು. ಈ ಹಿಂದೆ ಅಭಿವೃದ್ಧಿ ಹೊಂದಿಲ್ಲದ ಜಿಲ್ಲೆ ಎಂಬುದಾಗಿ ಕರೆಯಲ್ಪಡುತ್ತಿತ್ತು. ಎಲ್ಲಾ ಪಕ್ಷದ ಶಾಸಕರುಗಳು ನಾನು ಯಾರನ್ನೂ ಹೆಸರಿಸುವುದಿಲ್ಲ. ಅವರುಗಳೆಲ್ಲರೂ ಕೇಂದ್ರಕ್ಕೆ ಹೋದರು. ಶ್ರೀ ಮಲ್ಲಿಕಾರ್ಜುನ ರವರ ನೇತೃತ್ವದಲ್ಲಿ ಸಂವಿಧಾನದ ಅನುಚ್ಛೇದ 371 (ಜೆ) ರಡಿ ವಿಶೇಷ ಪ್ರಾತಿನಿಧ್ಯವನ್ನು ನೀಡಿದ್ದು; ಕಲ್ಯಾಣ ಕರ್ನಾಟಕ ಭಾಗದ ಜನರು ಇದರ ಲಾಭವನ್ನು ಪಡೆಯುತ್ತಿದ್ದಾರೆ. ಅಲ್ಲಿನ ಪೆಟ್ರೋಲ್ ಬಂಕ್‌ನಲ್ಲಿ ವಾಹನಗಳಿಗೆ ಪೆಟ್ರೋಲ್ ತುಂಬಿಸುವ ಕೆಲಸ ಮಾಡುವವರನ್ನು ನಾನು ಮಾತನಾಡಿಸಿದೆನು. ನಾನು ಅವನನ್ನು ಬಹಳ ದಿವಸದಿಂದಲೂ ಸಹ ನೋಡುತ್ತಿದ್ದೆನು. ನಾನು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅವನನ್ನು ಹೇಗಿದ್ದೀಯಾ ಎಂದು ಪ್ರಶ್ನಿಸಿದ್ದಕ್ಕೆ ಆತನು ತಾನು ಚೆನ್ನಾಗಿರುವುದಾಗಿ ತಿಳಿಸಿದನು. ನಾನು ಹೇಗೆ ಎಂದು ವಿಚಾರಿಸಿದಾಗ, ಅದಕ್ಕೆ ಪ್ರತ್ಯುತ್ತರವಾಗಿ ಆತನು, ತನ್ನ ಇಬ್ಬರು ಮಕ್ಕಳಿಗೆ ಎಂ.ಬಿ.ಬಿ.ಎಸ್. ಸೀಟು ದೊರೆತಿದೆ ಎಂದು ತಿಳಿಸಿದನು. This is the effect of Article 371(J). ಇದರ ಲಾಭವನ್ನು ಪಡೆದು ಬಹಳಷ್ಟು ಬಡವರು ಡಾಕ್ಟರ್, ಇಂಜಿನಿಯರಿಂಗ್ ಶಿಕ್ಷಣವನ್ನು ಪೂರೈಸಿದ್ದಾರೆ. ಯಾವುದೇ ದೇಶವು ಅಭಿವೃದ್ಧಿಯಾಗಬೇಕಾದರೆ ಶಿಕ್ಷಣ ಕ್ಷೇತ್ರವೇ ಅದಕ್ಕೆ ಅಡಿಪಾಯವಾಗಿರುತ್ತದೆ. ಆದರೆ, ವಾಸ್ತವವಾಗಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಶಿಕ್ಷಕರುಗಳಿಲ್ಲ. ಇದಕ್ಕೆ ಕಾರಣವೇನೆಂದರೆ, 10 ಸಾವಿರ ಶಿಕ್ಷಕರ್ರ ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಿದರೆ, ಕೇವಲ 2 ಸಾವಿರ ಅರ್ಜಿಗಳು ಮಾತ್ರವೇ ಸ್ವೀಕೃತಗೊಳ್ಳುತ್ತವೆ. ದಕ್ಷಿಣ ಕರ್ನಾಟಕ ಭಾಗದ ಅಭ್ಯರ್ಥಿಗಳ ಶೇಕಡಾವಾರು ಅಂಕಗಳನ್ನು ಹೋಲಿಕೆ ಮಾಡಿದಾಗ, ಕಲ್ಯಾಣ ಕರ್ನಾಟಕ ಭಾಗದ ಅಭ್ಯರ್ಥಿಗಳ ಶೇಕಡಾವಾರು ಅಂಕಗಳು ಕಡಿಮೆ ಇರುತ್ತದೆ. ಈ ಭಾಗದ ಸರ್ಕಾರಿ ಕಾಲೇಜುಗಳಲ್ಲಿ ಅಭ್ಯಸಿಸಿದ ಪದವೀಧರರಿಗೂ ಹಾಗೂ ಬೆಂಗಳೂರು ಭಾಗದ ಪದವೀಧರರಿಗೂ ಬಹಳಷ್ಟು ವ್ಯತ್ಯಾಸಗಳಿರುತ್ತವೆ. ಈ ಕಾರಣಕ್ಕಾಗಿ ಕೆಲವು ನಿಯಮಗಳ ಬದಲಾವಣೆ ಮಾಡಬೇಕಾಗುತ್ತದೆ. ಆ ಭಾಗದ ಜನರಿಗೂ ಸಹ ಇದರಿಂದ ನೋವಾಗಬಾರದು. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಸರಾಸರಿ ಶೇಕಡಾ 50 ರಷ್ಟು ಅಂಕಗಳನ್ನು ಹೊಂದಿರಬೇಕೆಂದು ಹೇಳುತ್ತಾರೆ.

(ಮುಂದು)

(1233) 06.50 21-12-2021 CS.MD

**ಶ್ರೀ ಅಲ್ಲಂ ವೀರಭದ್ರಪ್ಪ(ಮುಂದು):-**

ಅಂದರೆ, ಎಲ್ಲಾ ವಿಷಯಗಳಲ್ಲಿ ಸರಾಸರಿ 50% ಬರಬೇಕೆಂದು ಹೇಳುತ್ತಾರೆ. ಆದರೆ ಆ ಭಾಗದವರು ಏನು ಹೇಳುತ್ತಾರೆ ಎಂದರೆ, ಸರಾಸರಿ ಇದ್ದರೆ ಒಂದರಲ್ಲಿ 60% ಬಂದರೆ ಮತ್ತೊಂದರಲ್ಲಿ 48% ಬರಬಹುದು, 49% ಬಂದರೆ ಸಿಗುವುದಿಲ್ಲ. ಇದರ ಬಗ್ಗೆ ಸರ್ಕಾರ ಆ ಭಾಗದ ಶಾಸಕರನ್ನೆಲ್ಲ ಕರೆದು ಇದರ ಬಗ್ಗೆ ಚಿಂತನೆಯನ್ನು ನಡೆಸಬೇಕು. ಆಗ ನಮಗೆ ತಕ್ಷಣಕ್ಕೆ ಶಿಕ್ಷಕರ ದೊರೆಯುತ್ತಾರೆ.

**ಶ್ರೀ ಮುರುಗೇಶ ಆರ್. ನಿರಾಣಿ:-** ಮಾನ್ಯ ಸಭಾಪತಿಗಳೇ, ಬೇರೆ ಕಡೆ ಮೆರಿಟ್ ಜಾಸ್ತಿ ಇದ್ದಲ್ಲಿ, ನಮ್ಮ ಕಲ್ಯಾಣ ಕರ್ನಾಟಕದಲ್ಲಿ ಮೆರಿಟ್ ಕಡಿಮೆ ಇರುತ್ತದೆ. ನಾನು ಕಲ್ಬುರ್ಗಿ ಜಿಲ್ಲೆಯ ಉಸ್ತುವಾರಿ ಸಚಿವರನಾಗಿರುವ ಕಾರಣ ನನ್ನ ಸಲಹೆ ಏನೆಂದರೆ ಆ ಭಾಗದಲ್ಲಿರುವವರು ಮಾತ್ರ ಅರ್ಜಿಗಳನ್ನು ಹಾಕಬೇಕು, ಆ ಭಾಗದವರಲ್ಲಿಯೇ ಸ್ಪರ್ಧೆ ಏರ್ಪಟ್ಟು ಎಲ್ಲರಿಗೂ ಉದ್ಯೋಗಾವಕಾಶ ದೊರೆಯತ್ತದೆ. ಅದನ್ನು ಜಾರಿಗೆ ತರಬೇಕೆಂದು ಚಿಂತನೆ ಮಾಡುತ್ತಿದ್ದೇವೆ, ಅದನ್ನು ಜಾರಿಗೆ ತರುತ್ತೇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಅಲ್ಲಂ ವೀರಭದ್ರಪ್ಪ(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದರು):-** ಮಾನ್ಯ ಸಭಾಪತಿಗಳೇ, ಮಾನ್ಯ ಸಚಿವರು ಹೇಳಿದ್ದು, ಕೇಳಿ ಬಹಳ ಸಂತೋಷವಾಯಿತು. ಅವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆ ಭಾಗದಲ್ಲಿ ಅಭಿವೃದ್ಧಿ ಆಗಬೇಕಾದರೆ ಬಹಳಷ್ಟು ಕೆಲಸಗಳು ಆಗಬೇಕಾಗಿದೆ. ಬಹಳ ಪ್ರಮುಖವಾಗಿ 371 ಜೆ ಅಡಿಯಲ್ಲಿ ಹಲವಾರು ಇಲಾಖೆಗಳಲ್ಲಿ ಬಹಳಷ್ಟು ಹುದ್ದೆಗಳು ಖಾಲಿಯಿವೆ. ಈಗ ಶಿಕ್ಷಕರ ಬಗ್ಗೆ ಸರ್ಕಾರ ಯಾವ ರೀತಿ ಚಿಂತನೆ ನಡೆಸಿದೆ, ಹಾಗೆಯೇ, ವಿದ್ಯುತ್ ಇಲಾಖೆಯಲ್ಲಿ, ಕೃಷಿ ಇಲಾಖೆಯಲ್ಲಿ ಹೀಗೆ ಎಲ್ಲಾ ಇಲಾಖೆಗಳಲ್ಲಿಯೂ ಯೋಜನ್ನೆ ರೂಪಿಸಿ, ಹಂತ ಹಂತವಾಗಿ ಹುದ್ದೆಗಳನ್ನು ತುಂಬಲು ಆದ್ಯತೆಯನ್ನು ನೀಡಬೇಕಾಗುತ್ತದೆ. ಇವತ್ತು ಏನಾಗಿದೆ ಎಂದರೆ ನೀವು KKRDB ಎಂದರೆ ಲೋಕೋಪಯೋಗಿ ಇಲಾಖೆಯವರು ನೀಡುತ್ತಿಲ್ಲ. The purpose of giving special grants will not be served. Along with the regular budget allocation, you must give KKRDB grants also. Then we will come out with the balance. What is the meaning of development of the backward area? Backward area ಎಂದರೆ ಈ ಭಾಗ ಆ ಭಾಗ ಎಂದೇನೂ ಇಲ್ಲ. ಅದು ಯಾವುದೇ ಆಗಿದ್ದರೂ ಸಹ, ಕರ್ನಾಟಕದಲ್ಲಿ ಯಾವುದಾದರೂ ಉತ್ತಮ ಸ್ಥಿತಿಯಲ್ಲಿರುವ ಜಿಲ್ಲೆಯನ್ನು ಮಾದರಿಯಾಗಿ ತೆಗೆದುಕೊಂಡು ಅಲ್ಲಿ ರಸ್ತೆಗಳು ಹೇಗಿವೆ, ಶಾಲೆಗಳು ಹೇಗಿವೆ, ಆಸ್ಪತ್ರೆಗಳು ಎಷ್ಟಿವೆ, ಕಾಲೇಜುಗಳು ಎಷ್ಟಿವೆ, ಹಾಸ್ಟೆಲ್‌ಗಳು ಎಷ್ಟಿವೆ ಎನ್ನುವುದನ್ನು ಪರಿಶೀಲಿಸಿ, ಅದೇ ಮಾದರಿಯಲ್ಲಿ ಇಲ್ಲಿಯೂ ಸಹ ಮಾಡಿದರೆ ಮಾತ್ರ ಆ ಭಾಗ ಅಭಿವೃದ್ಧಿಯನ್ನು ಹೊಂದುತ್ತದೆ.

ನಾನು ಆಲಮಟ್ಟಿ ಜಲಾಶಯ ಬಗ್ಗೆ ಮಾತನಾಡುವುದಿಲ್ಲ. ಏಕೆಂದರೆ ಎಲ್ಲಾ ಸದಸ್ಯರು ಅದರ ಬಗ್ಗೆ ಮಾತನಾಡಿದ್ದಾರೆ. ನವಲಿ ಪ್ರದೇಶಕ್ಕೆ ಬಹಳ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕಾಗುತ್ತದೆ. ಆ ಭಾಗದಲ್ಲಿ ನಾವೇನು Balancing Reservoir ಮಾಡುತ್ತೇವೆ, ಅದನ್ನು ಮಾಡಿದರೆ ಮಾತ್ರ 2-3 ಲಕ್ಷ ಎಕರೆ ಪ್ರದೇಶವನ್ನು ನಾವು ಅಭಿವೃದ್ಧಿ ಮಾಡಬಹುದು. ಇವತ್ತು ಸುಮ್ಮನೆ ನದಿ ನೀರು waste ಆಗುತ್ತಿದೆ. ಇವತ್ತು ತುಂಗಭದ್ರಾ ನದಿ ನೀರಿಗೆ ಒಂದು ರೂಲ್ಸ್ ಮಾಡಲಾಗಿದೆ. Thungabhadra Board consist of Andhra Pradesh and Karnataka States. ಎಷ್ಟೋ ನೂರಾರು ಟಿಎಂಸಿ ನೀರು ಹರಿದು ಹೋದರೂ ಸಹ ಅದಕ್ಕೆ ಯಾವುದೇ ಅಕೌಂಟ್ ಇಲ್ಲ. Agreement is in such a way that, it never comes in the account. ಅವರು ನೀರು ಕೇಳಿದಾಗ ಬಿಡಬೇಕು. ಜಲಾಶಯದಲ್ಲಿ ಕಡಿಮೆ ನೀರು ಇದ್ದಾಗ ಮಾರ್ಚ್ ಮತ್ತು ಫೆಬ್ರುವರಿ ತಿಂಗಳಿನಲ್ಲಿ ಕೇಳುತ್ತಾರೆ. There are two ways of asking water. ಒಂದು ನದಿಯ ಮೂಲಕ, ಮತ್ತೊಂದು ಕಾಲುವೆ ಮೂಲಕ ನೀರನ್ನು ನೀಡಬೇಕಾಗುತ್ತದೆ. ಆಗ ಅವರು ನಮಗೆ ನದಿ ಮೂಲಕ ನೀರನ್ನು ಬಿಡುವಂತೆ ಕೇಳುತ್ತಾರೆ. ಆ ಸಮಯದಲ್ಲಿ ನದಿಯ ಮೂಲಕ ನೀರನ್ನು ನೀಡಿದರೆ ನಮ್ಮ ಜಲಾಶಯದ ನೀರಿನ ಮಟ್ಟ ಕಡಿಮೆ ಆಗಿ ನಮ್ಮ ರೈತರಿಗೆ ನೀರು ದೊರೆಯುವುದಿಲ್ಲ. ಅದಕ್ಕಾಗಿ ನಾವು ಅಷ್ಟು ಟಿಎಂಸಿ ನೀರನ್ನು ಸಂಗ್ರಹಿಸಿದರೆ 8000 ಕೋಟಿ ರೂಪಾಯಿಗಳನ್ನು ಕೊಟ್ಟು ಈ ಕಾಮಗಾರಿಗೆ ಆದ್ಯತೆಯನ್ನು

ನೀಡಿ, ಕೆಲಸ ಮಾಡಬೇಕೆಂದು ಹೇಳಿ, ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನು ತಿಳಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಪ್ರಕಾಶ್ ಕೆ ರಾಥೋಡ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಗಳೇ, ಬೆಳಗಾವಿಯ ಸುವರ್ಣ ಸೌಧದಲ್ಲಿ ಇಂದು ವಿಶೇಷವಾಗಿ ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಮತ್ತು ಈ ಭಾಗದಲ್ಲಿ ಅಭಿವೃದ್ಧಿಯಾಗಲು ಅಧಿವೇಶನವನ್ನು ಕಳೆದ 10 ದಿವಸಗಳಿಂದ ನಡೆಸಲಾಗುತ್ತಿದೆ.

ಮಾನ್ಯ ಸಭಾಪತಿಗಳೇ, ಇವತ್ತು ವಿಶೇಷವಾಗಿ ಆಲಮಟ್ಟಿ ಜಲಾಶಯದ ಬಗ್ಗೆ ನಮ್ಮ ವಿರೋಧ ಪಕ್ಷದ ನಾಯಕರು ಸೇರಿದಂತೆ ಹಲವಾರು ಸದಸ್ಯರು ಮಾತನಾಡಿದ್ದಾರೆ. ಈ ಆಲಮಟ್ಟಿ ಜಲಾಶಯದಿಂದ ಮೊಟ್ಟ ಮೊದಲು ಜಮೀನು ಕಳೆದುಕೊಂಡಿರುವ ಸಂತ್ರಸ್ತ ನಾನೇ ಎಂದು ಈ ಮೊದಲೇ ಹೇಳಿದ್ದೇನೆ. ನಮ್ಮ ಗ್ರಾಮ ಬೇನಾಳ ಇದು ಆಲಮಟ್ಟಿ ಜಲಾಶಯದಿಂದ 5 ಕಿ.ಮೀ ದೂರದಲ್ಲಿದೆ. ನಮ್ಮ ಬೇನಾಳ ಊರು ಸಂಪೂರ್ಣವಾಗಿ ಮುಳುಗಡೆ ಆಗಿದೆ.

**ಉಪ ಸಭಾಪತಿಯವರು**:- ಹಿಂದೆ ಒಂದು ಸಲ ಈ ವಿಚಾರವನ್ನು ತಾವು ಸದನದಲ್ಲಿ ಪ್ರಸ್ತಾಪ ಮಾಡಿದ್ದೀರಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಗಳೇ, ನಾನು ಈ ವಿಚಾರವನ್ನು ಪ್ರತಿ ಅಧಿವೇಶನದಲ್ಲಿಯೂ ಹೇಳುತ್ತಿರುತ್ತೇನೆ. ಏಕೆಂದರೆ ನಾನು ಮೊಟ್ಟ ಮೊದಲಿಗೆ ನನ್ನ ಜಮೀನನ್ನು ಕಳೆದುಕೊಂಡ ಸಂತ್ರಸ್ತ. ಆ ಸಮಯದಲ್ಲಿ ನಮಗೆ ಪರಿಹಾರ ಸಿಕ್ಕಿದ್ದು ಕೂಡ ಕಡಿಮೆ. ಆದರೂ ಸಹ ಬಿಜಾಪುರ ಜಿಲ್ಲೆ ಸಾಕಷ್ಟು ತ್ಯಾಗವನ್ನು ಮಾಡಿ, ಈ ಒಂದು ಆಲಮಟ್ಟಿ ಜಲಾಶಯದಿಂದ ಬರಗಾಲ ಹೋಗಿ, ಹಸಿರುಕ್ರಾಂತಿ ಆಗಿ ನಮ್ಮ ಭಾಗದಲ್ಲಿಯೂ ನೀರಾವರಿ ಆಗಬೇಕೆಂದು ನಾವು ಸಾಕಷ್ಟು ತ್ಯಾಗವನ್ನು ಮಾಡಿದ್ದೇವೆ. ಇವತ್ತು ಈ ಆಲಮಟ್ಟಿ ಜಲಾಶಯ ಒಂದು ಹಂತಕ್ಕೆ ಬಂದಿದೆ. ಯುಕೆಪಿಯ ಮೊದಲನೇ ಹಂತ, ಎರಡನೆಯ ಹಂತ, ಸಂಪೂರ್ಣಗೊಂಡು ಬಚಾವತ್ ಅವಾರ್ಡ್, ಬ್ರಿಜೇಶ್ ಕುಮಾರ್ ವರದಿ, ಆಗ ಸುಪ್ರೀಮ್ ಕೋರ್ಟಿನ ತೀರ್ಪು ಬಂದು ನಮ್ಮ ಬಿಜಾಪುರ ಜಿಲ್ಲೆಗೆ 330 ಟಿಎಂಸಿ ಯಲ್ಲಿ 90 ಟಿಎಂಸಿ ನೀರು ನೀರಾವರಿಗಾಗಿ ಪಡೆಯುವಂತಹ ಸನ್ನಿವೇಶದಲ್ಲಿ ನಾವಿದ್ದೇವೆ. ಇದು ವಿಳಂಬ ಆಗುತ್ತಿದೆ, ಇದು ಬೇಗ ಆಗಬೇಕು, ನಮ್ಮ ಜನರು ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಅವಿಭಾಜ್ಯ ಬಿಜಾಪುರ ಜಿಲ್ಲೆಯಲ್ಲಿ ನೀರಾವರಿ ಸೌಲಭ್ಯ ದೊರೆಯಬೇಕೆಂದು ನಾವೆಲ್ಲರೂ ಸಹ ಅದಕ್ಕೆ ಹೋರಾಟವನ್ನು ಮಾಡುತ್ತಿದ್ದೇವೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾನ್ಯ ಸಭಾಪತಿಗಳೇ, ಯುಕೆಪಿಯ 1ನೇ ಹಂತದಲ್ಲಿ ಎಷ್ಟು ಹೆಕ್ಟೇರ್ ಪ್ರದೇಶವನ್ನು ನೀರಾವರಿಗೆ ಒಳಪಡಿಸಿದ್ದೇವೆ, ಅದರಲ್ಲಿ ಹಿಂಗಾರು ಮತ್ತು ಮುಂಗಾರಿನ ಎರಡು ಬೆಳೆಗಳನ್ನು ಬೆಳೆಯುವುದಕ್ಕೆ ನಮಗೆ ಸಂಪೂರ್ಣವಾಗಿ ನೀರಿನ ಸಂಗ್ರಹ ಆಗಿದೆಯೇ? ಆ ನೀರನ್ನು ಬಳಕೆ ಮಾಡಲು ನಮಗೆ ಅವಕಾಶ ದೊರೆತಿದೆಯೇ? Tail end ನಲ್ಲಿರುವ ಗ್ರಾಮಗಳಿಗೆ ಈ ನೀರು ಲಭ್ಯವಿದೆಯೇ? ಅದರಲ್ಲಿಯೂ ವಿಶೇಷವಾಗಿ ತಾಂಬ ಏರಿಯಾದಲ್ಲಿ ಲಭ್ಯವಾಗಿದೆಯೇ? ಗುತ್ತಿ ಬಸವಣ್ಣ ಏತ ನೀರಾವರಿ ಏನಿದೆ, ಅದರಲ್ಲಿ 105 ಕಿ.ಮೀ ಕಾಲುವೆಗಳನ್ನು ನಿರ್ಮಾಣ ಮಾಡಲಾಗಿದೆ. ಇದರ ಮೂಲಕ tail end ನಲ್ಲಿರುವ ತಾಂಬ ಪ್ರದೇಶದಕ್ಕೆ ನೀರು ಹೋಗುತ್ತಿದೆಯೇ ಎನ್ನುವುದನ್ನು ನಾವು ಚಿಂತನೆ ಮಾಡಬೇಕಾಗಿದೆ. ನಾನು ಇದರ ಬಗ್ಗೆ ಮಾಹಿತಿಯನ್ನು ಸಂಗ್ರಹ ಮಾಡಿದಾಗ ಈ tail end ನಲ್ಲಿ ಇವತ್ತಿನವರೆಗೆ ಸಂಪೂರ್ಣ ಪ್ರಮಾಣದಲ್ಲಿ ನೀರು ಹೋಗುತ್ತಿಲ್ಲ. ಕಳೆದ 3 ತಿಂಗಳಿನಿಂದ ಒಂದು ಹನಿ ನೀರು ಹೋಗಿರುವುದಿಲ್ಲ. ಏಕೆಂದರೆ ಗುತ್ತಿ ಬಸವಣ್ಣ ಏತ ನೀರಾವರಿ ಯೋಜನೆಯಲ್ಲಿರುವ 9 ಪಂಪ್‌ಗಳಲ್ಲಿ 6 ಪಂಪ್‌ಗಳು ದುರಸ್ಥಿಯಲ್ಲಿವೆ. ಈ ಪಂಪ್‌ಗಳನ್ನು ದುರಸ್ಥಿ ಮಾಡಿಕೊಡುತ್ತೇವೆಂದು ಸಚಿವರು ಅಶ್ವಾಸನೆ ನೀಡಿ, ಒಂದೂವರೆ ವರ್ಷಗಳು ಕಳೆದಿವೆ. ಇವತ್ತಿನವರೆಗೆ ಆ ಪಂಪ್‌ಗಳು ದುರಸ್ಥಿಯಾಗಿಲ್ಲ. ಇವತ್ತು ಟೆಂಡರ್ ಕರೆದಿದ್ದೇವೆ, ಅದಕ್ಕಾಗಿ 30 ಕೋಟಿ ರೂಪಾಯಿಗಳ ವೆಚ್ಚ ಆಗುತ್ತಿದೆ, ಎಂದು ಹೇಳಿದ್ದರು ಸಹಾ ಇವತ್ತಿನವರೆಗೆ ಯಾವುದೇ ಕೆಲಸ ಆಗಿಲ್ಲ. ಇದರಿಂದ ನಮ್ಮ ಭಾಗದಲ್ಲಿ ಎರಡು ಬೆಳೆಗಳನ್ನು ತೆಗೆಯಲು ಸಾಧ್ಯವಾಗುತ್ತಿಲ್ಲ ಎನ್ನುವುದು ನನ್ನ ಭಾವನೆಯಾಗಿದೆ. ಈಗ ಆಲಮಟ್ಟಿ ಜಲಾಶಯವನ್ನು ಸಂಪೂರ್ಣಗೊಳಿಸಲು ಏನೇನು ಕಾಮಗಾರಿಗಳ ಅವಶ್ಯಕತೆ ಇದೆ, ಅದನ್ನೆಲ್ಲ ಮಾಡಬೇಕು.

ಮಾನ್ಯ ಸಭಾಪತಿಗಳೇ, ಎರಡು ವರ್ಷಗಳ ಹಿಂದೆ ಕೃಷ್ಣಾ ಜಲ ಭಾಗ್ಯ ಯೋಜನೆಯ ವ್ಯವಸ್ಥಾಪಕ ನಿರ್ದೇಶಕರ ಕಚೇರಿಯನ್ನು ಬೆಂಗಳೂರಿನಿಂದ ಆಲಮಟ್ಟಿ ಪ್ರದೇಶಕ್ಕೆ ಸ್ಥಳಾಂತರಿಸುವುದಕ್ಕೆ ಸರ್ಕಾರ ಆದೇಶವನ್ನು ನೀಡಿದೆ. ಮಾನ್ಯ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿಯವರು ಇದರ ಬಗ್ಗೆ ಈಗಾಗಲೇ ಅಶ್ವಾಸನೆಯನ್ನು ಕೊಟ್ಟಿದ್ದಾರೆ. ಆದರೆ ಈ ಸರ್ಕಾರ ಬಂದಮೇಲೆ, ಮುಖ್ಯಮಂತ್ರಿಗಳು ಅಶ್ವಾಸನೆ ಕೊಟ್ಟ ಮೇಲೂ ಸಹ ಈ ಕಚೇರಿಯ ಸ್ಥಳಾಂತರ ಆಗಿರುವುದಿಲ್ಲ. ಇದಕ್ಕೆ ಕಾರಣ ಏನೆಂದರೆ ಅಧಿಕಾರಿಗಳಿಗೆ ಅಲ್ಲಿ ಇರುವುದಕ್ಕೆ ಅವಕಾಶ ಆಗುವುದಿಲ್ಲ. ಆದ್ದರಿಂದ ನಮಗೆ ಸ್ಥಳಾಂತರಗೊಳ್ಳಲು ಆಗುವುದಿಲ್ಲ ಎನ್ನುವ ಹೇಳಿಕೆಗಳನ್ನು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಇದು ಸರಿಯೇ, ಅಧಿಕಾರಿಗಳು ಇರುವ ಹಾಗೆ ಅಲ್ಲಿ ವ್ಯವಸ್ಥೆಗಳನ್ನು ಸರ್ಕಾರ ಮಾಡುವುದೇ? ಈ ವ್ಯವಸ್ಥಾಪಕ ನಿರ್ದೇಶಕರ ಕಚೇರಿ, ಯಾವಾಗ ಆಲಮಟ್ಟಿಗೆ ಸ್ಥಳಾಂತರ ಆಗುತ್ತದೆ? ಇವತ್ತು ಈ ಜಾಗದಲ್ಲಿ ಯುಕೆಪಿಯ 3ನೇ ಹಂತ ಮಾಡಬೇಕೆಂದರೆ ಎಲ್ಲಿಯವರೆಗೆ ಈ ಕಚೇರಿಯ ಸ್ಥಳಾಂತರ ಆಗುವುದಿಲ್ಲ, ಅಲ್ಲಿಯವರೆಗೆ ಈ ಕಾರ್ಯಕ್ರಮಗಳನ್ನು ಏನು ಅನುಷ್ಠಾನ ಮಾಡಬೇಕೆಂದುಕೊಳ್ಳುತ್ತೇವೆ ಅವುಗಳ ವಿಳಂಬ ಆಗುತ್ತದೆ. ಅದಕ್ಕಾಗಿಯೇ ಈ ಕಚೇರಿಯನ್ನು ಸ್ಥಳಾಂತರ ಮಾಡಬೇಕೆನ್ನುವುದು ಸರ್ಕಾರದ ಉದ್ದೇಶ ಆಗಿದೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದನ್ನು ಈಡೇರಿಸಬೇಕೆಂದು ಸರ್ಕಾರಕ್ಕೆ ಕಳಕಳಿಯಿಂದ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಾಗೆಯೇ ಈ ವ್ಯವಸ್ಥಾಪಕ ನಿರ್ದೇಶಕರ ಕಚೇರಿಯನ್ನು ಯಾವಾಗ ಸ್ಥಳಾಂತರ ಮಾಡಲಾಗುವುದು ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮುಂದು)

**(1234)/7-00/21-12-2021/ಎಲ್‌ಎಂ/ಎಕೆ**

**ಶ್ರೀ ಪ್ರಕಾಶ್ ಕೆ.ರಾಥೋಡ್(ಮುಂದು):-**

ಈ U.K.P (Upper Krishna Project) ಮೂರನೆ ಹಂತದಲ್ಲಿ ಡ್ಯಾಂ ನ ಎತ್ತರವನ್ನು 519 ರಿಂದ 524 ಅಡಿ ಎತ್ತರಿಸಬೇಕಾಗಿದೆ. ಗೇಟ್‌ಗಳು ತಯಾರಾಗಿವೆ. ಸುಪ್ರೀಮ್ ಕೋರ್ಟ್‌ನಲ್ಲಿ ತೆಲಂಗಾಣ ಮತ್ತು ಆಂಧ್ರಪ್ರದೇಶಗಳು ತಕರಾರು ಅರ್ಜಿಯನ್ನು ಸಲ್ಲಿಸಿವೆ. ಅವರು ಆಂಧ್ರಪ್ರದೇಶ ವಿಭಜನೆಯಾಗಿ ತೆಲಂಗಾಣ ಮತ್ತು ಆಂಧ್ರಪ್ರದೇಶ ಎಂದು ಎರಡು ರಾಜ್ಯಗಳಾಗಿವೆ. ನೀರು ಹಂಚಿಕೆ ಮಾಡಲು ಆಗುವುದಿಲ್ಲ, ಅದಕ್ಕಾಗಿ ನಮಗೆ ನ್ಯಾಯ ಕೊಡಿ ಎಂದು ತಮ್ಮ ಅರ್ಜಿಯಲ್ಲಿ ತಿಳಿಸಿದ್ದಾರೆ. ಆದರೆ ಸುಪ್ರೀಮ್ ಕೋರ್ಟ್‌ನಲ್ಲಿರುವ ತಕರಾರು ಅರ್ಜಿಯನ್ನು ಹಿಂದಕ್ಕೆ ಪಡೆಯುವಂತಹ ಕೆಲಸವನ್ನು ನಮ್ಮ ರಾಜ್ಯ ಸರ್ಕಾರ ಬಹಳ ವಿಳಂಬದಿಂದ ಮಾಡುತ್ತಿದ್ದಾರೆ. ಡಿಸೆಂಬರ್‌ನಲ್ಲಿ ಸುಪ್ರೀಮ್ ಕೋರ್ಟ್‌ನಲ್ಲಿ ಹಿಯರಿಂಗ್ ಇತ್ತು, ಆಗ ನಮ್ಮ ರಾಜ್ಯದ ವಕೀಲರು ಏನು ಹೇಳಿಕೆ ಕೊಟ್ಟಿದ್ದಾರೆ ಗೊತ್ತಿಲ್ಲ, ಮುಂದೆ ಜನವರಿ ಕೊನೆಗೆ ತೀರ್ಮಾನ ಮಾಡಲು ಮುಂದಕ್ಕೆ ಹಾಕಿದ್ದಾರೆ. ಸುಪ್ರೀಮ್ ಕೋರ್ಟ್‌ನಲ್ಲಿ ಸಲ್ಲಿಸಿರುವ ತಕರಾರು ಅರ್ಜಿಯಲ್ಲಿ ಯಾವುದೇ ಹುರಳಿಲ್ಲ, ನ್ಯಾಯಯುತವಾದ ಸಮಸ್ಯೆಗಳು ಇಲ್ಲ. ನಮ್ಮ ಸರ್ಕಾರಕ್ಕೆ ಇಚ್ಛಾಶಕ್ತಿ ಇದ್ದರೆ, ನಮ್ಮ ವಕೀಲರು ಸುಪ್ರೀಮ್ ಕೋರ್ಟ್‌ನಲ್ಲಿ ವಾದ ಮಂಡಿಸಿದ್ದರೆ ನ್ಯಾಯ ನಮ್ಮ ಪರವಾಗಿ ಆಗುತ್ತದೆ. ಏಕೆಂದರೆ ಆ ಎರಡು ರಾಜ್ಯಗಳ ಮಧ್ಯೆ ನೀರಿನ ಹಂಚಿಕೆ ಸಮಸ್ಯೆ ನಮಗೆ ಸಂಬಂಧಪಟ್ಟಿರುವುದಲ್ಲ. ಈಗಾಗಲೇ ಅಂತಿಮ ತೀರ್ಪು ಬಂದಿದೆ. Gazette Notification ಮಾತ್ರ ಆಗಬೇಕಾಗಿದೆ. Gazette Notification ಆಗದೆ ಇರುವುದರಿಂದ ಯು.ಕೆ.ಪಿ 3ನೇ ಹಂತದ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಆಗುತ್ತಿಲ್ಲ. ಇದರ ಬಗ್ಗೆ ತೀವ್ರಗತಿಯಲ್ಲಿ ನಿರ್ಣಯವನ್ನು ತೆಗೆದುಕೊಳ್ಳಬೇಕು. ಇವತ್ತು ಉತ್ತರ ಕರ್ನಾಟಕ ಭಾಗದಲ್ಲಿ ಅಧಿವೇಶನ ನಡೆಯುತ್ತಿದೆ, ನಾವು ಸುಪ್ರೀಮ್ ಕೋರ್ಟ್‌ನಲ್ಲಿರುವ ತಕರಾರು ಅರ್ಜಿಯನ್ನು ವಜಾಗೊಳಿಸುತ್ತೇವೆ, Gazette Notification ಮಾಡಿಸುತ್ತೇವೆ, ಇಷ್ಟು ಹಣವನ್ನು ಇದಕ್ಕೆ ಮೀಸಲಿಡುತ್ತೇವೆ, ೨೨ ಹಳ್ಳಿಗಳ ಪುನರ್ವಸತಿಗಾಗಿ ಎಷ್ಟು ಹಣ ಬೇಕು ಅಷ್ಟು ಹಣವನ್ನು ಮೀಸಲಿಡುತ್ತೇವೆ ಎಂದು ಸರ್ಕಾರ ಘೋಷಣೆ ಮಾಡಬೇಕು ಎಂದು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಯು.ಕೆ.ಪಿ 3ನೇ ಹಂತದ ಯೋಜನೆಯಲ್ಲಿ 9 lift irrigation ಯೋಜನೆಗಳು ಬರುತ್ತವೆ.

**ಉಪ ಸಭಾಪತಿಯವರು**:- ಆದಷ್ಟು ಬೇಗ ಮಾತನಾಡಿ ಮುಗಿಸಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಗಳೆ, ಈ ವಿಷಯದಲ್ಲಿ ಇನ್ನು ನಾನು ಸಾಕಷ್ಟು ಮಾತನಾಡುವುದು ಇದೆ, ಬೇಗ ಮುಗಿಸಿ ಎಂದರೆ ಹೇಗೆ? ಮಾತನಾಡಲು ನನಗೆ ಸಮಯ ಕೊಡಬೇಕು. ನಾನು ಸಮಯವನ್ನು ವ್ಯರ್ಥ ಮಾಡುವುದಿಲ್ಲ.

**ಉಪ ಸಭಾಪತಿಯವರು**:- ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಎಲ್ಲವನ್ನು ಉಲ್ಲೇಖ ಮಾಡಿದ್ದಾರೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ನಾನು ಪ್ರಸ್ತಾಪ ಮಾಡುವ ವಿಷಯಗಳನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಅಥವಾ ಬೇರೆ ಯಾರೇ ಸದಸ್ಯರು ಪ್ರಸ್ತಾಪ ಮಾಡಿರುವುದಿಲ್ಲ. ಅವರು ಪ್ರಸ್ತಾಪ ಮಾಡದೆ ಇರುವಂತಹ ವಿಷಯಗಳನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ದಯಮಾಡಿ ನನಗೆ ಸಮಯಾವಕಾಶವನ್ನು ಕೊಡಿ.

**ಉಪ ಸಭಾಪತಿಯವರು**:- ಈಗಾಗಲೇ ಅನೇಕ ಸದಸ್ಯರು ಆಲಮಟ್ಟಿ ಡ್ಯಾಂ ಬಗ್ಗೆ ಎಲ್ಲವನ್ನು ಪ್ರಸ್ತಾಪ ಮಾಡಿದ್ದಾರೆ. ನಿಮಗೆ ಎಷ್ಟು ಸಮಯ ಬೇಕು.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಎಷ್ಟು ಸಮಯಬೇಕು ಎನ್ನುವುದನ್ನು ಹೇಳಲು ಆಗುವುದಿಲ್ಲ.

**ಉಪ ಸಭಾಪತಿಯವರು**:- ಇಷ್ಟು ಸಮಯಬೇಕು ಎಂದು ಹೇಳಿ. ಇಡೀ ಮಾತನಾಡಲು ಆಗುವುದಿಲ್ಲ. ಇನ್ನು ಮಾನ್ಯ ತಿಮ್ಮಾಪೂರವರು, ಶ್ರೀ ಯು.ಬಿ.ವೆಂಕಟೇಶ್‌ರವರು ಮಾತನಾಡುವವರಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಸಾಕಷ್ಟು ಸಮಯವನ್ನು ಕೊಡಲಾಗಿದೆ.

**ಶ್ರೀ ಬಿ.ಕೆ.ಹರಿಪ್ರಸಾದ್**:- ಮಾನ್ಯ ಸಭಾಪತಿಗಳೆ, ತಾವು ಇನ್ನು ಎಷ್ಟು ಸಮಯದವರೆಗೆ ಸದನವನ್ನು ನಡೆಸುತ್ತೀರಿ?

**ಉಪ ಸಭಾಪತಿಯವರು**:- 8 ಗಂಟೆವರೆಗೆ ಸದನವನ್ನು ನಡೆಸಲಾಗುತ್ತದೆ. ಇನ್ನು ಮಾತನಾಡುವವರಿದ್ದಾರೆ. ಸದಸ್ಯರು ನನಗೆ ಸಹಕಾರ ಕೊಡಬೇಕು.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಗಳೆ, ನಾನು ಸಂಪೂರ್ಣವಾಗಿ ಸಹಕಾರ ಕೊಡುತ್ತೇನೆ. ಆದರೆ ನಾನು ಪ್ರಸ್ತಾಪ ಮಾಡಬೇಕಾದ ವಿಷಯಗಳನ್ನು ಪ್ರಸ್ತಾಪಿಸಲು ನನಗೆ ಅವಕಾಶ ಮಾಡಿಕೊಡಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಉಪ ಸಭಾಪತಿಯವರು**:- ಆಯಿತು ಮಾತನಾಡಿ. ಸದನವನ್ನು ಮುಕ್ತಾಯಗೊಳಿಸಬೇಕಾದ ಸಮಯಕ್ಕೆ ನಾನು ಸದನವನ್ನು ಮುಕ್ತಾಯಗೊಳಿಸುತ್ತೇನೆ. ಹಿಂದಿನವರಿಗೆ ಅವಕಾಶವಿರುವುದಿಲ್ಲ. ನಾನೇನು ಮಾಡಲು ಆಗುವುದಿಲ್ಲ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಗಳೆ**,** ನಾನು ವಿಷಯವನ್ನು ಪ್ರಸ್ತಾಪ ಮಾಡಬೇಕು ಅದಕ್ಕಾಗಿ ನನಗೆ ಸಮಯವಕಾಶವನ್ನು ಮಾಡಿಕೊಡಿ ಎಂದು ವಿರೋಧ ಪಕ್ಷದ ನಾಯಕರಿಗೂ ಹೇಳಿದ್ದೇನೆ, ಮಾನ್ಯ ಮುಖ್ಯಸಚೇತಕರಿಗೂ ಹೇಳಿದ್ದೇನೆ, ತಮಗೂ ಹೇಳಿದ್ದೇನೆ.

**ಉಪ ಸಭಾಪತಿಯವರು**:- ಆಯಿತು ಮಾತನಾಡಿ, 8 ಗಂಟೆಗೆ ಸದನವನ್ನು ನಾನು ಮುಕ್ತಾಯಗೊಳಿಸುತ್ತೇನೆ, ಉಳಿದ ಸದಸ್ಯರಿಗೆ ಅವಕಾಶವಿರುವುದಿಲ್ಲ. ಅದಕ್ಕೆ ನಾನು ಏನು ಮಾಡಲು ಆಗುವುದಿಲ್ಲ.

**ಶ್ರೀ ಪ್ರಕಾಶ್ ಕೆ.ರಾಥೋಡ್**:- ಮಾನ್ಯ ಸಭಾಪತಿಗಳೆ, ಯು.ಕೆ.ಪಿ 3ನೇ ಹಂತದ ಯೋಜನೆಯಿಂದ ಬಿಜಾಪೂರ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕಾಗಿದೆ. ೨೦೦ ಕಿ.ಮೀ ದೂರದಲ್ಲಿ ತೋರಣಗಲ್ಲಿನಲ್ಲಿರುವ ಜಿಂದಾಲ್ ಕೈಗಾರಿಕೆಗೆ ಕೃಷ್ಣಾ ನದಿ ನೀರನ್ನು ಕೊಡುತ್ತಿದ್ದಾರೆ. ಆದರೆ 70 ಕಿ.ಮೀ ದೂರದಲ್ಲಿರುವ ಬಿಜಾಪೂರ ಜಿಲ್ಲೆಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಇವತ್ತಿನವರೆಗೂ ಆಗುತ್ತಿಲ್ಲ. ಈ ಕೆಲಸವನ್ನು ಆದಷ್ಟು ಬೇಗ ಮಾಡಬೇಕೆಂದು ಸರ್ಕಾರಕ್ಕೆ ನಾನು ಒತ್ತಾಯಿಸುತ್ತೇನೆ. ಇಷ್ಟೇ ಅಲ್ಲ ಕೇಂದ್ರ ಸರ್ಕಾರದ ಜಲಜೀವನ್ ಮಿಶನ್‌ನ ಅಡಿಯಲ್ಲಿ ಪ್ರತಿ ಹಳ್ಳಿಗೂ ಶುದ್ಧ ಕುಡಿಯುವ ನೀರನ್ನು ಕೊಡಬೇಕೆಂದು ನಿರ್ಣಯ ಮಾಡಲಾಗಿದೆ. ಅದರ ಜೊತೆಗೆ ಆಲಮಟ್ಟಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆಗೆ ನೀರು ಬಳಕೆ ಮಾಡಿ ವಿಜಯಪುರ ಜಿಲ್ಲೆಯ ಪ್ರತಿಯೊಂದು ಹಳ್ಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ಸಂಗತಿ ಎಂದರೆ, 'ರಾಮಥಾಣ ಹನಿ ನೀರಾವರಿ ಯೋಜನೆ' ಎಂದು ನಮ್ಮ ರಾಜ್ಯದಲ್ಲಿಯೇ ಎರಡನೇ ದೊಡ್ಡ ಯೋಜನೆ ಇದು, ಇದರಲ್ಲಿ 60.000 ಹೆಕ್ಟರ್ ಜಮೀನಿನಲ್ಲಿ ಹನಿ ನೀರಾವರಿ ಮಾಡಬೇಕು ಎಂದು ಯೋಜನೆಯನ್ನು ತರಲಾಗಿತ್ತು. ಆದರಿಂದ ರೈತರಿಂದ ಇದಕ್ಕೆ ನಿರೀಕ್ಷಿತ ಫಲ ಸಿಗಲಿಲ್ಲ. ಏಕೆಂದರೆ ಇವರ ಹತ್ತಿರ ಮಾಹಿತಿ ಇಲ್ಲದೆ ಇರುವುದರಿಂದ ಈ ವಿಚಾರವಾಗಿ ರೈತರಿಗೆ ಮಾಹಿತಿಯನ್ನು ಕೊಡಲಿಲ್ಲ. ರಾಮಥಾಣ ಹನಿ ನೀರಾವರಿ ಯೋಜನೆ ಬಗ್ಗೆ technical ಮಾಹಿತಿಯನ್ನು

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ರೈತರಿಗೆ ಕೊಡದೆ ಇರುವುದರಿಂದ, ಇದರ ಬಗ್ಗೆ ರೈತರನ್ನು educate ಮಾಡದೆ ಇರುವುದರಿಂದ, ಈ ಯೋಜನೆಯನ್ನು ಸಂಪೂರ್ಣವಾಗಿ ಅನುಷ್ಠಾನ ಮಾಡಿದರೂ ಕೂಡಾ ಇದರಿಂದ ಫಲ ಸಿಕ್ಕಿರುವುದಿಲ್ಲ. ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಪರಿಗಣಿಸಿ, ರಾಮತಾಣ ಹನಿ ನೀರಾವರಿ ಯೋಜನೆಯನ್ನು ಸಂಪೂರ್ಣವಾಗಿ ಜಾರಿಗೆ ತರಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಈ ರಾಜ್ಯದಲ್ಲಿ ಕೆರೆ ತುಂಬುವ ಯೋಜನೆಯನ್ನು ಮಾಡಬೇಕೆಂದು ಸಾಕಷ್ಟು ಯೋಜನೆಗಳನ್ನು ತರಲಾಗಿದೆ. ಈ ಯೋಜನೆಯಲ್ಲಿ 175 ಕೆರೆಗಳನ್ನು ಈ ಯೋಜನೆಯಲ್ಲಿ ತೆಗೆದುಕೊಳ್ಳಲಾಗಿದೆ. ಅದರಲ್ಲಿ ಈಗಾಗಲೇ 165 ಕೆರೆಗಳನ್ನು ತುಂಬಲಾಗಿದೆ. ಇನ್ನು ಏಳು ಯೋಜನೆಯಲ್ಲಿ ಇದನ್ನು ಇನ್ನೂ ಅನುಷ್ಠಾನಕ್ಕೆ ತಂದಿರುವುದಿಲ್ಲ. ಏಕೆ ಇದನ್ನು ಅನುಷ್ಠಾನಕ್ಕೆ ತಂದಿಲ್ಲ ಎಂದರೆ, ಇದರಲ್ಲಿ ಲಿಫ್ಟ್ ಮಾಡಬೇಕಾಗಿದೆ. ಇದಕ್ಕೆ ಹಣ ಬಿಡುಗಡೆ ಮಾಡಿರುವುದಿಲ್ಲ.  ಇದಕ್ಕೆ ಹಣ ಬಿಡುಗಡೆ ಮಾಡಿ ಕೆರೆ ತುಂಬುವ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಸರ್ಕಾರ ಮುಂದೆ ಬರಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಕೆರೆ ತುಂಬುವ ಯೋಜನೆಯ ಜೊತೆಗೆ distributary canal ಮಾಡಬೇಕಾಗುತ್ತದೆ.  Distributary canal ಮಾಡದೆ ಇದ್ದರೆ ಕೆರೆ ತುಂಬುವ ನೀರನ್ನು ರೈತರು ಬಳಕೆ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಕೆನಾಲ್‌ಗಳನ್ನು ನಿರ್ಮಾಣ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.  ಯು.ಕೆ.ಪಿ ಮೂರನೇ ಹಂತದ ಕಾಮಗಾರಿಗಳಿಗೆ ಬೇಕಾದಂತಹ ಕೆನಾಲ್‌ಗಳು ಹಿಂದೆ ನಿರ್ಮಾಣವಾಗಿವೆ. ಆ ಕೆನಾಲ್‌ಗಳಿಗೆ ನೀರು  ಹರಿಸುತ್ತಿಲ್ಲ. ಇದರಿಂದ ಕೆನಾಲ್‌ಗಳು ದುರಸ್ತಿಗೆ ಬರುತ್ತಿವೆ.  ದುರಸ್ತಿಗೆ ಬಂದರೆ ಹಣ ಖರ್ಚಾಗುತ್ತದೆ. ಹಿಂದೆ ಖರ್ಚು ಮಾಡಿರುವ ಹಣ ವ್ಯರ್ಥವಾಗುತ್ತದೆ. ಆದ್ದರಿಂದ ಯು.ಕೆ.ಪಿ ಮೂರನೇ ಹಂತದ ಕಾಮಗಾರಿಯನ್ನು ಆದಷ್ಟು ಬೇಗ ಕೈಗೊಳ್ಳಬೇಕೆಂದು ಸರ್ಕಾರಕ್ಕೆ ವಿನಂತಿಸಿಕೊಳ್ಳುತ್ತೇನೆ. ಯು.ಕೆ.ಪಿ ಮೂರನೇ ಹಂತದ ಕಾಮಗಾರಿಗೆ ಬೇಕಾದಷ್ಟು ನೀರು ಈಗ ಸಂಗ್ರಹಣೆಯಾಗಿದೆ.  ಆದರೆ ಸಂಗ್ರಹಣೆಯಾದ  ನೀರಿನಲ್ಲಿ ಪ್ರತಿ ವರ್ಷ 0.5 ಟಿಎಂಸಿ ಹೂಳು ಬರುತ್ತಿದೆ. 10/11 ವರ್ಷಗಳಿಂದ 20 ಟಿಎಂಸಿ ಯಷ್ಟು ಹೂಳು ಆಲಮಟ್ಟಿ ಜಲಾಶಯದಲ್ಲಿ ತುಂಬಿದೆ.  ತುಂಗಭದ್ರ ಜಲಾಶಯದಲ್ಲಿ 30 ಟಿಎಂಸಿ ಹೂಳು ತುಂಬಿದೆ. ಆ ಹೂಳನ್ನು ತೆಗೆಯಲು ಆಗುತ್ತಿಲ್ಲ. ಆದ್ದರಿಂದ ಹೂಳು ತೆಗೆಯುವ ಯೋಜನೆಯನ್ನು ಈಗಲೇ ಅನುಷ್ಠಾನಕ್ಕೆ ತಂದರೆ ಮುಂದಕ್ಕೆ ಅನುಕೂಲವಾಗುತ್ತದೆ. ಇದರಿಂದ ಖರ್ಚು ಕಡಿಮೆಯಾಗುತ್ತದೆ.  ಹೂಳು ತೆಗೆಯುವ ಯೋಜನೆಯನ್ನು ಈಗಲೇ ಅನುಷ್ಠಾನಕ್ಕೆ ತಂದು ಆಲಮಟ್ಟಿ ಜಲಾಶಯಕ್ಕೆ ರಕ್ಷಣೆ ಕೊಡಬೇಕೆಂದು ನಾನು ಸರ್ಕಾರದಲ್ಲಿ ವಿನಂತಿಸಿಕೊಳ್ಳುತ್ತೇನೆ.

ಯು.ಕೆ.ಪಿ ಮೂರನೇ ಹಂತ ಪೂರ್ಣವಾಗಬೇಕಾದರೆ 22 ಹಳ್ಳಿಗಳು ಮುಳಗಡೆಯಾಗುತ್ತವೆ. ಲಕ್ಷಾಂತರ ಎಕರೆ ಜಮೀನು ಇದರಲ್ಲಿ ಮುಳಗಡೆಯಾಗುತ್ತದೆ. ಹಿಂದಿನ ಸರ್ಕಾರವಿದ್ದಾಗ ನೀರಾವರಿ ಸಚಿವರು ಒಂದು ಯೋಜನೆಯನ್ನು ತಂದಿದ್ದರು. ಏನೆಂದರೆ ಇದು ಬಹಳ ದುಬಾರಿಯಾಗುತ್ತದೆ, ಯು.ಕೆ.ಪಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

೩ನೇ ಹಂತದ ಕಾಮಗಾರಿಯನ್ನು ಪೂರ್ಣಗೊಳಿಸಲು ಮತ್ತು ಪುರ್ನವಸತಿಗೆ ಒಂದು ಲಕ್ಷ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆದ್ದರಿಂದ Norway technology ಮೂಲಕ ತಡೆ ಗೋಡೆಗಳನ್ನು ಕಟ್ಟಿದರೆ ಸುಮಾರು ಹಳ್ಳಿಗಳು ಮುಳುಗುವುದಿಲ್ಲ.

(ಮುಂದು)

**(1235)21-12-2021(07-10)bsd-ak**

**ಶ್ರೀ ಪ್ರಕಾಶ್ ಕೆ. ರಾಥೋಡ್ (ಮುಂದು)**

ಅವರಿಗೂ ಗೊತ್ತಿದ್ದರೂ ಈ ವಿಚಾರಗಳನ್ನು ಕೇಳಬೇಕೆಂದು ವಿನಂತಿ ಮಾಡುತ್ತೇನೆ, ನಾನು ಇನ್ನೇನನ್ನು ಹೇಳುವುದಕ್ಕೆ ಆಗುವುದಿಲ್ಲ. ಈ Norway technology ಯಂತೆ ತಡೆಗೋಡೆಗಳ ಮೂಲಕ ಹಳ್ಳಿಗಳು ಮುಳುಗಡೆಯಾಗದಂತೆ ಕಡಿಮೆ ಖರ್ಚಿನಲ್ಲಿ U.K.P (Upper Krishna Project) ೩ನೇ ಹಂತವನ್ನು ಮುಕ್ತಾಯ ಮಾಡಬಹುದು. ಇದರ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಇಲ್ಲದ ಕಾರಣ ಸರ್ಕಾರವು ಅಧಿಕಾರಿಗಳ ಜೊತೆ ಚರ್ಚೆ ಮಾಡಬೇಕು ಮತ್ತು ಇದನ್ನು ಏಕೆ ಅನುಷ್ಠಾನಕ್ಕೆ ತಂದಿಲ್ಲ ಎಂಬ ಬಗ್ಗೆ ಚಿಂತನೆ ಮಾಡಬೇಕೆಂದು ಒತ್ತಾಯಿಸುತ್ತೇನೆ.

ಇನ್ನು ಶ್ರೀ ಪರಮಶಿವಯ್ಯನವರ ವರದಿಯು ಮಾನ್ಯ ಬಸವರಾಜ ಬೊಮ್ಮಾಯಿ ರವರು ನೀರಾವರಿ ಸಚಿವರಾಗಿದ್ದಾಗ ಸಲ್ಲಿಸಲಾಗಿದೆ. ಹಾವೇರಿ ಮತ್ತು ಹುಬ್ಬಳ್ಳಿ ಭಾಗದಲ್ಲಿ ಬರುವ ಬೆಣ್ಣೆಹಳ್ಳ ಮತ್ತು ಬಿಜಾಪುರದ ದೋಣಿ ನದಿಯ ಪ್ರವಾಹ ನಿಯಂತ್ರಣದ ಬಗ್ಗೆ ವರದಿಯನ್ನು ಸಲ್ಲಿಸಿದ್ದಾರೆ. ಈ ವರದಿಯಂತೆ ಕೇಂದ್ರ ಸರ್ಕಾರದಿಂದ ಹಣ ಬರುವುದಿದ್ದು, ಈ ಎರಡು ವರದಿಗಳನ್ನು ಸರ್ಕಾರವು ಪರಿಗಣಿಸದೇ ಹಾಗೆ ಬಿಡಲಾಗಿದೆ. ಇದನ್ನು ಪರಿಗಣಿಸಿ, ವರದಿಗಳನ್ನು ಅನುಷ್ಠಾನಕ್ಕೆ ತರಬೇಕೆಂದು ಒತ್ತಾಯ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, 'A' Scheme ನಲ್ಲಿ ಸಂಪೂರ್ಣ ಕೆಲಸ ಆಗಿ, ೫ ಲಕ್ಷ ಎಕರೆಗೆ ಆಗುವಷ್ಟು ನೀರು ಸಂಗ್ರಹಿಸಿ ನೀರಾವರಿ ಮಾಡಲಾಗಿದೆ. ಆದರೆ ಈ ನೀರಾವರಿ ಸಂಪೂರ್ಣವಾಗಿ ಉಪಯೋಗ ಆಗುತ್ತಿದೆಯೇ? ಮೊದಲನೆಯ ಹಂತದ ನೀರು ಹಳ್ಳಿಗಳಿಗೆ ಸಂಪೂರ್ಣವಾಗಿ ಹೋಗುತ್ತಿದೆಯೇ? ಅದರ ನ್ಯೂನತೆಗಳು ಏನಿವೆ? ನೀರು ಏಕೆ ಹೋಗುತ್ತಿಲ್ಲ? Tail end ಗೆ ಏಕೆ ನೀರು ಮುಟ್ಟುತ್ತಿಲ್ಲ ಎಂಬುದರ ಬಗ್ಗೆ ಸರ್ಕಾರ ಮಾಹಿತಿಯನ್ನು ಕೊಡಬೇಕು.

ಇನ್ನು ಆಂಧ್ರ ಪ್ರದೇಶದಲ್ಲಿ ಯಾವ ಪ್ರಮಾಣದಲ್ಲಿ ಕೆಲಸ ಆಗುತ್ತಿದೆ ಎಂಬುದನ್ನು ನೋಡಬೇಕು. ನಮ್ಮ ನದಿ ಅಲ್ಲಿಗೆ ಹರಿದು ಹೋಗಿ ಯಾವ ಪ್ರಮಾಣದಲ್ಲಿ ಕೆಲಸ ಮಾಡುತ್ತಾರೆ ಎಂಬುದನ್ನು ನೋಡಬೇಕು. ಪೋಲಾವರಂ project ಅನ್ನು ರೂ.೧ ಲಕ್ಷ ಕೋಟಿ ಖರ್ಚು ಮಾಡಿ ೪ ವರ್ಷಗಳಲ್ಲಿ ಮುಕ್ತಾಯದ ಹಂತಕ್ಕೆ ಬಂದಿದೆ. ಕಾಳೇಶ್ವರ್-ಗೋದಾವರಿಯಲ್ಲಿ ವಿನೂತನ ಒಂದು ಯೋಜನೆಯನ್ನು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಡಿದ್ದು, ಸುಮಾರು ೧೪೫ ಅಡಿ ಕೆಳಗಿನಿಂದ ನೀರನ್ನು ಪಂಪ್ ಮಾಡುತ್ತಾರೆ. ಇದನ್ನು ಬಾಹುಬಲಿ ಪಂಪ್ ಎಂದು ಕರೆಯುತ್ತಿದ್ದು, ಒಂದು second ಗೆ ೫೦ ಸಾವಿರ ಲೀಟರ್ ನೀರನ್ನು ಪಂಪ್ ಮಾಡುತ್ತಿದ್ದಾರೆ. ಯಾವುದೇ ರೈತರ ಭೂಮಿ ಅಥವಾ ಹಳ್ಳಿಗಳು ಮುಳುಗಡೆಯಾಗದೇ ೧೪೫ ಅಡಿಯಲ್ಲಿ pump set ಹಾಕಿ ನೀರನ್ನು ಪ್ರತಿ second ಗೆ ೫೦ ಸಾವಿರ ಲೀಟರ್ ತೆಗೆಯಲು project ಮಾಡಿದ್ದಾರೆ. ಅದರಲ್ಲಿ ೯ barrage ಗಳನ್ನು ಮಾಡಿ, ನೀರು reverse ಹೋಗುವಂತಹ ಕೆಲಸ ಆಗುತ್ತದೆ. ಇದರಲ್ಲಿ ಹಳ್ಳಿಗಳು ಮುಳುಗಡೆಯಾಗಿಲ್ಲ. ಇಂತಹ ಯೋಜನೆಗಳನ್ನು ಆಂಧ್ರ ಪ್ರದೇಶ ಮತ್ತು ತೆಲಂಗಾಣ ಸರ್ಕಾರಗಳು ಮಾಡುತ್ತಿದ್ದು, ನಾವು ಏಕೆ ಮಾಡಬಾರದು? ಇದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕೆಂದು ವಿನಂತಿಸುತ್ತೇನೆ. ಈ ಯೋಜನೆಯನ್ನು 'Mission Baghiratha' ಎಂದು ಕರೆಯುತ್ತಾರೆ. ತೆಲಂಗಾಣ ರಾಜ್ಯದ ಅರ್ಧ ಹಳ್ಳಿಗಳಿಗೆ ಉಚಿತವಾಗಿ ಕುಡಿಯುವ ನೀರನ್ನು ಈ ಯೋಜನೆಯಿಂದ ಪೂರೈಸಲಾಗುತ್ತಿದೆ. ಇದನ್ನು gravity use ಮಾಡಿ ಮಾಡಲಾಗುತ್ತಿದ್ದು, ಸರ್ಕಾರ ಈ ರೀತಿ ಯೋಜನೆಗಳನ್ನು ಜಾರಿಗೆ ತರಬೇಕು. ಇಂತಹ ಯೋಜನೆಗಳಿಂದ ರೈತರಿಗೆ ಅನುಕೂಲವಾಗುತ್ತದೆ ಎಂದು ಭಾವಿಸಿದ್ದೇವೆ.

ಮಾನ್ಯ ಸಭಾಪತಿಯವರೇ, ನಾವು ನೀರಾವರಿ ಯೋಜನೆಗಳನ್ನು ಏಕೆ ಅನುಷ್ಠಾನಕ್ಕೆ ತರಬೇಕು? ವಿಶೇಷವಾಗಿ ಬಿಜಾಪುರ ಜಿಲ್ಲೆಯು ಬರಗಾಲ ಪೀಡಿತ ಜಿಲ್ಲೆಯಾಗಿದ್ದು, ನೀರಾವರಿ ಸೌಲಭ್ಯ ಇಲ್ಲದ ಕಾರಣ ಜನರು ಇಲ್ಲಿಂದ ಬೇರೆ ರಾಜ್ಯಗಳಿಗೆ ಕೂಲಿ ಮಾಡಲು ವಲಸೆ ಹೋಗುತ್ತಾರೆ. ವಿಶೇಷವಾಗಿ ಲಂಬಾಣಿ ಜನಾಂಗ ಗುಳೆ ಹೋಗಿ ಬೇರೆ ಕಡೆ ಕೆಲಸ ಮಾಡುತ್ತಾರೆ. ಅವರು ಸಾಕಷ್ಟು ಬಡತನದಲ್ಲಿದ್ದು, ಇಂತಹವರು ಗುಳೆ ಹೋಗದಂತೆ ತಡೆಯಲು ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಂಡಿದೆ? ಸರ್ಕಾರವು ಉದ್ಯಮ ನೀತಿಯನ್ನು ಘೋಷಣೆ ಮಾಡಿದ್ದು, ಇದರಿಂದ ಆಲಮಟ್ಟಿ ಜಲಾಶಯ ಇರುವ ಜಿಲ್ಲೆಗಳಲ್ಲಿ ಎಷ್ಟು ಉದ್ಯಮಗಳನ್ನು ಸೃಷ್ಟಿ ಮಾಡಿದ್ದಾರೆ? ಎಷ್ಟು ಉದ್ಯೋಗವನ್ನು ಮತ್ತು factory ಗಳನ್ನು ಮಾಡಿದ್ದಾರೆ? ಎಷ್ಟು ಜನರಿಗೆ ಕೆಲಸ ಕೊಟ್ಟಿದ್ದಾರೆ. ಸರ್ಕಾರ ಮಾಡಿದ ಉದ್ಯಮ ನೀತಿಯನ್ನು ಅನುಷ್ಠಾನಕ್ಕೆ ತರಲು ..... ಇದರ ಬಗ್ಗೆ ಸರ್ಕಾರವು ಮಾಹಿತಿ ಕೊಡಬೇಕೆಂದು ವಿನಂತಿಸುತ್ತೇನೆ.

ಇನ್ನು ಕಬ್ಬು ಬೆಳೆಯನ್ನು continuous ಆಗಿ ಬೆಳೆದು ದೊಡ್ಡ ಸವಳು-ಜವಳಿನ ಸಮಸ್ಯೆ ಉಂಟಾಗಿದ್ದು, ರೈತರನ್ನು ಜಾಗೃತರನ್ನಾಗಿ ಮಾಡಬೇಕು. Alternate ಆಗಿ ಯಾವ ಬೆಳೆಗಳನ್ನು ಬೆಳೆಯಬೇಕೆಂದು ಚಿಂತನೆ ಮಾಡಿ, ರೈತರನ್ನು ಜಾಗೃತರನ್ನಾಗಿ ಮಾಡುವ ಕೆಲಸವನ್ನು ಮಾಡಬೇಕೆಂದು ವಿನಂತಿಸುತ್ತೇನೆ. ಈ ಭಾಗದಲ್ಲಿ ಅಭಿವೃದ್ಧಿ ಆಗಬೇಕು. ಬಿಜಾಪುರ ಜಿಲ್ಲೆಯಲ್ಲಿ ದ್ರಾಕ್ಷಿಯನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದ್ದು, ಮಾನ್ಯ ಎಸ್.ಎಂ.ಕೃಷ್ಣಾರವರ ಸರ್ಕಾರ ಇದ್ದಾಗ Wine Park ಮಾಡುವ ಬಗ್ಗೆ ಘೋಷಣೆ ಮಾಡಲಾಗಿತ್ತು. ಆದರೆ Wine Park ಎಲ್ಲಿಯವರೆಗೂ ಬಂದಿದೆ? ಇದನ್ನು ಅನುಷ್ಠಾನಕ್ಕೆ ತರಲು ಸರ್ಕಾರ ಬದ್ಧವಾಗಿದೆಯೇ? ಬಿಜಾಪುರವನ್ನು ಜಿಲ್ಲೆಯನ್ನು ತೋಟಗಾರಿಕಾ ಜಿಲ್ಲೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಂದು ಘೋಷಿಸಿದ್ದು, ತೋಟಗಾರಿಕೆಗೆ ಅನುಕೂಲಕರವಾದ ಯಾವ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿದ್ದಾರೆ ಎಂದು ಹೇಳಬೇಕೆಂದು ವಿನಂತಿಸುತ್ತೇನೆ. ನಾವು ಬಿಜಾಪುರ ಜಿಲ್ಲೆಯಲ್ಲಿ ಬಿಳಿಜೋಳವನ್ನು ಸಾಕಷ್ಟು ಬೆಳೆಯುತ್ತಿದ್ದು, ಇವತ್ತು ಬಿಳಿ ಜೋಳ ಬೆಳೆಯುವುದನ್ನು ರೈತರು ಕಡಿಮೆ ಮಾಡುತ್ತಿದ್ದಾರೆ. ಇದಕ್ಕೆ ಸರ್ಕಾರ ಬೆಂಬಲ ಬೆಲೆ ಕೊಡುವುದನ್ನು ಕಡಿಮೆ ಮಾಡಲಾಗಿದೆಯೇ? ಇಲ್ಲವೇ ಬೇರೆ ಬೆಳೆಗಳನ್ನು ಬೆಳೆಯುತ್ತಿದ್ದಾರೆಯೇ? ಈ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು. ರೈತರಿಗೆ ಬಿಳಿ ಜೋಳ ಬೆಳೆಯಲು ಉತ್ತೇಜನ ಕೊಡಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ.

**DEPUTY CHAIRMAN:** Conclude ಮಾಡಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಇನ್ನು ೨-೩ point ಗಳಿದ್ದು, ಅವುಗಳ ಬಗ್ಗೆ ಮಾತನಾಡಿ ಮುಗಿಸುತ್ತೇನೆ.

**ಉಪ ಸಭಾಪತಿಯವರು:-** ಇನ್ನು ಮಾತನಾಡುವ ಸದಸ್ಯರಿದ್ದು, ಇದನ್ನು ಅರ್ಥಮಾಡಿಕೊಂಡರೆ ಆಯಿತು.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಇನ್ನು ಸ್ವಲ್ಪ ಸಮಯದಲ್ಲಿ ಮುಗಿಸುತ್ತೇನೆ.

**ಉಪ ಸಭಾಪತಿಯವರು:-** ಸ್ವಲ್ಪ ಸಮಯ ಅಲ್ಲ, ಇನ್ನು just five minutes ನಲ್ಲಿ ಮುಗಿಸಬೇಕು. Please co-operate.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಆ ರೀತಿ ಮುಗಿಸುವುದಕ್ಕೆ ಆಗುವುದಿಲ್ಲ.

**ಉಪ ಸಭಾಪತಿಯವರು:-** ಆಗಲ್ಲ ಎಂದರೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ತಾವು ಅರ್ಥ ಮಾಡಿಕೊಳ್ಳಬೇಕು.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ನಾನು ಪ್ರಸ್ತಾಪಿಸಿದ point ಗಳನ್ನು ಬೇರೆ ಯಾರಾದರೂ ಪ್ರಸ್ತಾಪಿಸಿದ್ದಾರೆಯೇ? ನಾನು ಹೊಸ ಹೊಸ ವಿಷಯಗಳನ್ನು .....

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಉಪ ಸಭಾಪತಿಯವರು:-** ತಾವೇ ಇಡೀ ದಿವಸ ಮಾತನಾಡಿ, ಬೆಳಗ್ಗೆವರೆಗೂ ಮಾತನಾಡಿ, ಅರ್ಥ ಮಾಡಿಕೊಳ್ಳದಿದ್ದರೆ ಹೇಗೆ? ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಬೇಕು. ನಿಮ್ಮ ಇತರೆ ಸದಸ್ಯರಿಗೆ ಮಾತನಾಡಲು ಅವಕಾಶ ನೀಡಬೇಕಲ್ಲವೇ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರಿಗೆ ಮಾತನಾಡಲು ಅವಕಾಶ ಕೊಡಿ.

**ಉಪ ಸಭಾಪತಿಯವರು:-** ಅರ್ಧ ಗಂಟೆ ಮಾತನಾಡಿದ್ದಾರೆ.

**Sri S.R. PATIL:-** It is a very important subject. ಅವರು senior member ಇದ್ದಾರೆ, ಆ ಭಾಗದಿಂದ ಬಂದವರಾಗಿದ್ದಾರೆ. ಆ ಭಾಗದ ಕಳಕಳಿ ಇದೆ.

**ಉಪ ಸಭಾಪತಿಯವರು:-** ಇನ್ನು ಮಾನ್ಯ ತಿಮ್ಮಾಪೂರ ಮತ್ತು ಶ್ರೀ ಯು.ಬಿ. ವೆಂಕಟೇಶ್ ರವರು ಮಾತನಾಡುವವರಿದ್ದು, ಅವರ ಸಮಯವನ್ನು sacrifice ಮಾಡಿಸಿ, ಇವರು ಮಾತನಾಡಲಿ.

**ಶ್ರೀ ಎಸ್.ಆರ್.ಪಾಟೀಲ್:-** ಅದಕ್ಕೆ ನಾನೇನು ಮಾಡಲಿ, ಇವತ್ತೇ ಮುಗಿಸಬೇಕೆಂಬ ಷರತ್ತು ಇದೆಯೇ?

**ಉಪ ಸಭಾಪತಿಯವರು:-** ಆಡಳಿತ ಪಕ್ಷದವರಿಗೆ ಇನ್ನೂ ಅವಕಾಶವನ್ನೇ ಕೊಟ್ಟಿಲ್ಲ. ವಿರೋಧ ಪಕ್ಷದವರಿಗೆ ಅವಕಾಶ ಕೊಟ್ಟಿರುವುದು.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾಳೆ one full day ಚರ್ಚೆ ಮಾಡಲಿ.

**ಉಪ ಸಭಾಪತಿಯವರು:-** ಬೇರೆ ವಿಷಯಗಳು ಇಲ್ಲವೇ? ಇದರ ಬಗ್ಗೆ ತಮಗೂ ಗೊತ್ತಿದ್ದು ಈ ರೀತಿ ಮಾತನಾಡುವುದು ಸರಿ ಎನಿಸುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:-** ಆ ಭಾಗದ ಬಗ್ಗೆ ಕಾಳಜಿ ಇಟ್ಟುಕೊಂಡು ಮಾತನಾಡುತ್ತಾರೆ.

**ಉಪ ಸಭಾಪತಿಯವರು:-** ಇರುತ್ತದೆ, ಪ್ರತಿಯೊಬ್ಬರೂ ಹೇಳಿದ ವಿಚಾರವೇ .....

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಾಳೆ ದಿವಸ ಆಗುವುದಿಲ್ಲ, ಇವತ್ತು ಎಷ್ಟು ಸಮಯವಾದರೂ ಸರಿ ಮುಕ್ತಾಯ ಮಾಡಲೇಬೇಕು.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಎಸ್.ಆರ್. ಪಾಟೀಲ್:-** ಇವತ್ತೇ ಮುಗಿಸಬೇಕು ಎಂದು ಸಂವಿಧಾನದಲ್ಲಿ ಬರೆದಿದೆಯೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಬೇರೆ business ಇದೆ, ನಾಳೆ ಪ್ರಶ್ನೋತ್ತರ ಆದ ನಂತರ ಉತ್ತರ ಕೊಡುತ್ತೇವೆ.

**ಶ್ರೀ ಎಸ್.ಆರ್. ಪಾಟೀಲ್:-** ಈ ವಿಚಾರದ ಬಗ್ಗೆ ನಿಮಗೆ ಮಹತ್ವ ಇಲ್ಲ ಎನ್ನುವಂತೆ ಆಯಿತು.

**ಉಪ ಸಭಾಪತಿಯವರು:-** ೮ ಗಂಟೆಯವರೆಗೂ ಅವಕಾಶ ಕೊಡುತ್ತೇನೆ, ಅಷ್ಟರಲ್ಲಿ ಮುಗಿಸಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಹೇಳುವುದೆಲ್ಲವನ್ನೂ ಹೇಳಿ ಆಯಿತು.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಪ್ರಕಾಶ್ ರಾಥೋಡ್ ರವರು ಹರಿಕಥೆ ಹೇಳುತ್ತಿದ್ದಾರೆಯೇ?

**ಉಪ ಸಭಾಪತಿಯವರು:-** ಆಡಳಿತ ಮತ್ತು ವಿರೋಧ ಪಕ್ಷಗಳಿಗೆ ೮ ಗಂಟೆಯವರೆಗೂ ಸಮಯ ಇದ್ದು, ಅದರೊಳಗೆ ಎಷ್ಟು ಜನ ಮಾತನಾಡುತ್ತಾರೋ, ಅಷ್ಟು ಜನ ಮಾತನಾಡಲಿ.

**ಶ್ರೀ ಎಸ್.ಆರ್. ಪಾಟೀಲ್:-** ಇದಕ್ಕೆ time restrict ಮಾಡಬೇಕು, ಇದು ನನ್ನ humble submission ಆಗಿದೆ. Please don't restrict time. Let him speak. You allow him. ನಾಳೆ ಒಂದು ದಿವಸ ಮಾತನಾಡೋಣ.

**DEPUTY CHAIRMAN:** Restrict ಮಾಡುವ ಪ್ರಶ್ನೆ ಅಲ್ಲ, ಸಮಯವನ್ನು ನೋಡಿಕೊಳ್ಳುವ ಜವಾಬ್ದಾರಿ ಪೀಠಕ್ಕೆ ಇದೆ. Restrict ಮಾಡಬೇಡಿ ಎಂದು ಹೇಳುವುದಕ್ಕೆ ಬರುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:-** ಪೀಠವನ್ನು ನಾವು ಎಂದಿಗೂ question ಮಾಡುವುದಿಲ್ಲ.

**ಉಪ ಸಭಾಪತಿಯವರು:-** ಹಾಗೆ ಹೇಳುತ್ತೀರಿ, ಮತ್ತೆ question ಮಾಡುತ್ತಲೇ ಇದ್ದೀರಿ.

**Sri S.R. PATIL:-** No, nothing... You don't presume that.

**ಉಪ ಸಭಾಪತಿಯವರು:-** ಈಗ ತಾವು restrict ಮಾಡುವುದಕ್ಕೆ ಅಧಿಕಾರ ಇಲ್ಲ ಎಂದು ಹೇಳಿದಿರಿ. ಪೀಠಕ್ಕೆ question ಮಾಡಿದಿರಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದು much concern ಇರುವ ವಿಷಯ ಇದೆ.

(ಮುಂದು)

**(1236)/21.12.2021/ 7.20/hv.rn** **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್(ಮುಂದು):-**

ಸನ್ಮಾನ್ಯ ಸಭಾಪತಿಯವರೇ, ಈ ಭಾಗದ ಅಳಿವು ಉಳುವಿನ ಪ್ರಶ್ನೆ ಇದೆ. ಜನರು ಸಾವು ಬದುಕಿನ ನಡುವೆ ಹೋರಾಡುತ್ತಿದ್ದಾರೆ. ಅದರ ಬಗ್ಗೆ ಮಾತನಾಡುವುದಕ್ಕೆ ಹಿರಿಯ ಸದಸ್ಯರಾಗಿರುವ ಶ್ರೀ ಪ್ರಕಾಶ್ ಕೆ. ರಾಥೋಡ್ ಅವರಿಗೆ ಅವಕಾಶವನ್ನು ನೀಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಸನ್ಮಾನ್ಯ ಸಭಾಪತಿಯವರೇ, ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೆ ಹಂತದಡಿಯಲ್ಲಿ ಪ್ರಮುಖವಾಗಿ ಮುಳವಾಡ ಏತ ನೀರಾವರಿ, ಚಿಮ್ಮಲಗಿ ಏತ ನೀರಾರಿ, ಹೆರಕಲ್ ಏತ ನೀರಾವರಿ, ಮುಲ್ಲಾಬಾದ್ ಏತ ನೀರಾವರಿ, ರಾಂಪೂರ ಏತ ನೀರಾವರಿ ಯೋಜನೆ ವಿಸ್ತರಣೆ, ಭೀಮಾ ಫ್ಲಾಂಕ್ ಏತ ನೀರಾವರಿ, ನಾರಾಯಣಪೂರ ಬಲದಂಡೆ ಕಾಲುವೆ ವಿಸ್ತರಣೆ, ಇಂಡಿ ಏತ ನೀರಾವರಿ ಯೋಜನೆ ವಿಸ್ತರಣೆ, ಕೊಪ್ಪಳ ಏತ ನೀರಾವರಿ ಯೋಜನೆಗಳು ಬರುತ್ತವೆ. ಇದಕ್ಕೆ 2017ರಲ್ಲಿ ಡಿ.ಪಿ.ಆರ್. ಆಗಿದೆ. ಇದರ ಅಂದಾಜು ವೆಚ್ಚ ಸುಮಾರು 2548ಕೋಟಿ ರೂಪಾಯಿಗಳಾಗಿವೆ. ಇಲ್ಲಿಯವರೆಗೆ ಕೇವಲ ಸುಮಾರು 10 ಸಾವಿರ ಕೋಟಿ ರೂಪಾಯಿಗಳನ್ನು ಮಾತ್ರ ವೆಚ್ಚ ಮಾಡಲಾಗಿದೆ. ಇನ್ನೂ ಭೂಸ್ವಾಧೀನ ಪ್ರಕ್ರಿಯೆ ಆಗಬೇಕಾಗಿದೆ. ಜನರಿಗೆ ಪುನರ್‌ವಸತಿ ಕಲ್ಪಿಸಬೇಕಾಗಿದೆ. ಇದಕ್ಕೆ ಸಂಬಂಧಪಟ್ಟ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಕೇಂದ್ರ ಸರ್ಕಾರ ಇದು ಅಂತರ್‌ರಾಜ್ಯ ವಿವಾದವಾಗಿದೆಯೆಂದು ಇವತ್ತಿನವರೆವಿಗೂ ಈ ಯೋಜನೆಗಳನ್ನು ಅನುಷ್ಠಾನಗೊಳಿಸುವುದಕ್ಕೆ ಅನುಮತಿಯನ್ನು ಕೊಟ್ಟಿಲ್ಲ. ರಾಜ್ಯ ಸರ್ಕಾರ ನ್ಯಾಯ ಮಂಡಳಿಯ ಮುಂದೆ ಹೋಗಿ, 'ಈ ವಿವಾದವನ್ನು ಬೇಗನೇ ಇತ್ಯರ್ಥಗೊಳಿಸಬೇಕು' ಎನ್ನುವ ವಾದವನ್ನು ಮಂಡನೆ ಮಾಡಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಈಗ ಇರುವಂತಹ ಏತ ನೀರಾವರಿಗಳಲ್ಲಿ jocquel ಮೂಲಕ ನೀರನ್ನು ತೆಗೆದು ಕಳುಹಿಸಿಕೊಡಲಾಗುತ್ತಿದೆ. ಇವು ಪ್ರಮುಖ ಕಾಲುವೆಗಳಾಗಿವೆಯೇ ಹೊರತು ವಿತರಣಾ ಕಾಲುವೆಗಳ ನಿರ್ಮಾಣ ಇನ್ನೂ ಆಗಿಲ್ಲ. ಇದನ್ನು ಸರ್ಕಾರ ಕೂಡಲೇ ಕೈಗೆತ್ತಿಕೊಳ್ಳಬೇಕಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಸಂಪೂರ್ಣಗೊಳಿಸಬೇಕು ವಿಜಾಪುರ ಜಿಲ್ಲೆಯ ಜನರ ಅಭಿವೃದ್ಧಿಯಾಗಬೇಕಾದರೆ, ಸುಮಾರು ಒಂದು ಲಕ್ಷ ಕೋಟಿ ರೂಪಾಯಿಗಳಿಗೂ ಹೆಚ್ಚಿನ ಹಣದ ಅವಶ್ಯಕತೆ ಇದೆ. ಆದರೆ, ಸರ್ಕಾರ ಆಯವ್ಯಯದಲ್ಲಿ ಸುಮಾರು 2 ಸಾವಿರ ಕೋಟಿ ರೂಪಾಯಿಗಳನ್ನು ಮಾತ್ರ ಮೀಸಲಾಗಿಟ್ಟಿದೆ. ಸರ್ಕಾರ 10 ಸಾವಿರ ಕೋಟಿ ರೂಪಾಯಿಗಳ ಅನುದಾನವನ್ನು ನೀಡಿದರೂ ಸಹ ಇದು ಮುಕ್ತಾಯಗೊಳ್ಳುವುದಕ್ಕೆ

ಸುಮಾರು 10 ರಿಂದ 15 ವರ್ಷಗಳು ಬೇಕಾಗುತ್ತದೆ. ಈ ಯೋಜನೆಗಳನ್ನು ಶೀಘ್ರವಾಗಿ ಮುಕ್ತಾಯಗೊಳಿಸುವುದಕ್ಕೆ ನಾನು ಹಲವಾರು ಸಲಹೆಗಳನ್ನು ನೀಡಿದ್ದೇನೆ. ಇದನ್ನು ರಾಷ್ಟ್ರೀಯ ಯೋಜನೆಯೆಂದು ಘೋಷಣೆ ಮಾಡಬೇಕೆಂದು ಪದೇಪದೇ ಒತ್ತಾಯ ಮಾಡುತ್ತಿದ್ದೇನೆ. ಇದನ್ನು ರಾಷ್ಟ್ರೀಯ ಯೋಜನೆಯೆಂದು ಏತಕ್ಕೋಸ್ಕರ ಘೋಷಣೆ ಮಾಡಬೇಕೆನ್ನುವುದಕ್ಕೆ ಕೆಲವು ಮಾಹಿತಿಗಳನ್ನು ನೀಡುವುದಕ್ಕೆ ಬಯಸುತ್ತಿದ್ದೇನೆ. The Ministry of Water Resources had issued guidelines for implementation of scheme of National Projects in February 2009. Later, Ministry of Water Resources had issued modification in the guidelines on 28.09.2012. ರಾಷ್ಟ್ರೀಯ ಯೋಜನೆ ಎಂದು ಘೋಷಣೆಯಾದಾಗ ಕೇಂದ್ರ ಸರ್ಕಾರ ಶೇಕಡಾ 90ರಷ್ಟು ಹಣಕಾಸಿನ ಸಹಾಯವನ್ನು ನೀಡುತ್ತಿತ್ತು. Initially, such projects were provided financial assistance of 90% cost of irrigation & drinking water component of the project in the form of central grant for its completion in a time bound manner. The provison of financial assistance for National Projects has been included in the umbrella scheme of PMKSY launched in 2015-16. ದುರಾದೃಷ್ಟವೇನೆಂದರೆ, 2015-16ರಲ್ಲಿ ಸರ್ಕಾರ ಬದಲಾವಣೆಯಾದಂತಹ ಸಂದರ್ಭದಲ್ಲಿ ಶೇಕಡಾ 90ರಷ್ಟು ಪ್ರಮಾಣದಲ್ಲಿ ಸಿಗುತ್ತಿದ್ದ ಅನುದಾನವನ್ನು ಕಡಿಮೆ ಮಾಡಿ, ಈಗ ಕೇಂದ್ರ ಸರ್ಕಾರ ಶೇಕಡಾ 60ಕ್ಕೆ ಇಳಿಕೆ ಮಾಡಿದ್ದಾರೆ. ನಾನು ರಾಜ್ಯ ಸರ್ಕಾರದವರಲ್ಲಿ ವಿನಂತಿ ಮಾಡುವುದೇನೆಂದರೆ, ರಾಷ್ಟ್ರೀಯ ಯೋಜನೆಯೆಂದು ಪರಿಗಣನೆ ಮಾಡುವುದಕ್ಕೆ ಶೇಕಡಾ 90ರಷ್ಟು ಆರ್ಥಿಕ ಸಹಾಯವನ್ನು ನೀಡುತ್ತಿದ್ದರು ಅದನ್ನು ಸೇಕಡಾ 60ಕ್ಕೆ ಇಳಿಕೆ ಮಾಡಲಾಗಿದೆ. ನಮ್ಮ ರಾಜ್ಯ ಸರ್ಕಾರ ಮತ್ತು ನಮ್ಮ ರಾಜ್ಯದ ಸಂಸದರು ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತಂದು ಇದನ್ನು ಪುನಃ ಶೇಕಡಾ 90ರಷ್ಟು ಮಾಡಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ರಾಷ್ಟ್ರೀಯ ಯೋಜನೆಯೆಂದು ಘೋಷಣೆ ಮಾಡುವುದಕ್ಕೆ ಏನೇನು ಪ್ರಕ್ರಿಯೆಗಳನ್ನು ಅನುಸರಿಸಬೇಕು ಎನ್ನುವುದರ ಬಗ್ಗೆ ಮಾರ್ಗಸೂಚಿಯನ್ನು ನೀಡಲಾಗಿದೆ. ಆ ಮಾನದಂಡಗಳನ್ವಯ ಆಲಮಟ್ಟಿ ಅಣೆಕಟ್ಟನ್ನು ರಾಷ್ಟ್ರೀಯ ಯೋಜನೆಯಾಗಿ ಘೋಷಣೆ ಮಾಡಿ ಶೇಕಡಾ 90ರಷ್ಟು ಆರ್ಥಿಕ ಸಹಾಯವನ್ನು ಕೇಂದ್ರ ಸರ್ಕಾರದಿಂದ ಪಡೆದುಕೊಳ್ಳುವುದಕ್ಕೆ ನಾವು ಅರ್ಹರಾಗಿದ್ದೇವೆ. ಇದರಲ್ಲಿ ಹಲವಾರು ಮಾನದಂಡಗಳಿವೆ. ಅವುಗಳನ್ನು ಹೇಳುವುದಕ್ಕೆ ಹೋದರೆ ಬಹಳ ಸಮಯವಾಗುತ್ತದೆ. ಹೇಗೆ ರಾಷ್ಟ್ರೀಯ ಯೋಜನೆಯಡಿಯಲ್ಲಿ ಇದನ್ನು ಸೇರಿಸಬೇಕು ಎನ್ನುವುದಕ್ಕೆ ಸಂಬಂಧಪಟ್ಟಂತೆ ಹಲವಾರು ಪ್ರಕ್ರಿಯೆಗಳಿವೆ ರಾಜ್ಯ ಸರ್ಕಾರ ಇದನ್ನು ನಿರ್ದಿಷ್ಟವಾಗಿರುವ ಫಾರಂನಲ್ಲಿ ಕಳುಹಿಸಿಕೊಟ್ಟರೆ, ಕೇಂದ್ರ ಸರ್ಕಾರ ಇದನ್ನು ಅನುಷ್ಠಾನಕ್ಕೆ ತರುತ್ತದೆ. ರಾಜ್ಯ ಸರ್ಕಾರ ಯಾವ ರೀತಿಯಲ್ಲಿ ಹಣದ ವಿತರಣೆ ಮಾಡುತ್ತದೆ ಮತ್ತು ಒಂದು ಕಾಲ ಮಿತಿಯೊಳಗೆ ಯಾವ ರೀತಿಯಲ್ಲಿ ಯೋಜನೆಯನ್ನು ಮುಗಿಸಬೇಕು ಎನ್ನುವುದನ್ನು ಸಹ ಇದರಲ್ಲಿ ಅಳವಡಿಸಲಾಗಿದೆ. ಆಲಮಟ್ಟಿ ಜಲಾಶಯ ಯೋಜನೆ ಬೇಗನೇ ಮುಕ್ತಾಯಗೊಳ್ಳಬೇಕಾದರೆ, ಇದನ್ನು ರಾಷ್ಟ್ರೀಯ ಯೋಜನೆಯೆಂದು ಘೋಷಣೆ ಮಾಡಬೇಕಾಗಿದೆ. ಆಗ ಮಾತ್ರ ಒಂದು ಕಾಲಮಿತಿಯಲ್ಲಿ ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯೋಜನೆ ಪೂರ್ಣಗೊಳಿಸಬಹುದಾಗಿದೆ. ಕೇಂದ್ರಾಡಳಿತ ಪ್ರದೇಶಗಳಿಗೆ ಶೇಕಡಾ ನೂರಕ್ಕೆ ನೂರರಷ್ಟು ಸಹಾಯಾನುದಾನವನ್ನು ನೀಡಲಾಗುತ್ತಿದೆ. ಉತ್ತರಾಂಚಲ ಪ್ರದೇಶಗಳಿಗೆ ಶೇಕಡಾ 90ರಷ್ಟನ್ನು ಕೇಂದ್ರ ಸರ್ಕಾರದಿಂದ ನೀಡಲಾಗುತ್ತಿದೆ. ರಾಜ್ಯ ಸರ್ಕಾರ ಶೇಕಡಾ 10ರಷ್ಟನ್ನು ಭರಿಸುತ್ತದೆ. ಆದರೆ, ಬೇರೆ ರಾಜ್ಯದವರ ಯೋಜನೆಗಳಿಗೆ ಶೇಕಡಾ 60ರಷ್ಟನ್ನು ಕೇಂದ್ರ ಸರ್ಕಾರ ನೀಡುತ್ತದೆ ಉಳಿದ ಶೇಕಡಾ 40ರಷ್ಟನ್ನು ರಾಜ್ಯ ಸರ್ಕಾರಗಳು ನೀಡುತ್ತವೆ.

ಸನ್ಮಾನ್ಯ ಸಭಾಪತಿಯವರೇ, Funding of National projects by Central Government would be only for balance cost of works part of irrigation and drinking water components of the project... ಕುಡಿಯುವ ನೀರಿನ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಶೇಕಡಾ 90ರಷ್ಟು ಅನುದಾನ ದೊರೆಯುತ್ತದೆ. ಪ್ರಸ್ತುತ ಡಬಲ್ ಇಂಜಿನ್ ಸರ್ಕಾರವಿದೆ. ರಾಜ್ಯ ಸರ್ಕಾರ ಪ್ರಸ್ತಾವನೆಯನ್ನು ಸಲ್ಲಿಸಿದರೆ ಕೇಂದ್ರ ಸರ್ಕಾರದ ಜಲಸಂಪನ್ಮೂಲ ಇಲಾಖೆ ಇದಕ್ಕೆ ಅನುಮೋದನೆಯನ್ನು ನೀಡುತ್ತದೆ. ಈ ಕೆಲಸವನ್ನು ರಾಜ್ಯ ಸರ್ಕಾರ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ. The condition of 50% physical and financial progress as applicable for AIBP projects shall not be applicable for National Projects. For the purpose of Cetral funding, the cost for drinking water component shall not include the works related to transmission and distribution network required exclusively for drinking water component. ಈ ರೀತಿಯ ಹಲವಾರು ಮಾನದಂಡಗಳಿವೆ. ನದಿಗಳ ಜೋಡಣೆಯ ಪ್ರಸ್ತಾವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮುಂದಿದೆ. ಆಲಮಟ್ಟಿ ಜಲಾಶಯ ನಮ್ಮ ರಾಜ್ಯ, ಆಂಧ್ರಪ್ರದೇಶ ತೆಲಂಗಾಣ ಈ ರಾಜ್ಯಗಳಿಗೆ ಉಪಯೋಗವಾಗುವಂತಹ ಯೋಜನೆಯಾಗಿದೆ. Funding of Interlinking Projects which have been declared/may be declared as National Project in future may be as per the above funding ratio or at a higher funding ratio as may be approved by the Government separately. ರಾಷ್ಟ್ರೀಯ ಯೋಜನೆಯೆಂದು ಘೋಷಣೆ ಮಾಡಿದರೆ, ತಕ್ಷಣವೇ ಮೊದಲನೆಯ ಕಂತಿನ ರೂಪದಲ್ಲಿ ಶೇಕಡಾ 50 ಅನುದಾನ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗುತ್ತದೆ. ರಾಜ್ಯ ಸರ್ಕಾರ ಒಂದು ಲಕ್ಷ ಕೋಟಿ ರೂಪಾಯಿಗಳಿಗೆ ಪ್ರಸ್ತಾವನೆಯನ್ನು ಕೊಟ್ಟರೆ, ಮೊದಲನೆಯ ಕಂತಿನ ರೂಪದಲ್ಲಿ ಸುಮಾರು 50 ಸಾವಿರ ಕೋಟಿ ರೂಪಾಯಿಗಳು ನಮಗೆ ದೊರೆಯುತ್ತದೆ. Second Instalment after submission of Utilization/ Expenditure Certificate of 100% of State share and CA already released during the year. ಅಂದರೆ, ಶೇಕಡಾ 50ರಷ್ಟು ಸರ್ಟಿಫಿಕೇಟ್ ಕೊಟ್ಟ ಮೇಲೆ ಬರುತ್ತದೆ. ಈ ಯೋಜನೆಯನ್ನು ಮುಕ್ತಾಯಗೊಳಿಸುವುದಕ್ಕೆ ಕಾಲಮಿತಿಯನ್ನು ನಿಗದಿಗೊಳಿಸುತ್ತಾರೆ. ಇದನ್ನು ವೈಜ್ಞಾನಿಕವಾಗಿ PERT/CPM Chart ಗಳನ್ನು ಮಾಡಿ ಅನುಷ್ಠಾನಗೊಳಿಸಲಾಗುತ್ತದೆ. ಇದರ ಜೊತೆಗೆ The State Government will ensure timely completion of the project and will adopt appropriate measures such Turn-Key

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

or fixed time and fixed price contracts or this purpose. The works should be awarded by the State Government in distinct packages so that works of any package are not affected by the progress of works of other packages. ಇವೆಲ್ಲವೂ ನಮಗೆ ಅನುಕೂಲವಾಗುವಂತಹ ಮಾನದಂಡಗಳಾಗಿವೆ. ರಾಷ್ಟ್ರೀಯ ಯೋಜನೆಯೆಂದು ಘೋಷಣೆ ಮಾಡುವುದಕ್ಕೆ ಇರುವಂತಹ ಮತ್ತೊಂದು ಮಾನದಂಡವೆಂದರೆ, MONITORING MECHANISH OF NATIONAL PROJECTS. ಕೇಂದ್ರದ ಜಲಸಂಪನ್ಮೂಲ ಇಲಾಖೆಯಲ್ಲಿ ಇದನ್ನು ಮಾನಿಟರಿಂಗ್ ಮಾಡುವುದಕ್ಕೆ ಅವಕಾಶವಿದೆ. ರಾಷ್ಟ್ರೀಯ ಯೋಜನೆಯೆಂದು ಘೋಷಣೆ ಮಾಡಿದರೆ ಯೋಜನೆಯನ್ನು ನಾವು ಕಾಲಮಿತಿಯೊಳಗೆ ಮುಕ್ತಾಯಗೊಳಿಸಬಹುದಾಗಿದೆ ಮತ್ತು ಇದನ್ನು ಕೇಂದ್ರದ ಜಲಸಂಪನ್ಮೂಲ ಇಲಾಖೆಯವರೇ ಮಾನಿಟರಿಂಗ್ ಮಾಡುತ್ತಾರೆ. ಇದನ್ನು ರಿವ್ಯೂ ಮಾಡುವುದಕ್ಕೆ Steering Committee ಇರುತ್ತದೆ. ಇದನ್ನು Evaluation and Impact Assessment ಮಾಡುವುದಕ್ಕೆ ಸಾಕಷ್ಟು ಅವಕಾಶಗಳಿವೆ. ಇಲ್ಲಿಯವರೆಗೆ ಸುಮಾರು 16 ಯೋಜನೆಗಳನ್ನು ರಾಷ್ಟ್ರೀಯ ಯೋಜನೆಗಳೆಂದು ಕೇಂದ್ರ ಸರ್ಕಾರ ಘೋಷಣೆ ಮಾಡಿದೆ.

(ಮುಂದುವರಿದಿದೆ)

**(1237) 21.12.2021 7.30 ಪಿಕೆ:ಆರ್‌ಎನ್**

**Sri PRAKASH K RATHOD: (Contd)**

1) Gosikhund Irrigation Project, Maharashtra, 2) Saryu Nahar Pariyojana, Utter Pradesh (UP), 3) Polavaram Irrigation Project, AndraPradesh, 4) Shahpurkandi Dam Project, Punjab, 5) Teesta Barrage Project, West Bengal, 6)Lakhwar multipurpose Project, Uttarkhand (UK), 7) Ujh Multipuprpose Project Jammu Kashmir (J&K) 8) Renukaji Dam Project, Himachal Pradesh (HP), 9) Ken-Betwa Link Project, Madhya Pradesh (MP) & UP 10) Kulsi Dam Project, Assam 11) Noa Dihing Dam Project, Arunachal Pradesh, 12) Bursar HE Project, J& K, 13)Kishau multipurpose Project, HP & UK, 14) Gyspa HE Project, HP 15) 2nd Ravi Vyas Link Project, Punjab and 16) Upper Siang Project, Arunachal Pradesh. ಎಷ್ಟು ರಾಜ್ಯಗಳು ಇದನ್ನು ಉಪಯೋಗ ಮಾಡಿಕೊಂಡಿವೆ ಎಂದು ತಿಳಿಸಲು ನಾನು 16 ಉದಾಹರಣೆಗಳನ್ನು ಕೊಟ್ಟೆ. ಪ್ರಗತಿಪರ ಕರ್ನಾಟಕ ರಾಜ್ಯದ ಅಧಿಕಾರಿಗಳು, ಮೇಧಾವಿ ಅಧಿಕಾರಿಗಳು, ಐಎಎಸ್ ಆಫೀಸರ್‌ಗಳು ದೆಹಲಿಯಲ್ಲೂ ಇದ್ದಾರೆ; ಇಲ್ಲೂ ಇದ್ದಾರೆ. ಅವರಿಗೆ ಇಚ್ಛಾಶಕ್ತಿ ಇದ್ದರೆ ಈ ಪ್ರಾಜೆಕ್ಟನ್ನು ಕೇಂದ್ರ ಸರ್ಕಾರಕ್ಕೆ ಮಂಡನೆ ಮಾಡಬೇಕು. ಆಗ ಇದೂ ಕೂಡ ರಾಷ್ಟ್ರೀಯ ಯೋಜನೆ ಆಗುವುದರಲ್ಲಿ ಸಂಶಯವಿಲ್ಲ. ಕೇಂದ್ರ ಸರ್ಕಾರದಿಂದ ದೊಡ್ಡ ಪ್ರಮಾಣದ ಹಣ ಬರುವುದರಲ್ಲಿ ಸಂಶಯವಿಲ್ಲ. ನಾವು ಈ ಪ್ರಾಜೆಕ್ಟನ್ನು ಕಾಲಮಿತಿಯಲ್ಲಿ ಸಂಪೂರ್ಣ ಮಾಡುವುದಕ್ಕೆ ಯಾವುದೇ ಅಡ್ಡಿ ಬರುವುದಿಲ್ಲ. ನಾನು ಕಳಕಳಿಯಿಂದ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಇದನ್ನು

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ರಾಷ್ಟ್ರೀಯ ಯೋಜನೆ ಎಂದು ಘೋಷಣೆ ಮಾಡಿ. ಇದು ಏಷ್ಯಾದಲ್ಲೇ ದೊಡ್ಡದಾದ ಜಲಾಶಯವಾಗಿದೆ. ಶೇಕಡ 75ರಷ್ಟು ನೀರಾವರಿ ಆಗುವ ಯಾವುದಾದರೂ ಜಲಾಶಯ ಇದ್ದರೆ ಅದು ಆಲಮಟ್ಟಿ ಜಲಾಶಯ. ಅದಕ್ಕೆ ತಾವು ಆದ್ಯತೆಯನ್ನು ಕೊಡಬೇಕು. ಭದ್ರಾ ಯೋಜನೆಯನ್ನು ರಾಷ್ಟ್ರೀಯ ಯೋಜನೆಯಾಗಿ ಮಾಡಬೇಕೆಂದು ರಾಜ್ಯ ಸರ್ಕಾರ ಪ್ರಸ್ತಾವನೆ ಕಳುಹಿಸಿದೆ. ಇದನ್ನು ಬಹಳ ನೋವಿನಿಂದ ಹೇಳಬೇಕಾಗಿದೆ. ಬಿಜಾಪುರದ ಆಲಮಟ್ಟಿ ಜಲಾಶಯಕ್ಕೆ ಘೋರ ಅನ್ಯಾಯ ಮಾಡಿದೆ. ಭದ್ರಾ ಪ್ರಾಜೆಕ್ಟನ್ನು ರಾಷ್ಟ್ರೀಯ ಯೋಜನೆಯೆಂದು ಘೋಷಣೆ ಮಾಡಿದ್ದೀರಿ. ಅದು ಚಿಕ್ಕ ಪ್ರಾಜೆಕ್ಟ್ ಆಗಿದೆ. ಆಲಮಟ್ಟಿ ಜಲಾಶಯ ದೊಡ್ಡ ಪ್ರಾಜೆಕ್ಟ್ ಆಗಿದೆ. ಇದಕ್ಕೆ ಎಲ್ಲಾ ರೀತಿಯ ಮೆರಿಟ್ ಇದ್ದರೂ, ತಾವು ಭದ್ರಾ ಯೋಜನೆಯನ್ನು ರಾಷ್ಟ್ರೀಯ ಪ್ರಾಜೆಕ್ಟ್ ಎಂದು ಮಾಡಿದ್ದೀರಿ. ರಾಜ್ಯ ಸರ್ಕಾರ ಬಿಜಾಪುರ ಜಿಲ್ಲೆಗೆ, ಯುಕೆಬಿ ಗೆ ಘೋರ ಅನ್ಯಾಯ ಮಾಡಿದೆ ಎಂದು ನಾನು ಹೇಳಬೇಕಾಗಿದೆ. ಇದನ್ನು ಸಂಪೂರ್ಣ ಮಾಡುವ ಇಚ್ಛಾಶಕ್ತಿಯಿಲ್ಲ. ರಾಜ್ಯದ ಆಯವ್ಯಯದಲ್ಲಿ ಕೇವಲ ಎರಡೂವರೆ ಸಾವಿರ ಕೋಟಿ ರೂಪಾಯಿಗಳಷ್ಟು ತೋರಿಸಿದ್ದೀರಿ. ಇದೇ ವೇಗದಲ್ಲಿ ಈ ಪ್ರಾಜೆಕ್ಟ್ ನಡೆದರೆ ನನ್ನ ಮಕ್ಕಳ ಕಾಲಕ್ಕೂ ಈ ಯೋಜನೆ ಪೂರ್ಣವಾಗುವುದಿಲ್ಲ. ಯುಕೆಪಿ ಯೋಜನೆಗೆ ರೈತರಿಗೆ ಅನುಕೂಲವಾಗುವಂಥದ್ದು. ತಾವೇ ಅನುಷ್ಠಾನ ಮಾಡಿದ್ದೀರಿ. ಸಿಎಂ ಅವರು ಅನೌನ್ಸ್ ಮಾಡಿದಂತೆ "ರೈತ ವಿದ್ಯಾ ನಿಧಿ" ಇದು ಕಾಗದದಲ್ಲೇ ಇದೆ. ರಾಜ್ಯದ ಮುಖ್ಯಮಂತ್ರಿಗಳು ಪ್ರಮಾಣ ಸ್ವೀಕರಿಸಿದ ಕೆಲವೇ ನಿಮಿಷಗಳ ನಂತರ ರಾಜ್ಯದ ಅನ್ನದಾತನ ಮಕ್ಕಳು ಉನ್ನತ ಶಿಕ್ಷಣ ಪಡೆಯಬೇಕು ಎಂದು ಮಹತ್ವದ ಯೋಜನೆಯನ್ನು ಘೋಷಣೆ ಮಾಡಿದ್ದರು ಆ ಹಿನ್ನೆಲೆಯಲ್ಲಿ 16 ಸಾವಿರ ಮಕ್ಕಳಿಗೆ ಸ್ಕಾಲರ್‌ಶಿಪ್ ಸಿಗಬೇಕಾಗಿತ್ತು; ಆದರೆ ಅದು ಇವತ್ತಿನವರೆಗೂ ಅನುಷ್ಠಾನಕ್ಕೆ ಬಂದಿಲ್ಲ. ತಾವು ಪೇಪರ್‌ನಲ್ಲಿ ಘೋಷಣೆ ಮಾಡಿದ್ದೀರಿ. ಮಕ್ಕಳಿಗೆ ತಾವು ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ನಾನು ಇನ್ನು ಹಲವಾರು ವಿಷಯಗಳಿವೆ. ನಮ್ಮ ಭಾಗದಲ್ಲಿ ಏನು ಅಕಾಲಿಕ ಮಳೆಯಿಂದ ಬೆಳೆ ಹಾನಿಯಾಗಿದೆಯೋ, ಅದರಿಂದ ರೈತರು ಸಂಕಷ್ಟದಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೆ. ಅವರಿಗೆ ವಿಶೇಷ ಪ್ಯಾಕೇಜ್ ಘೋಷಣೆ ಮಾಡಬೇಕು. ಇವತ್ತು ಬಿಜಾಪುರ ಜಿಲ್ಲೆಯಲ್ಲಿ ಅಕಾಲಿಕವಾಗಿ ಮಳೆ ಜಾಸ್ತಿಯಾಗಿದೆ. ಆದರೆ, ಬೇಕಾದಂತಹ ಪ್ರಮಾಣದಲ್ಲಿ ಮಳೆ ಆಗಿಲ್ಲ. ಬಿಜಾಪುರ ಜಿಲ್ಲೆ ಬರಗಾಲ ಜಿಲ್ಲೆ ಎಂದು ಘೋಷಣೆ ಮಾಡಿ ವಿಶೇಷವಾದ ಪ್ಯಾಕೇಜ್ ಕೊಡಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ದ್ರಾಕ್ಷಿ ಬೆಳೆಗಾರರು, ದಾಳಿಂಬೆ ಬೆಳೆಗಾರರು, ನಿಂಬೆ ಬೆಳೆಗಾರರು ಅಕಾಲಿಕ ಮಳೆಯಿಂದ ಏನು ತಮ್ಮ ಬೆಳೆಗಳನ್ನು ಕಳೆದುಕೊಂಡಿದ್ದಾರೋ ಅದಕ್ಕೆ ಸರ್ಕಾರ ವಿಶೇಷ ಪ್ಯಾಕೇಜ್ ಕೊಡಬೇಕು. ಇವತ್ತಿನವರೆಗೂ ಅದಕ್ಕೆ ಕನಿಷ್ಠ ಬೆಂಬಲ ಬೆಲೆ ಕೊಟ್ಟಿಲ್ಲ. ಬಿಜಾಪುರ ಜಿಲ್ಲೆಯನ್ನು ತೋಟಗಾರಿಕೆ ಜಿಲ್ಲೆ ಎಂದು ಮಾಡಿ ನಮ್ಮ ಮೂಗಿಗೆ ತುಪ್ಪ ಹಚ್ಚುವಂತಹ ಕೆಲಸವನ್ನು ಸರ್ಕಾರ ಮಾಡುತ್ತಿದೆ ಎಂದು ಹೇಳಬೇಕಾಗಿದೆ. ಮಾನ್ಯ ಸಭಾಪತಿಗಳೆ, ಇನ್ನೂ ಸಾಕಷ್ಟು ವಿಷಯಗಳಿವೆ. ತಾವು ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟಿದ್ದೀರಿ. ನಾನು ಜಾಸ್ತಿ ಮಾತನಾಡಿದ್ದರೆ ಕ್ಷಮಿಸಬೇಕು. ಆದರೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಬ್ಬ ಸಂತ್ರಸ್ತನಾಗಿ ಸರ್ಕಾರಕ್ಕೆ ನಮಸ್ಕಾರ ಮಾಡಿ, ಈ ಯೋಜನೆಯನ್ನು ಯುದ್ಧೋಪಾದಿಯಲ್ಲಿ ಸಂಪೂರ್ಣ ಮಾಡಬೇಕು; ಆಯವ್ಯದಲ್ಲಿ ಇದಕ್ಕೆ ಹಣ ಬಿಡುಗಡೆ ಮಾಡಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೃಷ್ಣೆಯ ಕಡೆಗೆ ನಾವು ಪಾದಯಾತ್ರೆ ಮಾಡುವಾಗ, ಆಯವ್ಯಯದಲ್ಲಿ ರೂ. 50 ಸಾವಿರ ಕೋಟಿ ಹಣವನ್ನು ನೀರಾವರಿಗೋಸ್ಕರ ಮೀಸಲಿಡುತ್ತೇವೆ ಎಂದು ವಾದ ಮಾಡಿದ್ದೆವು. ಕಾಂಗ್ರೆಸ್ ಸರ್ಕಾರ ಇದ್ದಾಗ ರೂ.54 ಸಾವಿರ ಕೋಟಿಗಳನ್ನು ಖರ್ಚು ಮಾಡಲಾಗಿತ್ತು. ಆಲಮಟ್ಟಿ ಜಲಾಶಯಕ್ಕೆ ವಿಶೇಷ ಆದ್ಯತೆ ಕೊಡಲಾಗಿತ್ತು. ನೀರಾವರಿ ಸಚಿವರಾಗಿದ್ದ ಮಾನ್ಯ ಎಂ.ಬಿ.ಪಾಟೀಲ್‌ರವರು distributary canal, preliminary canal ಗಳನ್ನು ಮಾಡಿದ್ದರು. Lateral canal ಗಳನ್ನು ಮಾಡಬೇಕು. ಇದು ಮಾಡುವುದಕ್ಕೆ ಸರ್ಕಾರ ಮುಂದೆ ಬರಬೇಕು ಎಂದು ಹೇಳಬಯಸುತ್ತೇನೆ. ಕೆನಾಲ್‌ಗಳು ಏನು ದುರಸ್ಥಿಗೆ ಬಂದಿದೆಯೋ, ಆಲಮಟ್ಟಿ ಜಲಾಶಯದಲ್ಲಿ ಏನು ಹೂಳು ಸಂಗ್ರಹವಾಗುತ್ತಿದೆಯೋ ಅದನ್ನು ತೆಗೆಯುವುದಕ್ಕೆ ಯೋಜನೆ ಮಾಡಬೇಕು. ನ್ಯಾಯಾಲಯದ ತೀರ್ಪು ನಮ್ಮ ಪರವಾಗಿ ಬರುತ್ತದೆ ಮತ್ತು ಆ ನಿಟ್ಟಿನಲ್ಲಿ ತಾವು ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಭಾವಿಸಿ, 2022ರಲ್ಲಿ ಮಾನ್ಯ ಬಸವರಾಜ ಬೊಮ್ಮಾಯಿಯವರ ಸರ್ಕಾರ ಈ ನಿಟ್ಟಿನಲ್ಲಿ ಘೋಷಣೆ ಮಾಡಿ, ಆಲಮಟ್ಟಿ ಜಲಾಶಯವನ್ನು ಸಂಪೂರ್ಣ ಮಾಡುವುದಕ್ಕೆ ಎಲ್ಲಾ ಕ್ರಮ ತೆಗೆದುಕೊಳ್ಳುತ್ತದೆ ಎಂದು ಭಾವಿಸುತ್ತೇನೆ. ಅದನ್ನು ಮಾಡದೇ ಇದ್ದರೆ ಜನ ನಿಮಗೆ ತಕ್ಕ ಪಾಠ ಕಲಿಸುತ್ತಾರೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಆರ್.ಬಿ.ತಿಮ್ಮಾಪೂರ(ವಿಧಾನಸಭೆಯಿಂದ ಚುನಾಯಿತರಾದವರು**):- ಮಾನ್ಯ ಸಭಾಪತಿಗಳೆ, ಉತ್ತರ ಕರ್ನಾಟಕದಲ್ಲಿ ಪ್ರವಾಹ ಮತ್ತು ಇನ್ನೊಂದು ಕಡೆ ಆಲಮಟ್ಟಿ ಡ್ಯಾಮ್‌ನಿಂದ ರೈತರಿಗೆ ಆಗತಕ್ಕಂಥ ವಿಷಯಗಳ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. 15 ಜಿಲ್ಲೆಗಳ ಸುಮಾರು 7,04,041 ಹೆಕ್ಟೇರ್ ಹಾಗೂ ಒಟ್ಟು 25,385.51 ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿದ್ದ ಬೆಳೆಗಳು ನಾಶವಾಗಿವೆ. ಕಳೆದ ಮೂರು ವರ್ಷಗಳಲ್ಲಿ ಒಟ್ಟಾರೆ 43,657 ಕೋಟಿ ಮೌಲ್ಯದ ಬೆಳೆ ಹಾಳಾಗಿದೆ. ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ರೂ. 34 000 ಕೋಟಿಗಳ ಮೆಮೊರೆಂಡಮ್ ಸಲ್ಲಿಸಿದೆ. ಪ್ರವಾಹದಿಂದ ಉತ್ತರ ಕರ್ನಾಟಕದ 33 ಲಕ್ಷ ಮನೆಗಳಿಗೆ ಹಾನಿಯಾಗಿದೆ. ಸರ್ಕಾರದ ಅಂದಾಜಿನ ಪ್ರಕಾರ ಈ ಹಾನಿಯ ಒಟ್ಟು ಮೊತ್ತ ರೂ. 10,750 ಕೋಟಿಗಳ ಪೈಕಿ ರೂ. 9000 ಕೋಟಿಗೂ ಹೆಚ್ಚು ಮೌಲ್ಯದ ಮನೆಗಳು ಉತ್ತರ ಕರ್ನಾಟಕಕ್ಕೆ ಸೇರಿವೆ. ವಾಸ್ತವದಲ್ಲಿ, ಮೂಲಭೂತ ಸೌಲಭ್ಯಗಳು ಸೇರಿದಂತೆ ಒಟ್ಟು ಮೌಲ್ಯ 1.50 ಲಕ್ಷ ಕೋಟಿಗೂ ಹೆಚ್ಚು ಎಂದು ಕಾಣುತ್ತದೆ. ಕೇಂದ್ರ ಸರ್ಕಾರ ರೂ.23.71 ಕೋಟಿಗಳನ್ನು ಮಾತ್ರ ಬಿಡುಗಡೆ ಮಾಡಿದೆ. ರಾಜ್ಯ ಸರ್ಕಾರ ಕೇಂದ್ರವನ್ನು ರೂ.76,731 ಕೋಟಿ ಕೇಳಿತ್ತು. ಇಷ್ಟು ಕಡಿಮೆ ಹಣ ನಮಗೆ ಬಂದಿದೆ. ಪ್ರಕೃತಿ ವಿಕೋಪ ಸಂಭವಿಸಿದಾಗ ಅದು standing crop ಗೆ ಮಾತ್ರ ಪರಿಹಾರ ಕೊಡಲಾಗುತ್ತದೆ ಎಂದು ಹೇಳಲಾಗುತ್ತದೆ. ಕಟಾವು ಮಾಡಿ ಕಣದಲ್ಲಿರುವ ಬೆಳೆಗಳ ಹಾನಿ ಅನುಭವಿಸುತ್ತಿರುವ ರೈತ ತೊಂದರೆಯಲ್ಲಿದ್ದಾನೆ. 2019ನೇ ಸಾಲಿನಲ್ಲಿ ಬಿದ್ದಂತಹ ಮನೆಗಳಿಗೆ ಇನ್ನೂ ಪರಿಹಾರ ಸಿಗಲಿಲ್ಲ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹವಾಮಾನ ತಜ್ಞರ ವರದಿಯಲ್ಲಿ, 10-15 ವರ್ಷಗಳಿಂದ ಬಹಳ ಬದಲಾವಣೆ ಆಗುತ್ತದೆ ಎಂದಿದೆ. ಅದರ ಬಗ್ಗೆ ಸರ್ಕಾರಗಳು ಏನೇನು ಕ್ರಮ ಕೈಗೊಂಡಿವೆ ಎನ್ನುವುದು ಜನರಿಗೆ ತಿಳಿಸುವ ಕೆಲಸ ಆಗಿಲ್ಲ. ಪ್ರವಾಹ ಬಂದಾಗ ರೈತಾಪಿ ವರ್ಗಕ್ಕೆ ಆದಂತಹ ಅವ್ಯವಸ್ಥೆಯನ್ನು ಪರಿಹಾರ ಕೊಡುವುದರಲ್ಲಿ ರಾಜ್ಯ ಸರ್ಕಾರ ವಿಫಲವಾಯಿತು. 28 ಎಂ.ಪಿ. ಗಳಲ್ಲಿ ಎರಡು ಸ್ಥಾನಗಳನ್ನು ಬಿಟ್ಟರೆ ಬಿಜೆಪಿ ಪಕ್ಷದವರೇ ಇದ್ದಾರೆ. ಒಂದು ದಿನವೂ ಕೇಂದ್ರ ಸರ್ಕಾರದ ಹತ್ತಿರ ಹೋಗಿ, ನಮಗೆ ಪರಿಹಾರ ಕೊಡಬೇಕು ಎನ್ನುವ ಮಾತು ಹೇಳಿಲ್ಲ. ರಾಜ್ಯ ಸರ್ಕಾರ ಸಹ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಲಿಕ್ಕೆ ಸಾಧ್ಯವಾಗಲಿಲ್ಲ.

(ಮುಂದು)

(1238) 21-12-2021 7.40 DS-VK

**ಶ್ರೀ ಆರ್.ಬಿ.ತಿಮ್ಮಾಪೂರ(ಮುಂದು):-**

ಹೀಗೆ ಪ್ರವಾಹದಿಂದ ರಾಜ್ಯ ಸರ್ಕಾರ ಅಷ್ಟೇ ಅಲ್ಲ, ಉತ್ತರ ಕರ್ನಾಟಕ ಮಾತ್ರ ಬಹಳ ತೊಂದರೆ ಅನುಭವಿಸತಕ್ಕಂಥದ್ದಾಗಿದೆ. ಮುಧೋಳ ತಾಲ್ಲೂಕಿನ ಪರಿಸ್ಥಿತಿ ಬಹಳ ವಿಚಿತ್ರವಾಗಿದೆ. ಮುಳುಗಡೆಯಾದವರಿಗೆ ಹಣ ಕೊಡುತ್ತಾರೆ. ಮುಳುಗಡೆಯಾಗದಿದ್ದರೂ ನಷ್ಟ ಅನುಭವಿಸತಕ್ಕಂಥದ್ದು ಒಂದು ಕಡೆ. ಮತ್ತೊಂದು ಕಡೆ ಮುಳುಗಡೆಯೇ ಆಗುವುದಿಲ್ಲ ಎಂದು ಹೇಳತಕ್ಕಂಥದ್ದು. ಇವತ್ತು ಆಲಮಟ್ಟಿ ಡ್ಯಾಮ್‌ನಿಂದ ಪ್ರವಾಹ ಬಂತು ಎಂದರೆ 8-10 ದಿವಸ ನೀರು ನಿಲ್ಲತಕ್ಕಂಥದ್ದಾಗುತ್ತದೆ. ಅದು ಆಲಮಟ್ಟಿ ಡ್ಯಾಮ್‌ನಿಂದ ಆಗುತ್ತಿದೆ ಎಂದು ನಾನು ಪದೇ ಪದೇ ಹೇಳುವಂತಹ ಕೆಲಸ ಮಾಡಿದ್ದೇನೆ. ಅದಕ್ಕೆ ವಿಶೇಷವಾದ ತಜ್ಞರ ಸಮಿತಿ ಮಾಡುತ್ತೇವೆಂದು ಕಳೆದ ಅಧಿವೇಶನದಲ್ಲಿಯೇ ಹೇಳಿದ್ದಾರೆ, ಇನ್ನು ಆ ತಜ್ಞರ ಸಮಿತಿ ಬಗ್ಗೆ ನನಗೇನು ಗೊತ್ತಾಗುತ್ತಿಲ್ಲ. ಕೆಲವು ಕಡೆ ಮುಳುಗಡೆಯಾಗುವಂತಹ ಹಳ್ಳಿಗಳಲ್ಲಿ ಸರ್ವೆ ಕಾರ್ಯವೇ ಆಗಿಲ್ಲ. ನಮ್ಮ ಕಡೆ ಬಿದ್ದೂರು ಎನ್ನುವ ಹಳ್ಳಿ ಇದೆ. ಅದು ನದಿ ದಡದಲ್ಲಿದೆ. ಅದು ಮುಳುಗಡೆಯಾಗುವುದಿಲ್ಲ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಆದ್ದರಿಂದ ವೈಜ್ಞಾನಿಕವಾದಂತಹ ಸರ್ವೆ ಆಗಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಒಂದು ಕಡೆ ಮಳೆ, ಮತ್ತೊಂದು ಕಡೆ ನದಿ ಪ್ರವಾಹ, ಕೋವಿಡ್-19, ಹೀಗೆ ರೈತ ಕಂಗಲಾಗಿದ್ದಾಗ ಸರ್ಕಾರ ರೈತರಿಗೆ ಸಹಾಯ ಮಾಡುವುದಕ್ಕಾಗಿಲ್ಲ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತಿದ್ದೇನೆ. ನಾವು ರಾಜ್ಯದ ಬಗ್ಗೆ ಪತ್ರಿಕೆಗಳಲ್ಲಿ, ಟಿ.ವಿ. ಯಲ್ಲಿ ನೋಡುತ್ತಿರುತ್ತೇವೆ. ಮಾನ್ಯ ಈಶ್ವರಪ್ಪನವರು ಮುಖ್ಯಮಂತ್ರಿಗಳ ಬದಲಾವಣೆ ಬಗ್ಗೆ ಹೇಳುತ್ತಿದ್ದಾರೆ, ಮುಖ್ಯಮಂತ್ರಿಗಳು ನಿರುತ್ಸಾಹದಿಂದ ಹಲವಾರು ವಿಚಾರಗಳನ್ನು ಹೇಳುತ್ತಿದ್ದಾರೆ. ಇವೆಲ್ಲವನ್ನು ಬದಿಗೊತ್ತಿ ಸರ್ಕಾರಗಳು ರೈತನ ಸಹಾಯಕ್ಕೆ ಬರಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಆಲಮಟ್ಟಿ ಗೇಟ್ ಹಾಕುವ ಸಂದರ್ಭದಲ್ಲಿ ನಾನು ಬಾಗಲಕೋಟೆ ಜಿಲ್ಲೆಯ ಉಸ್ತುವಾರಿ ಮಂತ್ರಿಯಾಗಿದ್ದೆ. ಆಗ ಇಡೀ ಸಚಿವ ಸಂಪುಟದವರನ್ನೇ ಕರೆದುಕೊಂಡು ಬಂದಿದ್ದರು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಮಾನ್ಯ ಎಚ್.ಕೆ.ಪಾಟೀಲ್‌ರವರು, 600 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿನ ಹಣ ಅವತ್ತು ಬಾಗಲಕೋಟೆ ಜಿಲ್ಲೆಯಲ್ಲೇ ಮಂಜೂರಾತಿಯನ್ನು ಕೊಟ್ಟರು. ಗೇಟ್ ಹಾಕಿದಾಗ ಮೂರು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ತಿಂಗಳು ನಾನು ಅಲ್ಲೇ ಇದ್ದೆ. ಮುಳುಗಡೆಯಾಗತಕ್ಕಂಥ ಜನ ಮನೆಗಳನ್ನು ಮಠಗಳನ್ನು ಕಳೆದುಕೊಂಡು ಕಿರುಚಾಡುವಂತಹ ಧ್ವನಿಯನ್ನು ನಾನು ಕೇಳಿದ್ದೇನೆ. ಆದರೆ ಸರ್ಕಾರ ಅವತ್ತು ಅವರ ಎಲ್ಲಾ ಬೇಡಿಕೆಗಳನ್ನು ಈಡೇರಿಸುವಂತಹ ಕೆಲಸ ಮಾಡಿತು. ಅವತ್ತು 519.60 ಮೀಟರ್ ಅಲ್ಲಿಯವರೆಗೆ ಗೇಟ್ ಹಾಕುವಂತಹ ಕೆಲಸ ಆಯಿತು. ಈಗ 524.256 ಮೀಟರ್ ಎತ್ತರಿಸಬೇಕಾಗಿದೆ. ಇದು ನ್ಯಾಯಾಧೀಕರಣದ ಅಂತಿಮ ತೀರ್ಪಿನ ಅಧಿಸೂಚನೆಗೆ ಒಳಪಟ್ಟಿರುತ್ತದೆ. ಎರಡನೇ ತೀರ್ಪು ಗೆಜೆಟ್ ಅಧಿಸೂಚನೆ ಆಗಬೇಕಾಗಿದೆ. ತೀರ್ಪು ಬಂದಿಲ್ಲ, ಸರ್ವೋಚ್ಚ ನ್ಯಾಯಾಲಯ ತಡೆಯಾಜ್ಞೆಯನ್ನು ಕೊಟ್ಟಿದೆ ಎನ್ನುವ ಮಾತನ್ನು ನಾವು ಕೇಳುತ್ತಿದ್ದೇವೆ. ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಸರ್ಕಾರದವರನ್ನು, ವಿರೋಧ ಪಕ್ಷದವರನ್ನು, ಲೋಕಸಭಾ ಸದಸ್ಯರುಗಳನ್ನು ಪ್ರಧಾನ ಮಂತ್ರಿಯವರ ಹತ್ತಿರ ಕರೆದುಕೊಂಡು ಹೋಗಿ ವಿನಂತಿ ಮಾಡಿಕೊಳ್ಳಿ. ಈ ತಡೆಯಾಜ್ಞೆ, Interstate River Water Disputes ಇರುತ್ತದೆ ಅದನ್ನು ಪ್ರಧಾನ ಮಂತ್ರಿಗಳೇ ಬಗೆಹರಿಸಲಿ. ಹಿಂದೆ ಶ್ರೀಮತಿ ಇಂದಿರಾಗಾಂಧಿಯವರು ಇಂತಹ ಬಹಳಷ್ಟು ಪ್ರಕರಣಗಳನ್ನು ಬಗೆಹರಿಸಿರುವಂತಹ ಉದಾಹರಣೆಗಳಿವೆ. ಮಾನ್ಯ ಸಭಾನಾಯಕರೇ, ನಿಮ್ಮದು double engine Government. 28 ರಲ್ಲಿ ಇಬ್ಬರು ಬಿಟ್ಟು ಇನ್ನು ಎಲ್ಲಾ ನಿಮ್ಮ ಲೋಕಸಭಾ ಸದಸ್ಯರುಗಳೇ ಆಗಿದ್ದಾರೆ. ಹಾಗೂ ಹೀಗೂ ಮಾಡಿ ಅವರು ಅಧಿಕಾರಕ್ಕೆ ಬಂದಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸಕರು, ಲೋಕಸಭಾ ಸದಸ್ಯರು, ಜಿಲ್ಲಾ ಪಂಚಾಯಿತಿಯವರು, ತಾಲ್ಲೂಕು ಪಂಚಾಯಿತಿಯವರು, ಗ್ರಾಮ ಪಂಚಾಯಿತಿಯವರು, ಪ್ರತಿಯೊಬ್ಬರು ಕೂಡ ತಮ್ಮ ತಮ್ಮ ಕ್ಷೇತ್ರದ ಅಭಿವೃದ್ಧಿಗೋಸ್ಕರ, ಯೋಜನೆಗಳನ್ನು ತರುವುದಕ್ಕೋಸ್ಕರ ಬಹಳ ಕಷ್ಟ ಪಡುತ್ತಿದ್ದಾರೆ. ಅದೆಲ್ಲಾ ಅವರಿಗೂ ಗೊತ್ತಿದೆ. ಶಾಸಕರಾಗಿರುವವರು, ಲೋಕಸಭಾ ಸದಸ್ಯರುಗಳಾಗಿರುವವರು ಜಿಲ್ಲಾ ಪಂಚಾಯಿತಿಯಿಂದ ಗ್ರಾಮ ಪಂಚಾಯಿತಿಯವರೆಗೂ ತಮ್ಮ ಕ್ಷೇತ್ರ ಅಭಿವೃದ್ಧಿಯಾಗಬೇಕು, ನಮಗೆ ಮತ ಹಾಕಿದವರಿಗೆ ನಾವು ಸಹಾಯ ಮಾಡಬೇಕು ಎನ್ನುವ ಕಲ್ಪನೆಗಳಿವೆ. ಅದು ಆ ಪಕ್ಷ, ಈ ಪಕ್ಷ ಎಂದೇನೂ ಇಲ್ಲ. ಯಾರಾದರೂ ನಮ್ಮ ಕ್ಷೇತ್ರಕ್ಕೆ ಬರುವ ಅನುದಾನಕೋಸ್ಕರ ನಮ್ಮ ಕಾರ್ಯಕ್ರಮದಲ್ಲಿ ಬರುವ ಯೋಜನೆಗೋಸ್ಕರ ಪ್ರಧಾನ ಮಂತ್ರಿಯವರನ್ನು ಕಂಡಿಲ್ಲ ಎಂದು ಅವರಿಗೆ ಹೇಳಿದವರು ಯಾರು?

**ಶ್ರೀ ಆರ್.ಬಿ.ತಿಮ್ಮಾಪೂರ:-** ಪ್ರಧಾನ ಮಂತ್ರಿಗಳನ್ನು ಮಧ್ಯಸ್ಥಿಕೆ ವಹಿಸುವುದಕ್ಕೆ ಹೇಳಿದ್ದೀರಾ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ರಾಜಕಾರಣಕ್ಕಾಗಿ ಟೀಕೆ ಮಾಡಿದರೆ ತಪ್ಪಿಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**Sri R.B.TIMMAPUR:-** Interstate River Water Disputes ಬಗೆಹರಿಸುವುದಕ್ಕೆ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿದ್ದೀರಾ? ನಿಮ್ಮ ಲೋಕಸಭಾ ಸದಸ್ಯರುಗಳು ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿ ವಿನಂತಿ ಮಾಡಿಕೊಂಡಿದ್ದೀರಾ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕರ್ನಾಟಕದಲ್ಲಿರುವಂತಹ 224 ಶಾಸಕರುಗಳು ಕೂಡ ಪಕ್ಷವನ್ನೆಲ್ಲಾ ಮರೆತು ಮುಖ್ಯಮಂತ್ರಿಗಳ ಹತ್ತಿರ ಹೋಗಿ ನೆರವು ಕೇಳುತ್ತಾರೆ. ಏಕೆಂದರೆ, ತಮಗೆ ಮತ ಹಾಕಿದಂತಹ ಜನರಿಗೆ ಬೇಕಾದಂತಹ ಸವಲತ್ತುಗಳನ್ನು ಹೆಚ್ಚು ಮಾಡಬೇಕೆಂಬುದು ಅವರ ಗುರಿಯಾಗಿರುತ್ತದೆ. ಏಕೆಂದರೆ, ಮತ್ತೊಂದು ಸಲ ಆಯ್ಕೆಯಾಗಿ ಬರಬೇಕೆನ್ನುವ ಸ್ವಲಾಭ ಇರಬಹುದು, ಇಲ್ಲ ಎಂದು ನಾನು ಹೇಳುವುದಿಲ್ಲ. ಈ ರಾಜ್ಯದಲ್ಲಿರುವ ಎಲ್ಲಾ ಲೋಕಸಭಾ ಸದಸ್ಯರು ಅದು ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್) ಇರಲಿ, ಅವರು ತಮ್ಮ ಕ್ಷೇತ್ರ ಅಭಿವೃದ್ಧಿಗೋಸ್ಕರ ದುಡಿಯುತ್ತಿದ್ದಾರೆ. ಇದೆಲ್ಲಾ ನಾವು ಗಮನಿಸಿದ್ದೇವೆ. ಯಾರಾದರೂ ಕೂಡ ನೀವು ಬಂದಿಲ್ಲ, ಹೋಗಿಲ್ಲ ಎಂದು ಹೇಳುವುದು ಸರಿಯಲ್ಲ. ಹೋಗಿಲ್ಲ ಎನ್ನುವುದು ಅವರಿಗೂ ಗೊತ್ತಿಲ್ಲ. ಅದರ ಬಗ್ಗೆ ಅವರಿಗೆ ಮಾಹಿತಿ ಇಲ್ಲ.

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಭಾಪತಿಯವರೇ, Interstate River Water Disputes ಬಗ್ಗೆ ಅವರು ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿದ್ದಾರೆಯೇ? ಪ್ರಧಾನ ಮಂತ್ರಿಗಳಿಗೆ ಮಧ್ಯಸ್ಥಿಕೆ ವಹಿಸುವುದಕ್ಕೆ ವಿನಂತಿ ಮಾಡಿಕೊಂಡಿದ್ದಾರೆಯೇ ಎಂಬುದನ್ನು ಅವರು ಹೇಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ ಕಾವೇರಿ ನೀರಿನ ವಿಷಯಕ್ಕೆ ಸಂಬಂಧಿಸಿದಂತೆ ನಾನು ಯಾವ ಕೋರ್ಟ್ ಮಾತು ಕೇಳುವುದಿಲ್ಲ, ನಾನು ಕಾಲ್ನಡಿಗೆಯಲ್ಲಿ ಜಾಥಾ ಮಾಡುತ್ತೇನೆಂದು ಹೋಗುತ್ತಾರೆ. ಅವರಿಗೆ ಇಡೀ ರಾಜ್ಯ ಜಾಥಾ ಮಾಡಬೇಕೆಂದು ಬೆಂಬಲ ಕೊಡುತ್ತದೆ. ಆಗ ಸುಪ್ರೀಂಕೋರ್ಟ್ ಆದೇಶ ಕೊಡುತ್ತದೆ, ಈ ಎಲ್ಲಾ ಚರ್ಚೆಗಳು ಅವರಿಗೆ ಗೊತ್ತಿದೆ. ಹಾಗಾಗಿ ಕೆಲವು ಕಾನೂನಾತ್ಮಕವಾದಂತಹ ಸಲಹೆಗಳಿದ್ದಾಗ ಒಂದೊಂದು ಅಭಿಪ್ರಾಯ ಕೊಡ್ತುವುದು ಅದು ರಾಜ್ಯ ಸರ್ಕಾರ ಇರಬಹುದು, ಕೇಂದ್ರ ಸರ್ಕಾರ ಇರಬಹುದು, ನಮ್ಮ ಲೋಕಸಭಾ ಸದಸ್ಯರುಗಳು, ಶಾಸಕರುಗಳಿರಬಹುದು, ಮುಖ್ಯಮಂತ್ರಿಗಳಿರಬಹುದು, ಒಂದು ಚೌಕಟ್ಟಿನ ನಿಯಮದ ವ್ಯಾಪ್ತಿಯಲ್ಲೇ ನಾವು ದುಡಿಯಬೇಕಾಗುತ್ತದೆ, ಶ್ರಮ ಪಡಬೇಕಾಗುತ್ತದೆ. ಇದು ನನ್ನ ಅನುಭವವನ್ನು ನಾನು ಹೇಳಿದೆ. ಅವರ ಆಕ್ಷೇಪಗಳಿದ್ದರೆ ನನ್ನ ಆಕ್ಷೇಪವಿಲ್ಲ. ಅವರು ಹಿರಿಯರಿದ್ದಾರೆ. ಅವರ ಮಾತಿಗೆ ತಲೆ ಕೊಟ್ಟಿರುವುದಲ್ಲ. ನಾನು ನನ್ನ ಅನುಭವ ಹೇಳಿದ್ದೇನೆ ಅಷ್ಟೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಹಿಂದೆ ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಇದ್ದಾಗ ಕಾಂಗ್ರೆಸ್ ಪಕ್ಷದ ಮುಖಂಡರೆಲ್ಲರನ್ನು ಕರೆದುಕೊಂಡು ಹೋಗಿ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದ್ದೇವೆ. ಅವರು ಅದೇ ರೀತಿ ಕರೆದುಕೊಂಡು ಹೋಗಲಿ ಎಂದು ನಾವು ಹೇಳುತ್ತಿದ್ದೇವೆ.

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಭಾಪತಿಯವರೇ, ನಾನು ಇವತ್ತು ಅವರಿಗೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ರಾಜ್ಯ ಸರ್ಕಾರ, ಲೋಕಸಭಾ ಸದಸ್ಯರುಗಳು ಪ್ರಧಾನ ಮಂತ್ರಿಗಳ ಹತ್ತಿರ ಹೋಗಿ ಈ ಕೋರ್ಟ್‌ನಲ್ಲಿ ಬಹಳಷ್ಟು ದಿವಸ ಆಗಿಬಿಡುತ್ತದೆ, ತಾವು ಈ ಮೂರು ರಾಜ್ಯಗಳ water disputes ಏನಿದೆ ಅದರ ಮಧ್ಯಸ್ಥಿಕೆಯನ್ನು ವಹಿಸಿ ಎಂದು ಹೇಳುವುದಕ್ಕೆ ಏನು ತೊಂದರೆ ಇದೆ? ಅದನ್ನು ಅವರು ಮಾಡಬೇಕಲ್ಲವೇ? ಇಷ್ಟು ಜನ ಅವರನ್ನು ಆರಿಸಿ ಕಳುಹಿಸಿದ್ದಾರೆ, ಇದು ಹೆಮ್ಮೆಯ ವಿಷಯವಾಗಿದೆ.

ನಮ್ಮ ಬಹಳಷ್ಟು ಎಂ.ಎಲ್.ಎ.ಗಳನ್ನು ಅವರ ಹತ್ತಿರ ಕರೆದುಕೊಂಡು ಹೋಗಿ ಗೆಲ್ಲಿಸಿದ್ದಾರೆ. ತೊಂದರೆಯೇ ಇಲ್ಲ. ಇನ್ನು ಹಲವಾರು ವಿಚಾರಗಳಿವೆಯಲ್ಲಾ, ಅದರ ಮಧ್ಯಸ್ಥಿಕೆ ವಹಿಸಿ ಬಗೆಹರಿಸಿ ಕೊಡುವುದಕ್ಕೆ ತೊಂದರೆ ಏನಿದೆ? ಏಕೆ ಈ ರೀತಿ ಮಾಡುತ್ತಿದ್ದಾರೆ? ನನಗ ಬಹಳ ಸಂತೋಷವಾಗಿದೆ. ಬಹಳ ಕಾಳಜಿ ವಹಿಸಿ ಮಾತನಾಡತಕ್ಕಂಥ ಮಾನ್ಯ ಗೋವಿಂದ ಕಾರಜೋಳರವರು ನೀರಾವರಿ ಮಂತ್ರಿಗಳಾಗಿದ್ದಾರೆ. ಇಲ್ಲಿ ಅವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಬಹಳ ಚೆನ್ನಾಗಿ ಎಂದರೆ, ನಾವು ಗುಳೇ ಹೋಗುತ್ತೇವೆ, ನಮ್ಮ ಪರಿಸ್ಥಿತಿ ಏನಾಗಿದೆ, ನಾವು ಇಷ್ಟು ಯೋಜನೆಗಳನ್ನು ತಂದುಕೊಟ್ಟು ಮುಳುಗಡೆ ಮಾಡಿಕೊಂಡಿದ್ದೇವೆ ಎಂದೆಲ್ಲಾ ಮಾತನಾಡಿದರು. ಅವರು ಮಾತನಾಡಿರುವ ಹಲವಾರು ವಿಚಾರಗಳನ್ನು ನಾನು ಹೇಳಬೇಕಾಗುತ್ತದೆ. ಆದರೆ ಮಾನ್ಯ ಸಭಾಪತಿಯವರು ಬಹಳ ಕಡಿಮೆ ಸಮಯ ಕೊಟ್ಟಿದ್ದಾರೆ ಎನ್ನುವುದು ನನ್ನ ಭಾವನೆ. ಭೂಮಿ ಬೆಲೆ ನಿಗದಿ ಮಾಡುವಂಥದ್ದರ ಬಗ್ಗೆ ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಬೆಲೆ ನಿಗದಿ ಮುಧೋಳಕ್ಕೆ ಬೇರೆ, ಬೀಳಗಿಗೆ ಬೇರೆ, ಬಾಗಲಕೋಟೆಗೆ ಬೇರೆ ಏಕೆ, ನಾವು ಕೊಡಬೇಕಾಗುತ್ತದೆ ಏನು ಹೇಳುತ್ತಾರೆ, ಭೂಮಿ ಬೆಲೆ ನಿಗದಿ ಮಾಡುವುದಕ್ಕೆ ಒಂದೇ ದರ ಇರಬೇಕು. ಮುಧೋಳಕ್ಕೆ ಬೇರೆ ಬೆಲೆ, ಬೀಳಗಿಗೆ ಬೇರೆ ಬೆಲೆ, ಜಮಖಂಡಿಗೆ ಬೇರೆ ಬೆಲೆ ಇರಬಾರದು ಎಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಮತ್ತೆ ಹೇಳುತ್ತಾರೆ, ನೀರಾವರಿ ಜಮೀನಿಗೆ ಒಂದು ಎಕರೆಗೆ 50 ಲಕ್ಷ ರೂಪಾಯಿಗಳನ್ನು ಕೊಡಬೇಕು. ಒಣ ಬೇಸಾಯಕ್ಕೆ 30 ಲಕ್ಷ ರೂಪಾಯಿಗಳನ್ನು ಕೊಡಬೇಕು, ಯಾರು ಕಳಕಳಿಯಿಂದ ವಿರೋಧ ಪಕ್ಷದಲ್ಲಿದ್ದಾಗ ಮಾತನಾಡಿದ್ದಾರೆಯೋ ಅವರಿಗೆ ನೀರಾವರಿ ಮಂತ್ರಿಯಾಗುವುದಕ್ಕೆ ದೇವರು ಅವಕಾಶ ಮಾಡಿಕೊಟ್ಟಿದೆ. ಅದನ್ನೇ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಅವರು ಏನು ಹೇಳಿದ್ದಾರೆ ಅದನ್ನು ಮಾಡಿಬಿಡಿ. ಅವರಿಗೆ ಹೇಳಿದ್ದನ್ನು ಮಾಡುವುದಕ್ಕೆ ತೊಂದರೆ ಏನಿದೆ? ಎಕರೆಗೆ 50 ಲಕ್ಷ, ಒಣ ಬೇಸಾಯಕ್ಕೆ 30 ಲಕ್ಷ ರೂಪಾಯಿ ಕೊಡಬೇಕೆಂದು ಅವರು ಹೇಳಿದ್ದಾರಲ್ಲಾ, ಇವೆಲ್ಲಾ ಅರಿತುಕೊಂಡಂಥವರು ನೀರಾವರಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಂತ್ರಿಗಳಾಗಿದ್ದಾರೆ ಮತ್ತು ಮುಳುಗಡೆಯಾಗುವಂತಹ ಪ್ರದೇಶದಲ್ಲಿರತಕ್ಕಂಥವರು. ಇವತ್ತು ಅವರಿಗೆ ನೀರಾವರಿ ಮಂತ್ರಿಗಳಾಗುವುದಕ್ಕೆ ದೇವರು ಅವಕಾಶ ಕೊಟ್ಟಿದ್ದಾರೆ. ಅದರ ಜೊತೆಗೆ stamp duty exemption ಕೊಡಬೇಕು, ಮೀಸಲಾತಿ ಶೇಕಡ 10 ರಷ್ಟು ಕೊಡಬೇಕು, ಇದೆಲ್ಲಾ ಅವರೇ ಸದನದಲ್ಲಿ ಮಾತನಾಡಿದ್ದಾರೆ. ಈಗ ಅವರು ಏನೇನು ಮಾಡಿದ್ದಾರೆ? ಈಗ ಅದನ್ನೆಲ್ಲಾ ಮಾಡುವುದಕ್ಕೆ ತೊಂದರೆ ಏನಿದೆ? ಅವರಿಗೆ ಸಾಕಷ್ಟು ಅನುಭವವಿದೆ. ಅವರು ರೈತರ ಬಗ್ಗೆ ಕಾಳಜಿ ಇರತಕ್ಕಂಥವರು. ಇದನ್ನೆಲ್ಲಾ ಮಾಡಬೇಕಲ್ಲವೇ? ಇಲ್ಲಿ ಕುಳಿತುಕೊಂಡು ಮಾತನಾಡುವುದು ಬೇರೆ, ಅಲ್ಲಿ ಕುಳಿತ್ತುಕೊಂಡು ಮಾತನಾಡುವುದು ಬೇರೆಯೇ? ನನಗೆ ಬಹಳ ನೋವಾಗುತ್ತಿದೆ.

(ಮುಂದು)

1239/21-12-2021/7-50/bkp-vk

**ಶ್ರೀ ಆರ್.ಬಿ. ತಿಮ್ಮಾಪೂರ( ಮುಂದು)**

ಬಾಗಲಕೋಟೆ Sasalatti Lift Irrigation ಯೋಜನೆಗೆ ೧೪೦ ಕೋಟಿ ರೂಪಾಯಿಗಳು ಎಂದು ಹೇಳಿದ್ದೀರಿ. ಇದು ಆಗಬೇಕಾದರೆ 500 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅದಕ್ಕೆ ನೀರಿನ ಹಂಚಿಕೆ ಇರುವುದಿಲ್ಲ. ನೀರಿನ ಹಂಚಿಕೆಯನ್ನು ಕೊಡುತ್ತಿರೋ ಇಲ್ಲವೋ ಎಂದು ನಾನು ಮಂತ್ರಿಗಳನ್ನು ಕೇಳುತ್ತೇನೆ. ನೀರಿನ ಹಂಚಿಕೆಯನ್ನು ನೀವು ಯಾವ ಅಧಾರದ ಮೇಲೆ ಹೇಳಿದ್ದೀರಿ. Sasalatti Lift Irrigation ಯೋಜನೆಯನ್ನು ನೀವು ಮಾಡುತ್ತೀರಾ? ಮಾಡಲಿಲ್ಲವೆಂದರೆ ನೀರನ್ನು ಎಲ್ಲಿ ತಂದು ಕೊಡುತ್ತೀರಿ? ಇದು ಆಗುತ್ತದೆಯೋ ಅಥವಾ ಆಗುವುದಿಲ್ಲವೆಂದು ಜನತೆಗೆ ಹೇಳಿ. ನೀವೇ ಮಾತನಾಡಿದ್ದು ನಿಮ್ಮ ರೆಕಾರ್ಡ್ ಇದೆ. ನಾನು ಮಾತನಾಡಿದ್ದು ಅಲ್ಲ. ಇನ್ನೊಂದು ವಿಷಯ ಏನು ಹೇಳಿದಿರಿ. ಅದಕ್ಕೆ ೮.೪೮ ಟಿಎಂಸಿ ನೀರು ಬೇಕೆಂದು ಹೇಳಿದ್ದೀರಿ. ಇನ್ನೊಂದು ವಿಚಾರವನ್ನು ಹೇಳುತ್ತಿದ್ದಾರೆ, ಮಂತೂಳ ನೀರಾವರಿ ಯೋಜನೆ ,ಮುಧೋಳ್ ತಾಲ್ಲೂಕು ಕೆರೆ ತುಂಬಿಸುವ ಯೋಜನೆ. ೫೦ ಕೋಟಿ ರೂ. ವೆಚ್ಚದಲ್ಲಿ ತುಂಬಿಸಬೇಕೆಂದು ಯೋಜನೆ ಮಾಡಿದ್ದೀರಿ, ಅದಕ್ಕೆ ನೀರು ಎಲ್ಲಿಂದ ತರುತ್ತೀರಿ, ಕುಡಿಯುವ ನೀರಿಗೆ ಹಂಚಿಕೆಯ ಅವಶ್ಯಕತೆ ಇಲ್ಲ. ಕೆರೆಯ ನೀರನ್ನು ತುಂಬಿಸಲಿಕ್ಕೆ ನಾವು ಸಿದ್ದರಾಮಯ್ಯನವರನ್ನು ಕೇಳಿದ್ದೆವು. ಆಗ ಸಿದ್ದರಾಮಯ್ಯನವರು ೫೦ ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಇಟ್ಟು ಘೋಷಣೆ ಮಾಡಿದರು. ಈ ಯೋಜನೆಯನ್ನು ಜಾರಿಗೆ ನೀವು ತರುತ್ತೀರೋ ಇಲ್ಲವೋ ಹೇಳಿ. ತರದೇ ಇದ್ದರೆ ನಮ್ಮ ಜನ ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ. ನೀವು ಸಿದ್ದರಾಮಯ್ಯನವರು ಹೇಳಿದ್ದಕ್ಕೆ ನೀರು ಎಲ್ಲಿಂದ ತರುತ್ತೀರಿ ನೀವು ಕೇಳಬಹುದು. ನೀವು ನೀರನ್ನು ತರುತ್ತಿರೋ ಇಲ್ಲವೋ ಹೇಳಿ. ನಿಮಗೆ ನೀರು ಎಲ್ಲಿಂದ ಬರುತ್ತದೆ. ಏತಕ್ಕೆ ಜನರನ್ನು ನೀರಾವರಿ ಮಂತ್ರಿಗಳು misguide ಮಾಡುತ್ತೀರಿ? ಈ ರೀತಿಯಲ್ಲಿ ಧ್ವಂದವನ್ನು ಸೃಷ್ಟಿ ಮಾಡುವಂತಹವರು ಹೇಗೆ ನಮಗೆ ಅವಕಾಶಗಳು ಸಿಗುತ್ತವೆ ಎನ್ನುವುದನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಂತ್ರಿಗಳು ಸಹ ಅದೇ ಕ್ಷೇತ್ರದಿಂದ ಆರಿಸಿ ಬಂದವರು. ನಾನು ಸಹ ಮುಧೋಳದಿಂದ ಬಂದವನು.

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಮ್ಮ ಹುಟ್ಟೂರು ಮುಧೋಳ. ತಾವೇ ಹೇಳಿದಂತೆ ಅವರು ಪಕ್ಕದ ಜಿಲ್ಲೆಯವರು, ನಮ್ಮ ಆತ್ಮೀಯರು ಎಂದು ಹೇಳಿದಿರಿ. ಕೃಷ್ಣಾ ನದಿ ಒಂದೇ. ನಾವು ನೀವು ಆತ್ಮೀಯರೆ, ತಮ್ಮ ಆತ್ಮೀಯತೆಗೆ ಧನ್ಯವಾದಗಳು. ನಾನು ಹೆಚ್ಚಿಗೆ ಮಾತನಾಡಲಿಕ್ಕೆ ಹೋಗುವುದಿಲ್ಲ. ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ. ಈ ಭಾಗದಲ್ಲಿ ಪ್ರವಾಹ ಬಂದು ಹಾನಿಯಾದರೆ ನಮ್ಮ ಬಗ್ಗೆ ಕಾಳಜಿ ಇಲ್ಲ. ಶಿಕ್ಷಣದ ವಿಚಾರವಾಗಿ ಈಗತಾನೆ ಮಾನ್ಯ ಸದಸ್ಯರಾದ ಶ್ರೀಮಾನ್ ಮರಿತಿಬ್ಬೇಗೌಡರು ಹೇಳಿದರು. ಹಲವಾರು ಲೋಪದೋಷಗಳನ್ನು ಹೇಳಿದರು. ಯುನಿವರ್ಸಿಟಿ ಬಗ್ಗೆ ಹೇಳುವುದಾದ್ದರೆ ನಮ್ಮ ಬಾಗಲಕೋಟೆಯಲ್ಲಿ ಒಂದು ತೋಟಗಾರಿಕೆ ವಿಶ್ವವಿದ್ಯಾನಿಲಯ ಇದೆ. ಅಲ್ಲಿ ಏನು ನಡೆಯುತ್ತಿದೆ ಎಂದರೆ ೧೨ ಸಂಶೋಧನಾ ಕೇಂದ್ರಗಳು ಇವೆ. ೨೪ ಜಿಲ್ಲೆಗಳನ್ನು ಒಳಗೊಂಡಿರುತ್ತದೆ. ಆದರೆ ಬೇರೆ ಬೇರೆ ವಿಶ್ವವಿದ್ಯಾನಿಲಯಗಳಿಗೆ ಹೋಲಿಸಿದರೆ ಅನುದಾನ ತಾರತಮ್ಯವಾಗುತ್ತಿದೆ. ನಮ್ಮ ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾನಿಲಯಕ್ಕೆ ಏತಕ್ಕೆ ಅನುದಾನದ ವಿಚಾರದಲ್ಲಿ ತಾರತಮ್ಯ ಮಾಡುತ್ತೀರಿ? ಬೆಂಗಳೂರು, ಧಾರವಾಡ , ರಾಯಚೂರು, ಶಿವಮೊಗ್ಗ ವಿಶ್ವವಿದ್ಯಾನಿಲಯಗಳಿಗೆ ಪ್ರತಿ ವರ್ಷ ೧೮ ರಿಂದ ೨೦ ಕೋಟಿ ರೂಪಾಯಿಗಳನ್ನು ನೀಡುತ್ತೀರಿ. ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾನಿಲಯಕ್ಕೆ ೪.೫. ಕೋಟಿ ರೂಪಾಯಿಗಳನ್ನು ಕೊಡುತ್ತೀರಿ. ಹೆಚ್ಚು ಅಂದರೆ ೫ ಕೋಟಿ ರೂಪಾಯಿಗಳನ್ನು ಕೊಡುತ್ತೀರಿ. ಎಷ್ಟು ವ್ಯಾತ್ಯಾಸ ಇದೆ ನೋಡಿ. ಅನುದಾನ ಹಂಚಿಕೆಯ ವಿಚಾರದಲ್ಲಿ ಆಗುತ್ತಿರುವ ತಾರತಮ್ಯ ರಾಜ್ಯದಲ್ಲಿ ಆಗುತ್ತಿದೆ. ಆದರೆ, ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ೯ ಕಾಲೇಜುಗಳು ೧೨ ಸಂಶೋಧನಾ ಕೇಂದ್ರಗಳು ಬಂದಿವೆ. ಬೆಂಗಳೂರು, ಧಾರವಾಡ, ರಾಯಚೂರು ಹಾಗೂ ಶಿವಮೊಗ್ಗ ವಿಶ್ವವಿದ್ಯಾನಿಲಯಗಳು ಕೇವಲ ತಲಾ ೩ ಕಾಲೇಜುಗಳನ್ನು ಹೊಂದಿವೆ. ೯ ಕಾಲೇಜುಗಳನ್ನು ಹೊಂದಿದಂತಹ ತೋಟಗಾರಿಕೆ ವಿಶ್ವವಿದ್ಯಾನಿಲಯಕ್ಕೆ ೪ ರಿಂದ ೫ ಕೋಟಿ ರೂಪಾಯಿಗಳು, ಉಳಿದ ವಿಶ್ವವಿದ್ಯಾನಿಲಯಗಳಿಗೆ ೧೮ ರಿಂದ ೨೦ ಕೋಟಿ ರೂಪಾಯಿಗಳು. ವಿಶ್ವವಿದ್ಯಾನಿಲಯಕ್ಕೆ ಕೊಡುವಂತಹ ಅನುದಾನವು ಸಹ ನಮಗೆ ಕಡಿಮೆ ಕೊಡುತ್ತಿದ್ದೀರಿ. ಬಾಗಲಕೋಟೆ ಜಿಲ್ಲೆಯಲ್ಲಿಯೇ ಪ್ರವಾಹದಿಂದ ೭೩೬೮ ಹೆಕ್ಟೇರ್ ಅಂದರೆ ೧,೯೩೪೭೭ ರಷ್ಟು ಎಕರೆಯಷ್ಟು ಕಬ್ಬು ಬೆಳೆ ನಷ್ಟವಾಗುತ್ತಿದೆ. ಮುಧೋಳ್ ತಾಲ್ಲೂಕಿನಲ್ಲಿ ಪ್ರವಾಹದಿಂದ ೩ ವರ್ಷಗಳಲ್ಲಿ ಸುಮಾರು ೨೮,೯೬೮ ಹೆಕ್ಟೇರ್ ನಲ್ಲಿ ಇವತ್ತು ಹಾನಿಯಾಗುತ್ತಿದೆ. Cultivation charges ಸಹಿತ ಇವತ್ತು ಕೊಡುತ್ತಿಲ್ಲ. ಎನ್.ಡಿ.ಆರ್.ಎ ಫ್ ಪರಿಷ್ಕರಣೆಯಾಗದೇ ಎಷ್ಟು ದಿವಸಗಳಾಯಿತು. 2015ನೇ ಇಸವಿಯಿಂದ ಇಲ್ಲಿಯವರೆಗೆ ಪರಿಷ್ಕರಣೆ ದರ ನಿಗದಿಯಾಗುತ್ತಿಲ್ಲ. ಹೀಗಾಗಿ ಎಲ್ಲಿ ರೈತರಿಗೆ ಸಹಾಯ ಮಾಡಲಿಕ್ಕೆ ನಿಮಗೆ ಸಾಧ್ಯವಾಗುತ್ತದೆ ಹೇಳಿ. ಒಟ್ಟಾರೆ, ಹೀಗೆ ಪ್ರತಿಯೊಂದು ಹಂತದಲ್ಲಿ ನಮಗೆ ಅನ್ಯಾಯ ಆಗುತ್ತಲೇ ಇದೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಯವರೆ, ನಾನು ಹೆಚ್ಚಿಗೆ ಮಾತನಾಡಲಿಕ್ಕೆ ಹೋಗುವುದಿಲ್ಲ. ಬಾಗಲಕೋಟೆ ಜಿಲ್ಲಾ ಆಸ್ಪತ್ರೆಗೆ ಮೊನ್ನೆ ಕೋವಿಡ್-೧೯ ಬಂದಾಗ ದಿನಾಂಕ ೪-೬-೨೦೨೧ ರಂದು ಸುಮಾರು ೧೨ ಜನ ರೋಗಿಗಳು ವೆಂಟಿಲೇಟರ್‌ನಿಂದ ಸಾಯುತ್ತಾರೆ. ರಾತ್ರಿ ೧೨-೩೦ ಗಂಟೆಗೆ ಸರಿಯಾಗಿ ಕರೆಂಟ್ ಹೋಗುತ್ತದೆ. ಮತ್ತೆ ೨-೦೦ ಗಂಟೆಗೆ ಕರೆಂಟ್ ಬರುತ್ತದೆ. ಅಷ್ಟರಲ್ಲಿಯೇ ೧೨ ಜನರು ತೀರಿ ಹೋಗಿರುತ್ತಾರೆ. ಅಂದರೆ ಕರೆಂಟ್ ಹೋಗಿರುತ್ತದೆ ವೆಂಟಿಲೇಟರ್‌ಗೆ ೧೨ ಜನರನ್ನು ಹಾಕಿರುತ್ತಾರೆ. ಅಂದರೆ, ಆಸ್ಪತ್ರೆಯ ವಿಚಾರದಲ್ಲಿಯೂ ಸಹ ತಾರತಮ್ಯದಿಂದ ನಮಗೆ ತೊಂದರೆಯಾಗುತ್ತಿದೆ. ಹೈಟೆಕ್ ಆಸ್ಪತ್ರೆ, ಬೆಂಗಳೂರು ಎಂದು ಹೇಳುತ್ತೀರಿ. ಈ ಭಾಗಕ್ಕೆ ಏತಕ್ಕೆ ಬರುತ್ತಿಲ್ಲ. ಮೆಡಿಕಲ್ ಕಾಲೇಜುಗಳನ್ನು ಬಾಗಲಕೋಟೆಯಲ್ಲಿ ಸಾರ್ವಜನಿಕರೊಂದಿಗೆ ಕೂಡಿಕೊಂಡು ಮಾಡುವುದು PPP (*Public-private partnerships*) ಎಂದು ಹೇಳುತ್ತಾರೆ. ಅದು ಬಾಗಲಕೋಟೆಗೆ ಮಾತ್ರ. ಮತ್ತೆ ಬೇರೆಯದನ್ನೆಲ್ಲಾ ಸರ್ಕಾರವೇ ನಿಂತುಕೊಂಡು ಮಾಡುತ್ತದೆ. ೬೦೦ ಕೋಟಿ ರೂಪಾಯಿಗಳು ಕೊಡುತ್ತಾರೆ. ನಮಗೆ ಏತಕ್ಕೆ ಈ ರೀತಿಯ ತಾರತಮ್ಯ.

**ಉಪ ಸಭಾಪತಿಯವರು:-** ನೀವು ಎಲ್ಲರೂ ಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ.

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಭಾಪತಿಯವರೆ, ಹೌದು, ನಾನು ಬಹಳ ಕಡಿಮೆ ಅವಧಿಯಲ್ಲಿ ಕೆಲಸ ಮಾಡಿದ್ದೇನೆ. ಹೀಗೆ ಪ್ರತಿಯೊಂದು ಹಂತದಲ್ಲಿ ನಮಗೆ ಅನ್ಯಾಯವಾಗುತ್ತಿದೆ. ಈ cultivation charges ಆದರೂ ಕೊಡಬೇಕಲ್ಲವೇ? ಒಂದು ಎಕರೆಯಲ್ಲಿ ಕಬ್ಬು ಬೆಳೆ ಬೆಳೆಯಬೇಕಾದರೆ ೨೦ ರಿಂದ ೨೫ ಸಾವಿರ ರೂಪಾಯಿಗಳು ಬೇಕು. ನೀವು ಹೆಕ್ಟೇರ್‌ಗೆ ಎಷ್ಟು ಕೊಡುತ್ತಿದ್ದೀರಿ. ೬ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಆ ರೈತ ಎಲ್ಲಿಗೆ ಹೋಗಬೇಕು? ೩ ವರ್ಷಗಳಿಂದ ಬೆಳೆ ಹಾನಿಯಾಗುತ್ತಿದೆ. ಹೀಗೆ ಸರ್ಕಾರ ಹೆಚ್ಚಿನ ಪ್ರಮಾಣದಲ್ಲಿ ಅನುದಾನವನ್ನು ಕೊಡಬೇಕೆಂದು ಕೇಳಲಿಕ್ಕೆ ಬಯಸುತ್ತೇನೆ. ಮತ್ತೆ, ತೋಟಗಾರಿಕೆ ವಿಶ್ವವಿದ್ಯಾನಿಲಯಕ್ಕೆ ಹೆಚ್ಚಿನ ಅನುದಾನ ಕೊಡಬೇಕು. ನಮ್ಮ ನೀರಾವರಿ ಸಚಿವರು ಏನು ಮಾತನಾಡಿದ್ದಾರೆ, ಆ ರೀತಿಯಲ್ಲಿ ನಡೆದುಕೊಳ್ಳಬೇಕು. Sasalatti and Mantur ಏತ ನೀರಾವರಿ ಯೋಜನೆಯಾಗಬೇಕು. ಆಗದಿದ್ದರೆ ನಾವು ಯಾರ್‍ಬೂ ಸಹ ಸುಮ್ಮನೆ ಕುಳಿತುಕೊಳ್ಳುವುದಿಲ್ಲ ಎನ್ನುವ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಉಪ ಸಭಾಪತಿಯವರು:-** ಸದನವನ್ನು ನಾಳೆ ಬೆಳಗ್ಗೆ 10:30 ರವರೆಗೆ ಮುಂದೂಡಲಾಗಿದೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಸದನವು ಸಂಜೆ 7 ಗಂಟೆ 57 ನಿಮಿಷಕ್ಕೆ ಮುಕ್ತಾಯವಾಗಿ, ಪುನಃ ದಿನಾಂಕ 22ನೇ ಡಿಸೆಂಬರ್ ಮಾಹೆ 2021ರ ಬುಧವಾರದಂದು ಬೆಳಗ್ಗೆ 10 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಲು ತೀರ್ಮಾನಿಸಿತು)**

**<><><>**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "